# ರಂಗಸಂಪನ್ನರು



## ಡಾ|| ಮರುಳಸಿದ್ದಪ್ಪ

• ಶೂದ್ರಶ್ರೀನಿವಾಸ್

ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

# ಡಾ|| ಕೆ. ಮರುಳಸಿದ್ಧಪ್ಪ

## ಒಂದು ಅವಲೋಕನ

**ಶೂದ್ರಶ್ರೀನಿವಾಸ್**

ಕರ್ನಾಟಕ ನಾಟಕ ಅಕಾಡೆಮಿ
ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ
ಬೆಂಗಳೂರು - ೫೬೦ ೦೦೨

Dr. K. Marulasiddhappa : A Monograph in Kannada
by Sri Shudra Sreenivas

Published by
R. S. Dalawai
Registrar, Karnataka Nataka Academy
Ravindra Kalakshetra, J.C. Road, Bangalore - 560 002

First Impression : March, 2004
Pages : 86 + Photos 12
Cover Design : H. K. Dwarakanath (Dwaraki Rangayana)
© Author

Printed by
Lipi Mudrana, No. 1, Bugle Rock Road, Bangalore - 560 004
Ph : 080-26522061
Price : Rs. 40 /-

ಡಾ|| ಕೆ. ಮರುಳಸಿದ್ದಪ್ಪ : ರಂಗಸಂಪನ್ನರ ಕಿರು ಜೀವನ ಚರಿತ್ರೆ

ಲೇಖಕರು : ಶೂದ್ರಶ್ರೀನಿವಾಸ್

ಮುಖಪುಟ ವಿನ್ಯಾಸ : ಎಚ್. ಕೆ. ದ್ವಾರಕಾನಾಥ್ (ದ್ವಾರಕಿ ರಂಗಾಯಣ)

ಪ್ರಕಾಶಕರು : ಆರ್. ಎಸ್. ದಳವಾಯಿ
ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ
ರವೀಂದ್ರ ಕಲಾಕ್ಷೇತ್ರ, ಬೆಂಗಳೂರು - ೫೬೦ ೦೦೨

ಪ್ರಥಮ ಮುದ್ರಣ : ಮಾರ್ಚ್ ೨೦೦೪

ಪುಟ : ೮೬ + ೧೨

ಮುದ್ರಣ : ಲಿಪಿ ಮುದ್ರಣ,
ನಂ. ೧, ಬ್ಯೂಗಲ್ ರಾಕ್ ರಸ್ತೆ ಬೆಂಗಳೂರು - ೪
೦೮೦-೨೬೫೨೨೦೬೧

ಬೆಲೆ : ರೂ. ೪೦/-

# ಅಧ್ಯಕ್ಷರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ಭೂತಪೂರ್ವ ಅಧ್ಯಕ್ಷರಾಗಿದ್ದ ಪ್ರೊ. ಸಿ. ಜಿ ಕೃಷ್ಣಸ್ವಾಮಿ ಅವರು ತಮ್ಮ ಅವಧಿಯಲ್ಲಿ ಪ್ರಾರಂಭಿಸಿದ ಅನೇಕ ಪ್ರಮುಖ ಕಾರ್ಯಕ್ರಮಗಳಲ್ಲಿ ಒಂದು - 'ರಂಗಸಂಪನ್ನರು' ಪುಸ್ತಕ ಮಾಲಿಕೆಯ ಪ್ರಕಟಣೆ. ಇದರ ಮಹತ್ವ ಹಾಗೂ ಉಪಯುಕ್ತತೆಯನ್ನು ಮನಗಂಡು 'ರಂಗಸಂಪನ್ನರು' ಮಾಲಿಕೆಯನ್ನು ಈ ಅಕಾಡೆಮಿಯೂ ಮುಂದುವರಿಸಿರುತ್ತದೆ. ಕರ್ನಾಟಕ ನಾಟಕ ಅಕಾಡೆಮಿಯ ಪ್ರಪ್ರಥಮ ಅಧ್ಯಕ್ಷರಾಗಿದ್ದ ಶ್ರೀ ಗಿರೀಶ್ ಕಾರ್ನಾಡರಿಂದ ಮೊದಲುಗೊಂಡು ಕಳೆದ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಸಿ. ಜಿ. ಕೃಷ್ಣಸ್ವಾಮಿಯವರವರೆವಿಗೂ ಆಗಿ ಬಂದ ಎಲ್ಲ ಅಧ್ಯಕ್ಷರುಗಳ ಪರಿಚಯ ಕೃತಿಯನ್ನು (ಈಗಾಗಲೇ ಹಿಂದಿನ ಅಕಾಡೆಮಿ ಹೊರತಂದಿರುವ ನಾಟಕ ಅಕಾಡೆಮಿ ಅಧ್ಯಕ್ಷರುಗಳನ್ನು ಹೊರತುಪಡಿಸಿ) ನಾಡಿನ ಪ್ರಸಿದ್ಧ ರಂಗ ಚಿಂತಕರುಗಳ ಮೂಲಕ ಸಿದ್ಧಗೊಳಿಸಿ ಹೊರತರುವ ಕಾರ್ಯ ಈ ಪುಸ್ತಕ ಮಾಲಿಕೆಯಡಿ ಹಮ್ಮಿಕೊಂಡಿದ್ದೇವೆ. ಈ ಪ್ರಕಟಣಾ ಕಾರ್ಯದಲ್ಲಿ ನೆರವಾದ ಅಕಾಡೆಮಿಯ ಎಲ್ಲ ಗೌರವಾನ್ವಿತ ಸದಸ್ಯರಿಗೆ ಕೃತಜ್ಞತೆಗಳು.

ಕರ್ನಾಟಕ ನಾಟಕ ಅಕಾಡೆಮಿಗೆ ತಮ್ಮ ಕಾರ್ಯಕ್ರಮಗಳ ಮೂಲಕ ಒಂದು ಅಕಾಡೆಮಿಕ್ ಸ್ವರೂಪ ಕೊಟ್ಟವರು ಡಾ|| ಕೆ. ಮರುಳಸಿದ್ದಪ್ಪನವರು. ತಮ್ಮ ಅವಧಿಯಲ್ಲಿ (1995 ರಿಂದ 1998) ಅನೇಕ ವಿಚಾರ ಸಂಕಿರಣಗಳನ್ನು, ಕಮ್ಮಟಗಳನ್ನು ಏರ್ಪಡಿಸುವ ಮೂಲಕ ಅಕಾಡೆಮಿಯನ್ನು ಹೆಚ್ಚು ಚಿಂತನಶೀಲಗೊಳಿಸಿದರು. ತಮ್ಮ ಅವಧಿಯಲ್ಲಿ ಮೂರು ವರ್ಷಗಳ ಪ್ರಶಸ್ತಿ ಪ್ರದಾನ ಸಮಾರಂಭವನ್ನು ರಾಜಧಾನಿಯಿಂದ ಹೊರಗೆ ಆಯೋಜಿಸುವ ಮೂಲಕ ಹೆಚ್ಚು ವ್ಯಾಪಕವಾಗಿ ರಂಗಾಸಕ್ತರ ಗಮನ ಸೆಳೆದಿರುತ್ತಾರೆ. ದಲಿತ ಹಾಗೂ ಬುಡಕಟ್ಟಿನ ಜನಾಂಗವನ್ನು ತಮ್ಮ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಕೆಳಸ್ತರದ ಹಂತಕ್ಕೂ ಅಕಾಡೆಮಿಯ ಕಾರ್ಯಚಟುವಟಿಕೆಗಳು ವ್ಯಾಪಿಸುವಂತೆ ಮಾಡಿದ ಹೆಗ್ಗಳಿಕೆ ಇವರದು.

ನಾಟಕ ವಿಮರ್ಶೆಗೆ ಸ್ಪಷ್ಟರೂಪ ನೀಡುವಲ್ಲಿ ಕೆ. ಮರುಳಸಿದ್ದಪ್ಪನವರು ಯಶಸ್ವಿಯಾದರು. 'ಆಧುನಿಕ ಕನ್ನಡ ನಾಟಕ' ಇವರ ಮಹತ್ತರ ವಿಮರ್ಶಾ ಗ್ರಂಥ. ನಾಟಕ ಲಿಖಿತ ಕೃತಿಯಾಗಿ ಅಷ್ಟೇ ಅಲ್ಲ ರಂಗದ ಮೇಲೆ ಪ್ರಯೋಗಗೊಂಡ ರಂಗ ಕೃತಿಯಾಗಿ ಇಲ್ಲಿ ಚರ್ಚಿತಗೊಂಡಿವೆ. ನಾಟಕಾಸಕ್ತ ವಿದ್ಯಾರ್ಥಿಗಳಿಗೆ ಇದೊಂದು ಅಪರೂಪದ ಆಕರ ಗ್ರಂಥವಾಗಿದೆ. ಸದಭಿರುಚಿ ಹಾಗೂ ಸಹೃದಯತೆ ಮಿಳಿತಗೊಂಡ ಇವರ ವಿಮರ್ಶೆಗಳು ಕೃತಿಯೊಂದರ ಪ್ರಾಮಾಣಿಕ ಗುಣಮಟ್ಟವನ್ನು ತೆರೆದಿಡುತ್ತವೆ. ಡಾ|| ಮರುಳಸಿದ್ದಪ್ಪ ಅವರ ಮೊದಲಿಗೆ ಅಕಾಡೆಮಿಯ ಪ್ರಶಸ್ತಿಗಳ ಮೌಲ್ಯ ಎಲ್ಲೋ ಮಸಕಾಗುತ್ತಿದೆ ಎಂಬ ಭಾವನೆ ಇದ್ದದ್ದನ್ನು ಇವರು ಪ್ರಯತ್ನಪೂರ್ವಕವಾಗಿ ಪ್ರಶಸ್ತಿಗಳು ಮತ್ತೆ ಹಿಂದಿನ ಬೆಲೆ ಮತ್ತು ತೂಕ ಪಡೆದುಕೊಳ್ಳುವಂತೆ ಮಾಡಿದರು. ಇದು ಮುಂದೆ ಬರುವವರಿಗೆ ಅಕಾಡೆಮಿಯನ್ನು ಮುನ್ನಡೆಸಲು ಸಾಧ್ಯವಾಯಿತು.

ರಂಗಸಂಪನ್ನರು ಮಾಲಿಕೆಯಡಿಯಲ್ಲಿ ಡಾ|| ಕೆ. ಮರುಳಸಿದ್ದಪ್ಪ ಅವರನ್ನು ಕುರಿತು ರಂಗಭೂಮಿಯ ನಿಕಟ ಸಂಪರ್ಕವಿರುವ ಗೆಳೆಯ ಶ್ರೀ ಶೂದ್ರ ಶ್ರೀನಿವಾಸ ಅವರು ಕೃತಿಯನ್ನು ರಚಿಸಿಕೊಟ್ಟಿದ್ದಾರೆ. ಇದಕ್ಕಾಗಿ ಅವರಿಗೂ ಮತ್ತು ಡಾ|| ಕೆ. ಮರುಳಸಿದ್ದಪ್ಪ ಅವರಿಗೂ ನಮ್ಮೆಲ್ಲರ ಕೃತಜ್ಞತೆಗಳು.

ಈ ಪುಸ್ತಕದ ಪ್ರಕಟಣೆಯಲ್ಲಿ ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀ ಆರ್. ಎಸ್. ದಳವಾಯಿ ಅವರು ಹಾಗೂ ಕಚೇರಿ ಸಿಬ್ಬಂದಿ ವರ್ಗಕ್ಕೂ ಹೃತ್ಪೂರ್ವಕ ಧನ್ಯವಾದಗಳು. ಅಕಾಡೆಮಿಯ ಸದಸ್ಯರಾದ ಶಶಿಧರ ಬಾರಿಘಾಟ್ ಅವರು ಈ ಕೃತಿಯ ರಚನೆಕಾರರಾದ ಶ್ರೀ ಶೂದ್ರ ಶ್ರೀನಿವಾಸ ಅವರನ್ನು ಸಾಕಷ್ಟು ಹಿಂಬಾಲಿಸಿ ಈ ಕೃತಿ ಪ್ರಕಟಣೆಯನ್ನು ಸಾಧ್ಯಗೊಳಿಸಿದ್ದಾರೆ. ಅವರಿಗೂ ಮತ್ತು ಪ್ರಕಟಣಾ ಸಮಿತಿಯ ಎಲ್ಲಾ ಸದಸ್ಯರಿಗೂ ಆಭಾರಿ.

ಈ ಕೃತಿಯನ್ನು ಅತ್ಯಲ್ಪ ಕಾಲಾವಧಿಯಲ್ಲಿ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಲಿಪಿ ಮುದ್ರಣಾಲಯ, ಬೆಂಗಳೂರು ಇವರಿಗೂ ಅಕಾಡೆಮಿ ಆಭಾರಿ. ರಂಗಭೂಮಿಯೊಡನೆ ಆತ್ಮೀಯ ಸಂಬಂಧ ಉಳಿಸಿಕೊಂಡಿರುವ ಲಿಪಿ ಮುದ್ರಣದ ಶ್ರೀ ಬಾಕಿನ ಸಹಜವಾಗಿಯೇ ವಿಶೇಷ ಆಸ್ಥೆವಹಿಸಿ ಈ ಕಾರ್ಯವನ್ನು ನಿರ್ವಹಿಸಿರುತ್ತಾರೆ.

***ಆರ್. ನಾಗೇಶ್***

# ನನ್ನ ಮಾತು

ಕೆ.ಮರುಳಸಿದ್ದಪ್ಪ ಒಂದು ಅವಲೋಕನ ಕೃತಿಗೆ ಮೊದಲ ಮಾತಾಗಿ ಕೆಲವು ವಾಕ್ಯಗಳನ್ನು ಇಲ್ಲಿ ಬರೆಯಬೇಕಾಗಿದೆ. ಇದನ್ನು ಬರೆಯಲು ಪ್ರಾರಂಭಿಸಿದಾಗ ಒಂದು ದೃಷ್ಟಿಯಲ್ಲಿ ಮುವತ್ತೈದು ವರ್ಷಗಳ ಹಿಂದಕ್ಕೆ ಹೋಗಿ ಮತ್ತೊಮ್ಮೆ ಅವರ ವಿದ್ಯಾರ್ಥಿಯೇ ಆಗಿ ಬಿಟ್ಟಿದ್ದೆ. ಆಗ ಪ್ರಸನ್ನಕುಮಾರ್ ಬ್ಲಾಕ್, ಕನ್ನಡವಿಭಾಗ, ಅದರ ಮೇಲಿನ ಅರ್ಥಶಾಸ್ತ್ರ ವಿಭಾಗ ಪ್ರೊ|| ವೆಂಕಟ ಗಿರಿಗೌಡರ ಸಿಡಿಮಿಡಿ ಇದರ ಜೊತೆಗೆ ಸೆಂಟ್ರಲ್ ಕಾಲೇಜ್ ಲೈಬ್ರರಿ ಹಾಗೂ ಇಡೀ ಸೆಂಟ್ರಲ್ ಕಾಲೇಜಿನ ಹಚ್ಚಹಸಿರಿನ ಗರಿಕೆಯ ಹುಲ್ಲಿನ ಲಾನ್‌ಗಳು ನೆನಪಿಗೆ ಬರತೊಡಗಿತು. ಹಾಗೆಯೇ ಸೆಂಟ್ರಲ್ ಕಾಲೇಜಿನ ಕ್ರಿಕೆಟ್ ಪೆವಿಲಿಯನ್ (ಆಗ ಚಿನ್ನಸ್ವಾಮಿ ಕ್ರೀಡಾಂಗಣ ಇರಲಿಲ್ಲ) ಅಲ್ಲಿಯ ಆಸ್ಟ್ರೇಲಿಯಾ ಹಾಗೂ ವೆಸ್ಟ್‌ಇಂಡೀಸ್ ಆಟಗಳು ಆತ್ಮೀಯವಾಗಿ ಮುಂದೆ ಬಂದು ನಿಲ್ಲುತ್ತವೆ. ವೆಸ್ಟ್‌ಇಂಡೀಸ್‌ನ ಅದ್ಭುತ ನಾಯಕ ಕ್ಲೈವ್ ಲಾಯ್ಡ್‌ನನ್ನು ನೋಡಿದ್ದು ಇಲ್ಲಿಯೇ. ಹಾಗೆಯೇ ಪ್ರಸನ್ನ, ಚಂದ್ರಶೇಖರ್ ಹಾಗೂ ಬಿಷನ್‌ಸಿಂಗ್ ಬೇಡಿಯವರ ಅದ್ಭುತ ಬೋಲಿಂಗ್ ಚಮತ್ಕಾರವನ್ನು ಕಂಡದ್ದು ಇಲ್ಲಿಯೇ. ಆಗ ದೂರದರ್ಶನ ಇರಲಿಲ್ಲವಲ್ಲ. ನನ್ನಂಥವರು ಟಿಕೆಟ್ ಇಲ್ಲದೆ ಪ್ರಸನ್ನ ಕುಮಾರ್ ಬ್ಲಾಕ್‌ನ ಪೆವಿಲಿಯನ್ ಪಕ್ಕದ ಕಟ್ಟಡದ ಮೇಲೆ ಹೋಗಿ ಕೂತು ನೋಡುತ್ತಿದ್ದೆವು. ಆಗ ಸ್ವಾಮಿ ಎನ್ನುವವರು ಕನ್ನಡ ವಿಭಾಗದ ಅಟೆಂಡರ್ ಆಗಿದ್ದರು. ತುಂಬ ಚೂಟಿಯಾಗಿದ್ದ ವ್ಯಕ್ತಿ. ಕೆ.ಎಂ.ಎಸ್‌ರವರ ಆಪ್ತ ಹುಡುಗನಾಗಿದ್ದ. ನಮಗೆ ಆಟ ನೋಡಲು ವ್ಯವಸ್ಥೆ ಮಾಡಿಕೊಡುತ್ತಿದ್ದ. ಅದರಲ್ಲೂ ಸ್ವಾಮಿಗೆ ನಮ್ಮ ತರಗತಿಯ ಹುಡುಗ ಹುಡುಗಿಯರನ್ನು ಕಂಡರೆ ತುಂಬ ಇಷ್ಟ

ಸೆಂಟ್ರಲ್ ಕಾಲೇಜು ಪೆವಿಲಿಯನ್ ಮತ್ತೊಂದು ಕಾರಣಕ್ಕಾಗಿ ತುಂಬ ಇಷ್ಟ. ನನ್ನ ಪ್ರಿಯವಾದ ವಾಲಿಬಾಲ್ ಕೋರ್ಟ್ ಇದ್ದದ್ದು ಇಲ್ಲಿಯೇ. ಸೆಂಟ್ರಲ್ ಕಾಲೇಜು ಟೀಮು ತುಂಬ ಚೆನ್ನಾಗಿತ್ತು ಆಗ ನಾನೂ ಆ ಟೀಮಿನ ಆಟಗಾರ. ಡಿಫೆನ್ಸ್‌ನಲ್ಲಿ ತುಂಬ ಚೆನ್ನಾಗಿ ಆಡುತ್ತಿದ್ದೆ. ಈ ಆಟದ ಜೊತೆಗೆ ಮಸಾಲೆ ದೋಸೆ ಮತ್ತು ಬೇರೆ ಬೇರೆ ರೀತಿಯ ತಿಂಡಿಗಳು ಸಿಗುತ್ತಿತ್ತು. ವಾಲಿಬಾಲ್ ಮ್ಯಾಚ್‌ಇದ್ದಾಗ ಕೆ.ಎಂ.ಎಸ್‌ರವರಿಗೆ ಹಾಗೂ ಅವರ ಕೊಠಡಿಯಲ್ಲಿಯೇ ಇದ್ದ ಮತ್ತೊಬ್ಬ ಅಧ್ಯಾಪಕರು ಹೆಚ್.ಕೆ.ಜಯದೇವ್ ಅವರಿಗೆ ತಿಳಿಸುತ್ತಿದ್ದೆ. ಜಯದೇವ್ ಅವರು ಎರಡು ಮೂರು ಬಾರಿ ಕಾನೂನು ಕಾಲೇಜಿನ ಮೈದಾನದಲ್ಲಿ ನಡೆದ ಟೂರ್ನ್‌ಮೆಂಟಿಗೆ ಬಂದಿದ್ದರು.

ಹಿಂದೆ ಇದೇ ಕೃತಿಯಲ್ಲಿ ಬಹಳಷ್ಟು ಕಡೆ ಪ್ರಸ್ತಾಪಿಸಿರುವ ರೀತಿಯಲ್ಲಿ ಸೆಂಟ್ರಲ್ ಕಾಲೇಜು ಏನೇನೋ ನೆನಪುಗಳನ್ನು ಕೊಟ್ಟ ಕಾಲೇಜು. ಆಗಿನ ದಿನಗಳಲ್ಲಿ ಪ್ರತಿವರ್ಷ ಸೆಪ್ಟೆಂಬರ್ ಅಥವಾ ಅಕ್ಟೋಬರ್ ತಿಂಗಳು ಬಂದರೆ ವಿದ್ಯಾರ್ಥಿ ಚಳುವಳಿಗಳು ರೂಪುಗೊಳ್ಳುತ್ತಿದ್ದದ್ದೇ ಇಲ್ಲಿ. ಅಥವಾ ಈ ಕಾಲೇಜಿನ ಮುಂಭಾಗದಲ್ಲಿರುವ ಸರ್ಕಾರಿ ಕಾಲೇಜ್ ಗ್ಯಾಸ್ ಕಾಲೇಜಿನಲ್ಲಿ. 'ಎಕ್ಸ್‌ಪೋ 70' ಗಲಾಟೆಯಂತೂ ಭಯಂಕರ ರೂಪವನ್ನು ಪಡೆದಿತ್ತು. ಇದೇ ಸಮಯದಲ್ಲಿ ಪ್ರಸನ್ನಕುಮಾರ್ ಬ್ಲಾಕ್‌ನ ಆವರಣದಲ್ಲಿ ಸೆಂಟ್ರಲ್ ಜೈಲಿನ ಬಡಪೇದೆ ಯಾವುದಕ್ಕೋ ಈ ಕಡೆ ಬಂದಾಗ

ಚಳುವಳಿಯ ಹುಡುಗರು ಆತನನ್ನು ಹಿಡಿದು ಸೀಮೆಎಣ್ಣೆ ಸುರಿದು ಬೆಂಕಿಹಚ್ಚುವ ಸಿದ್ಧತೆಯಲ್ಲಿದ್ದರು. ಅಷ್ಟರಲ್ಲಿ ಪೋಲೀಸರು ಅಟ್ಟಿಸಿಕೊಂಡು ಬಂದು ಯಾರ್‍ಯಾರನ್ನೋ ಹಿಡಿದರು. ಆ ಪೇದೆ ಬದುಕಿದ. ಸಿಕ್ಕಿ ಹಾಕಿಕೊಂಡವರು ಅಮಾಯಕರು. ಅದರಲ್ಲಿ ಕವಿ ಮತ್ತು ಪತ್ರಕರ್ತ ಗೆಳೆಯ ಡಿ.ವಿ. ರಾಜಶೇಖರ್ ಪೋಲೀಸರ ಕೈಗೆ ಸಿಕ್ಕಿ ಒಂದು ವಾರ ಜೈಲಿನಲ್ಲಿರಬೇಕಾಗಿತ್ತು. ಡಿ.ವಿ.ರಾಜಶೇಖರ್ ಅವರನ್ನು ಬಿಡಿಸಿಕೊಂಡು ಬರುವುದಕ್ಕೆ ಮತ್ತು ಆ ರೀತಿಯ ಹುಡುಗ ಅಲ್ಲ ಎಂದು ಹೇಳುವುದಕ್ಕೆ ಉಪ್ಪಾರಪೇಟೆ ಪೋಲೀಸ್‌ಸ್ಟೇಷನ್‌ಗೆ ಕೆ.ಎಂ.ಎಸ್‌ರವರೂ ಬಂದಿದ್ದರು.

ಇಲ್ಲಿಯ ಚಳುವಳಿಯಿಂದ ಬಂದವರು ಎಷ್ಟೋ ಜನ ಮಂತ್ರಿಗಳಾಗಿದ್ದಾರೆ. ಮಾಜಿಗಳಾಗಿದ್ದಾರೆ. ಇನ್ನೂ ಏನೇನೋ ಆಗಿದ್ದಾರೆ. ಪ್ರಜಾಪ್ರಭುತ್ವಕ್ಕೆ ಎಷ್ಟೊಂದು ಮಾರ್ಗಗಳು? ಬೂಸಾ ಚಳುವಳಿಯ ಮುಖ್ಯ ಕಛೇರಿ ಇಲ್ಲಿಯೇ ಇದ್ದದ್ದು. ಹಿಂದೆ ಪ್ರಸ್ತಾಪಿಸಿರುವಂತೆ ಚಳುವಳಿಗಳಿಗೆ ಹೇಗೆ ಮುಖ್ಯ ಕೇಂದ್ರವೋ ಹಾಗೆಯೇ ಪ್ರೀತಿಪ್ರೇಮಕ್ಕೂ ಮುಖ್ಯ ಕೇಂದ್ರವಾಗಿತ್ತು. ಈಗಲೂ ಆ ಕಡೆ ಹೋದಾಗ ಯಾವ ಯಾವ ಗಿಡದ ಕೆಳಗೆ ಮತ್ತು ಮರದ ಕೆಳಗೆ ಯಾರ್‍ಯಾರು ಪ್ರೀತಿಸುತ್ತಿದ್ದರು ಮತ್ತು ಅವರೆಲ್ಲ ಈಗ ಏನಾಗಿದ್ದಾರೆ ಎಂಬುದು ನೆನಪಿಗೆ ಬರುತ್ತದೆ. ಈಗ ಕರ್ನಾಟಕ ಸರ್ಕಾರದಲ್ಲಿ ಹಿರಿಯ ಐ.ಎ.ಎಸ್ ಅಧಿಕಾರಿಯಾಗಿರುವ ವ್ಯಕ್ತಿಯ ಪ್ರೇಮ ಪ್ರಕರಣ ನಾವು ಸದಾ ಮಾತಾಡಿಕೊಳ್ಳುವ ಕಥೆಯಾಗಿತ್ತು. ನಮ್ಮ ರಂಗಭೂಮಿಯ ವರ್ಣರಂಜಿತ ವ್ಯಕ್ತಿಯಾದ ಕಪ್ಪಣ್ಣನವರು ಇಲ್ಲಿ ಹುಡುಗಿಯರಿಗೆ ಬೇಸ್‌ಬಾಲ್ ಕಲಿಸುತ್ತಿದ್ದರು. ಅಲ್ಲಿ ಕ್ರಿಕೆಟ್‌ನ ತಾರೆ ಶಾಂತಾ ರಂಗಸ್ವಾಮಿಯವರು ಕಲಿಯುತ್ತಿದ್ದರು. ಹೀಗೆ ಯಾರ್‍ಯಾರೋ ಎಲ್ಲೆಲ್ಲೋ ಹಂಚಿಹೋಗಿದ್ದಾರೆ. ಅವೆಲ್ಲ ಕಳೆದ ಏಳೆಂಟು ದಿನಗಳಿಂದ ಶಬ್ದ ಶಬ್ದಗಳ ನಡುವೆ ಧ್ವನಿಮಾಡುತ್ತ ನೆನಪುಗಳನ್ನು ಮುಂದಿಟ್ಟು ಹೋಗಿವೆ. ಇದರ ಜೊತೆಗೆ 1960ರ ಸುಮಾರಿಗೆ ನನ್ನ ದೊಡ್ಡಪ್ಪ ನೆಹರೂರವರನ್ನು ತೋರಿಸಲು ಸೆಂಟ್ರಲ್ ಕಾಲೇಜಿನ ಪೆವಿಲಿಯನ್‌ಗೆ ಕರೆದುಕೊಂಡು ಬಂದಿದ್ದರು. ಖಾನ್ ಅಬ್ದುಲ್ ಗಫಾರ್‌ಖಾನ್‌ರನ್ನಂತು ನೋಡಿದ್ದು ಭಾಷಣ ಕೇಳಿದ್ದು ಅವರ ಎತ್ತರದ ವ್ಯಕ್ತಿತ್ವದ ಮುಂದೆ ಅತ್ಯಂತ ಕುಳ್ಳ ವ್ಯಕ್ತಿಯಾಗಿ ನಿಂತುಕೊಂಡದ್ದು ಸೆಂಟ್ರಲ್ ಕಾಲೇಜಿನ ದಿನಗಳಲ್ಲಿ. ಹಾಗೆಯೇ ಕೆ.ಎಂ.ಎಸ್‌ರವರ ಜೊತೆ ಮೊರಾರ್ಜಿ ಸಂಪುಟದಲ್ಲಿ ಹಿರಿಯ ಸಚಿವರಾಗಿದ್ದ ಚರಣ್‌ಸಿಂಗ್‌ರವರ ಭಾಷಣ ಕೇಳಲು ಹೋಗಿದ್ದೆ. ಆತನ ಹಿಂದೀ ವ್ಯಾಮೋಹದ ಬಗ್ಗೆ ಕೆ.ಎಂ.ಎಸ್‌ರವರು ಸಿಡಿಮಿಡಿಗೊಂಡಿದ್ದರು. ಇದರ ಜೊತೆಗೆ ಯಾರ್‍ಯಾರೋ ಲೇಖಕರ ಪ್ರೇಮ ಪ್ರಕರಣಗಳೆಲ್ಲ ನೆನಪಾಗುತ್ತವೆ. ಆ ನೆನಪುಗಳು ಒಂದು ರೀತಿಯಲ್ಲಿ 'ಹಾಯ್' ಎನ್ನುವ ರೀತಿಯಲ್ಲಿ ಗರಿಗೆದರಿ ನಿಂತಿರುತ್ತವೆ.

ಕೊನೆಗೂ ಜೀವನವೆಂದರೆ ಏನು? ನಮ್ಮ ಓದೆ? ನಮ್ಮ ಬರವಣಿಗೆಯೇ? ನಮ್ಮ ಆಸ್ತಿಯೇ? ಅಥವಾ ಗೆಳೆಯ ಗೆಳತಿಯರ ದೊಡ್ಡ ಬಳಗವೇ? ಎಂಬ ಪ್ರಶ್ನೆ ನನ್ನನ್ನು ಕಾಡುತ್ತಿದೆ. ಹೀಗೆ ಕಾಡುವ ಅಥವಾ ಕಾಡಿಸಿಕೊಳ್ಳುವ ಒಂದು ರೀತಿಯ ಸುಕೋಮಲ ನೆನಪುಗಳ ವಲಯವನ್ನೇ ಕೆ.ಎಂ.ಎಸ್‌ರವರು ನನ್ನಂಥವರಿಗೆ ಕೊಟ್ಟರು. ಅದಕ್ಕೆ ಸದಾ ಮನಸ್ಸಿನಲ್ಲಿ ನಮಸ್ಕರಿಸಲು ಪ್ರಯತ್ನಿಸುವೆ. ಅವರ ಪುಸ್ತಕಗಳನ್ನು ನನಗೆ ಕೊಡುವಾಗ 'ಗೆಳೆಯಶೂದ್ರ ಶ್ರೀನಿವಾಸ್‌ಗೆ' ಎಂದು

ಬರೆದುಕೊಡುವಾಗ ಸಂತೋಷವಾಗುವುದು.ಎಷ್ಟು ದೊಡ್ಡ ಮೊತ್ತದ ಗೆಳೆಯರು. ಅದನ್ನು ನಿಜವಾಗಿಯೂ ವಿವರಿಸಲು ಸಾಧ್ಯವಾಗುವುದಿಲ್ಲ, ಹಾಗೆಯೇ ವಿವರಿಸಲು ಹೋಗಬಾರದು. ಯಾಕೆಂದರೆ ಆಪ್ತತೆ ಎನ್ನುವುದು ಅಂತರಂಗಕ್ಕೆ ಸಂಬಂಧಿಸಿದ ವಿಷಯ.

ನಮ್ಮ ರಂಗಭೂಮಿಯ ವಿಚಿತ್ರ ವ್ಯಕ್ತಿಗಳಲ್ಲಿ ಒಬ್ಬರಾದ ಹಾಗೂ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಆರ್.ನಾಗೇಶ್‌ರವರು ಬರಗೂರು ರಾಮಚಂದ್ರಪ್ಪನವರ ಮಗನ ಮದುವೆಯ ಹಾಲ್‌ನಲ್ಲಿ ಅದು-ಇದೂ ಮಾತಾಡುತ್ತ ''ಶೂದ್ರ, ದಯವಿಟ್ಟು ಕೆ.ಎಂ.ಎಸ್‌ರವರ ಬಗ್ಗೆ ರಂಗಸಂಪನ್ನರು ಪುಸ್ತಕ ಮಾಲಿಕೆಯಲ್ಲಿ ಬರೆಯಬೇಕು'' ಎಂದರು. ನಾನು ಒಪ್ಪಿಕೊಂಡೆ. ಆದರೆ ನನ್ನ ಕೆಲಸಗಳ ಮಧ್ಯೆ ಸಮಯಕ್ಕೆ ಸರಿಯಾಗಿ ಕೊಡಲಾಗಲಿಲ್ಲ. ನನ್ನನ್ನು ಕೇಳುವುದಕ್ಕೆ ಸಾಕಷ್ಟು ದೂರವಾಣಿ ಕರೆಗಳನ್ನು ವೆಚ್ಚಮಾಡಿದ್ದಾರೆ. ಅದಕ್ಕಾಗಿ ನಾಟಕ ಅಕಾಡೆಮಿಯ ಕ್ಷಮೆ ಕೇಳುವೆ.

ಕೊನೆಗೂ ಒಂದು ಮಾತು: ಇದು ನನ್ನ ಸಂತೋಷಕ್ಕಾಗಿ ಬರೆದುಕೊಂಡ ಕೃತಿ. ಅಂಥ ಸಂತೋಷವನ್ನು ಅಕಾಡೆಮಿ ಒದಗಿಸಿ ಕೊಟ್ಟಿದ್ದಕ್ಕೆ ಋಣಿಯಾಗಿರುವೆ.

**ದಿನಾಂಕ : 23-3-2004** **ಶೂದ್ರ ಶ್ರೀನಿವಾಸ್**

''ಸಾವು ಮತ್ತು ಮುಪ್ಪುಗಳನ್ನು ಅಸ್ಪಷ್ಟವಾಗಿ ಸಾಮ್ಯೋಕ್ತಿಗಳಿಂದ, ತೃಪ್ತಿಕರವಾದ ಬಾಲಭಾಷೆಯಿಂದ, ಗೋಪ್ಯವಾಗಿಡುತ್ತಿರುವ ಇಂದು, ಭಯ ಹುಟ್ಟಿಸುವಂಥ 'ಯಾಂತ್ರಿಕ ನಗ್ನತೆ' ತನ್ನ ಮಾಯಾಜಾಲದಿಂದ ಸಮೂಹ ಕ್ಷಯಕ್ಕೆ ಕಾರಣವಾಗಿ ಬದುಕನ್ನೇ ಉಸಿರುಕಟ್ಟಿಸುವ ಸ್ಥಿತಿಯಲ್ಲಿ ಆವರಿಸಿದೆ. ಮನುಷ್ಯ, ವಸ್ತುಸ್ಥಿತಿಯನ್ನು 'ಮುಖಾಮುಖಿ' ಎದುರಿಸಿ, ತನ್ನ ನೆಲೆಯನ್ನು ಕಂಡುಕೊಳ್ಳಬೇಕಾದ ಆಗತ್ಯ ಎಂದಿಗಿಂತ ಹೆಚ್ಚಾಗಿದೆ. ಏಕೆಂದರೆ ವಸ್ತುಸ್ಥಿತಿಯನ್ನು ಅದರ ಎಲ್ಲ ಉದ್ದೇಶ ರಹಿತತೆಯೊಡನೆ ಎದುರಿಸುವುದರ ಮೇಲೆ ಮತ್ತು ಮುಕ್ತವಾಗಿ, ನಿರ್ಭಯವಾಗಿ ಯಾವ ಭ್ರಮೆಯೂ ಇಲ್ಲದೆ ಅದನ್ನು ಒಪ್ಪಿಕೊಂಡು ನಕ್ಕು ಬಿಡುವುದರ ಮೇಲೆ ಮನಷ್ಯನ ಘನತೆ ನಿಂತಿದೆ.''

ಮಾರ್ಟಿನ್ ಎಸ್ಲಿನ್

(ಕೆ.ಎಂ.ಎಸ್.ರವರ 'ಒಡನಾಟ' ಕೃತಿಯಿಂದ)

## ಒಂದಷ್ಟು ಪೀಠಿಕೆಯ ಮಾತುಗಳು

ಪ್ರತಿಯೊಂದು ಮನುಷ್ಯನ ವ್ಯಕ್ತಿತ್ವದ ಎತ್ತರವಿರುವುದು ಆತನ ಸೂಕ್ಷ್ಮತೆಗಳ ಮೊತ್ತದಿಂದ. ಯಾಕೆಂದರೆ ಇದರಿಂದ ಆತ ಯಾವಾಗಲೂ ಧ್ಯಾನಸ್ಥನಾಗಿರಲೂ ಸಾಧ್ಯ, ಅದೇ ಕಾಲಕ್ಕೆ ಸಮಾಜಮುಖಿಯಾಗಿರಲು ಸಾಧ್ಯ.ಇತ್ತೀಚೆಗೆ ನನಗೆ ತುಂಬ ಪ್ರಿಯನಾದ ಲೇಖಕ ಎಡ್ವರ್ಡ್ ಡಬ್ಲ್ಯುಸೈನನ್ನು ಕುರಿತು ಯೋಚಿಸುತ್ತಿದ್ದೆ. ಈ ಮನುಷ್ಯ ಚಿಂತಕನಾಗಿ ಶ್ರೇಷ್ಠ ಲೇಖಕನಾಗಿ ಮಾನವ ಹಕ್ಕುಗಳ ಹೋರಾಟಗಾರನಾಗಿ ಬದುಕಿನಲ್ಲಿ ನಿರ್ದಾಕ್ಷಿಣ್ಯತೆಯನ್ನು ಕಾಪಾಡಿಕೊಳ್ಳಬೇಕಾದರೆ ಇದರ ಮೂಲ ಸೆಲೆ ಯಾವುದು ಎಂದು. ಈ ದೃಷ್ಟಿಯಿಂದ ನನ್ನ ಬದುಕಿನಲ್ಲಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಕೆಲವು ವ್ಯಕ್ತಿತ್ವಗಳು ತುಂಬ ಗಾಢವಾದ ಪ್ರಭಾವವನ್ನು ಬೀರಿದ್ದಾರೆ. ನನ್ನ ಮನಸ್ಸು ನಿಷ್ಕ್ರಿಯಗೊಂಡಾಗ ಈ ವ್ಯಕ್ತಿಗಳನ್ನು ಭೇಟಿಯಾದಾಗಲೆಲ್ಲ ಸಾಣೆಗೊಂಡಿದ್ದೇನೆ. ಈ ಮೂವರು ಲಂಕೇಶ್, ಕೆ. ಮರುಳಸಿದ್ದಪ್ಪ ಮತ್ತು ಕಿ.ರಂ.ನಾಗರಾಜರವರು. ಈಗ ಲಂಕೇಶ್‌ರವರು ಇಲ್ಲ. ಆದರೆ ನನಗೆ ಇಲ್ಲ ಎಂದು, ಎಂದೂ ಅನ್ನಿಸಿಲ್ಲ. ನಾವು ಒಂದಷ್ಟು ಗೆಳೆಯರು ಸಂಜೆಯ ಕ್ಷಣಗಳನ್ನು ಕಳೆಯಲು ಅವರಿಲ್ಲ ಎನ್ನುವುದನ್ನು ಬಿಟ್ಟರೆ ಮಿಕ್ಕ ವಿಷಯಗಳಲ್ಲಿ ಚಿಂತಿಸಲು, ಕೆಲಸಮಾಡಲು ಬೇಕಾದಷ್ಟು ಮಾರ್ಗ ಸೂತ್ರಗಳನ್ನು ಕೊಟ್ಟು ಹೋಗಿದ್ದಾರೆ. ಒಂದೊಂದು ಹೊಸ ಪುಸ್ತಕವನ್ನು ಓದುವಾಗಲೆಲ್ಲ ಮನದ ಬಯಲಿನಲ್ಲಿ ಲಂಕೇಶ್‌ರವರು ವಾಕ್ ಮಾಡುತ್ತಲೇ ಇರುತ್ತಾರೆ.

ಲಂಕೇಶ್‌ರವರು ತುಂಬ ಹತ್ತಿರವಾಗಲು ಮುಖ್ಯಕಾರಣ : ಕಿ.ರಂ.ರವರು ಮತ್ತು ಮರುಳ ಸಿದ್ದಪ್ಪನವರು. ಕಿ.ರಂ.ರವರು ನನಗೆ ಸಾಂಕೇತಿಕ ಅರ್ಥದಲ್ಲಿ ಒಂದೇ ದಿನ ಮೇಸ್ಟ್ರು ಆಗಿದ್ದರೂ, ಅದು ಕೇವಲ ಒಂದು ಗಂಟೆ ಮಾತ್ರ. ಆ ಒಂದು ಗಂಟೆಯಲ್ಲಿ ಲಂಕೇಶ್‌ರವರ 'ಅವ್ವ' ಕವನವನ್ನು ಕುರಿತು ಪಾಠಮಾಡಿದ್ದರು. ಆ ಪಾಠದ ವಿಸ್ತಾರ ; ಸಾಹಿತ್ಯ ಮತ್ತು ಜೀವನ ಸೆಳೆತಗಳ ದೃಷ್ಟಿಯಿಂದ ಎಷ್ಟೊಂದು ಬಾಹುಳ್ಯವನ್ನು ಪಡೆದಿತ್ತೆಂದರೆ, ಕಾವ್ಯದ ಓದಿನ ಬಗ್ಗೆ ಒಂದು ದೀರ್ಘ ದಿಕ್ಕುಗಳನ್ನು ಕೊಟ್ಟಿತು ಎಂದು ಈಗಲೂ ಭಾವಿಸಿಕೊಳ್ಳುವೆ. ಕಿ.ರಂ.ರವರು 'ಅವ್ವ' ಕವನ ಕುರಿತು ಪಾಠಮಾಡಿ ಬಸವನಗುಡಿ ನ್ಯಾಷನಲ್ ಕಾಲೇಜಿಗೆ ಅಧ್ಯಾಪಕರಾಗಿ ಹೋದರು. ಆದರೆ ಆ ಕವನದ ವಿಮರ್ಶೆಯನ್ನು ಬರೆದು ಕೆ.ಮರುಳಸಿದ್ದಪ್ಪ (ಕೆ.ಎಂ.ಎಸ್) ಅವರಿಗೆ ಕೊಡಬೇಕಾಗಿತ್ತು. ಅಂದಿನಿಂದ ಇಂದಿನವರೆವಿಗೆ ; ಅಂದರೆ ಈ ಮೂರುವರೆ ದಶಕದಲ್ಲಿ ಕೆ ಎಂ.ಎಸ್ ಎಂದೇ ನಮಗೆ ಜನಪ್ರಿಯರಾಗಿದ್ದಾರೆ. ಇಂಥವರು 'ಅವ್ವ' ಕವನದ ವಿಮರ್ಶೆಯನ್ನು ಓದಿ 'ಎ' ಗ್ರೇಡನ್ನು ಕೊಟ್ಟಿದ್ದರು. ಕೆ.ಎಂ.ಎಸ್ ಆಂತರಿಕ ಮೌಲ್ಯಮಾಪನಗಳಿಗೆ ಯಾವಾಗಲೂ ಅಂಕಗಳನ್ನು ಕೊಡುತ್ತಿರಲಿಲ್ಲ. 'ಎಬಿ' ಎಂದು ಗ್ರೇಡುಗಳನ್ನು ಕೊಡುತ್ತಿದ್ದರು. ನನಗೆ 'ಎ' ಎಂದು ಕೊಟ್ಟಿದ್ದರು. ಅಂದು ಖುಷಿಯೋ ಖುಷಿ ಯಾಕೆಂದರೆ ನಾಲ್ಕೈದು ತಿಂಗಳು ತಡವಾಗಿ ಸೋಷಿಯಾಲಜಿ ಆನರ್ಸ್‌ನಿಂದ ಕನ್ನಡ ಆನರ್ಸ್‌ಗೆ ಬಂದಿದ್ದೆ. ಪ್ರೊ॥ಮುದ್ದುಲಿಂಗಣ್ಣನವರು ಸೋಷಿಯಾಲಜಿ ವಿಭಾಗದ ಗಂಭೀರ ಪ್ರಾಧ್ಯಾಪಕರು. ಆಗಿನ ಕಾಲಕ್ಕೆ ಪ್ರೊ.ಜಿ.ಎಸ್.ಶಿವರುದ್ರಪ್ಪನವರ ರೀತಿಯಲ್ಲಿ ಕಚ್ಚೆಪಂಚೆ ಮತ್ತು ಅದರ ಮೇಲೆ ಕ್ಲೋಸ್ ಕಾಲರ್‌ನ ಕೋಟು. ಇಂಥ ಮುದ್ದುಲಿಂಗಣ್ಣನವರು ಅಂದಿನ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ಪ್ರೊ॥ರಂ.ಶ್ರೀ ಮುಗಳಿಯವರಲ್ಲಿಗೆ ಕರೆದುಕೊಂಡು

ಹೋಗಿ ಕನ್ನಡ ಆನರ್ಸ್‌ಗೆ ಸೇರಿಸಿದ್ದರು. ಹೀಗೆ ವರ್ಗಾವಣೆ ಮಾಡಿಸಿದ್ದರಿಂದ ನಾನು ಸಾಂಸ್ಕೃತಿಕವಾಗಿ ವಿಸ್ತಾರಗೊಳ್ಳಲು ಸಾಧ್ಯವಾಗಿದ್ದು ಎಂದು ಯಾವಾಗಲೂ ಸ್ಮರಿಸಿಕೊಳ್ಳುವೆ. ಹಾಗೆಯೇ ಕೆ.ಎಂ.ಎಸ್.ರೀತಿಯ ವ್ಯಕ್ತಿತ್ವಗಳು ಪರಿಚಯವಾಗಲು ಸೆಂಟ್ರಲ್ ಕಾಲೇಜ್ ಬಹು ಮುಖ್ಯ ಕಾರಣವಾಗಿದೆ. ಈ ಕಾಲೇಜು ಕೆಲವು ಸೂಕ್ಷ್ಮತೆಗಳನ್ನು ಕಲಿಸಿದೆ.ಇವು ಈಗಲೂ ನನ್ನ ಸುತ್ತಲಿನ ಸಾಂಸ್ಕೃತಿಕ ವಾತಾವರಣವನ್ನು ಅರ್ಥೈಸಿಕೊಳ್ಳಲು ಕಾರಣವಾಗಿದೆ.

ಎಪ್ಪತ್ತು ಮತ್ತು ಎಂಬತ್ತರ ದಶಕದಲ್ಲಿ ಸೆಂಟ್ರಲ್ ಕಾಲೇಜ್ ಕೇವಲ ಬೆಂಗಳೂರಿಗೆ ಮಾತ್ರವಲ್ಲ ಒಟ್ಟು ಕರ್ನಾಟಕಕ್ಕೆ ಸಾಂಸ್ಕೃತಿಕ ಆಯಾಮಗಳನ್ನು ಕೊಟ್ಟ ಕಾಲೇಜು. ಇಲ್ಲಿಯ ಸೆನೆಟ್ ಹಾಲ್ ಎಲ್ಲ ರೀತಿಯ ಚರ್ಚೆಗಳ ಸಾಂಸ್ಕೃತಿಕ ಸಭಾಂಗಣವಾಗಿ ಪರಿವರ್ತನೆಗೊಂಡಿತ್ತು. ಇಲ್ಲಿ ಯಾರ್ಯಾರೋ ರಾಷ್ಟ್ರಮಟ್ಟದ ವ್ಯಕ್ತಿತ್ವಗಳು ಬಂದು ಹೋಗಿದ್ದಾರೆ ಎನ್ನುವುದರ ಜೊತೆಗೆ ಕಟ್ಟಡಗಳ ವಿನ್ಯಾಸದ ಮೂಲಕವೇ ಆಕರ್ಷಣೆ ರೂಪವನ್ನು ಪಡೆದಿದೆ. ಹಾಗೆನೋಡಿದರೆ ಎಪ್ಪತ್ತರ ದಶಕದಲ್ಲಿ ಎಲ್ಲ ರೊಮ್ಯಾಂಟಿಕ್ ಚಟುವಟಿಕೆಗಳನ್ನು ತನ್ನ ತೆಕ್ಕೆಯೊಳಗೆ ಅಪ್ಪಿಕೊಂಡಿತ್ತು. ಇಂಥ ಕಾಲೇಜಿನ ವಿದ್ಯಾರ್ಥಿಯಾಗುವುದು ಅದೃಷ್ಟದ ಸಂಕೇತ ಎಂದು ಬಹುಪಾಲು ವಿದ್ಯಾರ್ಥಿಗಳು ಭಾವಿಸುತ್ತಿದ್ದರು. ಬೇರೆ ಕಾಲೇಜಿನ ವಿದ್ಯಾರ್ಥಿಗಳಿಗೆ ಸೆಂಟ್ರಲ್‌ಕಾಲೇಜಿನ ಕಡೆ ಸುತ್ತಾಡಿ ಬರೋಣವೆನ್ನುವುದು ವಾಡಿಕೆಯ ಮಾತಾಗಿತ್ತು. ಈ ರೀತಿಯ ಕಾಲೇಜಿನ ಪಕ್ಕದಲ್ಲಿಯೇ ಇದ್ದ ಪ್ರಸನ್ನ ಕುಮಾರ್ ಬ್ಲಾಕ್ ಮತ್ತೊಂದು ರೀತಿಯಲ್ಲಿ ಆಕರ್ಷಕ ವಿಭಾಗವಾಗಿತ್ತು. ಈ ಬ್ಲಾಕಿನ ಮಧ್ಯೆ ಅರಮನೆ ರಸ್ತೆ ಹಾದು ಹೋಗಿದೆ. ಇಂಗ್ಲೀಷ್ ಹೊರತು ಪಡಿಸಿ ಎಲ್ಲ ಕಲಾವಿಭಾಗಗಳು ಇಲ್ಲಿಯೇ ಇದ್ದದ್ದು . ಆದರೆ ಕನ್ನಡ ವಿಭಾಗ ನಾನಾ ಕಾರಣಗಳಿಗಾಗಿ ವೈವಿಧ್ಯತೆಯನ್ನು ಪಡೆದಿತ್ತು. ಇಲ್ಲಿ ಸಾಹಿತ್ಯಲೋಕದ ವಿದ್ವಜ್ಜನರು ಇದ್ದರು, ಎನ್ನುವುದರ ಜೊತೆಗೆ ಕೆ.ಎಂ.ಎಸ್‌ರವರ ಕೊಠಡಿ ನಾನಾ ವಿಚಾರಗಳಿಗಾಗಿ ಆಕರ್ಷಕ ಕೇಂದ್ರವಾಗಿತ್ತು. ಸಮಕಾಲೀನ ವಿದ್ಯಮಾನಗಳ ಜೊತೆಗೆ ರಂಗಭೂಮಿಯ ವಿವಿಧ ಆಯಾಮಗಳನ್ನು ಕುರಿತು ಚರ್ಚಿಸುವ ಮತ್ತು ಹರಟೆಕೊಚ್ಚುವಲ್ಲಿ ಕೆ.ಎಂ.ಎಸ್.ರವರ ಕೊಠಡಿ ಮಹತ್ತರ ಪಾತ್ರವನ್ನು ನಿರ್ವಹಿಸಿದೆ. ಇಲ್ಲಿಂದ ಎಷ್ಟೊಂದು ಸಾಂಸ್ಕೃತಿಕ ಕಾರ್ಯಕರ್ತರು ಹೊರಗೆ ಬಂದಿದ್ದಾರೆಂಬುದನ್ನು ಯೋಚಿಸುವುದಕ್ಕೆ ಖುಷಿಯಾಗುತ್ತದೆ.

ಸೌಮ್ಯಮುಖದ ಈ ಕೋಟು ಟೈನ ಆಗಿನ ಕೆ.ಎಂ.ಎಸ್‌ರವರ ವ್ಯಕ್ತಿತ್ವದ ಗಾಢತೆಯ ಹಿಂದಿರುವ ಅದಮ್ಯತೆಯನ್ನು ಕುರಿತು ಬಹಳಷ್ಟು ಬಾರಿ ವಿದ್ಯಾರ್ಥಿ ದಿನಗಳಲ್ಲಿ ಯೋಚಿಸಿದ್ದೇನೆ. ಸದಾ ಓದುತ್ತಲೋ ಗಡ್ಡದ ಮೇಲೆ ಬೆರಳಾಡಿಸುತ್ತಲೋ (ಈಗ ಗಡ್ಡಕ್ಕೆ ಕೂದಲಿದೆ. ಬೆರಳಾಡಿಸಲು ಸುಲಭ. ಗೆಳೆಯ ಡಿ.ಆರ್.ನಾಗರಾಜ್ ಬಹಳಷ್ಟು ಬಾರಿ ಹೇಳಿದ್ದಾನೆ : ಕೆ.ಎಂ.ಎಸ್.ರವರು ದಿನಗಟ್ಟಲೆ ಯಾರ ಹತ್ತಿರವೂ ಮಾತಾಡದೆ ಗಡ್ಡದಲ್ಲಿ ಬೆರಳಾಡಿಸುತ್ತಾ ತಪಸ್ವಿಯ ರೀತಿಯಲ್ಲಿ ಕೂತಿರಬಲ್ಲರು) ಇರಬಲ್ಲರು. ಇತ್ತೀಚಿನ ದಿನಗಳಲ್ಲಿ ಕೆ.ಎಂ.ಎಸ್.ರವರಿಗೆ ಪ್ರಿಯವಾದ ಸಮಕಾಲೀನ ರಾಜಕೀಯ ಚರ್ಚೆಗಳನ್ನು ವಿವಿಧ ಮಾಧ್ಯಮಗಳ ಮೂಲಕ ತಮ್ಮ ಮನಸ್ಸಿನ ವಿಸ್ತಾರಕ್ಕೆ ಸದಾ ಬರಮಾಡಿಕೊಳ್ಳುತ್ತಲೇ ಇರುತ್ತಾರೆ. ಹೀಗೆ ಬರಮಾಡಿಕೊಳ್ಳುತ್ತಲೇ ಜೀವನದ ಸೂಕ್ಷ್ಮಗಳ ವಲಯ ಎಷ್ಟೊಂದು ವಿಸ್ತಾರಗೊಂಡದ್ದು ಎಂಬುದನ್ನು ಗ್ರಹಿಸಬಲ್ಲರು. ಮತ್ತು ಅದನ್ನು ಬೇರೆ ಬೇರೆ ದಿಕ್ಕುಗಳಿಗೆ, ಅಂದರೆ ಸಮಕಾಲೀನ ಆಗುಹೋಗುಗಳಿಗೆ ರವಾನಿಸಬಲ್ಲರು.

## ಕಾರೇಹಳ್ಳಿಯಿಂದ ಮೈಸೂರಿನವರೆವಿಗೆ

ಪ್ರತಿಯೊಬ್ಬ ಮನುಷ್ಯನ ಭವಿಷ್ಯದ ವಿಸ್ತಾರಕ್ಕೆ ಬಾಲ್ಯಕಾಲ ಹಿನ್ನೆಲೆಯಾಗಿ ತುಂಬಾ ಗಂಭೀರವಾಗಿ ಕೆಲಸಮಾಡಿರುತ್ತದೆ. ಹಾಗೆಯೇ ನಿರಂತರ ಒಂದಷ್ಟು ಅನುಭವದ ಮೊತ್ತವನ್ನು ದಿನನಿತ್ಯದ ಆಗುಹೋಗುಗಳಿಗೆ ಸರಬರಾಜುಮಾಡುತ್ತಲೇ ಇರುತ್ತದೆ. ಅದರಲ್ಲೂ ಗ್ರಾಮಾಂತರ ಪ್ರದೇಶದಿಂದ ಬಂದವರಿಗೆ ಅಲ್ಲಿಯ ಅನುಭವ ಕೆಲಸಮಾಡುತ್ತ ಹೋಗುವ ಕ್ರಮವೇ ಒಂದು ರೀತಿಯಲ್ಲಿ ವಿಚಿತ್ರವಾಗಿರುತ್ತದೆ.ಕೆ.ಎಂ.ಎಸ್.ರವರು ಇಂಥ ಬಾಲ್ಯಕಾಲದ ಗಾಢತೆಯ ಹಿನ್ನೆಲೆಯಿಂದ ಬಂದವರು. ಈ ದೃಷ್ಟಿಯಿಂದ ಎಲ್ಲರನ್ನು ಕಾಡುವ ಅಥವಾ ನೆನಪುಗಳ ಕಣಜವಾಗಿರುವ 'ನನ್ನೂರು' ಎಂಬುದು ನಾನಾ ಮುಖಗಳಲ್ಲಿ ಕ್ರಿಯಾಶೀಲವಾಗಿರುತ್ತದೆ. ಕೆ.ಎಂ.ಎಸ್‌ರವರಿಗೂ ಈ ಮಾದರಿಯ 'ನನ್ನೂರು' ಇದೆ. ಅದು ಕಾರೇಹಳ್ಳಿ. ಇಲ್ಲಿ ಕಾರೇಹಳ್ಳಿಯ ಬಗ್ಗೆ ಒಂದು ಘಟನೆಯ ಮಾತನ್ನು ಸೇರಿಸಿ ಅವರೂರಿಗೆ ಹೋಗುವೆ. ಇತ್ತೀಚೆಗೆ ಅಂದರೆ ಕೆಲವು ತಿಂಗಳುಗಳ ಹಿಂದೆ ನಾವೆಲ್ಲ ಒಂದಷ್ಟು ಗೆಳೆಯರು ನಂದಿಬೆಟ್ಟಕ್ಕೆ ಒಂದು ರಾತ್ರಿಯನ್ನು ಕಳೆದು ಅಲ್ಲಿಯ ರಾತ್ರಿಯ ಮತ್ತು ಬೆಳಗಿನ ಜಾವದ ಚಳಿ ಮತ್ತು ಮಂಜಿನ ದಟ್ಟತೆಯನ್ನು ಅರಿಯಲು ಹೊರಟಿದ್ದೆವು. ಈ ಗುಂಪಿನಲ್ಲಿ ಕೆ.ಎಂ.ಎಸ್, ಕವಿ ಸಿದ್ಧಲಿಂಗಯ್ಯ, ಜಾಫೆಟ್, ಅಪ್ಪುಗೆರೆ ತಿಮ್ಮರಾಜು, ಕೇಶವರೆಡ್ಡಿ ಹಂದ್ರಾಳ ಮುಂತಾದುವರು ಇದ್ದರು. ದಾರಿಯ ಮಧ್ಯದಲ್ಲಿ ಇದ್ದಕ್ಕಿದ್ದಂತೆ ಜಾನಪದ ಗಾಯಕ ತನ್ನ ಮಾಮೂಲಿ ಹುಚ್ಚುತನದಿಂದಲೇ ಒಂದು ಶಾಲೆಗೆ ಇನ್‌ಸ್ಪೆಕ್ಷನ್ ಹಾಕಿಕೊಂಡ. ಆದರೆ ಈ ಮನುಷ್ಯ ಬೇರೆಯ ಶಾಲೆಗೆ ಇನ್‌ಸ್ಪೆಕ್ಷನ್‌ಗೆ ಹೋಗಬೇಕಾಗಿತ್ತು. ಸಂಜೆ ಐದುಗಂಟೆಯ ಸಮಯ. ಮೂತ್ರ ವಿಸರ್ಜನೆಗೆಂದು ಕಾರಿನಿಂದಿಳಿದರೆ ಅಲ್ಲೊಂದು ಶಾಲೆಯನ್ನು ಕಂಡು ಅಪ್ಪುಗೆರೆ ''ಬಂದೆ ಇರ್ರೀ'' ಎಂದು ಈ ಸ್ಕೂಲಿಗೆ ಇನ್‌ಸ್ಪೆಕ್ಷನ್ ಮಾಡಲು ಹೊರಟೇಬಿಟ್ಟ. ಶಾಲೆ ನೋಡಲು ಚೆನ್ನಾಗಿತ್ತು ಗಿಡಮರ ಬೆಳಸಿದ್ದರು. ನೋಡಲು ಆಕರ್ಷಕವಾಗಿತ್ತು. ಅದು ಕಾರೇಹಳ್ಳಿ. ಕೆ.ಎಂ.ಎಸ್‌ರವರು ''ಏನ್ರೀ ಇಲ್ಲೊಂದು ಕಾರೇಹಳ್ಳಿ ಇದೆ'' ಎಂದು ರೋಮಾಂಚಿತರಾದರು. ಸುಮಾರು ಒಂದು ಗಂಟೆ ಕೂತು ಅಪ್ಪುಗೆರೆ ತಿಮ್ಮರಾಜುವಿನ ಶಾಲಾ ಇನ್‌ಸ್ಪೆಕ್ಷನ್‌ನ ವೈಖರಿಯ ವಿವಿಧ ಮುಖಗಳನ್ನು ಆನಂದಿಸುತ್ತ ಕೂತಿದ್ದೆವು. ''ಪಾಪ! ಈ ಬಡಮೇಷ್ಟ್ರು ಬೆಳಿಗ್ಗೆಯಿಂದ ಯಾರೋ ಇನ್‌ಸ್ಪೆಕ್ಷನ್‌ಗೆ ಬರ್‍ತಾರೆ ಎಂದು ದಿನವಿಡೀ ಟೆನ್ಷನ್‌ನಲ್ಲಿ ಕಳೆದಿದ್ದಾರಲ್ಲ. ಆದರೆ ಬರಬೇಕಾದವರು ಕೊನೆಗೂ ಬರಲಿಲ್ಲ. ಅಪ್ಪುಗೆರೆ ಇನ್‌ಸ್ಪೆಕ್ಷನ್ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಮತ್ತೊಂದು ರಸ್ತೆಯ ಶಾಲೆಗೆ ಅಪ್ಪುಗೆರೆ ಹೋಗಬೇಕಾಗಿತ್ತು. ಅವರು ಹೀಗೆಯೇ ಟೆನ್‌ಷನ್‌ನಿಂದ ಇನ್‌ಸ್ಪೆಕ್ಟರ್ ಯಾವ ಗಳಿಗೆಯಲ್ಲಾದರು ಬರಬಹುದು ಎಂದು ಕಾಯುತ್ತಲೇ ಇರಬಹುದು'' ಎಂಬ ವಿಷಾದದ ಧ್ವನಿಯನ್ನು ಕೆ.ಎಂ.ಎಸ್. ವ್ಯಕ್ತಪಡಿಸಿದರು. ಸಂಜೆಯಾದರೂ ಶಾಲೆಯ ಸುತ್ತಲೂ ಆಡುತ್ತಿದ್ದ ಒಂದಷ್ಟು ಶಾಲೆಯ ಮಕ್ಕಳು ನಮ್ಮನ್ನು ಮರೆಯಿಂದ ಬಗ್ಗಿಬಗ್ಗಿ ನೋಡುತ್ತ ಏನೋ ಕುತೂಹಲವನ್ನು ಕಂಡವರಂತೆ ನಗುತ್ತ ಕೇಕೆ ಹಾಕುತ್ತ ಓಡಿಹೋಗುತ್ತಿದ್ದರು. ಇನ್‌ಸ್ಪೆಕ್ಟರ್ ಸಾಹೇಬರು ಹೊರಗೆ ಕೂತಿದ್ದ ನಮಗೆ ಬಿಸ್ಕತ್ ಬೇರೆ ರವಾನಿಸಿದ್ದರು. ಮಕ್ಕಳ ಕುತೂಹಲವನ್ನು ಕಂಡು ಕೆ.ಎಂ.ಎಸ್. ''ನಮ್ಮ ಬಾಲ್ಯಕಾಲ ಎಷ್ಟು ಚೆನ್ನಾಗಿತ್ತು ''ಎಂದಾಗ ಸುತ್ತಲಿನ ನೂರಾರು ಕಾಗೆಗಳು, ಪಕ್ಷಿಗಳು ಬೆಳಗ್ಗಿನಿಂದ ಹಾರಾಡಿದ್ದ ಆನಂದವನ್ನು ಹೊತ್ತುಕೊಂಡು ಮರಗಿಡಗಳಿಗೆ ವಾಪಸ್ಸು ಹೋಗುವ ಸಮಯವಾಗಿತ್ತು. ಇನ್‌ಸ್ಪೆಕ್ಟರ್ ಸಾಹೇಬರು ಹೊರಗೆ ಬಂದರು. ಉಪಾಧ್ಯಾಯರ ಗುಂಪು ಅವರ

ಹಿಂದೆಯೇ ಬಂತು. ''ಸ್ಕೂಲನ್ನು ಚೆನ್ನಾಗಿಟ್ಟುಕೊಳ್ಳಬೇಕು'' ಎಂದು ಇನ್‌ಸ್ಪೆಕ್ಷನ್ ಅಧಿಕಾರಿ ಅಪ್ಪುಗೆರೆ ಆಜ್ಞೆಮಾಡಿದರು. ಅವರು ವಿನಯದಿಂದ ''ಆಗಲಿ ಸಾರ್'' ಎಂದು ಕಾರಿನ ತನಕ ಬಂದರು. ಇನ್‌ಸ್ಪೆಕ್ಟರ್ ಅವರಿಗೆಲ್ಲ ನಮ್ಮನ್ನು ಪರಿಚಯ ಮಾಡಿಕೊಟ್ಟರು. ನಾವೆಲ್ಲ ಗೊತ್ತು ಎನ್ನುವ ರೀತಿಯಲ್ಲಿ ನಮಗೆ ಸರ್ಟಿಫಿಕೇಟ್ ಕೊಟ್ಟರು. ಅದರ ಮಧ್ಯೆ ಒಬ್ಬ ಅಧ್ಯಾಪಕ ಇನ್‌ಸ್ಪೆಕ್ಟರ್‌ಗೆ ''ಸಾರ್, ನೀವು ಮೊನ್ನೆ ದೂರದರ್ಶನದಲ್ಲಿ ಬಂದಿದ್ದಿರಿ. ತುಂಬ ಚೆನ್ನಾಗಿ ಹಾಡಿದಿರಿ'' ಎಂದು ಅಪ್ಪುಗೆರೆಗೆ ಹೇಳಿದಾಗ ಅಪ್ಪುಗೆರೆ ಪುಳಕಿತರಾಗಿ ತನ್ನ ಜುಬ್ಬಾದ ಶಾಲುವನ್ನು ಸರಿಯಾಗಿ ಹಾಕಿಕೊಳ್ಳುತ್ತಾ ಕಾರಿನಲ್ಲಿ ಕೂತ. ನಾವು ಇನ್‌ಸ್ಪೆಕ್ಟರ್ ಸಾಹೇಬರನ್ನು ಅನುಸರಿಸಿ ಕಾರಿನಲ್ಲಿ ಕೂತೆವು. ಅವರೆಲ್ಲ ನಮಸ್ಕರಿಸುತ್ತ ನಿಂತೇ ಇದ್ದರು. ಕಾರು ಚಲಿಸಿತು. ಶಾಲೆಯ ಗೋಡೆಗಳ ಮರೆಯಿಂದ ನಮ್ಮ ಕಾರು ಮುಂದೆ ಹೋಗುವುದನ್ನು ಹುಡುಗರು ಕುತೂಹಲ ಬೆರೆತ ನೋಟದಿಂದ ನೋಡುತ್ತಲೇ ಇದ್ದರು. ನಂದಿಬೆಟ್ಟಕ್ಕೆ ತಲುಪುವ ತನಕ ಅಪ್ಪುಗೆರೆಯ ಕಾರೇಹಳ್ಳಿ ಇನ್‌ಸ್ಪೆಕ್ಷನ್‌ನ ವರ್ಣಮಯತೆ ಉದ್ದಕ್ಕೂ ಆನಂದವನ್ನು ಕೊಟ್ಟಿತು. ಆದರೆ ಕೆ.ಎಂ.ಎಸ್‌ರವರಿಗೆ ಅವರ ಮನದಾಳದಲ್ಲಿ 'ಕಾರೇಹಳ್ಳಿ' ಇಲ್ಲಿಯೂ 'ನನ್ನೂರು' ಹೆಸರನ್ನು ಹೊತ್ತ ಊರಿದೆ ಎಂಬುದು ಒಂದು ರೂಪಕವಾಗಿ ಉಳಿದಿರಬಹುದು.

ಬೆಂಗಳೂರಿನ ಜಯಪ್ರಕಾಶನಾರಾಯಣ ನಗರದ (ಜೆ.ಪಿ.ನಗರ) ಎರಡನೆ ಹಂತದಲ್ಲಿರುವ ಡಾ||ಕೆ.ಮರುಳಸಿದ್ದಪ್ಪನವರ ಮನೆಗೆ ಹೋಗಿ ಅಲ್ಲಿ ಅಂಗಳದಲ್ಲಿ ಕೂತಾಗ ಅವರ ತಾಯಿಯ ದೊಡ್ಡದಾದ ಭಾವಚಿತ್ರ ಕಾಣಸುತ್ತದೆ. ಟಿವಿಯ ಪಕ್ಕ ಸೌಮ್ಯ ಮುಖದ ಆ 'ಅವ್ವ'ನ ಭಾವಚಿತ್ರ ಎಂಥವರನ್ನೂ ಆಕರ್ಷಿಸುತ್ತದೆ. ಲಂಕೇಶ್‌ರವರ 'ಅವ್ವ' ಕವನವನ್ನು ನೆನಪು ಮಾಡುವ ವ್ಯಕ್ತಿತ್ವ. ಪ್ರತಿಯೊಬ್ಬ ಮನುಷ್ಯನ ಬದುಕಿನಲ್ಲಿ ಅವ್ವ ಅಥವಾ ಅಮ್ಮ ಭಾವನಾತ್ಮಕ ಸಂಬಂಧವಾಗಿರಬಹುದು. ಕೆ.ಎಂ.ಎಸ್‌ರವರ ತಾಯಿ ಕಾಳಮ್ಮನೂ ತಮ್ಮ ಎಪ್ಪತ್ತೈದು ವರ್ಷಗಳ ದೀರ್ಘ ಬದುಕಿನಲ್ಲಿ ಹೊಲಗದ್ದೆ ಕಾಳುಕಡ್ಡಿ ಮತ್ತು ಗಂಡ ಮತ್ತು ಮಕ್ಕಳ ನಡುವೆ ಕರ್ತವ್ಯದ ಸಂಘರ್ಷದಲ್ಲಿ ಕಾಲ ಕಳೆದವರು. ''ನನ್ನ ತಾಯಿ ಮದುವೆಯಾಗುವ ಮುನ್ನ ಬೇರೆಯವರ ಹೊಲಗದ್ದೆಗಳಲ್ಲಿ ಕೂಲಿ ಕೆಲಸ ಮಾಡುತ್ತಿದ್ದವರು. ಆದ್ದರಿಂದಲೇ ಮದುವೆಯಾಗಿ ಒಂದು ದೊಡ್ಡ ಕುಟುಂಬಕ್ಕೆ ಬಂದಾಗ ದುಡಿಮೆಯೆನ್ನುವುದು ಅವರಿಗೆ ಎಂದೂ ಪರಕೀಯ ಅನ್ನಿಸಲಿಲ್ಲ'' ಎಂದು ಆತ್ಮೀಯವಾಗಿ ಹೇಳುವರು. ಇಂಥ ಮಣ್ಣಿನ ಮಗಳ ಹೊಟ್ಟೆಯಲ್ಲಿ 1940,ಜನವರಿ 12ರಂದು ಕೆ.ಎಂ.ಎಸ್. ಹುಟ್ಟಿದರು. ಆ ಹಳ್ಳಿ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಕಾರೇಹಳ್ಳಿ. ಕಾರೇಹಳ್ಳಿ ಗೌಡರ ಉಜ್ಜನಪ್ಪ ಆ ಊರಿನ ಗೌಡರು ; ತಕ್ಕಂತೆ ಜಬರದಸ್ತಿನ ಮನುಷ್ಯ. ಫ್ಯೂಡಲ್‌ನ ಗುಣಗಳನ್ನು ಬಳುವಳಿಯಾಗಿ ಪಡೆದವರು. ಎಲ್ಲವೂ ಹೀಗೆಯೇ ಆಗಬೇಕು ಎಂಬ ಮನಸ್ಥಿತಿಯನ್ನು ಬೆಳೆಸಿಕೊಂಡು ಬಂದವರು. ಇಂಥ ವಾತಾವರಣದಲ್ಲಿ ಆಕಾಶ ಮತ್ತು ನೆಲದ ಮಧ್ಯೆ ತುಂಬುಕುಟುಂಬಕ್ಕೆ ದುಡಿಮೆಯ ಯಜಮಾನಿಯಾದವರು ಕಾಳಮ್ಮನವರು.

ಮನೆ ತುಂಬ ಜನ. ಆಳುಕಾಳು. ಕೊಟ್ಟಿಗೆಯಲ್ಲಿ ದನಕರು. ಎಲ್ಲವೂ ಕುಟುಂಬದ ತುಂಬು ಜೀವನದ ಅಂಗಳ. ಏಳುಮಕ್ಕಳ ತಾಯಿ ಕಾಳಮ್ಮ ಯಾವ ಮಗುವಿಗೂ ಕೊರತೆಯಾಗದಂತೆ ನೋಡಿಕೊಂಡವರು. ಆಗಿನ ಕಾಲಕ್ಕೆ ಮಕ್ಕಳು ಉಳಿದು ಬೆಳೆಯುವುದೆಂದರೆ ಅದು ತಾಯಿಯಾದವಳ ದೊಡ್ಡ ಹಿರಿಮೆ ಎಂದೇ ಹೇಳಬೇಕು. ಯಾಕೆಂದರೆ ಲಾಲನೆ

ಪಾಲನೆಯೆನ್ನುವುದೂ ಕೂಡ ಒಂದು ಕಲಾತ್ಮಕ ಸಾಧನೆ. ಈ ರೀತಿಯ ಸಾಧನೆಯನ್ನು ಅಪ್ಪನಾಗಿ - ಅಮ್ಮನಾಗಿ ರೂಢಿಸಿಕೊಂಡಿದ್ದರು. ''ನನ್ನ ತಾಯಿ ಹೀಗೆ ಮಕ್ಕಳನ್ನು ಸಾಕುವುದರಲ್ಲಿ ಒಂದು ರೀತಿಯ ತಾದಾತ್ಮ್ಯತೆಯನ್ನು ಕಂಡುಕೊಂಡಿದ್ದರು'' ಎನ್ನುವುದನ್ನು ಸಮಯ ಸಿಕ್ಕಿದಾಗಲೆಲ್ಲ ಕೆ.ಎಂ.ಎಸ್. ರವರು ಭಾವನಾತ್ಮಕವಾಗಿ ಪ್ರಸ್ತಾಪಿಸುತ್ತಿರುತ್ತಾರೆ. ಹಾಗೆಯೇ ಆಗಿನ ಕಾಲಕ್ಕೆ ಒಂದು ಅವಿಭಕ್ತ ಕುಟುಂಬ ಎನ್ನುವುದು ಅದರದೇ ಆದ ಪುಟ್ಟ ಜಗತ್ತನ್ನು ತನ್ನ ಒಡಲೊಳಗೆ ಬಚ್ಚಿಟ್ಟುಕೊಂಡು ವಿಚಿತ್ರ ರೀತಿಯ ಸಂವೇದನೆಗಳನ್ನು ನೀಡುತ್ತಿರುತ್ತದೆ. ಸಾಮಾನ್ಯವಾಗಿ ಇಂಥ ಅವಿಭಕ್ತ ಕುಟುಂಬದಲ್ಲಿ ನೈತಿಕವಾಗಿ ಏನೇನನ್ನೋ ನಿಭಾಯಿಸಬೇಕಾಗುತ್ತದೆ. ಇದಕ್ಕೆ ಸಹನಾಮಯ ವ್ಯಕ್ತಿತ್ವ ಬೇಕಾಗುತ್ತದೆ. ಕಾಳಮ್ಮನವರು ಅದನ್ನು ಪಡೆದಿದ್ದರು ಎನ್ನುವುದು ಕೆ.ಎಂ.ಎಸ್‌ರವರಿಗೆ ಪ್ರಿಯವಾದ ನೆನಪು. ಗ್ರಾಮಾಂತರ ಪ್ರದೇಶಗಳಲ್ಲಿ ಈ ರೀತಿಯ ಅವಿಭಕ್ತ ಕುಟುಂಬಗಳು ಏಕ ಕಾಲಕ್ಕೆ, ಏನೇನೋ ನಿಯಂತ್ರಿಸುತ್ತಿರುತ್ತವೆ. ಇದರಲ್ಲಿ ಬಹುಮುಖ್ಯವಾಗಿ ಸಣ್ಣ ಸಣ್ಣ ಕುಟುಂಬಗಳ ಆರೋಗ್ಯಪೂರ್ಣ ಆಗುಹೋಗುಗಳಿಗೆ ಮಾರ್ಗಸೂಚಿಯಾಗಿರುತ್ತದೆ ಎಂಬುದು ಬಹಳ ಮುಖ್ಯವಾದುದು. ಸಮುದಾಯದ ಜೊತೆ ಬದುಕುವುದನ್ನು ಈ ಕುಟುಂಬಗಳು ಕಲಿಸುತ್ತವೆ. ಈ ದೃಷ್ಟಿಯಿಂದ ಆ ನಮ್ಮ ಮನೆಯಲ್ಲಿ ಮುವತ್ತು - ನಲವತ್ತು ಮಂದಿ ಇದ್ದರು. ನನ್ನಪ್ಪ ದೊಡ್ಡಮಗ. ನಮ್ಮಮ್ಮ ದೊಡ್ಡ ಸೊಸೆ. ಮೈದುನರ ಹೆಂಡತಿಯರು, ಅವರ ಮಕ್ಕಳು, ನಾವು ಏಳು ಮಕ್ಕಳು, ಆರೇಳು ಮಂದಿ ಆಳುಗಳು ಇರುತ್ತಿದ್ದರು. ಇಪ್ಪತ್ತು ಮುವತ್ತು ಎಮ್ಮೆ ಹಸು ಕರು. ಇಂಥ ವಾತಾವರಣದಲ್ಲಿ ನಮ್ಮಮ್ಮ ಮುನ್ನುಗ್ಗಿ ಕೆಲಸಮಾಡುತ್ತಿದ್ದರು. ನಮ್ಮಪ್ಪ ಸ್ವಲ್ಪ ಪುಢಾರಿಯಾಗಿದ್ದರಿಂದ ಹೆಚ್ಚು ಕಮ್ಮಿ ಹೊರಗಡೇನೆ ಇರುತ್ತಿದ್ದರು. ಆಗ ನಮ್ಮಮ್ಮ ಎಲ್ಲವನ್ನು ನೋಡಿಕೊಳ್ಳಬೇಕಾಗಿತ್ತು. ಮನೆಯಲ್ಲಿ ತೋಟದಲ್ಲಿ ಕೆಲಸ ಮಾಡುತ್ತ ಶ್ರಮವನ್ನು ಆರಾಧನೆಯನ್ನಾಗಿ ಸ್ವೀಕರಿಸಿದ್ದರು. ಹೊಲಗದ್ದೆಗಳಲ್ಲಿ ಕೆಲಸಮಾಡುವುದರಿಂದ ಮೊದಲ್ಗೊಂಡು ಮನೆಯ ಮಕ್ಕಳ ಮತ್ತು ದನಕರುಗಳ ಲಾಲನೆಪಾಲನೆ ಕೂಡ ದಿನನಿತ್ಯದ ಆತ್ಮೀಯ ಕೆಲಸವಾಗಿತ್ತು. ಈಗಲೂ ನನಗೆ ಬಹಳ ಪ್ರಿಯವಾದ ನೆನಪೆಂದರೆ ನಾವೆಲ್ಲ ಮಕ್ಕಳು ಒಟ್ಟಿಗೆ ಕೂತು ಊಟಮಾಡುತ್ತಿದ್ದುದು. ಒಂಟಿಯಾಗಿ ಕೂತು ಊಟಮಾಡಿದ್ದು ನನಗೆ ನೆನಪೇ ಇಲ್ಲ. ಹೀಗಾಗಿ ಸಾಲಾಗಿ ಕೂತು ತಿನ್ನುವುದರಲ್ಲಿ ಎಷ್ಟೊಂದು ಮಾನಸಿಕ ನೆಮ್ಮದಿ ಇರುತ್ತದೆ ಎನ್ನುತ್ತಾರೆ.

ನಾವೆಲ್ಲ ಹುಡುಗರು ಹೊರಗಡೆ ಹೋಗಿ, ಗೋಲಿ, ಚಿನ್ನಿದಾಂಡು, ಚೆಂಡಾಟ,ಕಬಡ್ಡಿ, ಬುಗರಿ ಇಂಥ ಆಟಗಳನ್ನೆಲ್ಲ ಆಡಿ ಮನೆಗೆ ಬಂದಾಗ ಏನೋ ಒಂದು ರೀತಿಯ ಖುಷಿಯಾಗುತಿತ್ತು. ಆಡಿ ಬಂದು ಅಮ್ಮನ ಹತ್ತಿರ ಅದೂ ಇದೂ ಪೀಡಿಸಿ ತಿನ್ನುವುದರಲ್ಲಿ ಮಜಾ ಇರ್ತಿತ್ತು. ಗಜ್ಜುಗಕಾಯಿಯ ಹದಮಾಡಿ ಕಾಯಿತೆಗೆದು ಆಟವಾಡುವ ಕಾಲ ಅಮೋಘವಾಗಿರುತ್ತಿತ್ತು. ಚೆಂಡಾಟ ಅಂತೂ ಯುಗಾದಿಯ ಸಂದರ್ಭದಲ್ಲಿ ಅದಕ್ಕೆ ಎಲ್ಲಿಲ್ಲದ ಕಳೆ ಬಂದು ಬಿಡುತ್ತಿತ್ತು. ಹುಡುಗರೆಲ್ಲ ಗುಂಪುಕಟ್ಟಿಕೊಂಡು ಬಯಲು ಹುಡುಕುತ್ತ ಆಟವಾಡುತ್ತಿದ್ದ ಸಂಭ್ರಮವನ್ನು ಈಗಲೂ ನೆನಪು ಮಾಡಿಕೊಂಡು ಆನಂದ ಪಡುತ್ತೇನೆ. ಹೊಲಗದ್ದೆಗಳಲ್ಲಿ ಓಡಾಡುವುದರಿಂದ ಮೊದಲ್ಗೊಂಡು ಇಂಥ ಆಟಗಳವರೆಗಿನ ಕುಟುಂಬ ವ್ಯವಸ್ಥೆಯೊಳಗಿನ ಚೌಕಟ್ಟಿನಲ್ಲಿಯೇ ಅದಮ್ಯತೆ ತುಂಬಿಕೊಂಡಿರುತ್ತಿತ್ತು. ಈಗಿನ ರೀತಿಯಲ್ಲಿ ಕ್ರಿಕೆಟ್ ಆಟ ಆಕ್ರಮಿಸಿ ಕೊಂಡಿರಲಿಲ್ಲ. ಹೊಸ ಆಟಗಳಲ್ಲಿ ಬ್ಯಾಟ್‌ಮಿಟನ್ ಆಟವನ್ನು ನೆಟ್ ಕಟ್ಟಿಕೊಂಡು ಆಟವಾಡುತ್ತಿದ್ದೆವು. ಆದರೆ ಗಜ್ಜುಗ,

ಗೋಲಿ, ಚೆಂಡಾಟ ಮತ್ತು ಚಿನ್ನಿದಾಂಡು ಆಟಗಳ ರೀತಿಯಲ್ಲಿ ಅನನ್ಯತೆಯನ್ನು ಬೆಳೆಸಿಕೊಳ್ಳಲಿಲ್ಲ. ಈಗಲೂ ಒಮ್ಮೊಮ್ಮೆ ಅನ್ನಿಸುತ್ತಿರುತ್ತದೆ : ಈ ಆಟಗಳೆಲ್ಲ ಸಾಂಸ್ಕೃತಿಕವಾಗಿ ನಮ್ಮೊಳಗೆ ಹೇಗೆ ಬೆಸೆದುಕೊಂಡಿದ್ದವು ಎಂದು. ಯುಗಾದಿ ಬಂದಾಗಲೆಲ್ಲ ಬೀದಿಯಲ್ಲಿ ಹುಡುಗರು ಆಡುತ್ತಿದ್ದರೆ ಗಜ್ಜುಗ ಮತ್ತು ಚೆಂಡಾಟ ನೆನಪಿಗೆ ಬರುತ್ತದೆ. ಇಷ್ಟಾದರೂ ಹಳ್ಳಿಯ ಬೇರೆ ಬೇರೆ ಹುಡುಗರ ರೀತಿಯಲ್ಲಿ ನಾನು ನನ್ನನ್ನು ಆಟಗಳಲ್ಲಿ ತೊಡಗಿಸಿಕೊಂಡಿರಲಿಲ್ಲ, ಎಂದು ವಿಷಾದದಿಂದ ನುಡಿಯುವುದುಂಟು. ಯಾಕೆಂದರೆ ಮನೆಯಲ್ಲಿ ಎಲ್ಲರೂ ಮರುಳಸಿದ್ದಪ್ಪ ಚೆನ್ನಾಗಿ ಓದಿ ಬೆಳೆಯಲಿ ಎಂಬುದರ ಬಗ್ಗೆ ಹೆಚ್ಚು ಒತ್ತು ಕೊಡುತ್ತಿದ್ದರು. ಅಜ್ಜ, ಅಪ್ಪ ಮತ್ತು ಅಮ್ಮ ಎಲ್ಲರೂ ತಮ್ಮ ಮನೆಯ ಈ ಹುಡುಗ ವಿದ್ಯಾವಂತನಾಗಿ ಬೇರೆ ರೀತಿಯಲ್ಲಿಯೇ ಬೆಳೆಯಬೇಕು ಎಂಬ ಮನೋಭಾವನೆಯಿಂದಲೇ ಬೆಳೆಸಿದರು. ಕ್ರಿಕೆಟ್ ಆಟ ಎನ್ನುವುದೊಂದು ಇದೆ ಎಂಬುದು ಗೊತ್ತಾಗಿದ್ದೇ ಹೈಸ್ಕೂಲಿಗೆ ಬಂದ ಮೇಲೆ ಎನ್ನುವುದು ಆ ಕಾಲ ಘಟ್ಟದ ಬಹುಪಾಲು ಮಂದಿಯ ಅನುಭವವೂ ಆಗಿರುತ್ತದೆ ಎಂಬುದು ಸ್ವಾಭಾವಿಕವಿರಬಹುದು ಎಂದು ಹೇಳುವಾಗ ನಮ್ಮಂಥವರಿಗೂ ಅನ್ವಯಿಸುತ್ತದೆ ಅನ್ನಿಸುತ್ತದೆ.

ಕೆ.ಮರುಳಸಿದ್ಧಪ್ಪನವರು ಮೊದಲಿನಿಂದಲೂ ಓದಿನ ಬಗ್ಗೆ ಹೆಚ್ಚು ಒತ್ತು ಕೊಡುತ್ತಾ ಬಂದವರು. ಮನೆಯಲ್ಲೂ ಸಹ 'ನೀನು ಓದಿ ಏನೋ ಆಗಬೇಕು' ಎಂದು ಮಾನಸಿಕ ಆಲೋಚನೆಯನ್ನು ಎಲ್ಲರೂ ತುಂಬುತ್ತಿದ್ದುದರಿಂದ ಸ್ವಾಭಾವಿಕವಾಗಿಯೇ ಒಂದು ರೀತಿಯ ಒಲವನ್ನು ಬೆಳೆಸಿಕೊಂಡರು. ಆ ಕಾಲದ ನಾಗರೀಕತೆಯೂ ಆ ರೀತಿಯಿದ್ದುದರಿಂದ ; "ನಾನು ರೈಲನ್ನು ನೋಡಿದ್ದೇ ಎಂಟು ಒಂಬತ್ತನೇ ವಯಸ್ಸಿನಲ್ಲಿ"ಎನ್ನುವಾಗ ಸಾಮಾಜಿಕ ಪರಿಸರದ ಬೆಳವಣಿಗೆಯನ್ನು ಸೂಚಿಸುತ್ತದೆ. ಕೆ.ಎಂ.ಎಸ್‌ರವರು ಮೊದಲು ರೈಲು ನೋಡಿದಾಗ ಕಣ್ಣು ಬಾಯಿ ಬಿಟ್ಟು ಕೊಂಡು ಏನು ಅದ್ಭುತವಪ್ಪ ಎಂಬ ಕುತೂಹಲದಿಂದ ನೋಡುತ್ತಿದ್ದ ಕಾಲಘಟ್ಟವದು. ಹಾಗೆ ನೋಡಿದರೆ ವಿದ್ಯುತ್ತನ್ನ ನೋಡಿದ್ದೆ ಒಂಬತ್ತನೆಯ ವಯಸ್ಸಿನಲ್ಲಿ. ಸ್ವಿಚ್ಚನ್ನು ಗಂಟೆಗಟ್ಟಲೆ ಒತ್ತುತ್ತಿದ್ದುದರಿಂದ ಚೆನ್ನಾಗಿ ಬೈಯಿಸಿಕೊಂಡ ನೆನಪನ್ನು ಸ್ವಾರಸ್ಯಪೂರ್ಣವಾಗಿ ವಿವರಿಸುವುದುಂಟು.ಇದರ ಜೊತೆಗೆ ತಮ್ಮ ಊರಿಗೆ ಸಮೀಪವಿದ್ದ ಶಿವನಿಗೆ ಬಸ್‌ಬಂದಾಗ ಕೆ.ಎಂ.ಎಸ್.ರವರಿಗೆ ವಯಸ್ಸು ಸುಮಾರು ಹನ್ನೆರಡು ಆಗಿತ್ತು ಎಂದು ಕಾಣುತ್ತದೆ. ಆದರೆ ಇಂದು ಅವರ ಹಳ್ಳಿಗೆಯೇ ಹತ್ತು ಹನ್ನೆರಡು ಬಸ್ಸುಗಳು ಬಂದು ಹೋಗುತ್ತಿರುತ್ತವೆ. ಆಗಿನ ಕಾಲದಲ್ಲಿ ರೈತರು ತಾವು ಬೆಳೆದ ಸರಕನ್ನು ಬೇರೆ ಕಡೆ ಸಾಗಿಸಲು ಎಷ್ಟು ಕಷ್ಟಪಡುತ್ತಿದ್ದರು, ಈಗ ಎಲ್ಲಿಗೆ ಬೇಕಾದರೂ ರವಾನಿಸಬಹುದು ಎಂದು ಹೇಳುವಾಗ ಅನನ್ಯಭಾವ ತುಂಬಿಕೊಂಡಿರುತ್ತದೆ.

"ಹೀಗೆ ನನ್ನ ಬದುಕಿನಲ್ಲಿ ಬಹಳಷ್ಟು ಬಾರಿ ಯೋಚಿಸುವೆ. ಅದನ್ನು ಹೇಗೆ ಕರೆಯ ಬೇಕೋ ಗೊತ್ತಿಲ್ಲ. ಆಕಸ್ಮಿಕಗಳು ನನ್ನ ಬದುಕಿನಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ. ಆಕಸ್ಮಿಕಗಳು ಅಂದರೆ ಬೇರೆಯವರು ನಂಬಿಕೆಯೆನ್ನಬಹುದು. ಅದೃಷ್ಟ ಎನ್ನಬಹುದು. ಆದರೆ ಅದನ್ನು ನಾನು 'ಆಕಸ್ಮಿಕ' ಎಂದು ಕರೆಯಲು ಬಯಸುವೆ. ಪ್ರತಿಯೊಬ್ಬ ಮನುಷ್ಯನ ಬದುಕಿನಲ್ಲಿ ನಮಗೆ ಗೊತ್ತಿಲ್ಲದ, ಯೋಚಿಸದ ಎಷ್ಟೋ ಸಂಗತಿಗಳು ನಡೆದು ಹೋಗುತ್ತಿರುತ್ತವೆ. ಅವುಗಳನ್ನು ನಾವು ಕನಸುಮನಸ್ಸಿನಲ್ಲಿಯೂ ಊಹಿಸಿಕೊಂಡಿರುವುದಿಲ್ಲ. ಅಂಥವು ನನ್ನ ಬದುಕಿನಲ್ಲಿ ಸಾಕಷ್ಟು ಘಟಿಸಿವೆ.

ಮೊದಲನೆಯದಾಗಿ ನಾನು ಓದಿದ್ದೆ ಒಂದು ಆಕಸ್ಮಿಕ. ಯಾಕೆಂದರೆ ನಮ್ಮೂರಿನಲ್ಲಿ ಸ್ಕೂಲೇ ಇರಲಿಲ್ಲ'' ಎಂದು ಭಾವನಾತ್ಮವಾಗಿ ಹೇಳುವಾಗ ಭೂತಕಾಲದ ಏನೇನೋ ನೆನಪುಗಳು ಅವರ ಮುಂದಿರುತ್ತವೆ. ಮುಂದೆ ತಮ್ಮ ಹಳ್ಳಿಗೆ ಶಾಲೆ ಬಂದಿದ್ದು ಒಳ್ಳೆಯ ಅಧ್ಯಾಪಕರು ಸಿಕ್ಕಿದ್ದು ಎಲ್ಲವೂ ಆತ್ಮೀಯವಾಗುತ್ತದೆ. ಕೆ.ಎಂ.ಎಸ್‌ರವರು 'ಒಡನಾಟ' ಎಂಬ ಅತ್ಯುತ್ತಮ ಪುಸ್ತಕವನ್ನು ತಮ್ಮ ಮೊದಲನೆಯ ಗುರು ಕೆ.ಟಿ.ಸತ್ಯನಾರಾಯಣರಾವ್ ಅವರಿಗೆ ಅರ್ಪಿಸಿದ್ದಾರೆ. ಇವರ ಬಗ್ಗೆ ಸಮಯಸಿಕ್ಕಿದಾಗಲೆಲ್ಲ ಮಾತಿನ ನಡುವೆ ಪ್ರಸ್ತಾಪಿಸುತ್ತಲೇ ಇರುತ್ತಾರೆ. ಯಾಕೆಂದರೆ ತಮ್ಮ ಬದುಕಿಗೆ ನಿಜವಾದ ಅರ್ಥದಲ್ಲಿ ತಳಹದಿಯನ್ನು ಹಾಕಿದರು ಎನ್ನುವುದು. ಇದರ ಜೊತೆಗೆ 'ನಾನು ಓದದೆ ಇದ್ದಿದ್ದರೆ ಏನಾಗುತ್ತಿದ್ದೆ?' ಎಂಬ ಪ್ರಶ್ನೆಯನ್ನು ಆಗಾಗ ನುಡಿಯುವುದುಂಟು. ಆದ್ದರಿಂದ ಇಂಥ ಆಕಸ್ಮಿಕಗಳನ್ನು ವಿಶ್ಲೇಷಿಸುತ್ತ ಎಸ್.ಎಸ್.ಎಲ್.ಸಿ.ಯ ಸುಮಾರಿಗೆ ತಮ್ಮ ಊರಿಗೆಹತ್ತಿರವಿದ್ದ ಶಿವನಿಗೇ ಹೈಸ್ಕೂಲು ಬಂತು ಎನ್ನುವುದನ್ನು ಸಂಭ್ರಮಪಟ್ಟು ಹೇಳುವರು.

ಕೆ.ಎಂ.ಎಸ್.ರವರು ತಮ್ಮ 'ಒಡನಾಟ'ದಂಥ ಮಹತ್ವಪೂರ್ಣಕೃತಿಯನ್ನು ಅವರಿಗೆ ಪ್ರಿಯ ಗುರುಗಳಾದ ಸತ್ಯನಾರಾಯಣರಾವ್ ಅವರಿಗೆ ಅರ್ಪಿಸುವುದನ್ನು ಹಿಂದೆ ಪ್ರಸ್ತಾಪಿಸಲಾಗಿದೆ. ಆಗಿನ ಕಾಲಕ್ಕೆ ಬಹುಪಾಲು ಶಾಲೆಗಳಲ್ಲಿ ಏಕೋಪಾಧ್ಯಾಯರೇ ಇರುತ್ತಿದ್ದುದು. ಕಾರೇಹಳ್ಳಿಯಲ್ಲಿಯೂ ಏಕೋಪಾಧ್ಯಾಯರಾಗಿಯೇ ದುಡಿದ ಸತ್ಯನಾರಾಯಣರಾವ್‌ರವರು ಕೆ.ಎಂ.ಎಸ್.ರವರ ವ್ಯಕ್ತಿತ್ವವನ್ನು ರೂಪಿಸಿದವರು. ಅಕ್ಕಪಕ್ಕ ಹಳ್ಳಿಗಳಿಗೆ ವರ್ಗಾವಣೆಯಾದಾಗಲೂ ತಮ್ಮ ಪ್ರೀತಿಯ ಶಿಷ್ಯನ ಮೇಲಿನ ಹಿಡಿತವನ್ನು ಬಿಟ್ಟುಕೊಡಲಿಲ್ಲ. ಹಾಗೆಯೇ ಸತ್ಯನಾರಾಯಣರಾವ್‌ರವರಿಗೆ ಮಕ್ಕಳಿಲ್ಲದ ಪ್ರಯುಕ್ತ ಶಾಲೆಯ ಮಕ್ಕಳೇ ಅವರಿಗೆ ನಿಜವಾದ ಮಕ್ಕಳಾಗಿದ್ದರು. ಇದರ ನಡುವೆಯೂ ಕೆ.ಎಂ.ಎಸ್‌ರವರ ಬಗ್ಗೆ ಎಲ್ಲಿಲ್ಲದ ಮಮಕಾರ. ಮಾಧ್ಯಮಿಕ ಶಾಲೆಯ ಸಂದರ್ಭದಲ್ಲಿ ಎರಡು ವರ್ಷ ಅಜ್ಜಂಪುರಕ್ಕೆ ವರ್ಗವಾದಾಗ ಇವರನ್ನು ಅಲ್ಲಿಗೆ ಕರೆಸಿಕೊಂಡು ಮನೆಯಲ್ಲಿರಿಸಿಕೊಂಡು ಬೆಳೆಸಿದರು.

ಆಗಿನ ಕಾಲದಲ್ಲಿ ಲೋಯರ್ ಸೆಕೆಂಡರಿ ಒಬ್ಬ ವಿದ್ಯಾರ್ಥಿಯ ಬದುಕಿನಲ್ಲಿ ಮಹತ್ತರ ಕಾಲಘಟ್ಟವನ್ನು ನಿರ್ಣಯಿಸುತ್ತಿತ್ತು. ಅಂಥ ಸಮಯದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದವರು. ಎಲ್.ಎಸ್. ಮುಗಿಸುವ ಸಮಯಕ್ಕೆ ಶಿವನಿಗೇ ಹೈಸ್ಕೂಲ್ ಬಂದದ್ದು ಒಂದು 'ಆಕಸ್ಮಿಕ' ಎಂದು ಸಂಭ್ರಮಪಟ್ಟು ಹೇಳುವುದನ್ನು ಮರೆಯುವುದಿಲ್ಲ. ಹಾಗೆಯೇ ಮುಂದೆ ಎಸ್.ಎಸ್.ಎಲ್.ಸಿಯಲ್ಲಿ ಅನುತ್ತೀರ್ಣರಾದಾಗ ಎದೆಗುಂದದಂತೆ ಮಾನಸಿಕ ಸಿದ್ಧತೆಯನ್ನು ಕೊಟ್ಟವರು ಸತ್ಯನಾರಾಯನರಾವ್ ಅವರು. ಕಾಲೇಜು ವಿದ್ಯಾಭ್ಯಾಸವನ್ನು ಮುಂದುವರೆಸಲು ಸಿದ್ಧತೆಯನ್ನು ರೂಪಿಸಿದರು.

ಕೆ.ಎಂ.ಎಸ್. ಬೆಳೆದ ಹಳ್ಳಿಯು ಮೂರು ಜಿಲ್ಲೆಗಳ ಗಡಿ ಭಾಗದಲ್ಲಿತ್ತು. ಶಿವಮೊಗ್ಗ ಚಿಕ್ಕಮಗಳೂರು, ಚಿತ್ರದುರ್ಗ - ಮೂರು ಜಿಲ್ಲೆಗಳ ಗಡಿ ಭಾಗದಲ್ಲಿದ್ದ ಕಾರೇಹಳ್ಳಿಯ ಸುತ್ತಣ ಪ್ರದೇಶ, ಆ ಕಾಲದಲ್ಲಿ ಮನರಂಜನೆಗೆ ಆಶ್ರಯಸಿದ್ದು ಬಯಲಾಟಗಳನ್ನು, ಆಗೀಗ ಹಳ್ಳಿಗೆ ಅಥವಾ ಸುತ್ತ ಮುತ್ತಣ ಗ್ರಾಮಗಳಿಗೆ ಬರುತ್ತಿದ್ದ ಅಲೆಮಾರಿ ಜನಪದ ಕಲಾ ತಂಡಗಳು, ಗ್ರಾಮೀಣರೇ ಒಟ್ಟಾಗಿ ನಂತರ ಮತ್ತೊಬ್ಬರನ್ನ ಗೊತ್ತು ಪಡಿಸಿಕೊಂಡು ಆಡುತ್ತಿದ್ದ ಬಯಲಾಟಗಳು. ಕಂಪನಿ ನಾಟಕಗಳ ಪ್ರಭಾವದಿಂದ ಪೌರಾಣಿಕ ಸಾಮಾಜಿಕ ನಾಟಕಗಳನ್ನು ಆಡುತ್ತಿದ್ದರು. ಬಾಲ್ಯದಿಂದಲೂ

ಇಂತಹ ಜನಪ್ರಿಯ ನಾಟಕ ಪರಂಪರೆಯ ಗಾಢವಾದ ಪ್ರಭಾವದಿಂದ ಕೆ.ಎಂ.ಎಸ್. ನಾಟಕ ಪ್ರೇಮ ಬೆಳೆದಿದೆ. ಅವರ ಹಳ್ಳಿಗೆ ಸಮೀಪದ ಅಜ್ಜಂಪುರದ ಕಲಾವಿದರ ನಾಟಕ ತಂಡ ಅಂದೂ ರಾಜ್ಯದಲ್ಲಿಯೇ ಪ್ರಸಿದ್ಧಿ ಹೊಂದಿತ್ತು. ಅಜ್ಜಂ ಪುರದಲ್ಲಿ ನಡೆಯುತ್ತಿದ್ದ ಈ ತಂಡದ ಎಲ್ಲ ನಾಟಕಗಳಿಗೆ ಮತ್ತು ಅಂದಿನ ಟೆಂಟ್ ಸಿನಿಮಾಗಳಿಗೆ ಕೆ.ಎಂ.ಎಸ್. ತಪ್ಪದೇ ಹೋಗಿ ತಮ್ಮ ಅಭಿರುಚಿಯನ್ನು ಬೆಳೆಸಿಕೊಂಡರು.

ಕೆ.ಎಂ.ಎಸ್. ಅಜ್ಜ ಸ್ವಲ್ಪ ಖಯಾಲಿ ಮನುಷ್ಯ. ಕಂಪನಿ ನಾಟಕಗಳೆಂದರೆ ಅವರಿಗೆ ಅತೀವ ಪ್ರೀತಿ. ಜಮಿನ್ದಾರರಾಗಿದ್ದ ಅವರಿಗೆ ಖಯಾಲಿಯ ಕ್ಷಣಗಳಲ್ಲಿ ಒಂದು ಕಂಪನಿ ನಾಟಕ ತಂಡವನ್ನು ಕಟ್ಟ ಬೇಕೆಂಬ ಹಂಬಲವೂ ಕಾಡಿತ್ತು. ಆಗ ಅವರು ತಮ್ಮ ಇಬ್ಬರು ಮಕ್ಕಳನ್ನು ಬೆಂಗಳೂರಿನ ಹತ್ತಿರದ ದೊಡ್ಡಬಳ್ಳಾಪುರಕ್ಕೆ ಹಾರ್ಮೋನಿಯಂ ಕೊಂಡು ಎರಡು ವರ್ಷಗಳ ಕಾಲ ಕಳಿಸಿದ್ದರಂತೆ. ಎತ್ತಿನ ಗಾಡಿಯ ಅಪಘಾತವೊಂದರಲ್ಲಿ ಕಾಲು ಮುರಿದು ಕೊಂಡರೂ ತಮ್ಮ ಮಕ್ಕಳು ಸಂಗೀತ ಕಲಿಯುವುದನ್ನು ನಿಲ್ಲಿಸಿ ಊರಿಗೆ ಹಿಂದಿರುಗುವುದನ್ನು ವಿರೋಧಿಸಿದರಂತೆ. ಕೆ.ಎಂ.ಎಸ್. ತಂದೆ ಸಹೋದರನೊಡನೆ ಊರಿಗೆ ಹಿಂದಿರುಗಿದ ಬಳಿಕವೂ ಹಳ್ಳಿಯಲ್ಲಿ ನಾಟಕ ತಂಡ ಕಟ್ಟಿ ನಾಟಕ ಆಡುತ್ತಿದ್ದರಂತೆ. ಅವರ ಮನೆಯಲ್ಲಿ ಆಗ ಕೊಂಡು ಕೊಂಡಿದ್ದ ಒಂದು ಲೆಗ್ ಹಾರ್ಮೋನಿಯಂ, ತಬಲಾ ಮುಂತಾದ ಸಲಕರಣೆಗಳೂ ಬಹಳ ದಿನ ಉಳಿದುಕೊಂಡಿದ್ದವು. ಕೆ.ಎಂ.ಎಸ್. ಶಾಲಾ ದಿನಗಳಲ್ಲಿ ಈ ಹಾರ್ಮೋನಿಯಂ ನುಡಿಸಲು ಹವಣಿಸಿದ್ದೂ ಉಂಟು.

ನಾಟಕ ಪ್ರೇಮಿಗಳ ಕುಟುಂಬದಲ್ಲಿ ಹುಟ್ಟಿದರೂ ನಾಟಕಗಳಲ್ಲಿ ಪಾತ್ರ ವಹಿಸುವುದೇ ಮುಂತಾದ ಚಟುವಟಿಕೆಗಳಿಗೆ ಅವರ ಕುಟುಂಬ ಇವರನ್ನು ಬಿಡಲಿಲ್ಲ. ಹಳ್ಳಿಯ ಮಕ್ಕಳೊಂದಿಗೆ ಬಯಲಾಟವೊಂದನ್ನು ಆಡಿಸುವ ಆಟವಾಡುತ್ತಿದ್ದ ಬಾಲಕ ಕೆ.ಎಂ.ಎಸ್. ಒಮ್ಮೆ ಅವರ ತಾತನಿಂದ ಛೀಮಾರಿ ಹಾಕಿಸಿಕೊಳ್ಳಬೇಕಾಯಿತು. ಚೆನ್ನಾಗಿ ಓದಿ ದೊಡ್ಡವನಾದ ಮೇಲೆ ವಕೀಲನೊ ಆಗ ಬೇಕಾದ ತಮ್ಮ ಮೊಮ್ಮಗ ನಾಟಕದಂತ ಸಾಮಾನ್ಯ ವಿಚಾರಗಳತ್ತ ಗಮನ ಹರಿಸುವುದು ಅವರಿಗೆ ಒಪ್ಪಿಗೆ ಇರಲಿಲ್ಲ.

ಕೆ.ಎಂ.ಎಸ್.ರವರು ಕಾಲೇಜಿಗೆ ಮೈಸೂರಿಗೆ ಬಂದರು. ಆಗಿನ ಕಾಲಕ್ಕೆ ವಸತಿ ಮತ್ತು ಊಟದ ಸಮಸ್ಯೆ ಮುಂದೆ ಬಂದು ನಿಂತಿತು. ಯಾರೋ ಸುತ್ತೂರು ಸ್ವಾಮಿಗಳನ್ನು ನೋಡಲು ಸೂಚಿಸಿದರು. ಅದರಂತೆ ಒಂದಷ್ಟು ದಿವಸ ಎರಡೆರಡು ದಿನಬಿಟ್ಟು ಸುತ್ತೂರುಸ್ವಾಮಿಗಳನ್ನು ನೋಡಿದರು. ನೋಡಿದಾಗಲೆಲ್ಲ 'ನೋಡೋಣ' ಎಂಬ ಮಾತನ್ನು ಹೇಳಿ ಕಳಿಸುತ್ತಿದ್ದರು. ಕೊನೆಗೊಂದು ದಿನ ನೋಡಲು ಹೋದಾಗ ಮನೆಯ ಕಡೆಯ ವಿಷಯವೆಲ್ಲ ಕೇಳಿದರು, ರಾಗಿ ಬೆಳೆಯುವುದನ್ನು ತಿಳಿದು ಎರಡು ಮೂಟೆ ರಾಗಿ ತಂದು ಕೊಡಲು ಹೇಳಿ ಸಂಬಂಧಪಟ್ಟವರಿಗೆ ಹಾಸ್ಟೆಲ್‌ನಲ್ಲಿ ಸೀಟುಕೊಡಲು ಚೀಟಿಕೊಟ್ಟರು. ಖುಷಿಯಿಂದ ಹಾಸ್ಟೆಲ್ ಸೇರಿಕೊಂಡರು. ಆದರೆ ಎಂದೂ ರಾಗಿ ತರಲು ಹೇಳಲಿಲ್ಲ. ಆರು ವರ್ಷ ಆರಾಮವಾಗಿ ಊಟದ ಸಮಸ್ಯೆಯನ್ನು ಮರೆತು ಓದಿದೆ. ಈಗಲೂ ಆ ಮಠದ ಬಗ್ಗೆ ಅಂದಿನ ಸ್ವಾಮಿಗಳ ಬಗ್ಗೆ ಅಪಾರವಾದ ಗೌರವವಿದೆ. ಮೂರನೇ ಒಂದು ಭಾಗದಷ್ಟು ಬೇರೆ ಬೇರೆ ಜನಾಂಗದ ವಿದ್ಯಾರ್ಥಿಗಳಿದ್ದರೂ ಅವರನ್ನು ತಾರತಮ್ಯದಿಂದ ನೋಡಿದವರಲ್ಲ. ಆದರೆ ತಮ್ಮ ಜಾತಿಯ ಹುಡುಗರು ಎಂಬ ಅಭಿಮಾನ ಮತ್ತು ಪ್ರೀತಿ ಇತ್ತು.

ಆದರ ಹಿಂದೆ ಗಾಢವಾದ ನಂಬಿಕೆ ಇತ್ತೇ ವಿನಹ ಜಾತಿವಾದದ ಸಂಕುಚಿತತೆ ಇರಲಿಲ್ಲ. ಆದ್ದರಿಂದಲೇ ಅಂಥ ಕಡೆಯಲ್ಲೆಲ್ಲ ವಿಶಾಲವಾದ ಜಾತ್ಯತೀತತೆ ಇರುತ್ತಿತ್ತು. ಈ ದೃಷ್ಟಿಯಿಂದ ಬಹುಪಾಲು ವೀರಶೈವ ಮಠಗಳು ಆ ಕಾಲಘಟ್ಟದಲ್ಲಿ ಸಾವಿರಾರು ಅಬ್ರಾಹ್ಮಣರಿಗೆ ವಿದ್ಯಾದಾನವನ್ನು ಮಾಡಿರುವುದು ಸಾಮಾಜಿಕವಾಗಿ ಮಹತ್ವಪೂರ್ಣವಾದದ್ದು.ಆದರೆ ವೀರಶೈವ ಹುಡುಗರು ಊಟಕ್ಕೆ ಹೋಗುವಾಗ ಕಟ್ಟುನಿಟ್ಟಾಗಿ ಲಿಂಗವನ್ನು ಕಟ್ಟಿಕೊಂಡು ಹೋಗಬೇಕಾಗಿತ್ತು. ಇದನ್ನು ಪಾಲಿಸುವುದು ಅಗತ್ಯವಾಗಿತ್ತು. ಯಾಕೆಂದರೆ ಸ್ವಾಮಿಗಳು ಊಟದ ಸಮಯದಲ್ಲಿ ಡೈನಿಂಗ್ ಹಾಲ್‌ನಲ್ಲಿ ಎಲ್ಲವನ್ನು ಗಮನಿಸುತ್ತಿದ್ದರು. ಆ ಸಮಯದಲ್ಲಿ ವೀರಶೈವ ಹುಡುಗರು ತಮ್ಮ ಧರ್ಮದ ಆಚರಣೆಗಳನ್ನು ಯಾಕೆ ಪಾಲಿಸಬೇಕಾಗಿದೆ ಎಂಬುದರ ಬಗ್ಗೆ ಒಂದು ಪುಟ್ಟ ಉಪನ್ಯಾಸವನ್ನು ಕೊಡುತ್ತಿದ್ದರು. ಆಗ ಬೇರೆ ಜನಾಂಗದ ವಿದ್ಯಾರ್ಥಿಗಳು ಇದನ್ನು ತಪ್ಪುತಿಳಿಯಬಾರದು ಎಂಬುದಾಗಿ ವಿನಯದಿಂದ ಹೇಳುತ್ತಿದ್ದರು. ಈ ರೀತಿ ಹೇಳುವಾಗ ಅದರ ಹಿಂದೆ ಉದಾರವಾದ ಗುಣವಿತ್ತು. ಆದರ ಹಿಂದೆ ತಮ್ಮದನ್ನು ತಾವು ರಕ್ಷಿಸಿಕೊಳ್ಳಬೇಕು ಎಂಬ ಸರಳವಾದ ನಂಬಿಕೆ ಇತ್ತು. ಈಗಿನ ರೀತಿಯಲ್ಲಿ ಬೇರೆ ಬೇರೆ ರೀತಿಯ ನಂಬಿಕೆಗಳು ಮತ್ತು ಧರ್ಮಗಳು ಇರಬಾರದು ಎಂಬ ಧರ್ಮಾಂಧತೆ ಅವರಲ್ಲಿರಲಿಲ್ಲ. ಇಂಥ ಗುಣವನ್ನು ಕೆ.ಎಂ.ಎಸ್.ರವರು ಆ ಸ್ವಾಮಿಗಳಲ್ಲಿ ಕಂಡುಕೊಂಡಿದ್ದರು. ಹೀಗೆ ಕಂಡುಕೊಂಡಿದ್ದಾಗ ನಮ್ಮಲ್ಲಿಯ ಬಹುಪಾಲು ಕಟ್ಟಾ ಜಾತ್ಯಾತೀತವಾದಿಗಳು ಏನು ತಿಳಿದುಕೊಳ್ಳುತ್ತಾರೆ ಎಂಬುದು ಕೆ.ಎಂ.ಎಸ್‌ರವರಿಗೆ ಮುಖ್ಯವಲ್ಲ. 'ಅವರು ಹಾಗೆ ಬದುಕಿದವರು' ಎಂಬುದು ಮುಖ್ಯ. ಹಾಗೆಯೇ ತಮ್ಮ ಕಾಲೇಜಿನ ದಿನಗಳಲ್ಲಿ ರಾಷ್ಟ್ರವ್ಯಾಪಿ ಜಾತ್ಯತೀತ ಆದರ್ಶಗಳು ಒಂದು ರೀತಿಯ ಆರೋಗ್ಯಪೂರ್ಣ ವಾತಾವರಣ ನಿರ್ಮಾಣಗೊಂಡಿತ್ತು. ಇವರು ತಮ್ಮ ಎಂ.ಎ.ಕೊನೆಯ ಪರೀಕ್ಷೆಯನ್ನು ಮುಗಿಸುವ ಕಾಲಕ್ಕೆ ನೆಹರೂ ನಿಧನರಾದ ಸುದ್ದಿಯನ್ನು ತಿಳಿದು ಹೀಗೆ ಯೋಚಿಸುತ್ತಾರೆ: "ನೆಹರೂರವರು ಒಬ್ಬ ದೊಡ್ಡ ನಾಯಕನಾಗಿ ಒಟ್ಟು ರಾಷ್ಟ್ರದಲ್ಲಿ ಉದಾರ ವಾದದ ಧಾರ್ಮಿಕ ಪರಂಪರೆಯನ್ನು ಸೃಷ್ಟಿಸಿದರು. ಅವರು ದೇಶದ ಆಡಳಿತವನ್ನು ಹಿಡಿದ ಕಾಲದಲ್ಲಿ ನಮ್ಮ ಬಾಲ್ಯಕಾಲವನ್ನು ಕಳೆದೆವು ಎಂಬುದು ಮುಖ್ಯ. ನೆಹರೂ ಸಾವಿನ ನಂತರ ಸಂಕುಚಿತವಾದಂತಹ ಫ್ಯಾಸಿಸ್ಟ್ ಟೆಂಡೆನ್ಸಿ ಬೆಳೆಯಿತು. ಇದರಿಂದ ಆ ಕಾಲ ಘಟ್ಟದಲ್ಲಿ ಅಂದರೆ 1964ರ ಹಿಂದಿನ ದಿನಗಳು, ವಿದ್ಯಾರ್ಥಿಗಳಲ್ಲಿ ದಟ್ಟವಾದ ಆದರ್ಶದ ಬೇರುಗಳನ್ನು ಬದುಕಿಗೆ ನೀಡಿತ್ತು. ಈಗ ಗಾಬರಿ ಹುಟ್ಟಿಸುವುದೆಂದರೆ ನಾವು ಮಧ್ಯಯುಗದ ದಿನಗಳಿಗೆ ಹೋಗುತ್ತಿದ್ದೇವೆ ಎನ್ನುವ ರೀತಿಯಲ್ಲಿ ಕೆಲವು ಸಂಘಟನೆಗಳು ಹಾಗೂ ಪಕ್ಷಗಳು ಯೋಚಿಸುತ್ತವೆ ಎಂಬುದನ್ನು ತಿಳಿದಾಗ. ಇಂಥ ವಾತಾವರಣ ನಮ್ಮ ಯುವಜನಾಂಗವನ್ನು 'ರೆಸ್ಟ್‌ಲೆಸ್'ನ ಕಡೆಗೆ ಕರೆದೊಯ್ಯುತ್ತದೆ, ಎಂಬುದು ಮತ್ತಷ್ಟು ದಿಗಿಲು ಹುಟ್ಟಿಸುವ ಸಂಗತಿಯಾಗಿದೆ."ಎಂಬುದನ್ನು ವಿಷಾದದಿಂದ ನುಡಿಯುತ್ತಾರೆ. ಹಾಗೆಯೇ "ನವೋದಯದ ಸಾಹಿತ್ಯ ಚಳುವಳಿಯ ಸಂದರ್ಭದಲ್ಲಿದ್ದ ಒಂದು ರೀತಿಯ ಸ್ನೇಹಮಯವಾದ ಮತ್ತು ಉದಾರವಾದ ವಾತಾವರಣ ನವ್ಯದ ಸಂದರ್ಭದಲ್ಲಿ ಇರಲಿಲ್ಲ. ಅಲ್ಲಿಂದಲೇ ಹುಟ್ಟಿತು ಒಂದು ಬಗೆಯ ಅಸಹನೆ. ತಮ್ಮ ತರಹ ಬರೆಯದೇ ಇರುವಂತಹವರು ಕಡಿಮೆ ಬುದ್ಧಿವಂತರು ಎಂಬ ಭಾವನೆಯನ್ನು ಸೃಷ್ಟಿಸಿದರು. ಈ ದೃಷ್ಟಿಯಿಂದ ನಮ್ಮ ಸಾಮಾಜಿಕ ಮತ್ತು ರಾಜಕೀಯ ಸಂದರ್ಭದಲ್ಲಿ 1965ರ ಘಟ್ಟದವರೆವಿಗೆ ಒಂದು ಲ್ಯಾಂಡ್‌ಮಾರ್ಕ್ ಎಂಬುದನ್ನು ಭಾವಿಸಬೇಕಾಗಿದೆ. ನಂತರ 1965-70ರ ಘಟ್ಟದಲ್ಲಿ ನವ್ಯ ಸಾಹಿತ್ಯದಲ್ಲಿ ಉತ್ತಮ ಲೇಖಕರು ಬಂದಿರಬಹುದು. ಆದರೆ ನವೋದಯ ಸಾಹಿತ್ಯ

ಸಂದರ್ಭದ ಕುವೆಂಪು, ಬೇಂದ್ರೆ, ಪು.ತಿ.ನ, ಕಾರಂತರ ಮತ್ತು ಮಾಸ್ತಿ ಸೃಷ್ಟಿಸಿದ ಒಂದು ಸಾಮಾಜಿಕ ಜವಾಬ್ದಾರಿ ಮತ್ತು ಎಲ್ಲರನ್ನು ಒಟ್ಟಿಗೆ ಕರೆದುಕೊಂಡು ಹೋಗಬೇಕು ಎಂಬುದು ನವ್ಯದಲ್ಲಿ ಬರಲಿಲ್ಲ ಎಂಬುದು ನನ್ನ ನಂಬಿಕೆ. ಎಷ್ಟೋ ಜನ ನವ್ಯ ಲೇಖಕರು ನಮಗೆ ಅರ್ಥವಾಗದ್ದನ್ನು ಬರೆದರು. ಒಮ್ಮೆ ಶಿವಮೊಗ್ಗದ ಸಮಾರಂಭವೊಂದರಲ್ಲಿ ನಮ್ಮ ಶ್ರೇಷ್ಠ ಲೇಖಕರಲ್ಲಿ ಒಬ್ಬರಾದ ಪೂರ್ಣಚಂದ್ರ ತೇಜಸ್ವಿಯವರು ಒಂದು ಮಾತು ಹೇಳಿದರು : ''ನಮ್ಮ ಎಷ್ಟೋಜನ ವಿಮರ್ಶಕರು ಬರೆಯುವುದನ್ನು ನೋಡಿದರೆ ಅವರು ಏನನ್ನು ಹೇಳಲು ಹೊರಟಿದ್ದಾರೆ ಎಂಬುದು ಅರ್ಥವಾಗುವುದೇ ಇಲ್ಲ ಇಂಥ ಮಾತನ್ನು ತೇಜಸ್ವಿಯವರೇ ಹೇಳಬೇಕಾದರೆ ನಾವು ಯೋಚಿಸಬೇಕಾಗಿದೆ'' ಎಂದು ಕೆಂ.ಎಂ.ಸ್‌ರವರು ಹೇಳಿದಾಗ ನಾನು ಹೆಚ್ಚು ಚರ್ಚಿಸಲು ಹೋಗಲಿಲ್ಲ. ಪ್ರತಿಯೊಂದು ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಳುವಳಿಯೂ ಅದರದೇ ಆದ ಕೆಲವು ವೈವಿಧ್ಯಮಯವಾದ ಆಯಾಮಗಳನ್ನು ಪಡೆದಿರುತ್ತದೆ. ಒಂದನ್ನು ಇನ್ನೊಂದರ ಮೂಲಕ ನೋಡುವುದು ಸೂಕ್ತವಲ್ಲವೇನೋ ಅನ್ನಿಸುತ್ತದೆ. ನವ್ಯ ಚಳುವಳಿಯೂ ಕೂಡ ನಮ್ಮ ಸಾಹಿತ್ಯಕ ಸಂದರ್ಭದಲ್ಲಿ ಅದ್ಭುತವಾದ ಕೊಡುಗೆಯನ್ನೇ ಕೊಟ್ಟಿದೆ. ಇಷ್ಟಾದರೂ ಕೆ.ಎಂ.ಎಸ್.ರವರು ನವ್ಯ ಸಾಹಿತ್ಯ ಚಳುವಳಿ ಭಾಷೆಯ ದೃಷ್ಟಿಯಿಂದ ಮಹತ್ತರವಾದ ಕೊಡುಗೆಯನ್ನೇ ಕೊಟ್ಟಿದೆ ಎಂಬುದನ್ನು ಹೇಳಲು ಮರೆಯುವುದಿಲ್ಲ. ಹೀಗೆ ಹೇಳುತ್ತಲೇ ''ನವ್ಯದವರು ರಾಜಕೀಯ ವಿಚಾರಕ್ಕೆ ಬಂದಾಗ ಪ್ರಗತಿಪರ ಜನಪರ ನಿಲುವುಗಳನ್ನೇ ತೆಗೆದುಕೊಂಡಿದ್ದಾರೆ. ಇವರೆಲ್ಲ ಬಹುಪಾಲು ಮಂದಿ ಲೋಹಿಯಾವಾದಿಗಳಾಗಿದ್ದರು'' ಎಂದು ಹೇಳಿ ''ಪ್ರಾಮಾಣಿಕವಾಗಿ ನನ್ನನ್ನು ನಾನು ಒಪ್ಪಿ ಸಾಹಿತ್ಯವನ್ನು ಓದಿಕೊಂಡಿದ್ದೇನೆ. ಸಾಹಿತ್ಯವನ್ನು ಬಿಟ್ಟರೆ ಏನೂ ಇಲ್ಲ ಎನ್ನುವ ತರದಲ್ಲಿ ನಾನು ಎಂದೂ ಸಾಹಿತ್ಯಕ್ಕೆ ಅಂಟಿಕೊಂಡವನಲ್ಲ. ನಾನು ಬಹುಶಃ ಕನ್ನಡ ಅಧ್ಯಾಪಕನೇನಾದರೂ ಆಗದೆ ಇದ್ದಿದ್ದರೆ ನಾನು ಇಷ್ಟು ಸಾಹಿತ್ಯ ಓದುತ್ತಿರಲಿಲ್ಲವೇನೋ ; ಯಾಕೆಂದರೆ ನನಗೆ ಸಾಹಿತ್ಯಕ್ಕಿಂತ ಸಮಾಜ ದೊಡ್ಡದು, ಒಟ್ಟು ಸಮಾಜ ಮತ್ತು ಸಂಸ್ಕೃತಿ ಉಳಿದರೆ ಸಾಹಿತ್ಯವೂ ಉಳಿಯುತ್ತದೆ. ನನ್ನ ಮುವತ್ತು-ಮುವತ್ತೈದು ವರ್ಷಗಳ ಅಧ್ಯಾಪಕ ವೃತ್ತಿಯಲ್ಲಿ ತಿಂಗಳಿಗೆ ಕೊನೆಯ ಪಕ್ಷ ಒಂದೆರಡು ಪುಸ್ತಕಗಳನ್ನು ಓದದೆ ಇದ್ದವನಲ್ಲ. ಅಷ್ಟರಮಟ್ಟಿಗೆ ಶ್ರದ್ಧೆ ಇದೆ. ಈ ಕಾರಣಕ್ಕಾಗಿಯೇ ಈಗ ನಾನು ಹೆಚ್ಚು ಬರೆಯಲು ತೊಡಗಿದ್ದೇನೆ. ಹೀಗೆ ಬರೆಯದ ಅಂದಿನ ಕಾಲದಲ್ಲಿ ಲಂಕೇಶ್‌ರವರ ಸುತ್ತ ಒಂದು ದೊಡ್ಡ ಬಳಗವಿತ್ತು. ಆ ಬಳಗ ತುಂಬ ಆ್ಯಕ್ಟೀವ್ ಆಗಿ ಇತ್ತು. ಅದು ರಂಗಭೂಮಿಯ ಕಡೆ ಹಾಗೂ ಇತರೆ ಚಟುವಟಿಕೆಗಳತ್ತ ಗಾಢವಾಗಿ ತೊಡಗಲು ಪ್ರೇರೇಪಿಸಿತು ಎನ್ನುವುದು ಸಂತೋಷದ ಸಂಗತಿ'' ಎನ್ನುವಾಗ ಕೆ.ಎಂ.ಎಸ್.ರವರೇ ನಾನಾ ರೀತಿಯ ಜನರನ್ನು ಒಂದೆಡೆ ಸೇರಿಸುವದರಲ್ಲಿ ಕೇಂದ್ರಬಿಂದುವಾದರು ಎಂಬುದನ್ನು ಮರೆಯುವಂತಿಲ್ಲ.

ಕೆ.ಮರುಳಸಿದ್ದಪ್ಪನವರು ಎಂ.ಎ.ಯಲ್ಲಿ ಪ್ರಥಮ ರ್‍ಯಾಂಕನ್ನು ಪಡೆದು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗಕ್ಕೆ 1965ರಲ್ಲಿ ಬಂದರು. ಇದಕ್ಕಿಂತ ಮೊದಲು ಒಂದು ವರ್ಷ ಕಾರ್ಪೊರೇಷನ್ ಹೈಸ್ಕೂಲು ಮತ್ತು ಜಯನಗರ 7ನೇ ಬ್ಲಾಕ್‌ನ ಸುತ್ತೂರು ಮಠದ ಹೈಸ್ಕೂಲ್‌ನಲ್ಲಿ ಮೇಷ್ಟ್ರಾಗಿದ್ದರು. ಬೆಂಗಳೂರಿನ ಹನುಮಂತನಗರದ ಪೇಯಿಂಗ್ ಹಾಸ್ಟೆಲ್‌ನಲ್ಲಿರುತ್ತಿದ್ದರು. ಇದು ಮಾಸ್ತಿವೆಂಕಟೇಶ ಅಯ್ಯಂಗಾರ್ ಮತ್ತು ಪ್ರೊ.ಜಿ.ಎಸ್.ಶಿವರುದ್ರಪ್ಪನವರು ಆಗ ಬಾಡಿಗೆಗೆ ಇದ್ದ ಮನೆಯ ಹತ್ತಿರ ಇದ್ದದ್ದು. ಇವರ ಹಾಸ್ಟೆಲ್‌ನಲ್ಲಿ ಎನ್.ಡಿ.ಜಯಪ್ಪ ಎನ್ನುವವರು ಇದ್ದರು.

ಮಾರ್ಕ್ಸ್‌ವಾದದ ಬಗ್ಗೆ ಅದರಲ್ಲೂ ನಕ್ಸಲ್‌ಬಾರಿ ಚಳುವಳಿಗಳ ಬಗ್ಗೆ ಉದ್ದುದ್ದ ಹೇಳುತ್ತಿದ್ದರು. ನನ್ನ ಜೊತೆ ಚೀನಾ ದೇಶಕ್ಕೂ ಬಂದಿದ್ದರು. ತುಂಬ ರೊಮ್ಯಾಂಟಿಕ್ ಕ್ಯಾರೆಕ್ಟರ್. ಇರಲಿ ಆ ದಿನಗಳಲ್ಲಿ ಕಿ.ರಂ.ರವರ ಜೊತೆ ಹೋದಾಗ ಕೆ.ಎಂ.ಎಸ್.ರವರ ಕೊಠಡಿ ಸಾಹಿತ್ಯ, ರಾಜಕೀಯಕ್ಕೆ ಸಂಬಂಧಿಸಿದ ಮಾತುಗಳು ರೋಚಕ ರೂಪವನ್ನು ಪಡೆಯುತ್ತಿದ್ದುವು.

ಹಿಂದೆ ಪ್ರಾರಂಭದಲ್ಲಿಯೇ ಪ್ರಸ್ತಾಪಿಸಿದಂತೆ ಕೆ.ಎಂ.ಎಸ್.ರವರ ಕೊಠಡಿ ಒಂದು ಸಾಂಸ್ಕೃತಿಕ ಕೇಂದ್ರವೇ ಆಗಿತ್ತು.ನಾನಾ ರೀತಿಯ ಸಾಂಸ್ಕೃತಿಕ ಆಸಕ್ತಿಗಳನ್ನು ತುಂಬಿಕೊಂಡವರು ಇಲ್ಲಿ ಸೇರುತ್ತಿದ್ದರು. ಯಾರಾದರು ಹೊಸ ನಾಟಕ ಬರೆದರೆ ಅದರ ಓದಿಗೆ ಇಲ್ಲಿ ಸೇರುತ್ತಿದ್ದರು. ಚಂದ್ರಶೇಖರ ಕಂಬಾರರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗಕ್ಕೆ ಬರುವ ಮೊದಲು 'ಹೇಳುತೇನ ಕೇಳ ' ಕಾವ್ಯ ಕುರಿತು ಹೇಳಿದ್ದರು. ಪ್ರತಿವಾರ ಕನ್ನಡ ಆನರ್ಸ್ ಮತ್ತು ಎಂ.ಎ.ವಿದ್ಯಾರ್ಥಿಗಳು ಸೇರಿ ನಡೆಸುತ್ತಿದ್ದ ಸೆಮಿನಾರ್‌ನ ಚರ್ಚೆಯಲ್ಲಿ 'ಹೇಳತೇನ ಕೇಳ' ಸಾಕಷ್ಟು ಬಾರಿ ಬಂದು ಹೋಗಿತ್ತು. ಇದರ ಜೊತೆಗೆ ಜಾನಪದವನ್ನು ಗಂಭೀರವಾಗಿ ಓದಿಕೊಂಡಿರುವ ಕವಿ ಎಂದು ಹೇಳಿದ್ದರು. ಹಾಗೆ ನೋಡಿದರೆ ಕಂಬಾರರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಬಂದಾಗ ಅವರ 'ನಾರ್ಸಿಸಸ್' ನಾಟಕವನ್ನು ಕೆ.ಎಂ.ಎಸ್‌ರವರ ಕೊಠಡಿಯಲ್ಲಿಯೇ ವಾಚನ ನಡೆದದ್ದು. ಆಗ ಅವರ ಕೊಠಡಿಯಲ್ಲಿ ತುಂಬಿ ನಿಂತು ಕೇಳಿದ್ದರು. ಮುಂದೆ ಕಂಬಾರರು 'ಚಾಳೇಶ' ನಾಟಕ ಬರೆದಾಗ ಅದರ ವಾಚನ ನಡೆದದ್ದು ಕೆ.ಎಂ.ಎಸ್.ರವರ ಕೊಠಡಿಯಲ್ಲಿ . ಈ 'ಚಾಳೇಶ' ನಾಟಕವು ಪ್ರಯೋಗ ಕಾಣಲು 'ಭೂಮಿಕ' ಎಂಬ ತಂಡವನ್ನು ಪ್ರಾರಂಭಿಸಿದರು. ಅದರ ಕಾರ್ಯದರ್ಶಿಯನ್ನಾಗಿ ನನ್ನನ್ನು ಮಾಡಿದರು. ಆರ್.ನಾಗೇಶ್ ಮತ್ತು ಟಿ.ಎನ್.ಸೀತಾರಾಂ ಅದರ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗಿದ್ದರು. ಈ ನಾಟಕವನ್ನು ನಿರ್ದೇಶಿಸಿದ್ದು ನಾಗೇಶ್‌ರವರು. ಅಂದು ನಾಟಕದ ಪ್ರಯೋಗದ ದಿನ ಒಂದು ಘಟನೆ ನಡೆಯಿತು. ನಾಟಕದಲ್ಲಿ ವಕೀಲರೊಬ್ಬರು ಅದರಲ್ಲಿ ನಟಿಸಿದ್ದರು. ಅವರು ಈಗ ಹಿರಿಯ ಸಿವಿಲ್ ನ್ಯಾಯಾದೀಶರಾಗಿದ್ದಾರೆ. ನಾನು ನೋಡಿರುವ ಅತ್ಯಂತ ವಿಚಿತ್ರ ಕ್ಯಾರೆಕ್ಟರ್. ಒಂದು ದೃಷ್ಟಿಯಿಂದ ಮಲ್ಲೇಶ್ವರಂನ ಇವರ ಕೊಠಡಿಯೂ ಒಂದು ಸಾಂಸ್ಕೃತಿಕ ಕೇಂದ್ರವಾಗಿತ್ತು. ರಾವ್ ಅವರು 'ಚಾಳೇಶ' ನಾಟಕ ಮುಗಿದ ಮೇಲೆ ಮೇಕಪ್ ಸಮೇತ ಮನೆಗೆ ಹೊರಟಿದ್ದರು. ಇದನ್ನು ಟಿ.ಎನ್.ಸೀತಾರಾಂ ನಾನಾ ಸಂದರ್ಭಗಳಲ್ಲಿ ತಮ್ಮ ವ್ಯಂಗ್ಯ ತುಂಬಿದ ಸಂಭಾಷಣೆಗಳಿಗೆ ಬಳಸಿಕೊಂಡಿದ್ದರು. ಅಂದು ಮತ್ತೊಂದು ಘಟನೆ ನಡೆಯಿತು : ನಾಟಕ ಮುಗಿದ ಮೇಲೆ ರಾತ್ರಿ ಹನ್ನೊಂದು ಗಂಟೆಯಾಗಿತ್ತು. ನಡಕೊಂಡು ಮಲ್ಲೇಶ್ವರದ ಕಡೆಗೆ ಹೊರಟಿದ್ದೆವು. ಆಲಸೂರು ಗೇಟ್ ಪೊಲೀಸ್ ಸ್ಟೇಷನ್‌ಮುಂದೆ ಬರುವಾಗ ಆರ್. ನಾಗೇಶ್ ನಮ್ಮನ್ನೆಲ್ಲ ಒಂದು ಕಡೆ ನಿಲ್ಲಿ ಎಂದರು : ಸ್ಟೇಷನ್ ಮುಂದೆ ಯಾರೂ ಕಾನ್‌ಸ್ಟೇಬಲ್ಸ್ ಇರಲಿಲ್ಲ. "ರೀ ಸ್ವಾಮಿ ಏನು ಮಾಡುತ್ತಿದ್ದೀರಿ? ಎಲ್ಲರೂ ಒಳಗೆ ಸೇರಿಕೊಂಡು ಬಿಟ್ಟಿದ್ದಾರಾ?" ಎಂದು ಜೋರಾಗಿ ಕೂಗಿದಾಗ ಒಳಗಡೆಯಿಂದ "ಯಾರೋ ಅವರು ಕತ್ತೆಗಳು" ಎಂದು ಬಂದರು. ನಾವು ಓಡಿದೆವು. ನಮ್ಮ ಅದೃಷ್ಟಕ್ಕೆ ಮಲ್ಲೇಶ್ವರಂ ಕಡೆ ಹೋಗುವ ಒಂದು ಹೆಚ್.ಎ.ಎಲ್. ಬಸ್ಸು ಬಂತು. ಓಡೋಗಿ ಅದಕ್ಕೆ ಹತ್ತಿಕೊಂಡೆವು. "ಸ್ವಾಮಿ ಡ್ರೈವರ್‌ಸಾಬ್, ಜಲ್ದಿ ಓಡಿಸಿ, ಮಲ್ಲೇಶ್ವರಂ ಸರ್ಕಲ್‌ನಲ್ಲಿ ನಮ್ಮ ಸ್ನೇಹಿತ'ರಿಗೆ ಏನೋ ಆಗಿದೆ" ಎಂದು ಹೇಳಿದಾಗ ಆರ್.ನಾಗೇಶ್‌ರವರ ಸಮಯ ಪ್ರಜ್ಞೆಯನ್ನು ಕಂಡು ನಾವೆಲ್ಲ ಪೊಲೀಸರು ಹಿಂದೆ ಬೀಳುವರು

ಎಂಬ ಗಾಬರಿಯನ್ನು ಮರೆತು ನಗಲು ಪ್ರಾರಂಭಿಸಿದ್ದೆವು. ನಮ್ಮ ಗುಂಪಿನಲ್ಲಿ ಎಸ್.ಎನ್.ಶ್ರೀಧರ್ ಇದ್ದರು. ಇವರು ಈಗ ನ್ಯಾಯಾರ್ಕ್‌ನ ವಿಶ್ವವಿದ್ಯಾಲಯದಲ್ಲಿ ಇದ್ದಾರೆ. ಒಳ್ಳೆಯ ಭಾಷಾ ವಿಜ್ಞಾನಿ. ಅತ್ಯಂತ ತುಂಟ ವ್ಯಕ್ತಿ. ಕೆ.ವಿ.ನಾರಾಯಣ, ಟಿ.ಎನ್.ಸೀತಾರಾಂ ಮತ್ತು ಶ್ರೀಧರ್‌ರವರು ಮತ್ತು ದಿನೇಶ್ ಸೇರಿದರೆ ಅದೊಂದು ಲವಲವಿಕೆಯ ಕೇಂದ್ರವಾಗಿ ಬಿಡುತ್ತಿತ್ತು. ಶ್ರೀಧರ್‌ರವರು ಜಗತ್ತಿನ ಶ್ರೇಷ್ಠ ಚಿಂತಕ ಲೇಖಕ ಮತ್ತು ಹೋರಾಟಗಾರ ನೋಮ್ ಚೋಮಸ್ಕಿಯ ಅಭಿಮಾನದ ವಿದ್ಯಾರ್ಥಿ. ದಿನೇಶ್‌ರವರು ಈಗ ಅಮೇರಿಕದಲ್ಲಿದ್ದಾರೆ.

ಇಂಥ ತುಂಟತನದ ಗುಂಪು ಎದ್ದುಬಿದ್ದು ಹೆಚ್.ಎ.ಎಲ್.ಬಸ್‌ನ ಡ್ರೈವರ್‌ಗೆ ನಮಸ್ಕಾರ ತಿಳಿಸಿ - ಭವಿಷ್ಯದ ಸಿವಿಲ್ ಜಡ್ಜ್‌ರವರ ಕೊಠಡಿಗೆ ಹೋದರೆ ಮಾನ್ಯ ವಕೀಲರು ಅವರು ಇನ್ನು ನಾಟಕದ ಡ್ರೆಸ್‌ನಲ್ಲಿಯೇ ಇದ್ದರು. ಮಾರನೆಯದಿನ ಇದನ್ನೆಲ್ಲ ವರದಿ ಒಪ್ಪಿಸಲು ಅಥವಾ 'ಚಾಳೇಶ' ನಾಟಕದ ಪ್ರಯೋಗವನ್ನು ರಿವ್ಯೂ ಮಾಡಲು ಕೆ.ಎಂ.ಎಸ್‌ರವರ ಕೊಠಡಿಯಲ್ಲಿ ಸೇರಿದೆವು. ಹಿಂದಿನ ದಿನದ ಘಟನೆಗಳನ್ನೆಲ್ಲ ನೆನಪು ಮಾಡಿಕೊಂಡೆವು. ಕೆ.ಎಂ.ಎಸ್.ಮುಸಿಮುಸಿ ನಗುತ್ತ "ಅಲ್ರಿ ಸ್ವಲ್ಪ ಹೆಚ್ಚು ಕಮ್ಮಿಯಾಗಿದ್ದರೆ ನೀವೆಲ್ಲ ಇಡೀ ರಾತ್ರಿ ಲಾಕಪ್‌ನಲ್ಲಿರಬೇಕಾಗಿತ್ತಲ್ಲ" ಎಂದರು. ಅದಕ್ಕೆ ನಾಗೇಶ ಗಂಭೀರವಾಗಿಯೇ "ಇಲ್ಲ ಮೇಷ್ಟ್ರೇ ಅಂಥ ಸಮಸ್ಯೆ ಉದ್ಭವಿಸುತ್ತಿರಲಿಲ್ಲ. ಅಲ್ಲಿಯೇ ಒಂದು ನಾಟಕ ಪ್ರದರ್ಶನ ಕೊಟ್ಟು ಪರಾರಿಯಾಗಿಬಿಡುತ್ತಿದ್ದೆವು" ಎಂದಾಗ ನಮಗೆ ನಗು ತಡೆಯಲಾಗಲಿಲ್ಲ. ಕೊನೆಗೆ ಅಲ್ಲಿ ಒಂದು ತೀರ್ಮಾನಕ್ಕೆ ಬಂದದ್ದು : ನಾಗೇಶ್‌ರವರ ಜೊತೆ ಇರುವಾಗ ತುಂಬ ಎಚ್ಚರಿಕೆಯಿಂದ ಇರಬೇಕು ಎಂಬುದಾಗಿ. ಇರಲಿ, ಇಂಥ ಘಟನೆಗಳು ನಾಗೇಶ್‌ರವರ ಜೊತೆ ತುಂಬ ನಡೆದು ಹೋಗಿವೆ ಎಂಬುದೇ ಸ್ವಾರಸ್ಯಕರವಾದ ನೆನಪು.

1970 ನಾವು ಸೆಕೆಂಡ್ ಆನರ್ಸ್‌ನಲ್ಲಿದ್ದೆವು. ಆ ವರ್ಷ ಸೆಂಟ್ರಲ್ ಕಾಲೇಜಿನ ಸುವರ್ಣ ಮಹೋತ್ಸವ, ಪ್ರೊ.ರಂ.ಶ್ರೀ ಮುಗಳಿಯವರು ಅದರ ಮುಖ್ಯಸ್ಥರು. ಅತ್ಯಂತ ಸಭ್ಯ ಪ್ರಾಧ್ಯಾಪಕರು, ತುಂಬ ಮೆದು ಸ್ವಭಾವದವರು. ಉತ್ಸವದ ಒಟ್ಟು ಕಾರ್ಯಕ್ರಮಗಳನ್ನು ತುಂಬ ಚೆನ್ನಾಗಿ ರೂಪಿಸಿದ್ದವರು ಕೆ.ಎಂ.ಎಸ್‌ರವರು. ಆಗ ಇನ್ನು ಕಂಬಾರರು ಕನ್ನಡ ವಿಭಾಗಕ್ಕೆ ಬಂದಿರಲಿಲ್ಲ. ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರು ತುಂಬ ಕ್ರಿಯಾಶೀಲರಾಗಿದ್ದರು. ಆದರೆ ತುಂಬ ಮಾತಿನ ಪ್ರಿಯರು. ಬೇರೆಯವರಿಗೆ ಮಾತಾಡಲು, ಚಿಂತಿಸಲು ಅವಕಾಶವಿಲ್ಲದಷ್ಟು ಮಾತಾಡಿಬಿಡುತ್ತಿದ್ದರು. ಕೆ.ಎಂ.ಎಸ್.ರವರ ಕೊಠಡಿಯಲ್ಲಿ ಮೆದುಳಿಗೆ ರಿಲ್ಯಾಕ್ಸ್ ಸಿಗುತ್ತಿದ್ದರೆ, ಇವರ ಕೊಠಡಿಯಲ್ಲಿ ಮೆದುಳಿಗೆ ಆಯಾಸವಾಗಿಬಿಡುತ್ತಿತ್ತು. ಬಹಳ ಉತ್ತಮ ಅಧ್ಯಾಪಕರು. ಆದರೆ ತಮಗೆ ತಿಳಿದದ್ದನ್ನೆಲ್ಲ ಹೇಳಿಬಿಡುವ ಕಾತುರದಲ್ಲಿ ರ್‍ಯಾಷನಲ್ ಮೈಂಡನ್ನ ರೂಪಿಸಿಕೊಂಡಿರುವುದಿಲ್ಲ. ನಾವೆಲ್ಲ ಉತ್ಸವದ ಕಾರ್ಯಕರ್ತರು. ಏನೋ ಸಂಭ್ರಮ. ಗೆಳೆಯ ಮಾಧವರಾವ್, ಹಿರೇಮಠ, ಇವರಲ್ಲಿ ಡಿ.ವಿ ರಾಜಶೇಖರ ತುಂಬಾ ಚೆನ್ನಾಗಿ ಪದ್ಯ ಬರೆಯುತ್ತಿದ್ದರು. ನಮ್ಮ ಜೊತೆಯಲ್ಲಿ ವಿಜಯಶ್ರೀ ಮತ್ತು ಶೈಲಜಾ ತುಂಬ ಕ್ರಿಯಾಶೀಲರಾಗಿದ್ದರು. ಮುಂದೆ ವಿಜಯಶ್ರೀಯವರು ಕೆ.ಎಂ.ಎಸ್.ರವರ ಮಾರ್ಗದರ್ಶನದಲ್ಲಿ ಪಿಎಚ್‌ಡಿ ಮಾಡಿದರು. ಆದರೆ ಎರಡು ವರ್ಷಗಳ ಹಿಂದೆ ಕ್ಯಾನ್ಸರ್‌ನಿಂದ ತೀರಿಕೊಂಡರು. ಶೈಲಜಾ ಅಮೇರಿಕಾದಲ್ಲಿ ಕಪ್ಪು ಜನರ ಸಂಘಟನೆಯ ನಡುವೆ ಲವಲವಿಕೆಯಿಂದ ಇದ್ದಾರೆ. ಹೋರಾಟವನ್ನು ನಂಬಿದ ಹೆಣ್ಣು.

ಮೂರು ದಿನಗಳ ಉತ್ಸವದಲ್ಲಿ ಏನೇನೊ ಚರ್ಚೆ ನಡೆಯಿತು. ಯಾರ್‍ಯಾರು ಭಾಗವಹಿಸಿದ್ದರು ಎಂಬುದು ಒಂದು ಶ್ರೀಮಂತ ಅನುಭವ. ಆ ಮೂರು ದಿನಗಳ ಗೋಷ್ಠಿಗಳು, ಸಂಜೆ ನಾಟಕಗಳು, ಬಿ.ಎಂ.ಶ್ರೀಯವರ ಅಶ್ವತ್ಥಾಮನ್ ನಾಟಕದ ಪ್ರಯೋಗವಿತ್ತು. ಅದರಲ್ಲಿ ಸಿ.ವೀರಣ್ಣನವರು ಅಶ್ವತ್ಥಾಮನ್ ಪಾತ್ರದಲ್ಲಿ ಉತ್ತಮ ಅಭಿನಯವನ್ನು ನೀಡಿದ್ದರು. ಕಿ.ರಂ.ರವರ ಶ್ರೀಮತಿ ವಿಜಯಲಕ್ಷ್ಮಿಯವರು ನಟಿಸಿದ್ದರು. ಆದರೆ ವಿಜಯಕ್ಷ್ಮಿಯವರನ್ನು ಕಿ.ರಂ.ರವರು ಗುಟ್ಟಾಗಿ ಪ್ರೀತಿಸುತ್ತಿದ್ದುದು ನಮಗೆ ಕೊನೆಯವರೆಗೂ ಗೊತ್ತಾಗಲೇ ಇಲ್ಲ. ಯಾಕೆಂದರೆ ನಾವು ಗುರುಮೂಲವನ್ನು ಹುಡುಕಬಾರದು ಎಂಬ ಸಭ್ಯ (?) ವಿದ್ಯಾರ್ಥಿಗಳಾಗಿದ್ದೆವು.

ಈ ಉತ್ಸವದ ಸಮಯದಲ್ಲಿ ಸಮಾರೋಪ ಸಮಾರಂಭವನ್ನು ಈಗಲೂ ಮರೆಯುವಂತಿಲ್ಲ. ಶಿವರಾಮ ಕಾರಂತರು ಅಧ್ಯಕ್ಷತೆ ವಹಿಸಿದ್ದರು. ಆ ಗೋಷ್ಠಿಯಲ್ಲಿ ಲಂಕೇಶ್‌ರವರು ಒಂದು ಪ್ರಬಂಧವನ್ನು ಮಂಡಿಸಿದರು. ಇದಕ್ಕಿಂತ ಮೊದಲು ಪ್ರೊ.ಶಾಮಭಟ್ಟರ ಮಾತುಗಳು. ಲಂಕೇಶ್‌ರವರು ಮುಗಿಸಲಿಲ್ಲ. ಆಗ ಶಿವರಾಮ ಕಾರಂತರು, ಮೊದಲನೆಯ ಗಂಟೆ ಬಾರಿಸಿದರು. ನಂತರ ಐದು ನಿಮಿಷದ ನಂತರ ಮತ್ತೊಮ್ಮೆ ಗಂಟೆಯನ್ನು ಬಾರಿಸಿದರು. ಲಂಕೇಶ್‌ರವರು ಸಿಟ್ಟು ಮತ್ತು ಅಸಹನೆಯಿಂದ ತಮ್ಮ ಕೈಯಲ್ಲಿದ್ದ ಪ್ರಬಂಧವನ್ನು ಎಡಗೈಯಲ್ಲಿ ಕಾರಂತರ ಕೈಗೆ ಕೊಟ್ಟಾಗ ಕಾರಂತರು ಅದನ್ನು ಬಲಗೈಯಲ್ಲಿ ಸ್ವೀಕರಿಸಲಿಲ್ಲ. ಎಡಗೈಯಲ್ಲಿ ಸ್ವೀಕರಿಸಿ ಪಕ್ಕಕ್ಕಿಟ್ಟರು. ಆದರೆ ಅಂದು ಶಿವರಾಮ ಕಾರಂತರು ತಮ್ಮ ಭಾಷಣದುದ್ದಕ್ಕೂ ಮಾತಾಡಿದ್ದು : 'ಕಾಲ' ವನ್ನು ಕುರಿತು, ತಾವು ನಂಬಿಕೊಂಡು ಬಂದಿರುವ ಕಾಲದ ಶಿಸ್ತನ್ನು ಕುರಿತು. ಒಂದು ಸ್ಮರಣೀಯ ಭಾಷಣ. ಮುಂದೆ ಲಂಕೇಶ್‌ರವರು ಕಾರಂತರ ನಿರ್ದಾಕ್ಷಿಣ್ಯತೆಯನ್ನು ಮೆಚ್ಚಿಕೊಂಡದ್ದು ಮಾತ್ರವಲ್ಲ, ಅದನ್ನು ರೂಢಿಸಿಕೊಂಡದ್ದು, ಯಾರಾದರೂ ಕಾರ್ಯಕ್ರಮವನ್ನು ಸರಿಯಾದ ಸಮಯಕ್ಕೆ ಪ್ರಾರಂಭಿಸದಿದ್ದರೆ ಎಷ್ಟೋ ಬಾರಿ ಲಂಕೇಶ್‌ರವರು ವಾಪಸ್ಸು ಹೋದದ್ದುಂಟು. ಕೆ.ಎಂ.ಎಸ್.ರವರು ನಮ್ಮ ಆನರ್ಸ್ ಬ್ಯಾಚನ್ನು ತುಂಬ ಇಷ್ಟಪಡುತ್ತಿದ್ದರು. ಯಾಕೆಂದರೆ ತುಂಬ ಮಂದಿ ತುಂಟರಿದ್ದೆವು. ಅದರ ಜೊತೆಗೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಏನೇ ಹೊಸದಾಗಿ ಬಂದರೂ ಅದಕ್ಕೆ ಪ್ರತಿಕ್ರಿಯಿಸುವ ಓದು ನಮ್ಮ ಬ್ಯಾಚ್‌ನ ಬಹುಪಾಲು ವಿದ್ಯಾರ್ಥಿಗಳಿಲ್ಲಿರುತ್ತಿತ್ತು. ಈ ಕಾರಣಕ್ಕಾಗಿಯೇ ಆನರ್ಸ್‌ನ ಕೊನೆಯ ವರ್ಷ ನಮ್ಮ ಬ್ಯಾಚ್‌ನ ವಿದ್ಯಾರ್ಥಿಗಳಿಗೆಲ್ಲ ಊಟ ಕೊಡಿಸಿದರು. ಆ ಕಾಲಕ್ಕೆ ವಿಷ್ಣುಭವನ ದೋಸೆ ಮತ್ತು ಬ್ರೆಡ್ ಮತ್ತು ಜಾಮ್‌ಗೆ ತುಂಬ ಪ್ರಸಿದ್ಧಿಯಾಗಿತ್ತು. ಇದಕ್ಕಿಂತ ಮೊದಲು ಬಹಳಷ್ಟು ಬಾರಿ ಅವಿನ್ಯೂರಸ್ತೆಯ ಕಾಫೀ ಬಾರ್ ಮತ್ತು ವಿಷ್ಣುಭವನದಲ್ಲಿ ತಿಂಡಿ ಕೊಡಿಸಿದ್ದಾರೆ. ನನಗಂತೂ ಪ್ರತಿವಾರ ಕೊಡಿಸಿದ್ದಾರೆ ಅನ್ನಿಸುತ್ತದೆ. ಅಂದು ಊಟದ ಸಮಯದಲ್ಲಿ ವಿದ್ಯಾರ್ಥಿಗಳನ್ನುದೇಶಿಸಿ ಭಾವನಾತ್ಮಕವಾಗಿ ಮಾತಾಡಿದರು : ''ನಿಮ್ಮ ಬ್ಯಾಚ್ ಅತ್ಯುತ್ತಮವಾದದ್ದು, ಯಾರೇ ಅಧ್ಯಾಪಕರು ನಿಮ್ಮ ತರಗತಿಗೆ ಬರಬೇಕಾದರೆ ತಯಾರಾಗಿ ಬರಬೇಕು ಎಂಬ ಅಭಿಪ್ರಾಯವನ್ನು ಮೂಡಿಸಿದ್ದೀರಿ, ಅದು ನಿಜವಾಗಿಯೂ ಅಧ್ಯಾಪಕನಾದವನಿಗೆ ದೊಡ್ಡ ಕೊಡುಗೆ.'' ಇದಕ್ಕೆ ಪೂರಕವಾಗಿ ಕೆ.ಎಂ.ಎಸ್‌ರವರನ್ನು ಕುರಿತು ಹೇಳಬೇಕೆಂದರೆ : ನಮ್ಮ ಅಧ್ಯಾಪಕರೊಬ್ಬರು 'ರಾಜಶೇಖರ' ವಿಳಾಸವನ್ನು ತೆಗೆದುಕೊಳ್ಳುತ್ತಿದ್ದರು. ಎಷ್ಟು ಬೋರ್‌ಮಾಡುತ್ತಿದ್ದರೆಂದರೆ ; ಪ್ರತಿತರಗತಿಯಲ್ಲೂ ಸ್ವಲ್ಪ ಹೆಚ್ಚು ಕಮ್ಮಿ ಪ್ರತಿಪದಕ್ಕೂ ಅರ್ಥಬರೆಸುತ್ತಿದ್ದರು. ಒಮ್ಮೆ ನಾನು ಎದ್ದು ನಿಂತು ಸರ್, ಪ್ರತಿಪದಕ್ಕೂ ಅರ್ಥಬರೆಸಬೇಡಿ. ಅದಕ್ಕೆ ಅರ್ಥ ಪೂರ್ಣ ವಿವರಣೆಯನ್ನು ಕೊಟ್ಟರೆ ಸಾಕು ಎಂದೆ.

ಅದಕ್ಕೆ ಅವರು ಸುಮಾರು 45 ನಿಮಿಷ ಒಟ್ಟು ತರಗತಿಯ ಹುಡುಗ-ಹುಡುಗಿಯರನ್ನು ಸಿಕ್ಕಾಪಟ್ಟೆ ಬೈದರು. "ನಿಮಗೆ ನವ್ಯದ ಪಿತ್ಥ ನೆತ್ತಿಗೇರಿದೆ. ಅದಕ್ಕೆ ಅಹಂಕಾರದಿಂದ ವರ್ತಿಸುತ್ತಿದ್ದೀರಿ" ಎಂದು ಪ್ರತಿಭಟಿಸಿ ಹೊರಟು ಹೋದರು. ಅದು ಫೈನಲ್ ಆನರ್ಸ್‌ನ ದಿನಗಳು. ಎಲ್ಲ ವಿದ್ಯಾರ್ಥಿಗಳು ಗಾಬರಿಪಟ್ಟರು ; ನಾವು ಒಂದಷ್ಟು ವಿದ್ಯಾರ್ಥಿಗಳು "ನಾವು ಕೇಳಿದ್ದರಲ್ಲಿ ತಪ್ಪಿದ್ದರೆ ಕ್ಷಮಾಪಣೆ ಕೇಳುವೆವು" ಎಂದು ಅವರ ಕೊಠಡಿಗೆ ಹೋದೆವು. ಅಲ್ಲಿಯೂ ತಮ್ಮ ಸಿಟ್ಟನ್ನು ತೋರಿಸಿಕೊಂಡರು. ಆ ಸಮಯದಲ್ಲಿ ನನ್ನ ಜೊತೆ ಹುಡುಗ-ಹುಡುಗಿಯರು ಬೆಂಬಲವಾಗಿ ನಿಂತರು. ಈ ಒಟ್ಟು ಘಟನೆಯನ್ನು ಸಂಬಂಧಪಟ್ಟ ಅಧ್ಯಾಪಕರು ಪ್ರೊ.ಜಿ.ಎಸ್ ಶಿವರುದ್ರಪ್ಪನವರ ಹತ್ತಿರ ಹೇಳಿದ್ದಾರೆ. ಮಾರನೆಯ ದಿನ ತರಗತಿಯಲ್ಲಿ ಪ್ರೊ.ಜಿ.ಎಸ್.ಎಸ್.ರವರು ತುಂಬ ಗಂಭೀರವಾಗಿ ತರಾಟೆಗೆ ತೆಗೆದುಕೊಂಡು ಬೈದರು. ನಾನು ಸಿಟ್ಟಿನಿಂದ ಎದ್ದುನಿಂತೆ : ವಿಷಯ ತಿಳಿಸಲು ಗೆಳೆಯರಾದ ಮಾಧವರಾವ್ ಮತ್ತು ಬಿ.ಜಯದೇವಪ್ಪ ನನ್ನನ್ನು ತಡೆದು ಕೂರಿಸಿ ನನ್ನ ಪರವಾಗಿ ಅವರು ಮಾತಾಡಲು ಪ್ರಾರಂಭಿಸಿದರು. "ನಿಮಗೆಲ್ಲ ಆನರ್ಸ್ ಆದ ತಕ್ಷಣ ಅಧ್ಯಾಪಕ ವೃತ್ತಿಯನ್ನು ಕೊಡಿಸುವೆ" ಎಂದು ಸಿಟ್ಟಿನಿಂದ ಹೊರಟು ಹೋದರು. ನಾನು ತುಂಬ ಖಿನ್ನನಾಗಿದ್ದೆ. ಗೆಳೆಯ ಗೆಳತಿಯರು ಭಯಪಡಬೇಡ ಎಂದು ಸಮಾಧಾನ ಪಡಿಸಿದರು. ವಿಷಯ ಗೊತ್ತಾಗಿ ಕೆ.ಎಂ.ಎಸ್.ರವರು ಕೊಠಡಿಗೆ ಕರೆಸಿದರು. "ಏನಂತೆ ಆ ರೀತಿ ಕೇಳಿದ್ದರಲ್ಲಿ ತಪ್ಪೇನಿದೆ? ಸಲಹೆ ರೀತಿಯಲ್ಲಿ ತೆಗೆದುಕೊಂಡಿದ್ದರೆ ಮುಗೀತಿತ್ತು" ಎಂದು ಹುಡುಗರನ್ನು ಕಳಿಸಿ "ಶ್ರೀನಿವಾಸ್ ಗಾಬರಿಯಾಗಬೇಡಿ" ಎಂದು ಆಟೋದಲ್ಲಿ ಮಹಾತ್ಮಗಾಂಧಿ ರಸ್ತೆಯ ಪ್ಲಾಜಾ ಚಿತ್ರಮಂದಿರಕ್ಕೆ ಕರೆದುಕೊಂಡುಹೋದರು. ಮೊದಲನೆಯ ಬಾರಿಗೆ ನಮ್ಮ ಚಲನಚಿತ್ರರಂಗದ ಮಹಾನ್ ನಿರ್ದೇಶಕ ಸತ್ಯಜಿತ್‌ರೇ ಅವರ ಒಟ್ಟು ಚಿತ್ರಗಳ ಸಪ್ತಾಹವಿತ್ತು. ಕೆ.ಎಂ.ಎಸ್.ರವರು ಆರು ಗಂಟೆ ಷೋಗೆ ಸೀಸನ್ ಟಿಕೇಟ್ ತೆಗೆದುಕೊಂಡಿದ್ದರು. ನನಗೆ ಆರುಗಂಟೆಗೆ ಸಿಗಲಿಲ್ಲ, ಕೊನೆಗೆ ಹತ್ತುಗಂಟೆಯ ಪ್ರದರ್ಶನಕ್ಕೆ ಸೀಸನ್ ಟಿಕೆಟ್ ತೆಗೆದುಕೊಟ್ಟು, ಪಕ್ಕದಲ್ಲಿ ಇದ್ದ ಕಾಫೀ ಬಾರ್‌ನಲ್ಲಿ ದೋಸೆ ಕೊಡಿಸಿ "ಎಷ್ಟೇ ತೊಂದರೆಯಾದರೂ ಒಂದೂ ಚಿತ್ರವನ್ನು ಮಿಸ್ ಮಾಡಬೇಡಿ" ಎಂದು ಬೆನ್ನು ಸವರಿ "ಟೇಕಿಟ್ ಲೈವ್ಲೀ" ಎಂದು ಕಳಿಸಿ ಕೊಟ್ಟರು, ಜೊತೆಗೆ ಕೈಗೆ ಹತ್ತುರೂಪಾಯಿ ಕೊಟ್ಟರು. ಒಂದು ಕ್ಷಣ ನಾನು ಭಾವುಕನಾಗಿ ಅವರ ಮುಖವನ್ನೇ ನೋಡಿದೆ. ಅವರು ನಗುತ್ತ "ಬೋಲ್ಡ್ ಆಗಿರಬೇಕು, ನೀವು ಯಾರೂ ಮಾಡಬಾರದ ಕೆಲಸವನ್ನೇನು ಮಾಡಿಲ್ಲ, ಎಲ್ಲವನ್ನು ಮರೆತು ಫಿಲಂಸನ್ನ ನೋಡಿ" ಎಂದು ಕಳಿಸಿಕೊಟ್ಟರು.

ಇದನ್ನು ಬರೆಯುವ ಕಾಲಕ್ಕೆ ಅವರು ಮತ್ತೆ ಮತ್ತೆ ಪ್ರಸ್ತಾಪಿಸುವ ಮತ್ತು ನಂಬುವ 'ಆಕಸ್ಮಿಕ' ಎಂಬ ಧ್ವನಿ ನನ್ನ ಮುಂದೆ ಬಂದು ನಿಲ್ಲುತ್ತದೆ. ನಾನು ಆಕಸ್ಮಿಕಗಳನ್ನು ನಂಬದವನು. ಬದುಕಿನ ಕಾಲಘಟ್ಟದಲ್ಲಿ ಏನೇನೋ ಬಂದು ಹೋಗುತ್ತದೆ. ಪ್ರತಿಯೊಬ್ಬರ ಬದುಕಿನಲ್ಲೂ ಏನೇನೋ ಟರ್ನಿಂಗ್ ಪಾಯಿಂಟುಗಳಿರುತ್ತವೆ. ಅದನ್ನು 'ಆಕಸ್ಮಿಕ' ಎಂದು ಕರೆದುಕೊಳ್ಳಬೇಕೇ ಎಂಬ ಪ್ರಶ್ನೆಯನ್ನು ನಾನಾ ಬಾರಿ ಕೆ.ಎಂ.ಎಸ್‌ರವರಲ್ಲಿ ಪ್ರಸ್ತಾಪಿಸಿದ್ದೇನೆ. ಅವರು ಗಂಭೀರ ವಿಚಾರ ಶೀಲರಾಗಿರುವುದರಿಂದ ಭೂತಕ್ಕೆ ಹೋಗಿ ಎಲ್ಲವನ್ನು ಮೆಲುಕು ಹಾಕುತ್ತಿರುತ್ತಾರೆ. ಯಾಕೆಂದರೆ ಆ ನೆನಪುಗಳು ಎಷ್ಟೇ ಕಹಿಯಾಗಿದ್ದರೂ ಪ್ಲೆಸೆಂಟಾಗಿರುತ್ತವೆ ಎಂಬುದು ಬಹಳ ಮುಖ್ಯ. ಈ ದೃಷ್ಟಿಯಿಂದ 'ಆಕಸ್ಮಿಕ' ಎನ್ನುವುದು ಕೂಡಾ.

ಅಂದು ಕೆ.ಎಂ.ಎಸ್.ರವರು ಚಲನಚಿತ್ರಕ್ಕೆ ಹೋದಮೇಲೆ ಬ್ರಿಗೇಡ್ ರಸ್ತೆಯ ಕ್ರಾಸ್‌ನ ಮೂರ್ತಿಯವರ ಪ್ರಸಿದ್ಧ ಹಳೆಯ ಪುಸ್ತಕದ ಅಂಗಡಿಗೆ ಹೋದೆ. ಅದನ್ನು ಅಂಗಡಿಯೆನ್ನುವುದಕ್ಕಿಂತ ಜ್ಞಾನವನ್ನು ತುಂಬಿರುವ ದೊಡ್ಡ ಗೋಡೋನ್. ಯಾರು ಎಷ್ಟು ಬಾಚಿಕೊಂಡು ಹೋದರೂ ಸವೆಯಲಾರದಷ್ಟು ಜ್ಞಾನದ ಭಂಡಾರ ಅಲ್ಲಿತ್ತು. ಸುಮಾರು ಒಂದೂವರೆ ಗಂಟೆ ಆ ಪುಸ್ತಕಗಳ ಮಧ್ಯೆ ಕಾಲ ಕಳೆದೆ. ಜಗತ್ತಿನ ಚಿತ್ರವಿಚಿತ್ರ ಮನಸ್ಸುಗಳು ಅಲ್ಲಿಯ ಕೃತಿಗಳಲ್ಲಿ ಮತಾಡುತ್ತಿವೆ ಅನ್ನಿಸಿತು. ಕೊನೆಗೆ ಹೊರಗೆ ಬರುವಾಗ ನನ್ನ ಪ್ರಿಯನಾದ ಚಿಂತಕ ಎರಿಕ್‌ಫ್ರೋಮನ 'ದಿ ಸೇನ್ ಸೊಸೈಟಿ' ಕೃತಿ ಅಲ್ಲಿತ್ತು. ಅದನ್ನು ಕೈಗೆ ತೆಗೆದುಕೊಂಡೆ. ಸ್ವಲ್ಪ ದುಡ್ಡು ಕೊಟ್ಟೆ. ಪರವಾಗಿಲ್ಲ ಮಿಕ್ಕಿದ್ದು ಆಮೇಲೆ ಕೊಡಿ ಎಂದರು ಮೂರ್ತಿಯವರು. ಅಲ್ಲಿಗೆ ಲಂಕೇಶ್‌ರವರ ಜೊತೆ ಬಹಳಷ್ಟು ಬಾರಿ ಹೋಗಿದ್ದೆ.

ಬೆಂಗಳೂರಿನ ಎಂ.ಜಿ.ರಸ್ತೆ ಮತ್ತು ಬ್ರಿಗೇಡ್ ರಸ್ತೆ ಅತ್ಯಂತ ವೈಭವದ ರಸ್ತೆಗಳು, ಸಂಸ್ಕೃತಿಯ ನಾನಾ ಮುಖಗಳನ್ನು ತುಂಬಿಕೊಂಡಿರುವ ರಸ್ತೆಗಳು. ಪ್ಲಾಜಾ ಹತ್ತಿರ ಬಂದಾಗ ಚಲನಚಿತ್ರ ಬಿಡದಿದ್ದರೂ ಕ್ಯೂ ಉದ್ದಕ್ಕೂ ಬೆಳೆದಿತ್ತು. ನಾನೂ ಸೇರಿಕೊಂಡೆ. ಸೀಸನ್ ಟಿಕೆಟ್ ಆದರೂ ಅದಕ್ಕೆ ಸೀಟಿನ ಸಂಖ್ಯೆ ಇರಲಿಲ್ಲ.

ಫೆಸ್ಟಿವಲ್‌ನ ಬ್ರೋಷರ್ ಕೊಂಡೆ. ಅದರಲ್ಲಿ ಸತ್ಯಜಿತರೇ ಚಿತ್ರಗಳ ಜೊತೆಗೆ ಜಗತ್ತಿನ ಶ್ರೇಷ್ಠ ಕಿರುಚಿತ್ರಗಳು ಇದ್ದುವು. ಆ ಚಿತ್ರಗಳಲ್ಲಿ ಒಂದು ನಿಮಿಷದ ಚಿತ್ರಗಳಿದ್ದುವು. ಅವೆಲ್ಲ ಜಗತ್ತಿನ ಬೇರೆ ಬೇರೆ ಕಡೆ ಸ್ಪರ್ಧೆಗಳಲ್ಲಿ ಪ್ರಶಸ್ತಿಗಳನ್ನು ಪಡೆದ ಚಿತ್ರಗಳು. ಈ ವಿವರಗಳನ್ನು ಓದುತ್ತಲೇ ಕ್ಯೂಸರಿಯುತ್ತಿರುವಾಗ ನಾನೂ ಸರಿದು ಒಳಗೆ ಹೋಗಿ ಕೂತುಕೊಂಡಿದ್ದೆ. ಮೊದಲು ಅರ್ಧ ಗಂಟೆ ಕಿರು ಚಿತ್ರಗಳನ್ನು ತೋರಿಸಿದರು. ಈ ಮುವತ್ಮೂರು ವರ್ಷಕಳೆದರೂ ರೇ ಚಿತ್ರಗಳಷ್ಟೇ ಅಂದು ನೋಡಿದ ಕಿರುಚಿತ್ರಗಳ ವಸ್ತು ಮತ್ತು ತಾಂತ್ರಿಕತೆಯ ವೈಭವವನ್ನು ಕುರಿತು ಮೆಲುಕು ಹಾಕುತ್ತಿರುತ್ತೇನೆ. ಎಷ್ಟೋ ಕಡೆ 'ಸ್ಲೇವರಿ' ಎಂಬ ಎರಡು ನಿಮಿಷದ ಚಿತ್ರವನ್ನು ಕುರಿತು ಸಾಕಷ್ಟು ಕಡೆ ಪ್ರಸ್ತಾಪಿಸಿದ್ದೇನೆ. ಆ ಚಿತ್ರದ ಕಥಾ ವಸ್ತು ಹೀಗಿದೆ : ಒಬ್ಬ ಯಜಮಾನ ಕುರ್ಚಿಯ ಮೇಲೆ ಕೂತಿದ್ದಾನೆ. ಅವನ ಕೈಯಲ್ಲಿ ಚಾಟಿ ಇದೆ. ಅವನ ಮುಂದೆಯೇ ಒಬ್ಬ ಗುಲಾಮನಿದ್ದಾನೆ ; ಅವನಿಗೆ ಮತ್ತು ಒಂದು ಮೇಕೆಗೆ ಸೇರಿ ಸರಪಳಿ ಹಾಕಿ ಕಟ್ಟಿದ್ದಾನೆ. ದೂರದಲ್ಲಿ ನಾನಾ ಬಣ್ಣಗಳಿಂದ ಮಿಂಚುವ ಸೌಧವಿದೆ. ಗುಲಾಮನು ಆ ಕಡೆ ಹೋಗಲು ಆಶಿಸಿ ಜಗ್ಗಿದಾಗಲೆಲ್ಲ ಮೇಕೆಯೂ ಹಿಂದಕ್ಕೆ ಎಳೆಯುತ್ತಿರುತ್ತದೆ. ಮತ್ತು ಯಜಮಾನ ಚಾಟಿಯನ್ನು ಬೀಸುತ್ತಿರುತ್ತಾನೆ. ಈ ರೀತಿಯ ಅರವತ್ತು ಎಪ್ಪತ್ತು ಚಿತ್ರಗಳನ್ನು ನೋಡಿದೆ. ಯಾವ ಚಿತ್ರದಲ್ಲೂ ಸಂಭಾಷಣೆ ಇಲ್ಲ, ಎಲ್ಲವನ್ನು ನಮ್ಮ ಚಿಂತನೆಗೆ ಬಿಟ್ಟ ಚಿತ್ರಗಳು.

ಸತ್ಯಜಿತ್‌ರೇಯವರ 'ಪಥೇರ್ ಪಾಂಚಾಲಿ' ಚಿತ್ರದ ಜೊತೆಗೆ ಈ ರೀತಿಯ ಕಿರುಚಿತ್ರಗಳನ್ನು ನೋಡಿ ಅತ್ಯಂತ ಸಂತೋಷದಿಂದ ರಾತ್ರಿ ಹನ್ನೆರಡುವರೆ ಸಮಯಕ್ಕೆ ಕಬ್ಬನ್ ಪಾರ್ಕ್‌ನಲ್ಲಿ ನುಗ್ಗಿ ಮೆಜೆಸ್ಟಿಕ್‌ನ ಬಂಡಿಶೇಷಮ್ಮ ಹಾಸ್ಟಲ್ ತಲುಪಿದೆ. ಆ ಒಂದು ವಾರ ನನ್ನ ಬದುಕಿನಲ್ಲಿ ಸ್ಮರಣೀಯ ಅನುಭವವನ್ನು ನೀಡಿತು. ಅದನ್ನು ಯಾವ ರೀತಿಯಲ್ಲೂ ಮರೆಯಲು ಸಾಧ್ಯವಿಲ್ಲ. ನಾನು ಪೂನಾ 'ಫಿಲಂ ಇನ್‌ಸ್ಟ್ಯೂಟ್'ಗೆ ಹೋಗಲು ಕಳೆದ ಎರಡು ಮೂರು ವರ್ಷಗಳಿಂದ ಸಿದ್ಧತೆ ನಡೆಸಿಕೊಂಡಿದ್ದೆ. ಆನರ್ಸ್‌ನ ಕೊನೆಯ ವರ್ಷದ ಪರೀಕ್ಷೆಗೆ ಎರಡು ತಿಂಗಳು ಮುಂಚೆ

ಇನ್‌ಸ್ಟ್ಯೂಟ್‌ನ ಪರೀಕ್ಷೆ ಇತ್ತು. ಸೆಂಟರ್ ಮದ್ರಾಸ್‌ನಲ್ಲಿತ್ತು. ಎಡಿಟಿಂಗ್ ಮತ್ತು ಡೈರೆಕ್ಷನ್‌ಗೆ ಸಂಬಂಧಿಸಿದಂತೆ ಅಪ್ಲೈ ಮಾಡಿಕೊಂಡಿದ್ದೆ.

1970 ಮತ್ತು ಎಂಬತ್ತರ ದಶಕ ನಾನಾ ರೀತಿಯ ಹೊಸ ವಿಚಾರಗಳಿಗೆ ತಹತಹಿಸುತ್ತಿದ್ದ ದಿನಗಳವು. ಸಾಹಿತ್ಯ, ಸಂಸ್ಕೃತಿ ಮತ್ತು ಸಮಾಜ ಈ ಎಲ್ಲ ಚಟುವಟಿಕೆಗಳ ಕೇಂದ್ರವಾಗಿದ್ದ ಒಂದು ಅದ್ಭುತವಾದ ಲವಲವಿಕೆ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗಕ್ಕೆ ಇತ್ತು. ಚರ್ಚೆ, ಸಂವಾದ ಮತ್ತು ವಿಚಾರ ಸಂಕೀರ್ಣಗಳ ಮೂಲಕ ಮತ್ತು ಕಿ.ರಂ.ರವರಂಥ ಸಂಪರ್ಕದಿಂದ ಹೊಸ ಆಶಯಗಳನ್ನು ಬೆಳಸಿಕೊಳ್ಳುವ ಸಾಧ್ಯತೆಯನ್ನು ಯಾವಾಗಲೂ ವಿದ್ಯಾರ್ಥಿಗಳು ವಿಸ್ತರಿಸಿಕೊಳ್ಳುತ್ತಿದ್ದರು. ವಿದ್ಯಾರ್ಥಿಗಳಲ್ಲದವರೂ ಸಾಂಸ್ಕೃತಿಕ ಆಕರ್ಷಣೆಯಿಂದ ಬಂದು ಸೇರುತ್ತಿದ್ದರು. ಇದೇ ಸಮಯದಲ್ಲಿ ಪ್ರಸಿದ್ಧ ಲೇಖಕರಾದ ವಿನಾಯಕ ಕೃಷ್ಣ ಗೋಕಾಕರು ಉಪಕುಲಪತಿಗಳಾಗಿದ್ದರು. ಕನ್ನಡ ವಿಭಾಗದ ಸಹಕಾರದಿಂದ ರಾಷ್ಟ್ರೀಯ ಮಟ್ಟದ ವಿಚಾರ ಸಂಕೀರ್ಣ ಏರ್ಪಡಿಸಿದ್ದರು. ಇದು ಒಂದುವಾರ ನಡೆಯಿತು. ಭಾರತದ ಘಟಾನುಘಟಿ ಲೇಖಕರೆಲ್ಲ ಒಂದು ಸೇರಿದ್ದರು. ಅದಕ್ಕೆ ಕಾರ್ಯಕರ್ತರನ್ನು ನೇಮಿಸುವಾಗ ಕೆ.ಎಂ.ಎಸ್.ರವರು ರಂ.ಶ್ರೀ ಮುಗುಳಿಯವರಿಗೆ ಹೇಳಿ ನನ್ನನ್ನು ಸೇರಿಸಿದ್ದರು. ಈ ಮಹಾನ್ ಲೇಖಕರನ್ನು ನೋಡಿಕೊಳ್ಳುವ ಜವಾಬ್ದಾರಿ ನನ್ನ ಪಾಲಿಗೆ ಬಂದಿತ್ತು. ಪ್ರೊ.ದಾಸಗುಪ್ತ, ಡಾ||ರಾಜಾಧ್ಯಕ್ಷ, ಡಾ||ದೀಕ್ಷಿತ್, ಪ್ರೊ.ಮೀನಾಕ್ಷಿ ಸುಂದರಂಪಿಳ್ಳೆ, ಡಾ||ಪುಷ್ಪಾ, ಡಾ||ಶಿಶೀರ್‌ಕುಮಾರ್ ಘೋಷ್ ಮುಂತಾದವರಿದ್ದರು ; ಒಬ್ಬೊಬ್ಬರ ವ್ಯಕ್ತಿತ್ವ ಒಂದೊಂದು ರೀತಿಯಲ್ಲಿತ್ತು. ಮೀನಾಕ್ಷಿ ಸುಂದರಂ ಪಿಳ್ಳೆಯವರು ತುಂಬ ದೊಡ್ಡ ವಿದ್ವಾಂಸರು. ಮದುರೈ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದರು. ಇವರೆಲ್ಲ ಅರಮನೆ ರಸ್ತೆಯ ಜನರಲ್ ಹಾಸ್ಟಲ್‌ನಲ್ಲಿರುತ್ತಿದ್ದರು. ಊಟಕ್ಕೆ ಶಾಸಕರ ಭವನದ ಕ್ಯಾಂಟೀನ್‌ಗೆ ಕರೆದುಕೊಂಡು ಹೋಗಲೇಬೇಕಾಗಿತ್ತು. ಇವರೆಲ್ಲ ವಾಕ್‌ಪ್ರಿಯರು. ಜನರಲ್ ಹಾಸ್ಟೆಲ್‌ನಿಂದ ಶಾಸಕರ ಭವನಕ್ಕೆ ವಾಕ್‌ಮಾಡಿಕೊಂಡೇ ಹೋಗುತ್ತಿದ್ದರು. ಅವರ ಜೊತೆಯಲ್ಲಿಯೇ ನಾನು ಊಟ ಮಾಡುತ್ತಿದ್ದೆ. ಡಾ||ಪುಷ್ಪಾರವರು ತುಂಬ ಉತ್ಸಾಹಿ ಕಾಶ್ಮೀರಿ ಪ್ರಾಧ್ಯಾಪಕರು. ಉತ್ತಮ ಕವಿ. ಅವರಿಗೆ ದಿನಾ ಊಟ ಮಾಡುವಾಗ ಎರಡು ಹಸಿ ಮೆಣಸಿನಕಾಯಿ ಇರಲೇಬೇಕಾಗಿತ್ತು. ನನಗೂ ಪ್ರ್ಯಾಕ್ಟೀಸ್ ಮಾಡಿಸಿದರು. ಸುಮಾರು ಇಪ್ಪತ್ತು ವರ್ಷ ಅದನ್ನು ರೂಢಿಯಲ್ಲಿಟ್ಟುಕೊಂಡಿದ್ದೆ. ಒಮ್ಮೆ ಡಾ||ಮೀನಾಕ್ಷಿ ಸುಂದರಂ ಪಿಳ್ಳೆಯವರನ್ನು ನೋಡಿಕೊಳ್ಳುತ್ತಿದ್ದ ಸಮಯದಲ್ಲಿ ಸ್ನಾನದ ಕೊಠಡಿಯ ವಾಷ್‌ಬೇಸಿನ್‌ನಲ್ಲಿ ತಮ್ಮ ಕೃತಕ ಹಲ್ಲುಗಳ ಜೋಡಣೆಯ ಕಟ್ಟನ್ನು ದೊಡ್ಡ ಪ್ಲಾಸ್ಟಿಕ್ ಬಟ್ಟಲಲ್ಲಿಟ್ಟಿದ್ದರು. ಅದನ್ನು ನೋಡಿ ಗಾಬರಿಯಿಂದ ಹಿಂದೆ ಸರಿದೆ. ಆ ಹಲ್ಲುಗಳು ನನ್ನನ್ನು ನೋಡಿ ನಗುವ ರೀತಿಯಲ್ಲಿದ್ದುವು. ಇಂಥದ್ದನ್ನೆಲ್ಲ ಕೆ.ಎಂ.ಎಸ್.ರವರಿಗೆ ವರದಿ ಒಪ್ಪಿಸುತ್ತಿದ್ದೆ. ಡಾ||ಶಿಶೀರ್ ಕುಮಾರ್ ಘೋಷ್‌ರವರು ಪಕ್ಕಾ ಅರಬಿಂದೋ ಶಿಷ್ಯರು. ಅವರು ಸಾವಿತ್ರಿ ಮಹಾಕಾವ್ಯವನ್ನು ಕುರಿತು ಮಾರ್ಮಿಕವಾಗಿ ಮಾತಾಡುತ್ತಿದ್ದರು. ಅರಬಿಂದೋ ಬಗ್ಗೆ ಮಾತಾಡಲು ಕೆ.ಎಂ.ಎಸ್.ರವರು ಆಕಾಶವಾಣಿಯಲ್ಲಿ ವ್ಯವಸ್ಥೆ ಮಾಡಿದರು.

ಈ ಮಹಾನ್ ಲೇಖಕರೆಲ್ಲ ಒಂದೊಂದು ರೀತಿಯಲ್ಲಿ ಎತ್ತರದ ವ್ಯಕ್ತಿತ್ವವನ್ನು ಹೊಂದಿದ್ದವರು. ಪ್ರೊ.ದಾಸ್‌ಗುಪ್ತರವರೂ ತುಂಬ ಆಕರ್ಷಕ ವ್ಯಕ್ತಿತ್ವವನ್ನು ಹೊಂದಿದ್ದವರು; ಇಂಗ್ಲೀಷ್ ಪ್ರಾಧ್ಯಾಪಕರು, ಮೀನಿನ ಪ್ರಿಯರು. ಬೆಂಗಾಲಿ ಬ್ರಾಹ್ಮಣರು ಮೀನನ್ನು ತಿನ್ನುವ ವಿಷಯ ಗೊತ್ತಾಗಿದ್ದು

ಆಗ. ಎಲ್.ಎಚ್.ನ ಕ್ಯಾಂಟೀನ್‌ನಲ್ಲಿ ಊಟಮಾಡಿ ವಾಪಸ್ಸು ಬರುವಾಗ ವಿಧಾನಸೌದದ ಮೆಟ್ಟಿಲು ಮೇಲೆ ಕೂತು ಕಲಕತ್ತೆಯ ಬಗ್ಗೆ ಅಲ್ಲಿಯ ಬೀದಿಯ ವೈಭವದ ಬಗ್ಗೆ ಸಾಕಷ್ಟು ಹೇಳಿದ್ದರು. ಅದರಲ್ಲೂ ಕಾಲೇಜ್ ಸ್ಟ್ರೀಟ್ ಕುರಿತು. ಆ ಬೀದಿಯಲ್ಲಿಯ ಹಳೆಯ ಪುಸ್ತಕದಂಗಡಿಗಳು, ಕಲಾತ್ಮಕ ವಸ್ತುಗಳು ವೈಭವದ ಬಗ್ಗೆ ಹೇಳಿದ್ದರು . ಮುಂದೆ ಕೆ.ಎಂ.ಎಸ್.ಮತ್ತು ಕಿ.ರಂ.ಕಲಕತ್ತೆಗೆ ಹೋಗಿದ್ದಾಗ ಅಲ್ಲಿಯ ಬೀದಿಯ ರೋಚಕ ಘಟನೆಗಳನ್ನು ವಿವರಿಸಿದ್ದರು. ಹಾಗೆಯೇ ನಾನು ಸಾಹಿತ್ಯ ಅಕಾಡೆಮಿಯವತಿಯಿಂದ ಕಲಕತ್ತೆಗೆ ಹೋದಾಗ ಯಾವುಯಾವುದನ್ನು ನೋಡಬೇಕು ಎಂಬುದರ ಬಗ್ಗೆ ಕೆ.ಎಂ.ಎಸ್.ರವರು ವಿವರಿಸಿ ಹೇಳಿದ್ದರು. ಹಾಗೆಯೇ ಪ್ರಸಿದ್ಧ ಲೇಖಕ ಕಾಮತ್‌ರವರ 'ವಂಗದರ್ಶನ' ಕೃತಿಯನ್ನು ಓದಿಕೊಂಡು ಹೋಗಲು ತಿಳಿಸಿದ್ದರು. ಈ ಮಹಾನ್ ಲೇಖಕರ ಮಧ್ಯೆ ಸಿಂಧಿ ಪ್ರಾಧ್ಯಾಪಕರೊಬ್ಬರಿದ್ದರು. ಅವರ ಹೆಸರನ್ನು ಮರೆತಿದ್ದೇನೆ. ಸಿಂಧಿ ಭಾಷೆಯಲ್ಲಿ ಪ್ರಸಿದ್ಧಿಯನ್ನು ಪಡೆದ ಸಾಹಿತಿ. ಸಾಕಷ್ಟು ವಯಸ್ಸಾಗಿತ್ತು. ಅವರು ಬೆಂಗಳೂರಿನಲ್ಲಿ ಮೂರು ದಿನ ಇದ್ದರು. ಅವರ ಒಡನಾಟವನ್ನಂತೂ ಮರೆಯಲಾರೆ. ಯಾಕೆಂದರೆ ಅವರು ಭಾರತ ಪಾಕಿಸ್ತಾನ ವಿಭಜನೆಯ ದಿನಗಳನ್ನು ಹತ್ತಿರದಿಂದ ಕಂಡವರು. ಅದಕ್ಕೆ ಸಂಬಂಧಿಸಿದ ಸಾಕಷ್ಟು ರೋಮಾಂಚಕ ಘಟನೆಗಳನ್ನು ವಿವರಿಸಿದ್ದರು. ಅವರು ವಾಪಸ್ಸು ಹೋಗುವಾಗ ಅವರನ್ನ ಗೋಕಾಕರು ಉಪಹಾರಕ್ಕೆ ಕರೆದಿದ್ದಾಗ ನನ್ನನ್ನೂ ಅವರು ಜೊತೆಯಲ್ಲಿ ಕರೆದುಕೊಂಡು ಹೋಗಿದ್ದರು. ಉಪಹಾರಕ್ಕೆ ಜೊತೆಯಲ್ಲಿಯೇ ಕೂರಿಸಿಕೊಂಡರು. ಜೊತೆಗೆ ನನ್ನ ಬಗ್ಗೆ ಮೆಚ್ಚಿಗೆಯನ್ನು ಮಾತಾಡಿದರು. ಸದಾ ಮಂದ ಸ್ಮಿತರಾಗಿರುತ್ತಿದ್ದ ಗೋಕಾಕರು ಬೆನ್ನುಸವರಿ ಸಾಯಿಬಾಬಾರ ಪ್ರಸಾದವನ್ನು ಕೊಟ್ಟರು. ಆಗ ಉಪಕುಲಪತಿಗಳ ನಿವಾಸವಿದ್ದದ್ದು ಈಗಿನ ಸಿ.ಓ.ಡಿ.ಕಛೇರಿಯ ಅದ್ಭುತ ಬಂಗಲೆಯಲ್ಲಿ, ಅದು ಈಗಲೂ ಕಾರ್ಲ್‌ಟನ್ ಹೌಸ್ ಆಗಿಯೇ ಉಳಿದಿದೆ.

ಸಿಂಧಿ ಪ್ರೊಫೆಸರ್‌ರವರ ವಿಚಾರ ಕೆ.ಎಂ.ಎಸ್‌ರವರಿಗೆ ಹೇಳಿದಾಗ ಅವರು ಸಂತೋಷ ಪಟ್ಟಿದ್ದರು. ಯಾಕೆಂದರೆ ಅಷ್ಟೊತ್ತಿಗೆ ಖುಷವಂತ್‌ಸಿಂಗ್‌ರವರ 'ಟ್ರೈನ್ ಟು ಪಾಕಿಸ್ತಾನ್' ಅರ್ಥಪೂರ್ಣ ಕೃತಿಯನ್ನು ನಮ್ಮಿಂದ ಓದಿಸಿದ್ದರು. ಕೆಲವು ವರ್ಷಗಳ ಹಿಂದೆ ಆ ಸ್ಮರಣೀಯ ಸಿಂಧಿ ಲೇಖಕರು ನಿಧನರಾದ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿದಾಗ ವಿಷಾದದಿಂದ ನರಳಿದ್ದೆ.

ಈ ಲೇಖಕರೆಲ್ಲ ಹೊರಡುವಾಗ ನನಗೆ ನೆನಪಿನ ಕಾಣಿಕೆಗಳನ್ನು ಕೊಟ್ಟಿದ್ದರು. ಅವುಗಳನ್ನೆಲ್ಲ ಇಟ್ಟುಕೊಂಡು ಕಾಪಾಡುವ ಸ್ಥಳವೇ ನನಗೆ ಇರಲಿಲ್ಲ. ಅವುಗಳನ್ನು ಕನ್ನಡ ವಿಭಾಗಕ್ಕೆ ಕೊಡಲು ಹೋದೆ. ಜೊತೆಯಲ್ಲಿ ಕೆ.ಎಂ.ಎಸ್‌ರವರೂ ಇದ್ದರು. ವಿಭಾಗದ ಮುಖ್ಯಸ್ಥರಾದ ರಂ.ಶ್ರೀ.ಮುಗುಳಿಯವರು ''ಶ್ರೀನಿವಾಸ್ ನೀನೇ ಇಟ್ಟುಕೊಳಪ್ಪ ಅವರೆಲ್ಲರ ನೆನಪಿಗೆ ಇರಲಿ'' ಎಂದರು. ನಾನು ಕೊಟ್ಟು ಬಂದೆ. ಆದರೆ ಕಾವೇರಿ ಎಂಪೋರಿಯಂನಲ್ಲಿ ಪ್ರೊ.ದಾಸ್‌ಗುಪ್ತರು ಕೊಡಿಸಿದ್ದ ಮರದ ಕೆತ್ತನೆಯ ಹೂಜಿಯನ್ನು ಈಗಲೂ ಮರೆಯಲಾರೆ ಡಾ॥ಪುಷ್ಪಾರವರು ಮೆಜೆಸ್ಟಿಕ್‌ನಲ್ಲಿ ಕುಸಿದುಬಿದ್ದ ಗಂಗಾರಾಂ ಬುಕ್‌ಸ್ಟಾಲ್‌ನಲ್ಲಿ ನೀರದ್ ಚೌದರಿಯವರ 'ಆಟೋ ಬೈಯಾಗ್ರಫಿ ಆಫ್ ದಿ ಅನ್‌ನೋನ್ ಇಂಡಿಯನ್' ಕೃತಿಯನ್ನು ಕೊಡಿಸಿದ್ದರು. ನೀರದ್ ಚೌದರಿಯವರನ್ನು ಪರಿಚಯಮಾಡಿಕೊಟ್ಟವರು ಕೆ.ಎಂ.ಎಸ್.ರವರು. ಅವರ 'ಕಾಂಟಿನೆಂಟ್ ಆಫ್ ಸಿರ್ಸಿ' ಎಂಬ ಮಹತ್ವ ಪೂರ್ಣಕೃತಿಯನ್ನು ಓದಿಸಿದವರು.ಇದೇ ಸಮಯದಲ್ಲಿರಬಹುದು

ಜೀನ್‌ಪಾಲ್ ಸಾರ್ತ್‌ರವರ ಆ ಕಾಲಕ್ಕೆ ತುಂಬ ಚರ್ಚೆಯಾಗುತ್ತಿದ್ದ 'ಬೀಯಿಂಗ್ ಅಂಡ್ ನಥಿಂಗ್‌ನೆಸ್' ಕೃತಿಯನ್ನು ಸೆಂಟ್ರಲ್ ಕಾಲೇಜ್ ಲೈಬ್ರರಿಯಲ್ಲಿ ಪಡೆದಿದ್ದು, ಆರು ತಿಂಗಳಾದರೂ ಅದನ್ನ ವಾಪಸ್ಸು ಕೊಡುವ ಮನಸ್ಸು ಬಂದಿರಲಿಲ್ಲ. ದಂಡವೇ ಸುಮಾರು ನೂರೆಪ್ಪತ್ತು ರೂಪಾಯಿ ಆಗಿತ್ತು. ಆಗಿನ ನನ್ನ ಪ್ರಿಯ ಗ್ರಂಥಪಾಲಕರಾದ ಪಟ್ಟಣಶೆಟ್ಟರು, ರಾಮಮೂರ್ತಿಯವರು ರಾಮಸ್ವಾಮಿಗೌಡರು ಹಾಗೂ ಕಥೆಗಾರ ರಾಘವೇಂದ್ರ ಖಾಸನೀಸರಿಗೆ ಕಾಣಿಸಿಕೊಳ್ಳದೆ ಓಡಾಡುತ್ತಿದ್ದೆ. ಕೊನೆಗೆ ಈ ಕದ್ದಾಟ ಸಾಕೆಂದು ಕೆ.ಎಂ.ಎಸ್‌ರವರ ಮುಂದೆ ಅಪರಾಧಿ ಮನೋಭಾವನೆಯಿಂದ ನಿಂತುಕೊಂಡು ವಿಷಯ ತಿಳಿಸಿದೆ. "ಏನ್ ತರಲೆ ಮಾಡ್ತೀರಿ" ಎಂದು ಬೈದು ರಾಮಸ್ವಾಮಿಗೌಡರ ಬಳಿಗೆ ಕರೆದುಕೊಂಡು ಹೋಗಿ ದಂಡವನ್ನು ಮಾಫಿ ಮಾಡಿಸಿದರು. ಪುಸ್ತಕದ ಬೆಲೆಯೇ ಸಾಕಷ್ಟಿತ್ತು.

ಕೆ.ಎಂ.ಎಸ್.ರವರ ಕೊಠಡಿಯಲ್ಲಿಯೇ ಕೂರುತ್ತಿದ್ದ ಮತ್ತೊಬ್ಬ ಅಧ್ಯಾಪಕರ ತರಗತಿಯಲ್ಲಿ ಕೆಲವರು ಕೆಟ್ಟದ್ದಾಗಿ ನಡಕೊಂಡಿದ್ದರು. ಆಗ ಕೆ.ಎಂ.ಎಸ್.ರವರು ತುಂಬವೈಲ್ಡ್ ಆದರು. ಕೊನೆಗೆ "ನೀವೆಲ್ಲ ರೆಕ್ಸ್ ಥಿಯೇಟರ್‌ನಲ್ಲಿ ಸಿಡ್ನಿ ಪಯಟರ್‌ನ 'ಸರ್ ವಿಥ್ ಲವ್' ಚಲನಚಿತ್ರವಿದೆ, ನೋಡಿಕೊಂಡು ಬನ್ನಿ" ಎಂದರು. ಕಪ್ಪು ಜನಾಂಗಕ್ಕೆ ಸೇರಿದ ಸಿಡ್ನಿ ಪಯಟರ್ ಅತ್ಯದ್ಭುತ ನಟ. ಆತ ಬಿಳಿಯ ಹುಡುಗರ ಮಧ್ಯೆ ಕೆಲಸಮಾಡುವ ಅಧ್ಯಾಪಕ. ಬಿಳಿಯ ಹುಡುಗರು ಯಾವ ಯಾವ ರೀತಿಯಲ್ಲಿ ಅವಮಾನ ಪಡಿಸುತ್ತಾರೆ. ಅದನ್ನೆಲ್ಲ ಸಹಿಸಿಕೊಂಡು ಅವರ ಮನಸ್ಸನ್ನು ಗೆಲ್ಲುವ ಮನೋಜ್ಞ ಚಿತ್ರ. ನಮ್ಮ ಬಹುಪಾಲು ಹುಡುಗ ಹುಡುಗಿಯರು ಆ ಚಿತ್ರವನ್ನು ನೋಡಿಕೊಂಡು ಬಂದು ಕೆ.ಎಂ.ಎಸ್.ರವರಿಗೆ ಥ್ಯಾಂಕ್ಸ್ ಹೇಳುವ ಜೊತೆಗೆ ಅವರ ಕೊಠಡಿಯಲ್ಲಿಯೇ ಕೂರುತ್ತಿದ್ದ ಅಧ್ಯಾಪಕರಲ್ಲಿ ಸಾಮೂಹಿಕ ಕ್ಷಮಾಪಣೆ ಕೇಳಿದ್ದೆವು.

## ಪ್ರತಿಮಾ ನಾಟಕ ರಂಗ

ಎಪ್ಪತ್ತರ ದಶಕದಲ್ಲಿ ಬೆಂಗಳೂರು ಕೇಂದ್ರವಾಗಿಟ್ಟುಕೊಂಡು ತನ್ನ ರಂಗಭೂಮಿಯ ಒಳವುಗಳನ್ನು ರಾಜ್ಯಾದುದ್ದಕ್ಕೂ ಪ್ರತಿಬಿಂಬಿಸಿತ್ತು. ಬೆಂಗಳೂರಿನ ಕಾಲೇಜು ವಿದ್ಯಾರ್ಥಿಗಳಿಗಾಗಿ ಉಲ್ಲಾಳ ಷೀಲ್ಡ್ ನಾಟಕ ಸ್ಪರ್ಧೆ ಬಹುಸಂಭ್ರಮದಿಂದ ನಡೆಯುತ್ತಿತ್ತು. ಸೆಂಟ್ರಲ್ ಕಾಲೇಜಿನಲ್ಲಿ ಲಂಕೇಶರ ನೇತೃತ್ವದಲ್ಲಿ ಪ್ರತಿವರ್ಷ ಈ ಸ್ಪರ್ಧೆಗೆ ನಾಟಕ ಕಳಿಸುವ ವಾಡಿಕೆ ಇತ್ತು. ಇಂಗ್ಲೀಷ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದ ಪ್ರೊ. ಬಿ. ಚಂದ್ರಶೇಖರ್ ನಿರ್ದೇಶಕರಾಗಿ ಈ ನಾಟಕಗಳನ್ನು ನಿರ್ದೇಶನ ಮಾಡುತ್ತಿದ್ದರು. ಲಂಕೇಶರ 'ತೆರೆಗಳು', ಗಿರೀಶರ 'ಹಿಟ್ಟಿನಹುಂಜ', ಪಾಟೀಲರ 'ಅಪ್ಪ', ಕಂಬಾರರ 'ನಾರ್ಸಿಸಸ್' ಮುಂತಾದ ನಾಟಕಗಳು ಆಗ ಸ್ಪರ್ಧೆಯಲ್ಲಿ ಭಾಗವಹಿಸಿದ್ದುವು. ಈ ನಾಟಕ ಚಳುವಳಿಯ ಫಲವಾಗಿ ಅಂದು ಪ್ರತಿಮಾ ನಾಟಕ ರಂಗ ಹುಟ್ಟಿಕೊಂಡಿತು. ಲಂಕೇಶ್‌ರವರ ನೇತೃತ್ವದಲ್ಲಿ ಪ್ರೊ. ಚಂದ್ರಶೇಖರ್ ಮಾರ್ಗದರ್ಶನದಲ್ಲಿ ಹುಟ್ಟಿಕೊಂಡ ಈ ತಂಡದಲ್ಲಿ ಅಂದು ಪ್ರಸನ್ನ, ಟಿ.ಎಸ್. ಸೀತಾರಾಂ, ಮುಂದೆ ಆಧುನಿಕ ಕನ್ನಡ ನಾಟಕರಂಗ ಭೂಮಿಯಲ್ಲಿ ಹೆಸರು ಮಾಡಿತು. ಕೆ.ಎಂ.ಎಸ್. ಮತ್ತು ಕಿ.ರಂ. ಹಾಗೂ ಕನ್ನಡ ವಿಭಾಗದ ಸಾವೆಲ್ಲ ಈ 'ಪ್ರತಿಮಾ ನಾಟಕ ರಂಗ'ದ ಮೂಲಕವೇ ಉತ್ತಮ ನಾಟಕಗಳನ್ನು ಕುರಿತ ಅಭಿರುಚಿ ಬೆಳೆಸಿಕೊಂಡದ್ದು. ಕೆ.ಎಂ.ಎಸ್. ರವರು ಈ ತಂಡದ ಪ್ರಥಮ ಕಾರ್ಯದರ್ಶಿಯಾಗಿದ್ದರು. ಈಗ

ಎಲ್. ಕೃಷ್ಣಪ್ಪನವರು ಈ ತಂಡವನ್ನು ಮುಂದುವರೆಸುತ್ತಿದ್ದಾರೆ. ಎಪ್ಪತ್ತರ ದಶಕದಲ್ಲಿ ರಂಗಭೂಮಿಗಾಗಿಯೇ ಮೀಸಲಿದ್ದ 'ಮುಕ್ತ' ಎಂಬ ಒಂದು ಮಾಸ ಪತ್ರಿಕೆಯನ್ನು ಪ್ರಸನ್ನ ಸಂಪಾದಕರಾಗಿದ್ದರು. ನಾನು ಉಪ ಸಂಪಾದಕನಾಗಿದ್ದೆ. ಕೀ.ರಂ. ಹಾಗೂ ಕೆ.ಎಂ.ಎಸ್. ರವರು ಮಾರ್ಗ ದಶಕರುಗಿದ್ದರು. ನಂತರ, ಒಂದು ರೀತಿಯಲ್ಲಿ ಎಲ್. ಕೃಷ್ಣಪ್ಪ ಮೋಹನರಾಂ ಹಾಗೂ ಟಿ.ಎಸ್. ಸೀತಾರಾಂ ಹೈಜಾಕ್ ಮಾಡಿದರು. 'ಮುಕ್ತ' ನಾನಾ ರೀತಿಯಲ್ಲಿ ಸೆನ್ಸೇಷನ್ನ ಸೃಷ್ಟಿಸಿತು. ಅಷ್ಟೇ ಜಾಗ್ರತೆ ನಿಂತು ಹೋಯಿತು. ಈಗ ಎಲ್. ಕೃಷ್ಣಪ್ಪ ನವರು ಕೆ.ಎಂ.ಎಸ್. ರವರ ಮಾರ್ಗದರ್ಶನದಲ್ಲಿ 'ಈ ಮಾಸನಾಟಕ' ಪತ್ರಿಕೆಯನ್ನು ಕ್ರಮವಾಗಿ ತರುತ್ತಿರುವುದು ಸಂತೋಷದ ಸಂಗತಿ.

## ಸಮುದಾಯದ ಹುಟ್ಟು

ಕಿ.ರಂ.ನಾಗರಾಜರವರ ಮನೆ ಯಾವಾಗಲೂ ಸಾಂಸ್ಕೃತಿಕ ಆಕರ್ಷಣೆಯನ್ನು ಉಳಿಸಿಕೊಂಡಿದೆ. ಕವಿ ಸಿದ್ದಲಿಂಗಯ್ಯನವರ 'ಹೊಲೆಮಾದಿಗರ ಹಾಡು' ಕವನ ಸಂಕಲನವಾಗಿ ರೂಪಪಡೆದಿದ್ದು ಇಲ್ಲಿಯೇ. ಆಗ ಕೆ.ಎಂ.ಎಸ್, ಕೆ.ವಿ.ನಾರಾಯಣ, ಪ್ರಸನ್ನ ಮತ್ತು ಕಿ.ರಂ.ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದರು. ಇದೇ ಸಮಯದಲ್ಲಿ ತುಂಬ ವಿಶಾಲ ತಳಹದಿಯ ರಂಗತಂಡವನ್ನು ಕಟ್ಟುವ ಯೋಚನೆ ನಡೆಯಿತು. ತುಂಬ ಚರ್ಚೆ ಆದ ಮೇಲೆ ಅದಕ್ಕೆ 'ಸಮುದಾಯ' ಎಂಬ ಹೆಸರನ್ನು ಸೂಚಿಸಿದವರು ಕೆ.ಎಂ.ಎಸ್ ಮತ್ತು ಕಿ.ರಂ.ರವರು. ಇದಾದ ಮೇಲೆ ಈ ರೀತಿಯ ರಂಗತಂಡ ಅಗತ್ಯವಿದೆಯೇ ಎಂಬುದನ್ನು ಕುರಿತು ಚರ್ಚಿಸಲು 1975ರಲ್ಲಿ ಒಂದು ಭಾನುವಾರ ಕಲಾಕ್ಷೇತ್ರದ ವಿಶ್ರಾಂತಿ ಗೃಹದಲ್ಲಿ ರಂಗಾಸಕ್ತರು ಮತ್ತು ಸಾಂಸ್ಕೃತಿಕ ಆಸಕ್ತರು ಸೇರಿದ್ದರು. ಅಂದು ಪ್ರಸನ್ನರವರು ಪ್ರಾಸ್ತಾವಿಕವಾಗಿ ಮಾತಾಡಿದ ಮೇಲೆ ಕೆ.ಎಂ.ಎಸ್‌ರವರು ಅದನ್ನು ಮುಂದುವರೆಸಿ ಮತಾಡಿದರು. ಪ್ರಸನ್ನರವರು ರಂಗಭೂಮಿಗೆ ಸಂಬಂಧಿಸಿದಂತೆ ನಾನಾ ರೀತಿಯ ಹೊಸ ವಿಚಾರಗಳನ್ನು ತಲೆತುಂಬ ತುಂಬಿಕೊಂಡಿದ್ದರು. ಅದನ್ನೆಲ್ಲ ಆರೋಗ್ಯಪೂರ್ಣವಾಗಿ ಕೆ.ಎಂ.ಎಸ್‌ರವರು ಯಾವಾಗಲೂ ನೋಡುತ್ತಿದ್ದರು. ಹಾಗೆ ನೋಡಿದರೆ ಪ್ರಸನ್ನರವರ ಏರುಪೇರುಗಳನ್ನು ಸಮಾನ ಚಿತ್ತರಾಗಿ ನೋಡುತ್ತಿವವರು ಕೆ.ಎಂ.ಎಸ್‌ರವರು. ಅಂದು ನಾನಾ ರೀತಿಯಲ್ಲಿ ಚರ್ಚೆಯಾದ ಮೇಲೆ 'ಸಮುದಾಯ'ಕ್ಕೆ ಸೇರಿದವರೆಲ್ಲ ಒಪ್ಪಿಗೆಯ ಮುದ್ರೆಯನ್ನೊತ್ತಿದರು. ವಿಜಯಮ್ಮನವರು ಇನ್ನೂರು ರೂಪಾಯಿಗಳನ್ನು ಕೊಟ್ಟ ತಕ್ಷಣ ಎಲ್ಲರೂ ತಮ್ಮ ತಮ್ಮ ಕೈಲಾದಮಟ್ಟಿಗೆ ಜೋಳಿಗೆಗೆ ದುಡ್ಡು ಹಾಕಿದರು. ಅದು ಜೀವ ಪಡೆಯಿತು.

'ಸಮುದಾಯ' ಕೇವಲ ಒಂದು ರಂಗತಂಡವಾಗಿ ಮಾತ್ರ ಬೆಳೆಯಲಿಲ್ಲ, ಅದು ಸಮಾಜದ ವಿವಿಧ ಮುಖಗಳನ್ನು ನೋಡುವ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಬೆಳೆಯಿತು.ಹಾಗೆಯೇ ರಾಜಕೀಯ ಏರುಪೇರುಗಳಿಗೆ ಪ್ರತಿಕ್ರಿಯಿಸಲು ಗಟ್ಟಿಯಾಗಿಯೇ ರೂಪಪಡೆಯಿತು. ಬೀದಿನಾಟಕಗಳಿಗೆ ಹೊಸ ಅರ್ಥಗಳನ್ನು ಕೊಡಲು ಇದು ತನ್ನ ಪ್ರಯೋಗಗಳ ಮೂಲಕ ವಿವಿಧ ಆಯಾಮಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿತು. ಇದರಿಂದ ಎಷ್ಟೊಂದು ಮಂದಿ ರಂಗತಜ್ಞರು, ನಟನಟಿಯರು ರೂಪುಗೊಂಡರು ಎಂಬುದು ಬಹಳ ಮುಖ್ಯ. ಅದರಲ್ಲೂ ಚಿಕ್ಕಮಗಳೂರು ಚುನಾವಣೆಯ ಸಂದರ್ಭದಲ್ಲಿ ಅದು ನಿರ್ವಹಿಸಿದ ಪಾತ್ರ ಮಹತ್ತರವಾದದ್ದು. ಇದಾದ ಮೇಲೆ

ಸಮುದಾಯ ಜಾಥಾ ಕರ್ನಾಟಕದ ಉದ್ದಗಲಕ್ಕೂ ಚೇತೋಹಾರಿ ಸಂಭ್ರಮವನ್ನು ಸೃಷ್ಟಿಸಿತು. ಇದರಿಂದ ಕರ್ನಾಟಕದ ಎಲ್ಲ ಕಡೆ ಸಮುದಾಯದ ಶಾಖೆಗಳು ಕ್ರಿಯಾಶೀಲವಾಗಿ ಕೆಲಸಮಾಡಲು ಮುಂದೆ ಬಂದುವು. ಕೆ.ಎಂ.ಎಸ್‌ರವರು ಇದರ ಅಧ್ಯಕ್ಷರಾಗಿ ಸಾಂಸ್ಕೃತಿಕ ಪ್ರಜಾಸತ್ತೆಯ ಆಯಾಮವನ್ನು ತಂದುಕೊಟ್ಟರು. ಇದಕ್ಕಿಂತ ಮೊದಲು ಜಾಥಾ ಸಮಯದಲ್ಲಿ ಪ್ರಸನ್ನ , ಸಿ.ಜಿ.ಕೃಷ್ಣಸ್ವಾಮಿ ಅದ್ಭುತವಾದ ಸಂಘಟನೆಯ ಸ್ವರೂಪವನ್ನು ತಂದುಕೊಟ್ಟರು. ಮುಂದೆ ಭಿನ್ನಾಭಿಪ್ರಾಯಗಳ ಕಾರಣಕ್ಕಾಗಿ ಅವರಿಬ್ಬರೂ ಸಮುದಾಯದಿಂದ ದೂರ ಸರಿದರು. ಆದರೆ 'ಸಮುದಾಯ' ಅವರು ಬೆಳೆಯಲು ಒಂದು ಅರ್ಥಪೂರ್ಣಮೆಟ್ಟಿಲಾಯಿತು ಎಂಬುದನ್ನು ಅವರೂ ಅಲ್ಲಗಳೆಯಲಾರರು. ಈ ಎಲ್ಲದರ ಹಿಂದೆ ಕೆ.ಎಂ.ಎಸ್. ಆತ್ಯಂತ ತಾದಾತ್ಮ್ಯತೆಯಿಂದ ದುಡಿದರು ಎಂಬುದನ್ನು ಮರೆಯುವಂತಿಲ್ಲ. ಸಿದ್ಧಲಿಂಗಯ್ಯನವರ ಹೊಲೆ ಮಾದಿಗರ ಹಾಡು ಮತ್ತು ಸಮುದಾಯ ಸಂಘಟನೆ ದಲಿತರಲ್ಲಿ ಕೆಳವರ್ಗದ ಯುವಕ ಯುವತಿಯರಲ್ಲಿ ಸಂಭ್ರಮದ ಉಲ್ಲಾಸವನ್ನು ಬೆಳೆಸಿತು. ಪ್ರಸನ್ನ ಮತ್ತು ಎಸ್.ಮಾಲತಿಯವರ ಪ್ರೇಮ ಬೆಳೆದದ್ದು, ಮದುವೆಯಾದದ್ದು ಇಲ್ಲಿಯೇ.

ಇಂದು ಕರ್ನಾಟಕದ ಮೂಲೆ ಮೂಲೆಯಲ್ಲಿ ಯಾವ ಜಾತಿಯಲ್ಲಿಯೂ ಇಲ್ಲದಷ್ಟು ರಾಜಕೀಯ ಪ್ರವೇಶ ಮತ್ತು ಅದಕ್ಕೆ ಪೂರಕವಾಗಿ ಜೀವ ಪಡೆಯುವ ಹಾಡು ಕುಣಿತಕ್ಕೆ ನಾಂದಿಯಾಯಿತು. ಇದು ಚಾರಿತ್ರಿಕವಾಗಿ ಮಹತ್ವಪೂರ್ಣವಾದದ್ದು. ಕೆ.ಎಂ.ಎಸ್‌ರವರು ಯಾವಾಗಲು ಹೇಳುತ್ತಿರುತ್ತಾರೆ. ಜನಾರ್ಧನ, ಪಿಚ್ಚಳ್ಳಿ ಶ್ರೀನಿವಾಸ್, ಅಪ್ಪಗೆರೆ ತಿಮ್ಮರಾಜು ಮತ್ತು ಬಾನಂದೂರು ಕೆಂಪಯ್ಯ ಒಂದೆಡೆ ಸೇರಿ ಬ್ಯಾಲೆಯಂಥ ಸಾಂಸ್ಕೃತಿಕ ಸಂಘಟನೆಯನ್ನು ರೂಪಿಸಲು ಸಾಧ್ಯವಾಗುವುದಾದರೆ ಎಷ್ಟು ಅದ್ಭುತ ಎಂದು. ಡಿ.ಆರ್.ನಾಗರಾಜ್ ಮತ್ತು ನಾವೆಲ್ಲ ಸೇರಿದಾಗ ಹೇಳುತ್ತಲೇ ಇದ್ದರು. ಆ ರೀತಿಯೇ ಸಂಘಟನೆ ತಮ್ಮ ಬದುಕಿನ ಕನಸು ಎನ್ನುವ ರೀತಿಯಲ್ಲಿ ಕೆ.ಎಂ.ಎಸ್‌ರವರ ಮಾತಿನ ಧ್ವನಿಯಾಗುತ್ತಿತ್ತು. ಇಂದು ಎಷ್ಟೋ ಜನ ದಲಿತ ಹೋರಾಟಗಾರರಿಗೆ ಇದು ಗೊತ್ತಿಲ್ಲದಿರಬಹುದು ; ಅದನ್ನು ಗೊತ್ತು ಪಡಿಸಿ ಪ್ರಚಾರ ಪಡೆಯುವ ವ್ಯಕ್ತಿತ್ವ ಇವರದ್ದಾಗಿರಲಿಲ್ಲ. ಆದ್ದರಿಂದಲೇ ವ್ಯಕ್ತಿ ತನ್ನ ಪ್ರತಿಷ್ಠೆಗಳನ್ನು ಮೀರಿ ಬೆಳೆಯಲು ಸಾಧ್ಯವಾಗುವುದು ಸಮುದಾಯದ ಚೌಕಟ್ಟಿನಲ್ಲಿದ್ದಾಗ ಎಂದು ಗಾಢವಾಗಿ ನಂಬಿದವರು. ಇದನ್ನು ಸಮುದಾಯದ ಗೆಳೆಯರು ನಮ್ರತೆಯಿಂದ ನಂಬಿದ್ದಾರೆ ಎಂದು ತಿಳಿಯುವೆ. ಯಾಕೆಂದರೆ ಕೆ.ಎಂ.ಎಸ್‌ರವರು ಎಂದೂ ವ್ಯಕ್ತಿನಿಂದನೆಯನ್ನು ಗೌರವಿಸಿದವರಲ್ಲ. ಅವರು ಹೀಗೆ, ಎಂದು ಸೋಮಾರಿಕಟ್ಟೆಗಳ ಮೇಲೆ ಕೂತು ಷರಾ ಎಳೆಯುವವರನ್ನು ಬೆಳೆಸಿದವರಲ್ಲ. ನಮ್ಮ ಮಾತು ಮತ್ತು ಕೃತಿ ಸಮುದಾಯದಲ್ಲಿ ಆಕಾರ ಪಡೆಯುವುದು ಸಂಕೋಚಗಳನ್ನು ಕಾಪಾಡಿಕೊಂಡಾಗ ಎಂದು ನಂಬಿ ಬಿಡುತ್ತಿದವರು.

ಕೆ.ಎಂ.ಎಸ್.ರವರು ಸಮಯದಾಯ ಬಿಟ್ಟರು. ಬಿಟ್ಟರು ಎನ್ನುವುದಕ್ಕಿಂತ ಉತ್ಸಾಹಿ ತರುಣರ ಕೈಗೆ ಕೊಟ್ಟರು. ಆದರೆ ಅವರು ಉತ್ಸಾಹದಿಂದ ಕೆಲಸಮಾಡಲು ಸಾಂಸ್ಕೃತಿಕ ಚಳುವಳಿಗಳೆಲ್ಲ ಸತ್ತು ಹೋಗಿವೆ. ಜೀವರಹಿತ ನಾಯಕರು ಸೂತ್ರದ ಗೊಂಬೆಗಳ ರೀತಿಯಲ್ಲಿ ಓಡಾಡಿಕೊಂಡಿರುವುದು, ಪ್ರಗತಿಪರ ಚಿಂತನೆಗಳು ಮಂಕಾಗಿರುವುದು ಅನ್ನಿಸುತ್ತದೆ. ಆದರೆ ಕೆ.ಎಂ.ಎಸ್‌ರವರು ಈಗಲೂ ಮಂಕಾಗಿಲ್ಲ. ನಾಟಕವೋ, ಚರ್ಚೆಯೋ ಅರ್ಥಪೂರ್ಣವಾಗಿದ್ದರೆ ಆಹ್ವಾನಪತ್ರಿಕೆ ಇಲ್ಲದಿದ್ದರೂ

ಮೌನವಾಗಿ ಹೋಗಿ ಕೂತು ಬರುವರು. ಅಷ್ಟರಮಟ್ಟಿಗೆ ದೊಡ್ಡ ವ್ಯಕ್ತಿ.

'ಸಮುದಾಯ' ವನ್ನ ಕ್ರಿಯಾಶೀಲವಾಗಿ ಮುನ್ನಡೆಸುತ್ತಿರುವಂತೆಯೇ ಕೆ.ಎಂ.ಎಸ್. ರವರನ್ನು ಶ್ರೀನಿವಾಸ್ ಜಿ. ಕಪ್ಪಣ್ಣ ತಮ್ಮತ್ತ ಸೆಳೆದುಕೊಂಡರು. 'ನಾಟ್ಯ ಸಂಘ ಥಿಯೇಟರ್ ಸೆಂಟರ್' ನ ಅಧ್ಯಕ್ಷರನ್ನಾಗಿ ಕೆ.ಎಂ.ಎಸ್. ರವರನ್ನು ಕರೆದುಕೊಂಡರು. ಮುಂದೆ ಐದು ವರ್ಷಗಳ ಕಾಲ ಕೆ.ಎಂ.ಎಸ್. ಮಾರ್ಗದರ್ಶನದಲ್ಲಿ 'ನಾಟ್ಯ ಸಂಘದ ಕಪ್ಪಣ್ಣ ನವರ ನೇತೃತ್ವದಲ್ಲಿ ನಡೆಯಿತು. ಅತ್ಯಂತ ಸೃಜನಾತ್ಮಕ ಸಂಸ್ಥೆಯಾಗಿ ಒಂದಷ್ಟು ದಿವಸ ಕೆಲಸಮಾಡಿತು. ಇಲ್ಲಿ ನಡೆದ ರಂಗ ಚಟುವಟಿಕೆಗಳನ್ನು ಈಗಲೂ ಸ್ಮರಿಸಿಕೊಳ್ಳಬಹುದು. ಶ್ರೀಮತಿ ಚಿಂದೋಡಿಲೀಲಾ ರವರು ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದ ಕಾಲದಲ್ಲಿಯೂ ರಿಜಿಸ್ಟ್ರಾರ್ ಆಗಿದ್ದ ಕಪ್ಪಣ್ಣ ನವರು ಅನೇಕ ವಿಭಾಗಳಲ್ಲಿ ಕೆ.ಎಂ.ಎಸ್. ರವರೊಡನೆ ಸಮಾಲೋಚಿಸಿ ಕೆಲಸ ನಿರ್ವಹಿಸುತ್ತಿದ್ದರು. ಅಕಾಡೆಮಿಗೆ ಕೆ.ಎಂ.ಎಸ್. ರವರು ಅಧ್ಯಕ್ಷರಾದ ಬಳಿಕವಂತೂ ಸಹಜವಾಗಿ ಕಪ್ಪಣ್ಣನವರು ರಿಜಿಸ್ಟ್ರಾರ್ ಆಗಿ ಮುಂದುವರೆದರು. ಈಗಲೂ ಕಪ್ಪಣ್ಣನವರು ಕೆ.ಎಂ.ಎಸ್. ರವರ ಮನೆಯ ಹತ್ತಿರವಿರುವುದರಿಂದ ಹೆಚ್ಚೆಚ್ಚು ಸಲಹೆ ಸೂಚನೆಗಳನ್ನು ಪಡೆಯುವುದಕ್ಕೆ ಅನುಕೂಲವಾಗಿದೆ.

## ಕೊಂಡಜ್ಜಿ ನಾಟಕ ರಚನಾ ಶಿಬಿರ

ಕೊಂಡಜ್ಜಿ ಬಸಪ್ಪನವರು ಅತ್ಯಂತ ಸಭ್ಯ ರಾಜಕಾರಣಿಯಾಗಿದ್ದರು. ರಾಜ್ಯದಲ್ಲಿ ಮತ್ತು ಕೇಂದ್ರ ಸರ್ಕಾರದಲ್ಲಿ ಸಚಿವರಾಗಿದ್ದರವರು. ಆದರೆ ಅವರ ನಿಜವಾದ ಅಭಿರುಚಿ ಮತ್ತು ನಿಷ್ಠೆ ಇದ್ದದ್ದು ಸ್ಕೌಟಿನ ಬಗ್ಗೆ. ಕರ್ನಾಟಕದಲ್ಲಿ ಸ್ಕೌಟನ್ನು ಬೆಳೆಸಿದ್ದರ ಜೊತೆಗೆ ಅವರ ಊರಿಗೆ ಸಮೀಪದಲ್ಲಿ ಕೊಂಡಜ್ಜಿ ವಿಶಾಲವಾದ ಪ್ರದೇಶದಲ್ಲಿ ತರಬೇತಿ ಕೇಂದ್ರವನ್ನು ಬೆಳೆಸಿದ್ದಾರೆ. ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನಲ್ಲಿರತಕ್ಕಂಥದ್ದು ಹಳ್ಳ ಗುಡ್ಡಗಳ ನಡುವೆ ರೂಪುಗೊಂಡಿರುವಂಥದ್ದು ಎಲ್ಲೆಂದರಲ್ಲಿ ಕಲಾತ್ಮಕವಾಗಿ ಹರಡಿಕೊಂಡಿರುವ ನುಣುಪಾದ ಬೆಣಚು ಕಲ್ಲುಗಳು.

ನಾಟಕ ರಚನಾ ಶಿಬಿರದಲ್ಲಿ ಇಪ್ಪತ್ತೈದು ಮಂದಿ ಇದ್ದರು ಅನ್ನಿಸುತ್ತದೆ. ಕೆ.ಎಂ.ಎಸ್‌ರವರು ಶಿಬಿರದಲ್ಲಿ ಪಾಲ್ಗೊಂಡ ಕ್ರಮವೇ ಸೃಜನಶೀಲವಾದದ್ದು. ಯಾವುದೇ ನಾಟಕದ ಬಗ್ಗೆಯಾದರೂ ಕರಾರುವಕ್ಕಾಗಿ ಮಾತಾಡುವಾಗ ರಚನೆಯ ಚೌಕಟ್ಟಿನಲ್ಲಿ ಯೋಚನೆ ಮಾಡುವವರು ಅಪರೂಪ. ಯಾಕೆಂದರೆ ಎಷ್ಟೋ ಬಾರಿ ನಮ್ಮಲ್ಲಿ ಒಂದು ಕಥಾವಸ್ತು ಅತ್ಯಂತ ಚೆನ್ನಾಗಿದ್ದರೂ ಅದನ್ನು ಹ್ಯಾಂಡಲ್ ಮಾಡುವ ಹಂತದಲ್ಲಿ ಎಡವಿಬಿಟ್ಟಿರುತ್ತಾರೆ. ಇಂಥ ಮೂಲಭೂತ ವಿಷಯಗಳನ್ನು ಕುರಿತು ಶಿಬಿರಾರ್ಥಿಗಳಿಗೆ ಅರ್ಥೈಸುವುದಕ್ಕೆ ಜಾಣ್ಮೆಯೂ ಬೇಕಾಗುತ್ತದೆ. ಇಂಥ ಜಾಣ್ಮೆಯ ಕೆಲಸ ಆ ಶಿಬಿರದಲ್ಲಿ ನಡೆಯಿತು ಎಂಬುದು ಮುಖ್ಯ. ಒಟ್ಟು ಶಿಬಿರದ ನಿರ್ದೇಶಕರು ಪ್ರಸನ್ನರವರಾಗಿದ್ದರೂ ಕೆ.ಎಂ.ಎಸ್ ಹೆಡ್‌ಮಾಸ್ಟರ್ ಪಾತ್ರವನ್ನು ನಿರ್ವಹಿಸಿದರು. ಮರಾಠಿಯ ಪ್ರಸಿದ್ಧ ನಾಟಕಕಾರ ವಿಜಯ ತೆಂಡೋಲ್ಕರ್ ಅಂಥವರು ಬಂದು ಭಾಗಿಯಾಗಿದ್ದರು. ಆ ಮನುಷ್ಯ ಎಷ್ಟು ಲವಲವಿಕೆಯ ವ್ಯಕ್ತಿಯೆಂದರೆ ನಾವು ಅಸೂಯೆಪಡುವಷ್ಟು ಕ್ರಿಯಾಶೀಲತೆ ಆತನಲ್ಲಿ ತುಂಬಿಕೊಂಡಿತ್ತು. ತೆಂಡೋಲ್ಕರ್‌ರವರನ್ನು ಬೆಂಗಳೂರಿನಿಂದ ಅನಂತನಾಗ್ ಕರೆದುಕೊಂಡು ಬಂದಿದ್ದರು. ಆಗ ನಾವೆಲ್ಲ ತೆಂಡೋಲ್ಕರ್‌ರವರ ಮಗಳು ಪ್ರಿಯ ತೆಂಡೋಲ್ಕರ್‌ರವರು

ಅನಂತ್‌ನಾಗ್ ಪ್ರೀತಿಸುತ್ತಿದ್ದಾರೆ; ಆಕೆಯನ್ನೇ ಮದುವೆಯಾಗುವರು ಎಂದು ಗುಸು ಗುಸು ಮಾತಾಡಿಕೊಂಡೆವು. ಆದರೆ ನಾವು ಯಾರೂ ಅದರ ಸತ್ಯವನ್ನು ತಿಳಿಯಲು ಹೋಗಲಿಲ್ಲ. ಆದರೆ ಮುಂದೆ ಎಷ್ಟೋ ವರ್ಷ ದೂರದರ್ಶನದ ಕಿರುಚಿತ್ರಗಳ ದಾರಾವಾಹಿಯ ಪಾತ್ರಗಳಲ್ಲಿ ಪ್ರಿಯಾರವರು ಅದ್ಭುತವಾಗಿ ಮಿಂಚುತ್ತಿದ್ದರು. ಆಗ ಒಂದು ಕ್ಷಣ, ವಿಜಯ ತೆಂಡೋಲ್ಕರ್, ಅನಂತನಾಗ್ ಕೊಂಡಜ್ಜಿಯ ನಾಟಕ ಶಿಬಿರದ ನೆನಪು ಕಾಡಿ ಮರೆಯಾಗುತ್ತಿತ್ತು.

ಕ್ರಿಕೆಟ್‌ನ ವರ್ಲ್ಡ್‌ಕಪ್‌ನ ದಿನಗಳು ಅದರ ಥ್ರಿಲ್ಲಿಂಗ್ ಬೇರೆ. ಜೊತೆಗೆ ವ್ಯಕ್ತಿತ್ವದಲ್ಲಿ ಬಣ್ಣಬಣ್ಣದ ಪಾತ್ರಗಳು ನಮ್ಮ ನಡುವೆ ಇದ್ದರು. ಪ್ರೊ.ಕ.ವೆಂ.ರಾಜಗೋಪಾಲ್, ಹಾ.ಸಾ.ಕೃ, ಉಡುಪಿಯ ರಾಮದಾಸ್, ನಾಟಕಕಾರ ವಾಜಪೇಯಿ, ಅತ್ಯಂತ ಕ್ರಿಯಾಶೀಲ ಹುಡುಗಿ ಸುವರ್ಣ, ದಾವಣಗೆರೆಯ ಈಶ್ವರಪ್ಪ ಮುಂತಾದವರೆಲ್ಲ ಇದ್ದರು. ಕವಿ ರಾಜಗೋಪಾಲರವರಂತೂ ಶಿಬಿರದ ತರಗತಿಗಳು ಮುಗಿದ ತಕ್ಷಣ ವೈವಿಧ್ಯಮಯವಾದ ಕಲ್ಲುಗಳ ಮಧ್ಯೆ ಕರಗಿ ಹೋಗುತ್ತಿದ್ದರು. ಅವರು ಎಷ್ಟು ಕಲ್ಲುಗಳನ್ನು ಸಂಗ್ರಹಿಸಿದರೆಂದರೆ. ನಾವು ತಮಾಷೆ ಮಾಡುತ್ತಿದ್ದೆವು ; "ಬೆಂಗಳೂರಿನಿಂದ ಟ್ರಕ್ಕೇನಾದರೂ ತರಿಸಬೇಕಾ?" ಎಂದು. ಕೆ.ಎಂ.ಎಸ್‌ರವರಂತೂ "ಈ ಕ.ವೆಂ.ರವರಿಗೆ ಏನು ಹುಚ್ಚು" ಎಂದು ಪ್ರೀತಿಯಿಂದ ಹೇಳುತ್ತಿದ್ದರು. ಹಾ.ಸಾ.ಕೃ ಪುಸ ಪುಸ ಎಂದು ಬೀಡಿಯ ಹೊಗೆ ಬಿಡುತ್ತ ಎಲ್ಲರನ್ನು ಛೇಡಿಸುತ್ತ ದುರಂತದ ಪಾತ್ರದ ರೀತಿಯಲ್ಲಿ ಓಡಾಡಿಕೊಂಡಿದ್ದರು.

ರಾತ್ರಿ ಊಟವಾದ ಮೇಲೆ ಬೆಳದಿಂಗಳ ರಾತ್ರಿಯನ್ನು ಎಷ್ಟು ಅನುಭವಿಸಿದೆವೆಂದರೆ ನಿಜವಾಗಿಯೂ ಆ ಮೋಹಕತೆಯನ್ನು ಮರೆಯಲು ಸಾಧ್ಯವಿಲ್ಲ. ಸ್ವಾಭಾವಿಕವಾಗಿಯೇ ರೂಪುಗೊಂಡಿದ್ದ ಮಣ್ಣಿನ ಗುಡ್ಡಗಳ ಮೇಲೆ ಕೂತು ಹರಟೆಕೊಚ್ಚುತ್ತಾ ಗುಟ್ಟಾಗಿ ನಾವು ಕೆಲವರು ಗುಂಡನ್ನ ಮುಚ್ಚಿಟ್ಟುಕೊಂಡು ಕೆಲವರ ಹೊಟ್ಟೆ ಉರಿಸುತ್ತ ಬೆಳದಿಂಗಳಲ್ಲಿ ಕರಗಿ ಹೋಗಲು ಪ್ರಯತ್ನಿಸುತ್ತಿದ್ದೆವು. ಇದರ ಜೊತೆಗೆ ಸುವರ್ಣರವರು ಎಷ್ಟು ಕ್ರಿಯಾಶೀಲರಾಗಿದ್ದರೋ ಅಷ್ಟೇ ಅದ್ಭುತವಾಗಿ ಭಾವಗೀತೆಗಳನ್ನು ಹಾಡುತ್ತಿದ್ದರು. ಅವರ ಭಾವಗೀತೆಗಳ ಮಾಧುರ್ಯಕ್ಕೆ ಚಂದ್ರ ಮುಂದೆ ಚಲಿಸುತ್ತಲೇ ಇರಲಿಲ್ಲ ಸುವರ್ಣರವರನ್ನು ಪ್ರೀತಿಸುವ ರೀತಿಯಲ್ಲಿ ಚಂದ್ರ ತನ್ನ ಬೆಳಕನ್ನು ತೀವ್ರಗೊಳಿಸುತ್ತಿದ್ದ. ಬಹಳಷ್ಟು ಮಂದಿ ಸುವರ್ಣರವರ ಹಾಡಿನಿಂದ ತಮ್ಮ ವಿರಹದದಿನಗಳಿಗೆ ಹೋಗುತ್ತಿದ್ದರು. ಆ ಒಂದು ವಾರ ಸುವರ್ಣರವರು ಬೆಳದಿಂಗಳ ಬೆಡಗಿಯಾಗಿಯೇ ಇದ್ದರು. ಇಂಥ ಅದ್ಭುತ ಮನಶಾಸ್ತ್ರದ ಅಧ್ಯಾಪಕಿ ಬೆಂಗಳೂರಿನ ಆರ್.ವಿ.ಪ್ರಥಮದರ್ಜೆ ಕಾಲೇಜಿನಲ್ಲಿ ಉತ್ಸಾಹದ ಅಧ್ಯಾಪಕಿಯಾಗಿದ್ದವರು. ಈಗಲೂ ಅಲ್ಲಿಯೇ ಇದ್ದಾರೆ. ಕಳೆದ ಹತ್ತು ವರ್ಷಗಳಿಂದ ಯಾವುದೋ ಒಂದು ರೀತಿಯ ನರಗಳ ರೋಗದಿಂದ ನರಳುತ್ತಿದ್ದರೂ, ಓಡಾಡಲೂ ಸಾಧ್ಯವಾಗದಿದ್ದರೂ ತಳ್ಳುವ ಕುರ್ಚಿಯಲ್ಲಿಯೇ ನಿಷ್ಠಾವಂತ ಅಧ್ಯಾಪಕಿಯಾಗಿದ್ದಾರೆ. ಆದರೂ ಓದು ಮತ್ತು ಚಿಂತನೆಯ ಮೂಲಕ ವಿದ್ಯಾರ್ಥಿನಿಯರ ಬದುಕಿಗೆ ಜೀವ ತುಂಬುತ್ತಿದ್ದಾರೆ. ಅತ್ಯಂತ ಕರುಣಾಮಯಿ. ಎಂದಾದರೂ ಹೋದಾಗ "ಕೂತ್ಕೋ ಶೂದ್ರ, ಮಕ್ಕಳು ಹೇಗಿದ್ದಾರೆ? ಕೆ.ಸಿ.ರಾಮಮೂರ್ತಿಯವರು ಹೇಗಿದ್ದಾರೆ? ಪ್ರಸನ್ನ ಯಾವ ನಾಟಕ ಬರೆದರು ? ನಿನ್ನ 'ಕನಸಿಗೊಂದು ಕಣ್ಣು' ಮತ್ತೊಂದು ಸಂಪುಟ ಬಂತಾ? ಗಾಂಧಾರಿಯ ನಂತರ ಬರೆದ ಎರಡು ನಾಟಕಗಳನ್ನು ಯಾಕೆ ಪ್ರಕಟಿಸಲಿಲ್ಲ? ಮರುಳಸಿದ್ದಪ್ಪನವರು ನಿವೃತ್ತರಾದರಾ? ಕೊಂಡಜ್ಜಿ ಎಷ್ಟು ಚೆನ್ನಾಗಿತ್ತು ಅಲ್ಲವಾ? "ಎಂದು ಕೇಳುವುದರ ಜೊತೆಗೆ ಮತ್ತೆ ಕೊಂಡಜ್ಜಿಯ ಆ ಜಾಗಕ್ಕೆ

ಹೋಗಲಿಲ್ಲವಾ?'' ಎಂದು ಪ್ರಶ್ನಿಸುವುದರ ಮೂಲಕ ಅಲ್ಲಿಯ ನೆನಪುಗಳ ಮೂಟೆಯನ್ನು ಮುಂದೆ ಇಟ್ಟು ಬಿಡುತ್ತಿದ್ದರು. ಜೀವನೋತ್ಸಾಹದ ಮಹಿಳೆ. ಹತ್ತಾರು ಕಡೆ ಜೀವನದ ಬಾಹುಗಳನ್ನು ಚಾಚಿದ್ದವರು.

ನಾಟಕ ರಚನಾ ಶಿಬಿರದಲ್ಲಿ ಕೆ.ಎಂ.ಎಸ್.ಮತ್ತು ನಾನು ಇದ್ದೀವೆಂದೇ ದಾವಣಗೆರೆಯಿಂದ ಕಲಾವಿದ ಗೆಳೆಯರಾದ ಶಂಕರ ಪಾಟೀಲರು ತಮ್ಮ ಶ್ರೀಮತಿಯವರನ್ನು ಹಾಗೂ ಸಮಾಜವಾದಿ ಹೋರಾಟಗಾರ ಕೆ.ಜಿ.ಮಹೇಶ್ವರಪ್ಪನವರನ್ನ ಕರೆದುಕೊಂಡು ಬರುವುದರ ಜೊತೆಗೆ ರುಚಿರುಚಿಯಾದ ಜೋಳದ ರೊಟ್ಟಿ ಮತ್ತು ಎರಡು ಮೂರು ರೀತಿಯ ಪಲ್ಯಗಳನ್ನು ತಂದಿದ್ದರು. ಕೊಂಡಜ್ಜಿಯ ಕೆರೆಯ ದಂಡೆಯಲ್ಲಿ ಕೂತು ಕಲೆ, ಸಾಹಿತ್ಯ ಮತ್ತು ರಾಜಕೀಯ ಕುರಿತು ತಂದ ರೊಟ್ಟಿಯ ಜೊತೆ ಕಳೆದೆವು ಅನ್ನಿಸುತ್ತದೆ. ಶಂಕರ ಪಾಟೀಲರು ಬೆಂಗಳೂರಿಗೆ ಬಂದಾಗಲೆಲ್ಲ ದಾವಣಗೆರೆಯ ತಮ್ಮ ಕಲಾಶಾಲೆಗೆ ಕರೆಯುವುದರ ಜೊತೆಗೆ ಕೊಂಡಜ್ಜಿಗೆ ಹೋಗಿ ಬರುವುದನ್ನು ನೆನಪು ಮಾಡುತ್ತಿದ್ದರು. ಅಂಥ ವರ್ಣಮಯ ವ್ಯಕ್ತಿ ಕಳೆದ ವರ್ಷ ಸಾವಿನ ಮೊರೆ ಹೋದಾಗ, ಅದರ ಸುದ್ದಿಯನ್ನು ನನಗೆ ತಿಳಿಸಿದವರು ಕೆ.ಎಂ.ಎಸ್.ರವರು. ಕವಿ ಚೆನ್ನವೀರ ಕಣವಿಯವರ ಅಕ್ಕನ ಮಗನಾಗಿದ್ದರಿಂದ ಶಂಕರಪಾಟೀಲರು ಪ್ರೊ.ಜಿ.ಎಸ್.ಶಿವರುದ್ರಪ್ಪನವರ ಕುಟುಂಬಕ್ಕೆ ತುಂಬ ಹತ್ತಿರದವರಾಗಿದ್ದರು.

ಹೀಗೆ ಕೊಂಡಜ್ಜಿಯ ನಾಟಕ ಶಿಬಿರ ಒಂದುವಾರ ನಾಟಕದ ರಚನೆಯ ಜೊತೆಗೆ ಏನೇನೋ ನೆನಪುಗಳ ಬುತ್ತಿಯನ್ನು ದೊಡ್ಡದು ಮಾಡಿತು. ಇಂಥ ಅದ್ಭುತ ಶಿಬಿರದ ಸಮಾರೋಪವನ್ನು ಮೊದಲನೆಯ ಬಾರಿಗೆ ಭಾರತ ವರ್ಲ್ಡ್‌ಕಪ್‌ನ್ನ ಕ್ರಿಕೆಟ್‌ನಲ್ಲಿ ಗೆದ್ದಾಗ ಅದನ್ನು ಕೊನೆಯ ದಿವಸ ಸಂಭ್ರಮದಿಂದ ಆಚರಿಸಿದೆವು. ಇದನ್ನು ಬರೆಯುವ ಕಾಲಕ್ಕೆ ಐತಿಹಾಸಿಕ ಆಟ ಕರಾಚಿಯಲ್ಲಿ ನಡೆಯಿತು. ಪಾಕಿಸ್ತಾನ ಮತ್ತು ಭಾರತದಿಂದ ಹೋದ ಕ್ರೀಡಾಪ್ರೇಮಿಗಳ ಸಂಭ್ರಮದ ಮಧ್ಯೆ ಭಾರತ ಐದು ರನ್ನುಗಳ ಜಯವನ್ನು ಸಾಧಿಸಿತು. ಪಾಕಿಸ್ತಾನದ ಸುಂದರ ಹುಡುಗ ಹುಡುಗಿಯರು ಕುಣಿದು ಕುಪ್ಪಳಿಸುತ್ತಿದ್ದರು. ಪ್ರಸನ್ನರವರ ಹ್ಯಾಮ್ಲೆಟ್ ನಾಟಕದ ಅನುವಾದ ಕೃತಿಯ ಬಿಡುಗಡೆ ಇತ್ತು. ನಾನು ಹೋಗಲಾಗಲಿಲ್ಲ, ಕೆ.ಎಂ.ಎಸ್‌ರವರಂತೂ ಹೋಗಿಯೇ ಹೋಗಿರ್ತಾರೆ. ಯಾಕೆಂದರೆ ಕೆ.ಎಂ.ಎಸ್.ರವರಿಗೆ ಹ್ಯಾಮ್ಲೆಟ್‌ನಷ್ಟೇ ಪ್ರಸನ್ನರವರೂ ಮುಖ್ಯ. ಇದರ ಜೊತೆಗೆ ಬಾಬಾ ಬುಡನ್ ಗಿರಿಯ ಸೌಹಾರ್ದ ವೇದಿಕೆಗೆ ರಾಷ್ಟ್ರೀಯ ಕೋಮು ಪ್ರಶಸ್ತಿ ಬಂದಿದೆ. ಈ ವೇದಿಕೆಯಲ್ಲಿ ಕೆ.ಎಂ.ಎಸ್.ರವರ ಪಾತ್ರ ಅಪೂರ್ವವಾದದ್ದು.

## ಬಸವಣ್ಣನ ಕೂಡಲಸಂಗಮದ ಐಕ್ಯತೆಯ ಸುತ್ತ 'ಅಕ್ಕಕೇಳವ್ವ' ಧ್ವನಿ

1986ರ ಬೇಸಿಗೆಯ ದಿನಗಳು. ಬೆಂಗಳೂರಿನ ಬೇಸಿಗೆಯ ದಿನಗಳೇ ಭೀಕರವಾಗಿತ್ತು. ಇನ್ನು ಉತ್ತರ ಕರ್ನಾಟಕದ ಬಿಸಿಲು ಕೇಳಬೇಕೆ. ಬೆಂಗಳೂರಿನ ಮಂದಿಗೆ ದಿಗಿಲು ಹುಟ್ಟಿಸುವಂಥದ್ದು. ನಾವು ಒಂದಷ್ಟು ಮಂದಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಹ್ವಾನದ ಮೇರೆಗೆ ಕೂಡಲ ಸಂಗಮಕ್ಕೆ ಹೊರಟೆವು. ಅಲ್ಲಿ ಕೂಡಲಸಂಗಮದಲ್ಲಿ ಬಸವಣ್ಣನವರ ಜಯಂತೋತ್ಸವವಿತ್ತು. ಒಂದು ವಾರ ಅರ್ಥಪೂರ್ಣ ಕಾರ್ಯಕ್ರಮಗಳನ್ನು ರೂಪಿಸಿದ್ದರು. ಬೆಂಗಳೂರಿನಿಂದ ಕೆ.ಎಂ.ಎಸ್, ಡಿ.ಆರ್.ನಾಗರಾಜ್, ಪ್ರೊ.ಜಿ.ಎಸ್.ಸಿದ್ಧಲಿಂಗಯ್ಯ, ಸಾ.ಶಿ.ಮರುಳಯ್ಯ, ಪಿ.ವಿ.ನಾರಾಯಣ,

ಎನ್.ಎಂ.ಕೆ.ಸೋಗಿ ಡಾ||ಎಸ್.ಚಂದ್ರಶೇಖರ್, ಮಲ್ಲೇಪುರಂ ಜಿ.ವೆಂಕಟೇಶ್, ಎಂ.ಎನ್.ವ್ಯಾಸರಾವ್ ಇನ್ನು ಮುಂತಾದವರು ಹೊರಟಿದ್ದೆವು. ಹೊರಡುವುದಕ್ಕೆ ಎರಡು ಮೂರು ದಿನಗಳ ಮುಂಚೆಯೇ ಒಂದು ಅದ್ಭುತ ಡ್ರಿಂಕ್ಸನ್ನ ತಯಾರು ಮಾಡುವ ಮಾಸ್ಟರ್ ಪ್ಲಾನನ್ನ ಡಿ.ಆರ್.ನನಗೆ ಮತ್ತು ಕೆ.ಎಂ.ಎಸ್‌ರವರಿಗೆ ಸೂಚಿಸಿದ. ಕೆ.ಎಂ.ಎಸ್.ರವರು ಮುಸಿಮುಸಿ ನಕ್ಕು ಒಂದಷ್ಟು ದುಡ್ಡುಕೊಟ್ಟರು. ಕೊನೆಗೆ ನಾನು ಡಿ.ಆರ್. ಅದಕ್ಕೆ ಬೇಕಾದ ಏಲಕ್ಕಿ, ನಿಂಬೆಹಣ್ಣು ಎಳನೀರು ಮತ್ತು ಇದಕ್ಕಾಗಿಯೇ ಒಂದು ಹೊಸ ಮಣ್ಣಿನ ಮಡಿಕೆಯನ್ನು ಡಿ.ಆರ್.ಮತ್ತು ನಾನು ಹೋಗಿ ಬನಶಂಕರಿಯ ಬಳಿ ತಂದಿದ್ದೆವು. ಎಲ್ಲವನ್ನೂ ತಯಾರಿಮಾಡಿ ಕೊಠಡಿಯಲ್ಲಿಟ್ಟು ಬಾಗಿಲು ಮುಚ್ಚಿದ್ದೆ. ಆದರೂ ಮನೆ ತುಂಬ ಗಮಗಮವಾಸನೆ ಹರಡಿಕೊಂಡಿತ್ತು. ಅಂದು ಊರಿನಿಂದ ನನ್ನ ಅಕ್ಕಂದಿರು ಬಂದಿದ್ದರು. ಅವರೆಲ್ಲ ಏನು ಇಷ್ಟೊಂದು ಒಳ್ಳೆಯ ವಾಸನೆ ಎಂದು ಕೇಳುವಷ್ಟರಮಟ್ಟಿಗೆ ವಾಸನೆ ಹರಡಿಕೊಂಡಿತ್ತು. ಈ ರೀತಿಯ ಡ್ರಿಂಕ್ಸನ್ನ ತಯಾರುಮಾಡುವುದನ್ನ ಕಲಿಸಿದ್ದು ಚಲನಚಿತ್ರ ನಿರ್ದೇಶಕ ಕೆ.ಎಂ.ಶಂಕರಪ್ಪನವರು. ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಮಂಡ್ಯದಲ್ಲಿ ಒಂದು ಪುಸ್ತಕ ಬಿಡುಗಡೆಯ ಕಾರ್ಯಕ್ರಮಕ್ಕೆ ಆಗ ಅಲ್ಲಿ ಎಸ್.ಪಿ.ಯಾಗಿದ್ದ ಲೇಖಕ ವಿಜಯ ಸಾಸನೂರರ ಆಹ್ವಾನದ ಮೇರೆಗೆ ಹೋಗಿದ್ದೆವು. ಕಾರ್ಯಕ್ರಮದ ನಂತರ ಅಂದು ರಾತ್ರಿ ಶಂಕರಪ್ಪ ಕಾಳೇಗೌಡರು ಮತ್ತು ಡಿ.ಆರ್.ನ ಸಹಕಾರ ಪಡೆದು ತಯಾರಿಸಿದ್ದರು. ಇದಾದ ಮೇಲೆ ಕಿ.ರಂ.ರವರ ಮನೆಯಲ್ಲಿ ಸಾಹಿತ್ಯದ ಗೆಳೆಯರೆಲ್ಲ ಸೇರಿದಾಗ ಸಾಕಷ್ಟು ಬಾರಿ ತಯಾರು ಮಾಡಿದ್ದೇವೆ.ಹೊರಡುವ ಸಮಯಕ್ಕೆ ಕನ್ನಡ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಯಾಗಿದ್ದ ಚಿರಂಜೀವ್‌ಸಿಂಗ್ ಮತ್ತು ನಿರ್ದೇಶಕ ಚಂದ್ರಹಾಸಗುಪ್ತರವರು ನಮಗಾಗಿ ವ್ಯವಸ್ಥೆಮಾಡಿದ್ದ ಬಸ್‌ನಲ್ಲಿ ಕಳಸಿಕೊಟ್ಟರು. ಬಸ್ ಹೊರಟಿತು. ಸ್ವಲ್ಪದೂರ ಹೋದಮೇಲೆ ಪ್ರೊ||ಜಿ.ಎಸ್.ಸಿದ್ಧಲಿಂಗಯ್ಯನವರು "ಏನ್ರಯ್ಯ ಇಷ್ಟೊಂದು ಸುವಾಸನೆ ಬಸ್ಸೆಲ್ಲ ಹರಡಿಕೊಂಡಿದೆ" ಎಂದು ಕೇಳಿದಾಗ, ಡಿ.ಆರ್. "ನಿಮ್ಮ ಕುತೂಹಲ ಮತ್ತು ತಹತಹ ಇನ್ನೂ ಜಾಸ್ತಿಯಾಗುವ ತನಕ ಅದರ ಗುಟ್ಟನ್ನು ಬಿಟ್ಟು ಕೊಡುವುದಿಲ್ಲ ಎಂದಾಗ" ಸಿದ್ಧಲಿಂಗಯ್ಯನವರು ಮತ್ತೆ ಮತ್ತೆ ಕೇಳುತ್ತ "ನಮ್ಮ ಸಂಯಮವನ್ನು ಯಾಕೆ ಪರೀಕ್ಷೆ ಮಾಡ್ತೀರಿ?" ಎಂದು ನಕ್ಕು ಕೇಳಿದ್ದರು, ಮರುಳಸಿದ್ದಪ್ಪನವರು ನಗುತ್ತ "ಸಂಯಮವನ್ನು ಪರೀಕ್ಷಿಸುವುದಕ್ಕಾಗಿಯೇ ಸಿದ್ಧಪಡಿಸಿರುವ ಪಾನೀಯ," ಎಂದರು. ಅದಕ್ಕೆ ಡಿ.ಆರ್."ಸಾಹಿತಿಗಳು ಅದ್ಭುತವಾದುದರ ಬಗ್ಗೆ ಅಗಾಧವಾದ ಸಂಯಮ ಬೆಳೆಸಿಕೊಳ್ಳದಿದ್ದರೆ ಗಟ್ಟಿಸಾಹಿತ್ಯ ಸೃಷ್ಟಿಯಾಗುವುದಿಲ್ಲ" ಎಂದು ವಿಮರ್ಶೆಯ ಮಾತನ್ನು ಸೇರಿಸಿದ್ದ. ಕೊನೆಗೆ ಸುರಾಪಾನ ಚೆನ್ನಾಗಿದೆ ಎಂದು ವಿಮರ್ಶೆಯ ಮಾತನ್ನು ಸೇರಿಸಿದ್ದ, ಬಾಗಲಕೋಟೆಗೆ ತಲುಪುವ ಸಮಯಕ್ಕೆ ಮುಗಿಸಿದ್ದರು.

ನಮಗೆಲ್ಲ ಬಾಗಲಕೋಟೆಯಲ್ಲಿ ಉಳಿಯಲು ವ್ಯವಸ್ಥೆಮಾಡಿದ್ದರು. ದಿನಾ ಅಲ್ಲಿಂದ ಕೂಡಲಸಂಗಮಕ್ಕೆ ಹೋಗಬೇಕಾಗಿತ್ತು. ಬೆಳಿಗ್ಗೆಯಿಂದ ಸಂಜೆಯವರೆವಿಗೆ ವಿಚಾರ ಸಂಕಿರಣಗಳು. ಬಸವಣ್ಣನವರು ಐಕ್ಯರಾದ ಸ್ಥಳವನ್ನು ನೋಡಲು ಕೆ.ಎಂ.ಎಸ್., ಡಿ.ಆರ್.ಮತ್ತು ನಾನು ಹೋದೆವು. ಮುಳುಗಡೆಯಾಗುತ್ತಿದ್ದುದರಿಂದ ಬಾವಿಯ ರೀತಿಯಲ್ಲಿ ಕಟ್ಟಡವನ್ನು ಕಟ್ಟಿ ಅಲ್ಲಿ ಅದನ್ನು ರಕ್ಷಣೆ ಮಾಡಲು ಹೊರಟಿದ್ದರು. ಆದರೂ ಅದನ್ನು ನೋಡಿದಾಕ್ಷಣ ಎದೆ ದಸಕ್ಕೆಂದಿತು. ಎಂಟುನೂರು ವರ್ಷಗಳ ಹಿಂದೆ ಬಸವಣ್ಣನವರು "ಜೀವನವೆಂದರೆ ಇಷ್ಟೇ ಎಂದು ಎರಡು

ನದಿಗಳು ಕೂಡುವ ಜಾಗದಲ್ಲಿ ಮನಸ್ಸನ್ನು ಗಟ್ಟಿಮಾಡಿಕೊಂಡು ಕೂರಬೇಕಾದರೆ ಅವರು ಯಾವ ರೀತಿಯ ಮನಸ್ಥಿತಿಯನ್ನು ಬೆಳಸಿಕೊಂಡಿರಬಹುದು ಎಂದು ಕೆ.ಎಂ.ಎಸ್‌ರವರಲ್ಲಿ ಪ್ರಸ್ತಾಪಿಸಿದೆ. ಡಿ.ಆರ್. "ಶೂದ್ರನ ಕನಸಿಗೊಂದು ಕಣ್ಣು ನೋಡಿದರೆ ನನಗೂ ಬೇಸರವಾಗುತ್ತದೆ" ಎಂದ. ಕೆ.ಎಂ.ಎಸ್. ಧ್ವನಿ ಸೇರಿಸಿದರು. ನಾವು ಹೊರಗೆ ಬಂದಾಕ್ಷಣ ಬೇರೆಯವರೆಲ್ಲ ನೋಡಲು ಬಂದರು. ಅಂದು ಸಂಜೆಯವರೆವಿಗೆ ನಾನು ಪೆಚ್ಚಾಗಿಯೇ ಇದ್ದೆ. ಬಸವರಾಜಗುರು, ಸಿದ್ಧರಾಮ ಜಂಬಲದಿನ್ನಿ, ಗಂಗೂಬಾಯಿ ಹಾನಗಲ್ ಮತ್ತು ಮಲ್ಲಿಕಾರ್ಜುನ ಮನ್ಸೂರ್ ಮುಂತಾದವರ ಗಾಯನ ಪ್ರತಿದಿನ ಸಂಜೆ ಇತ್ತು. ಸಿದ್ಧರಾಮ ಜಂಬಲದಿನ್ನಿಯವರಂತೂ ಅದ್ಭುತ ಕಲಾವಿದರಾದರೂ ಮಧ್ಯೆ ಮಧ್ಯೆ ಕೆಮ್ಮು ಬರುತ್ತಿದ್ದರೂ ಹಾಡುತ್ತಿದ್ದರು. "ನಮ್ಮ ವಚನಗಾಯನಕ್ಕೆ ಅರ್ಥವಂತಿಕೆಯನ್ನು ತಂದುಕೊಟ್ಟ ಮಹಾನುಭಾವ" ಎಂದು ಕೆ.ಎಂ.ಎಸ್.ದನಿಗೂಡಿಸಿದರು. ಮಾರನೆಯದಿನ ಗಂಗೂಬಾಯಿ ಹಾನಗಲ್ ಮತ್ತು ಅವರ ಮಗಳು ಕೃಷ್ಣಹಾನಗಲ್‌ರವರ ಗಾಯನವಿತ್ತು. ಅಂದು ಕೆಲವು ವೀರಶೈವ ಮುಖಂಡರು ಗಂಗೂಬಾಯಿಯವರು ಬಸವಣ್ಣನವರ ವಚನಗಳನ್ನು ಹಾಡಲೇಬೇಕು ಎಂದು ಒತ್ತಾಯ ತಂದರು. ಗಂಗೂಬಾಯಿಯವರು "ನಾನು ಶುದ್ಧ ಶಾಸ್ತ್ರೀಯ ಪರಂಪರೆಯನ್ನುಳಿಸಿಕೊಂಡು ಬಂದವಳು. ನಾನು ಎಂದೂ ವಚನಗಳನ್ನು ಅಥವಾ ಕೀರ್ತನೆಗಳನ್ನ ಹಾಡಿದವಳಲ್ಲ. ಬೇಕಾದರೆ ನನ್ನ ಮಗಳು ಹಾಡುವಳು" ಎಂದು ವಿನಯದಿಂದ ಕೇಳಿಕೊಂಡರೂ ಕೆಲವರು ಅಸಭ್ಯತನದಿಂದ ವರ್ತಿಸಿದರು. ಆಗ ಗಂಗೂಬಾಯಿಯವರು ಕಣ್ಣಲ್ಲಿ ನೀರು ತುಂಬಿಕೊಂಡು ಎದ್ದು ಒಳಗಡೆ ಹೋಗಿಕೂತರು. ಇದು ಗೊತ್ತಾಗಿ ಕೆ.ಎಂ.ಎಸ್‌ರವರು ತುಂಬ ಸಿಟ್ಟಿಗೆದ್ದಿದ್ದರು. "ಇವರು ಎಂಥ ಮೂರ್ಖರು, ಅಂಥ ದೊಡ್ಡಕಲಾವಿದೆಗೆ ಹೀಗೆ ಅವಮಾನ ಮಾಡುವುದೇ" ಎಂದು ಚೆನ್ನವೀರ ಕಣವಿಯವರಲ್ಲಿ ಪ್ರಸ್ತಾಪಿಸಿದರು. ಆಗ ಅವರೂ ಬೇಸರಗೊಂಡಿದ್ದರು. ಕೊನೆಗೆ ನಾವು ಒಂದಿಷ್ಟು ಮಂದಿ ಚೆನ್ನವೀರ ಕಣವಿ ಮತ್ತು ಕೆ.ಎಂ.ಎಸ್‌ರವರ ಮಾರ್ಗದರ್ಶನದಲ್ಲಿ ಗಂಗೂಬಾಯಿಯವರನ್ನು ಭೇಟಿಯಾದೆವು. ವಿನಂತಿಸಿಕೊಂಡೆವು. ನಮ್ರತೆಯಿಂದ ಬಂದು ಹಾಡಿದರು. ಮಾರನೆಯದಿನ ಮನ್ಸೂರರ ಹಾಡಿತ್ತು. ಅಂದೇ ಸಮಾರೋಪ ಸಮಾರಂಭ. ಗದುಗಿನ ತೋಂಟದಾರ್ಯ ಸ್ವಾಮಿಗಳು ತಮ್ಮ ಸಮಾರೋಪ ಭಾಷಣದಲ್ಲಿ ಇದನ್ನೇ ವಿಷಯವಾಗಿ ತೆಗೆದುಕೊಂಡರು, "ಆಕೆ ದೊಡ್ಡಕಲಾವಿದೆ. ಬಸವಣ್ಣನವರ ವ್ಯಕ್ತಿತ್ವವನ್ನು ಹೊಂದಿರುವಂಥವರು, 'ನಾನು ಒಂದು ಶಾಸ್ತ್ರಕ್ಕೆ ಕಟ್ಟುಪಾಡಿಗೆ ಬದ್ಧಳಾಗಿ ಹಾಡುತ್ತ ಬಂದಿದ್ದೇನೆ' ಎಂದು ಹೇಳಿದರೆ ನಾವು ಸಂತೋಷಪಡಬೇಕು. ಶಾಸ್ತ್ರೀಯ ಸಂಗೀತವನ್ನು ಸುಗಮಸಂಗೀತದ ದೃಷ್ಟಿಯಿಂದ ನೋಡಕೂಡದು. ಚೆನ್ನಾಗಿ ಬರೆಯುವುದು, ಚೆನ್ನಾಗಿ ಬದುಕುವುದು, ಚೆನ್ನಾಗಿ ಹಾಡುವುದು ಎಂದರೆ ಬಸವಣ್ಣನವರ ತತ್ವಗಳನ್ನು ಕಾಪಾಡಿದಂತೆ ಗೌರವಿಸಿದಂತೆ. ಈ ರೀತಿ ಅವಮಾನ ಮಾಡುವ ಮನಸ್ಥಿತಿ ವೀರಶೈವರಲ್ಲಿ ಇದ್ದರೆ; ನಾನು ಒಬ್ಬ ಬಸವಣ್ಣನ ಅನುಯಾಯಿಯಾಗಿ ಹೊರಗುಳಿಯಬೇಕು ಅನ್ನಿಸುತ್ತದೆ. ಬೇರೆ ಮತಗಳನ್ನು ಬೇರೆಯವರ ಅಭಿಪ್ರಾಯಗಳನ್ನು ನಾವು ವೀರಶೈವರಾಗಿ ಗೌರವಿಸುವುದನ್ನು ಕಲಿಯಬೇಕು" ಎಂದು ತೀವ್ರವಾಗಿ ಮಾತಾಡಿದಾಗ ನಾವು ಮೂಕ ವಿಸ್ಮಯರಾಗಿ ಕೇಳುತ್ತಿದ್ದೆವು. ಕೆ.ಎಂ.ಎಸ್‌ರವರು "ನಮ್ಮ ಸ್ವಾಮಿಗಳು ಇಂಥ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ಮಠಗಳಿಗೆ ಒಂದು ರೀತಿಯ ಸಾಂಸ್ಕೃತಿಕ ಆಯಾಮ ಬರುತ್ತದೆ" ಎಂದು ಅಂದು ಸಂಜೆ ಎಲ್ಲರ ಮುಂದೆ ತಮ್ಮ ಅಭಿಪ್ರಾಯವನ್ನು

ವ್ಯಕ್ತ ಪಡಿಸಿದ್ದರು. ಅದೇ ದಿನ ಸಂಜೆ ಮಲ್ಲಿಕಾರ್ಜುನ ಮನ್ಸೂರರ ಹಾಡುಗಾರಿಕೆ ಇತ್ತು. ಅದೊಂದು ಅದ್ಭುತ ಅನುಭವ. ರಾತ್ರಿ ಊಟವಾದ ಮೇಲೆ ಒಂಬತ್ತೂವರೆಯ ಸಮಯದಲ್ಲಿ ನಾವೆಲ್ಲ ಹೊರಗೆ ಬಂದಾಗ ಛತ್ರದ ಕಾಂಪೌಂಡಿನಲ್ಲಿ ಬೆಳದಿಂಗಳ ಬೆಳಕು ಹಾಲು ಚೆಲ್ಲಿದಂತೆ ಇತ್ತು. ಅದೇ ಬಯಲಲ್ಲಿ ನೆಲದ ಮೇಲೆ ಮನ್ಸೂರರ ಕುಟುಂಬ ಕೂತಿತ್ತು. ಕೆ.ಎಂ.ಎಸ್‌ರವರು ಅವರನ್ನು ಹೋಗಿ ಮಾತಾಡಿಸುವ ಉತ್ಸಾಹ ತೋರಿದರು. ಹೋಗಿ ಕೇಳಿದೆ. ''ಅಯ್ಯೋ ಬನ್ನಿಯಪ್ಪ'' ಎಂದು ಗುಂಪಾಗಿ ಕೂತವರು, ಹಿಂದೆ ಸರಿದು ವೃತ್ತಾಕಾರವಾಗಿ ನಾವೂ ಕೂರಲು ಅವಕಾಶ ಮಾಡಿಕೊಟ್ಟರು. ಅವರ ಮಗಳು ನೀಲಾಪಾಟೀಲ್ ಮತ್ತು ಮಗ ರಾಜಶೇಖರ ಮನ್ಸೂರ್ ಹಾಗೂ ಇತರೆ ಕುಟುಂಬದ ಸದಸ್ಯರಿದ್ದರು. ನಮ್ಮ ಜೊತೆಯಲ್ಲಿ ಡಿ.ಆರ್.ನಾಗರಾಜ್, ಇತಿಹಾಸಕಾರ ಎಸ್.ಚಂದ್ರಶೇಖರ್, ಪ್ರೊ||ಸಿದ್ಧಲಿಂಗಯ್ಯ ಹಾಗೂ ಸಾ.ಶಿ.ಮರುಳಯ್ಯನವರು ಇದ್ದರು ಅನ್ನಿಸುತ್ತದೆ. ಮನ್ಸೂರರು ತಮ್ಮ ಕುಟುಂಬದ ಸದಸ್ಯರನ್ನು ಪರಿಚಯಮಾಡಿಕೊಟ್ಟರು. ಹೀಗೆ ಮಾತಿನ ಮಧ್ಯೆ ಹಿಂದಿನ ದಿವಸ ಗಂಗೂಬಾಯಿ ಹಾನಗಲ್‌ರವರ ಘಟನೆಯನ್ನು ಪ್ರಸ್ತಾಪಿಸಿದಾಗ : ''ಅದು ತಪ್ಪು. ಆಕೆಯನ್ನು ಹಾಗೆ ಅವಮಾನಪಡಿಸಬಾರದಾಗಿತ್ತು. ದೊಡ್ಡ ಕಲಾವಿದೆ'' ಎಂದು ಹೇಳುವಾಗ ಬೆಂಗಳೂರಿನ ಒಂದು ಕಾರ್ಯಕ್ರಮದಲ್ಲಿ ಗಂಗೂಬಾಯಿ ಹಾನಗಲ್‌ರವರು ಹಾಡುತ್ತಿದ್ದರೆ ಕೆನರಾಬ್ಯಾಂಕಿನ ಸಭಾಂಗಣದಲ್ಲಿ ಯಾರಿಗೂ ಗೊತ್ತಾಗದಂತೆ ಸಭಿಕರ ಮಧ್ಯೆ ಮನ್ಸೂರರು ಬಂದು ಕೂತು ಹಾಡು ಕೇಳಿದ ಘಟನೆ ನೆನಪಿಗೆ ಬಂತು.

ಮನ್ಸೂರರು ಎಷ್ಟು ಆತ್ಮೀಯವಾಗಿ ಹರಟೆಯಲ್ಲಿ ಪುಟ್ಟ ಹುಡುಗನಂತೆ ಭಾಗಿಯಾದರು. ನಮ್ಮ ವಿನಂತಿಯ ಮೇರೆಗೆ 'ಅಕ್ಕ ಕೇಳವ್ವ' ಹಾಡಿದರು. ಮಗಳ ಕೈಯಲ್ಲಿ ಒಂದು ವಚನವನ್ನು ಹಾಡಿಸಿದರು. ಹೀಗೆ ಹಾಡುತ್ತಿದ್ದರೆ ಪಿ.ಕಾಳಿಂಗರಾವ್ ಅವರ ನೆನಪು ಬಂತು. ಮನ್ಸೂರರಿಗೆ ಕಾಳಿದಾಸ ಪ್ರಶಸ್ತಿ ಬಂದಾಗ ರವೀಂದ್ರ ಕಲಾಕ್ಷೇತ್ರದಲ್ಲಿ ಮನ್ಸೂರರಿಗೆ ಅಭಿನಂದನಾ ಕಾರ್ಯಕ್ರಮವಿತ್ತು. ಅಂದು ಕೆ.ಎಂ.ಎಸ್‌ರವರೂ ಇದ್ದರು. ಜನ ಕಿಕ್ಕಿರಿದು ತುಂಬಿದ್ದರು. ಮನ್ಸೂರರು ಹಾಡುತ್ತಿದ್ದರೆ ವೇದಿಕೆಯ ಬಲಗಡೆ ಸ್ಕ್ರೀನ್‌ನ ಪಕ್ಕದಲ್ಲಿ ಹಾಡುಗಾರಿಕೆಯನ್ನು ಭಾವುಕತೆಯಿಂದ ಸ್ವೀಕರಿಸಿ ಅಳುವಿನ ಭಾವನೆಯಲ್ಲಿ ನಿಂತಿದ್ದರು ಕಾಳಿಂಗರಾವ್ ಅವರು. ಇದು ಗೊತ್ತಾಗಿ ಮನ್ಸೂರರೇ ಎದ್ದು ಹೋಗಿ ಕಾಳಿಂಗರಾವ್ ಅವರನ್ನು ವೇದಿಕೆಯ ಮಧ್ಯಕ್ಕೆ ಕರೆ ತಂದು ಅಪ್ಪಿಕೊಂಡು ಸಂತೋಷ ವ್ಯಕ್ತಪಡಿಸಿದ್ದರು. ಆಗ ಮನ್ಸೂರರ ಗೌರವಾರ್ಥ ತಂದ ಸ್ಮರಣ ಸಂಚಿಕೆಯಲ್ಲಿ ಮಗಳು ನೀಲಾಪಾಟೀಲರು ತಂದೆಯ ಬಗ್ಗೆ ತುಂಬ ಚೆನ್ನಾಗಿ ಬರೆದ ಲೇಖನವಿತ್ತು. ಅದನ್ನು 'ಶೂದ್ರ' ದಲ್ಲಿ ಮರುಮುದ್ರಣಮಾಡಿದ ವಿಷಯ ತಿಳಿಸಿದೆ.

ನಾವೆಲ್ಲ ಮನ್ಸೂರರನ್ನು ಬೀಳ್ಕೊಟ್ಟು ಎದ್ದೇಳುವಾಗ ಹತ್ತುಮುಕ್ಕಾಲಾಗಿತ್ತು. ಕೊಠಡಿ ತಲುಪುವ ವರೆವಿಗೂ ಕೆ.ಎಂ.ಎಸ್. ಹಾಗೂ ಡಿ.ಆರ್.ಮನ್ಸೂರರ ವ್ಯಕ್ತಿತ್ವದ ಗುಣಗಾನ ಮಾಡುತ್ತ ಹೊರಟಿದ್ದರು. ''ಹೋಗಲಿ ಬಿಡಿ ಸಮಾರಂಭದ ಸಮಾರೋಪವನ್ನು ಶುಭರಾತ್ರಿಯಲ್ಲಿ ಕಳೆದೆವು'' ಎಂದು ಸಂತೋಷದಿಂದ ದನಿಗೂಡಿಸಿದರು ಕೆ.ಎಂ.ಎಸ್.ರವರು.

ಮಾರನೆಯ ದಿನ ನಾವೆಲ್ಲ ಬೆಂಗಳೂರಿಗೆ ವಾಪಸ್ಸು ಹೊರಡಬೇಕಾಗಿತ್ತು. ಬೆಳಿಗ್ಗೆ ಆರುಗಂಟೆಗೆ ಬಸವಂತ ಎಂಬ ಮಸಾಜ್ ಮಾಡುವ ಮಾಟಗಾರ ಬಂದ. ಮಲ್ಲೇಪುರಂ ಒತ್ತಾಯಕ್ಕೆ ಒಪ್ಪಿಕೊಂಡೆ

ಅವನು ಏನೇನೋ ಕಥೆ ಹೇಳುತ್ತ ಮಸಾಜ್ ಮಾಡತೊಡಗಿದ. ಅವನ ಮಾತಿಗೆ ಬೆರಗಾಗಿ ಹೋಗಿದ್ದೆ. ತಲೆ ಮತ್ತು ಹಣೆಯನ್ನು ಚೆನ್ನಾಗಿ ಚಚ್ಚಿದ್ದ. ಎಣ್ಣೆ ಹಾಕಿ ತಿಕ್ಕಿದ್ದ. ಕೊನೆಗೆ ಅವನಿಗೆ ಒಂದಷ್ಟು ಕಾಸುಕೊಟ್ಟು ಸ್ನಾನ ಮಾಡಿದೆ. ರೆಸ್ಟ್ ತೆಗೆದುಕೊಂಡಿದ್ದರೆ ಚೆನ್ನಾಗಿತ್ತು. ಡಿ.ಆರ್. "ಶೂದ್ರ ನೀನು ಇಲ್ಲಿಯೇ ಇರಬೇಕಾಗುತ್ತೆ" ಎಂದ. ಸ್ನಾನ ಮುಗಿಸಿದೆ. ಹೊರಡುವಾಗ ತಲೆನೋವು ಜಾಸ್ತಿಯಾಯಿತು. ಕೆ.ಎಂ.ಎಸ್.ನಗುತ್ತ ಮಾತ್ರೆಯೊಂದು ಕೊಟ್ಟರು. ನೋವು ಮಾಯವಾಯಿತು.ಆಗ ಪ್ರೊ.ಕಲುಬುರ್ಗಿಯವರು ಬಂದು "ಬಸವಣ್ಣನವರ ಹುಟ್ಟಿದ ಸ್ಥಳ ಮತ್ತು ಇತರೇ ಬಸವಣ್ಣನವರಿಗೆ ಸಂಬಂಧಿಸಿದ ಸ್ಥಳಗಳಿಗೆ ಹೋಗಿ ಬರೋಣ, ನಿಮ್ಮ ಅಭಿಪ್ರಾಯವೇನು?" ಎಂದು ಕೇಳಿದಾಗ ಕೆಲವರು ತಕ್ಷಣ ಬೆಂಗಳೂರಿಗೆ ವಾಪಸ್ಸು ಹೋಗುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಆಗ ಕೆ.ಎಂ.ಎಸ್‌ರವರು "ಹೇಗಿದ್ದರೂ ಬಸವಣ್ಣನವರ ಕಾರ್ಯಕ್ರಮಕ್ಕೆ ಬಂದಿರುವುದು. ಅವರ ಊರನ್ನು ಹಾಗೂ ಅವರಿಗೆ ಸಂಬಂಧಿಸಿದ ಸ್ಥಳವನ್ನು ನೋಡೋಣ. ಕಲಬುರ್ಗಿಯವರು ಎಲ್ಲೆಲ್ಲಿಗೆ ಕರೆದುಕೊಂಡು ಹೋಗ್ತಾರೋ ಕರೆದುಕೊಂಡು ಹೋಗಲಿ" ಎಂದು ಹೇಳಿದರು. ಎಲ್ಲರೂ ಗಪ್‌ಚಿಪ್ ಆದರು.

ನಾವೆಲ್ಲ ತಿಂಡಿತಿಂದು ಹತ್ತೂವರೆಗೆ ಬಿಟ್ಟೆವು. ಕಲಬುರ್ಗಿಯವರು ಉತ್ಸಾಹದಿಂದ ಏನೇನೋ ಕಥೆಗಳನ್ನು ಹೇಳುತ್ತಿದ್ದರು. ನಾವು ಬಾಗೇವಾಡಿಯನ್ನು ತಲುಪಿದಾಗ ಮಧ್ಯಾಹ್ನ ಒಂದು ಗಂಟೆಯಾಗಿತ್ತು. ಬಸವಣ್ಣನವರ ಮನೆಯೆಂದು ಕರೆದುಕೊಂಡು ಹೋಗಿ ಕಲಬುರ್ಗಿಯವರು ತೋರಿಸಿದರು. ತುಂಬ ಹಳೆಯದಾದ ಮನೆ. ಅಲ್ಲಿ ಯಾರೋ ಬ್ರಾಹ್ಮಣರು ವಾಸಿಸುತ್ತಿದ್ದರು. ನಾವೆಲ್ಲ ಹೋಗಿ ವಿಚಾರಿಸತೊಡಗಿದಾಗ ಸ್ವಲ್ಪ ಅಸಹನೆಯಿಂದಲೇ ಪ್ರತಿಕ್ರಿಯಿಸಿದರು. ಕೆಲವರು ಅದಕ್ಕೆ ಸಿಟ್ಟು ಮಾಡಿಕೊಂಡಾಗ ಕೆ.ಎಂ.ಎಸ್‌ರವರು ಸ್ವಲ್ಪ ಉಗ್ರರಾಗಿಯೇ "ಅರ್ರೀ ಅವರನ್ನು ನಾವು ಮನುಷ್ಯತ್ವದಿಂದಲೇ ನೋಡಬೇಕಾಗಿದೆ. ಪ್ರತಿದಿನ ಯಾರ್‍ಯಾರೋ ಬಂದು ಏನೇನೋ ಕಣಿ ಕೇಳುವಾಗ ಅವರ ಸಂಯಮದ ಬಗ್ಗೆ ನಮಗೂ ಗೌರವವಿರಬೇಕು. ಅವರಿಗೂ ಒಂದು ರೀತಿಯ ವೈಯುಕ್ತಿಕ ಬದುಕು ಇದೆ ಅಲ್ಲವೇ?" ಎಂದಾಗ ಕೆ.ಎಂ.ಎಸ್.ರವರ ಬಗ್ಗೆ ಎಲ್ಲಿಲ್ಲದ ಗೌರವ ಮೂಡತೊಡಗಿತು.

ಅಂತೂ ಒಂದು ಅಪರೂಪದ ಕಾರ್ಯಕ್ರಮದಲ್ಲಿ ಭಾಗವಹಿಸಿ ಬೆಂಗಳೂರಿಗೆ ತಲುಪಿದ್ದೆವು. ವಾಪಸ್ಸು ಬರುವಾಗ ಹಂಪಿಯಲ್ಲಿ ಒಂದೆರಡು ಗಂಟೆ ಸುತ್ತಾಡಿದ್ದೆವು. ಇದನ್ನು ಮರೆತಿದ್ದೆ. ಕವಿಮಿತ್ರ ಎಂ.ಎನ್. ವ್ಯಾಸರಾವ್, ಪುತಿನ ಶತಮಾನ ಸ್ಮರಣೆ ಕಾರ್ಯಕ್ರಮದಲ್ಲಿ ನೆನಪು ಮಾಡಿದ. ಎಂದಾದರೂ ಚಿರಂಜೀವಿಸಿಂಗ್‌ರವರಿಗೆ ಮತ್ತು ಚಂದ್ರಹಾಸಗುಪ್ತರವರಿಗೆ ಕೃತಜ್ಞತೆಗಳನ್ನು ಸೂಚಿಸಿ ಬರೋಣ" ಎಂದರು ಕೆ.ಎಂ.ಎಸ್. ರವರು. ಆಗಲಿ ಎಂದು ಕೊಂಡವನು ಹೋಗಲೇ ಇಲ್ಲ.

## ಆ ರಾತ್ರಿ ಹೊತ್ತ ಬದಲಾವಣೆಯ ಕನಸು

ರಾತ್ರಿ ಹನ್ನೆರಡು ಗಂಟೆಯಾದರೂ ಜನ ಮಹಾತ್ಮ ಗಾಂಧಿರಸ್ತೆಯ ಪ್ರಜಾವಾಣಿ ಕಛೇರಿಯ ಮುಂದೆ ಹಾಗೂ ಪ್ರೆಸ್ ಕ್ಲಬ್‌ನ ಬಳಿ ಕಿಕ್ಕಿರಿದು ತುಂಬಿದ್ದರು. ಪ್ರತಿಕ್ಷಣದ ಚುನಾವಣೆಯ ಫಲಿತಾಂಶ ಕಾಂಗ್ರೆಸ್‌ಗೆ ವಿರುದ್ಧವಾಗಿತ್ತು. ಮೊದಲನೆಯ ಬಾರಿಗೆ ಕೇಂದ್ರದಲ್ಲಿ ಕಾಂಗ್ರೆಸ್ಸೇತರ ಸರ್ಕಾರವೊಂದು

ಅಧಿಕಾರಕ್ಕೆ ಬರಲು ಫಲಿತಾಂಶದಿಂದ ದಾಪುಗಾಲಾಕಿತ್ತು. ಇಂದಿರಾಗಾಂಧಿಯ ಜೊತೆ ಇದ್ದವರೆಲ್ಲಿ ಹೀನಾಯವಾಗಿ ಸೋಲನುಭವಿಸಿದ್ದರು. ಪ್ರಜಾಪ್ರಭುತ್ವದಲ್ಲಿ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡರೆ ಜನಾಭಿಪ್ರಾಯ ಎಷ್ಟು ತೀವ್ರವಾಗಿ ಬದಲಾಗುತ್ತದೆ ಎಂಬುದಕ್ಕೆ ತುರ್ತುಪರಿಸ್ಥಿತಿಯ ಪರಿಣಾಮಗಳೇ ಸಾಕ್ಷಿ. ಇತಿಹಾಸದಲ್ಲಿ ಯಾವುದೇ ನಿರಂಕುಶ ಪ್ರಭುತ್ವವೂ ಜನತೆಯ ಮನಸ್ಸನ್ನು ಗೆದ್ದಿಲ್ಲ. ಗೆದ್ದಿರುವುದು ಯಾರು ಪ್ರಾಮಾಣಿಕವಾಗಿ ಅಧಿಕಾರ ನಡೆಸಿದ್ದಾರೋ ಅವರು ಮಾತ್ರ. ಮತಾಂಧರಾಗಲಿ. ಅಥವಾ ಯಾರೇ ಫ್ಯಾಸಿಸ್ಟರಾಗಲಿ ತಾತ್ಕಾಲಿಕವಾಗಿ ಅಧಿಕಾರವನ್ನು ಅನುಭವಿಸಿದರೂ ಕಟ್ಟಕಡೆಗೆ ಗೆಲುವು ಎನ್ನುವುದು ಇರುವುದಿಲ್ಲ. ಇತಿಹಾಸ ಏನೇನೋ ಜೀರ್ಣಿಸಿಕೊಂಡಿದೆಯಲ್ಲವೆ?

ಇಂಥ ಚುನಾವಣೆ ಫಲಿತಾಂಶದ ದಿನ ಲಂಕೇಶ್‌ರವರು ಮತ್ತು ನಾನು ಕೆ.ಎಂ.ಎಸ್‌ರವರಿಗಾಗಿ ಹುಡುಕಾಡಿದೆವು. ತಕ್ಷಣ ಅವರು ಹನುಮಂತನಗರದ ಮನೆಯಲ್ಲಿ ಸಿಗಲಿಲ್ಲ. ಕೊನೆಗೆ ನಾನು ಮತ್ತು ಲಂಕೇಶ್‌ರವರೇ ಒಂದು ಗಂಟೆಯವರೆವಿಗೂ ಎಂ.ಜಿ.ರಸ್ತೆಯ ಕಡೆ ಸುತ್ತಾಡಿದ್ದವು. ಲಂಕೇಶ್‌ರವರಂತೂ ಒಂದು ರೀತಿಯ ಥ್ರಿಲ್ಲಿಂಗ್‌ನಲಿದ್ದರು. ಸುತ್ತಾಡಿಕೊಂಡು ಹನ್ನೆರಡುವರೆ ಸಮಯಕ್ಕೆ ಕೋಶಿಸ್ ಹೋಟೆಲ್‌ಗೆ ಬಂದೆವು. ಯಾರ್‍ಯಾರೋ ಪರಿಚಯದವರೆಲ್ಲ ಬಿಯರ್ ಕುಡಿಯುತ್ತ ಸಂತೋಷವನ್ನು ಸೆಲಿಬ್ರೇಟ್ ಮಾಡಿಕೊಳ್ಳುತ್ತಿದ್ದರು. ಕೋಶಿಸ್ ಮುಂದೆ ನನಗೆ ಪ್ರಿಯ ಆಟಗಾರರಾದ ಜಿ.ಆರ್.ವಿಶ್ವನಾಥ್ ಸಿಕ್ಕಿದ್ದರು. ಅವರೂ ಸಹ ಸೆಲಿಬ್ರೇಟ್ ಮಾಡಿರಬೇಕು. ಔಟ್ ಆದ ಮೂಡಿನಲ್ಲೇ ಇದ್ದರು. ಮತಾಡಿಸಿ ಗೆಳೆಯ ಬಿ.ಆರ್.ಲಕ್ಷ್ಮಣರಾವ್ ಅವರ ಕವನವನ್ನು ನೆನಪು ಮಾಡಿದೆ. "ಹೌದಾ ನನ್ನ ಬಗ್ಗೆ ಆ ರೀತಿ ಬರೆದಿದ್ದಾರಾ?" ಎಂದು ಉದ್ಗಾರ ಕೇಳಿ ಗಾಂಧಿಬಜಾರಿನ ಲಂಕೇಶ್‌ರವರ ಮನೆಗೆ ಬಂದಿದ್ದೆವು. ಅಂದು ಅಲ್ಲಿಯೇ ಮಲಗಿಕೊಂಡೆ. ಆಗ ಇನ್ನೂ ಪತ್ರಿಕೆ ಪ್ರಾರಂಭವಾಗಿರಲಿಲ್ಲ. ಲಂಕೇಶ್‌ರವರು ಹೊರಗಡೆ ವರಾಂಡದಲ್ಲಿ ಸೋಫಾ ಮೇಲೆ ಮಲಗಿದರು. "ಸರ್, ಹೋಗಿ ಒಳಗೆ ಮಲಗಿ" ಎಂದು ಹೇಳಿದರೆ ಕೇಳಲಿಲ್ಲ. ನನಗೆ ಅವರು ಒಳಗೆ ಮಲಗಿದ್ದರೆ ಸೋಫಾಸಿಗುತ್ತಿತ್ತು. ಅದಕ್ಕಿಂತ ಮಿಗಿಲಾಗಿ ರಾತ್ರಿಯೆಲ್ಲ ಲಂಕೇಶ್‌ರವರ ಭೀಕರ ಗೊರಕೆಯ ಜೊತೆ ಹೋರಾಡಬೇಕಾಗಿತ್ತು. ಇರಲಿ ಹೋರಾಟ ನಡೆಯಿತು.

ಮೂರನೆಯ ದಿನ ಎಲ್ಲ ಪತ್ರಿಕೆಗಳಲ್ಲಿ ಕಾಂಗ್ರೆಸ್‌ಪತನದ ಸುದ್ದಿ. ರಾಜನಾರಾಯಣರ ತಿಕ್ಕಲುತನದ ಮಾತುಗಳು. ಇನ್ನು ರಾಮರಾಜ್ಯ ಬಂದು ಬಿಡುವ ಮಾತುಗಳು, ಜನಸಂಘದಿಂದ ಜನತಾಪಕ್ಷಕ್ಕೆ ಬಂದ ನಾಯಕರೆಲ್ಲ ಚುನಾಯಿತರಾಗಿದ್ದರು. "ಫಲಿತಾಂಶವನ್ನು ಅಹಂಕಾರದಿಂದ ತೆಗೆದುಕೊಳ್ಳಬೇಡಿ"ಎಂಬ ಜಯಪ್ರಕಾಶನಾರಾಯಣರ ಹಿತನುಡಿ. ಈ ಎಲ್ಲವನ್ನ ಸಂಭ್ರಮಿಸುವ ಮನಸ್ಸು . ಲಂಕೇಶ್‌ರವರು ಸಂಜೆ ಐದುಗಂಟೆಗೆ ಬರಲು ಹೇಳಿದ್ದರು. ಹೋದೆ, "ಇಂದು ರಾತ್ರಿಯೆಲ್ಲ ಸೆಲೆಬ್ರೇಟ್ ಮಾಡೋಣ ಶೂದ್ರ" ಎಂದರು. ಮರುಳಸಿದ್ದಪ್ಪನವರಿಗೆ ಹೇಳಿಕಳಿಸಿದರು. ಅವರು ಬಂದರು. ರಾತ್ರಿಯೆಲ್ಲ ಸುತ್ತಾಡುತ್ತ ಗೆಳೆಯರ ಮನೆಯಲ್ಲಿ ಒಂದಷ್ಟು ಕಳೆಯುತ್ತ ಓಡಾಡೋಣ ಎಂಬುದು ಲಂಕೇಶ್‌ರವರ ಮೊದಲ ಯೋಜನೆಯಾಗಿತ್ತು.ಆದರೆ ಅದನ್ನು ಕೈಬಿಟ್ಟು ಗಾಂಧಿ ಬಜಾರಿನ ಸರ್ಕಲ್ ಲಂಚ್ ಹೋಂನಲ್ಲಿ ಕೂತೆವು. ಆ ಕಾಲಕ್ಕೆ ಅದು ಲೇಖಕರ ಕೇಂದ್ರವಾಗಿತ್ತು. ಅಡಿಗರು ಮತ್ತು ಲಂಕೇಶ್‌ರವರು ತುಂಬ ಸೇರುತ್ತಿದ್ದ ಸ್ಥಳ. ಸಂಜೆಯಾದರೆ ಬಹಳಷ್ಟು ಲೇಖಕರು ಅಲ್ಲಿ ಸಿಗುತ್ತಿದ್ದರು. ಒಂದಷ್ಟು ಕಾಲ ಕಳೆಯೋಣ ಎಂದು ತೀರ್ಮಾನಿಸಿದೆವು.

ಅದು ಆ ಕಾಲಕ್ಕೆ ನಮಗೆ ಪ್ರಿಯವಾದ ಹೋಟೆಲ್ ಆಗಿತ್ತು. ದೂರದಿಂದ ಮಾಸ್ತಿಯವರು ಬಸವನಗುಡಿ ಕ್ಲಬ್‌ನಿಂದ ವಾಪಸ್ಸು ಮನೆಗೆ ಹೋಗಲು ಬರುತ್ತಿದ್ದರು. ಸಂಜೆಯಾದರೂ ಕೊಡೆಯನ್ನು ಬಿಚ್ಚಿ ಬರುತ್ತಿದ್ದರು. ಯಾಕೆಂದರೆ ನೂರಾರು ಕಾಗೆಗಳು ಮತ್ತು ಪಕ್ಷಿಗಳು ಗಲೀಜು ಮಾಡ್ತವೆ ಎಂದು. ಲಂಕೇಶ್‌ರವರು ತುಂಟತನದಿಂದ ''ಶೂದ್ರ, ಮಾಸ್ತಿಯವರನ್ನ ಕಾಂಗ್ರೆಸ್ ಬದಲಾವಣೆ ಬಗ್ಗೆ ಏನನ್ನಿಸುತ್ತೋ ಕೇಳು''ಎಂದರು. ''ಸುಮ್ಮನಿರಿ ಸರ್, ಅವರು ಒಂದು ಗಂಟೆಯಾದರೂ ಬಿಡೋದಿಲ್ಲ. ಕಥೆಗಳನ್ನು ಹೇಳುತ್ತ ನಿಲ್ಲಿಸ್ಕೊಳ್ತಾರೆ'' ಎಂದೆ. ''ಅದೇಕಣೋ ಮಾಸ್ತಿಯವರು ಕಥೆ ಹೇಳೋದೆ ಆಸ್ತಿ'' ಎಂದು ನಗುತ್ತ ''ಈವಯಸ್ಸಿನಲ್ಲಿಯೂ ಕಾರ್ಡ್ ಆಡುವ ಲವಲವಿಕೆಯನ್ನ ಉಳಿಸಿಕೊಂಡಿದ್ದಾರಲ್ಲ ಅದಕ್ಕೆ ಮೆಚ್ಚಬೇಕು'' ಎಂದರು.

ನಾವು ಕೂತು ಬಿಸಿ ಬಿಸಿ ದೋಸೆ ಚಪ್ಪರಿಸುವ ಸಮಯಕ್ಕೆ ಟಿ.ಎನ್.ಸೀತಾರಾಂ ಸೇರಿಕೊಂಡರು. ಲಂಕೇಶರವರು ನಗುತ್ತ ಇಂದು ನಿಮ್ಮದೇನು ಬಾತ್‌ರೂಮಿನಲ್ಲಿ ಕೆಲಸವಿಲ್ಲವಾ?'' ಎಂದು ತಮಾಷೆ ಮಾಡಿದ್ದರು. ಯಾಕೆಂದರೆ ಟಿ.ಎನ್.ಸೀತಾರಾಂಗೆ ಒಂದು ದೊಡ್ಡ ಖಯಾಲಿ; ಯಾರದಾದರೂ ಷರ್ಟ್ ಚೆನ್ನಾಗಿತ್ತೆಂದರೆ ತನ್ನ ಷರ್ಟ್‌ಕೊಟ್ಟು ಅವರ ಷರ್ಟ್ ಕಿತ್ತುಕೊಳ್ಳುತ್ತಿದ್ದರು. ಇಂಥ ವ್ಯವಹಾರ ನಮ್ಮಿಬ್ಬರ ನಡುವೆ ನಡೆಯುವುದು ಲಂಕೇಶರವರಿಗೆ ಮತ್ತು ಕೆ.ಎಮ್.ಎಸ್.ರವರಿಗೆ ಚೆನ್ನಾಗಿಗೊತ್ತಿತ್ತು. ಆದರೆ ಅಂದು ಸೀತಾರಾಂ ''ಶೂದ್ರನ ಷರ್ಟ್ ಇಂದು ಗಬ್ಬೆದ್ದೋಗಿದೆ ಬೇಡ ಸರ್ ಸ್ವಲ್ಪ ದೂರವೇ ಕೂತ್ಕೊಳ್ತೀನಿ'' ಎಂದು ತನ್ನ ಮಾಮೂಲಿ ತುಂಟತನವನ್ನು ಪ್ರಯೋಗಿಸಿದ್ದ. ''ನಿಮ್ಮ ತುಂಟತನ ಸಾಕು'' ಎಂದು ಕೆ.ಎಂ.ಎಸ್.ಹೇಳುವ ಸಮಯಕ್ಕೆ ಲಂಕೇಶರವರು ಮೌನಿಯಾಗಿ ಸಿಗರೇಟಿನ ಮೊರೆಹೋಗಿದ್ದರು. ''ಪ್ರಜಾಪ್ರಭುತ್ವದಲ್ಲಿ ಮಾತಾಡುವುದನ್ನು ಕಡಿಮೆ ಮಾಡಿದರೆ ಎಷ್ಟು ಚೆನ್ನಾಗಿರುತ್ತದೆ ಅಲ್ಲವೇ ? ಸೀತಾರಾಂ'' ''ಹೌದು ಸಾರ್,'' ಎಂದು ಸೀತಾರಾಂ ಹೇಳಿದಾಗ ನನಗೆ ನಗುತಡೆಯಲಾಗಲಿಲ್ಲ . ''ಸೀತಾರಾಂ ಬಂಡವಾಳವೇ ಮಾತು. ಅದನ್ನೇ ಕಿತ್ತುಕೊಂಡರೆ ಹೇಗೆ?'' ಎಂದು ಕೇಳಿದಾಗ ''ಶೂದ್ರರಿಗೆ ಬ್ರಾಹ್ಮಣರ ಮಾತಿನ ಬಗ್ಗೆ ಯಾವಾಗಲೂ ಹೊಟ್ಟೆಕಿಚ್ಚು'' ಎಂದು ಹೇಳಿದಾಗ ಕೆ.ಎಂ.ಎಸ್‌ರವರು ''ಈ ಬ್ರಾಹ್ಮಣ, ಶೂದ್ರನಿಲ್ಲಿಸಿ. ಈಗ ಜನಸಂಘದ ಬ್ರಾಹ್ಮಣರು ಜನತಾಪಕ್ಷದಲ್ಲಿ ಅಬ್ರಾಹ್ಮಣರ ಜೊತೆ ಹೇಗೆ ಕಾರ್ಯ ನಿರ್ವಹಿಸ್ತಾರೆ ನೋಡಬೇಕಾಗಿದೆ'' ಎಂದಾಗ ಲಂಕೇಶರವರು ''ಇಲ್ಲ ಅವರ ಕೈಯಲ್ಲಿ ಇಲ್ಲಿರೋದಿಕ್ಕೆ ಆಗೋದಿಲ್ಲ ಗಂಟುಮೂಟೆಕಟ್ಟಿಕೊಂಡು ತಮ್ಮ ಹಳೆಮನೆಗೆ ಹೋಗ್ತಾರೆ. ಅಥವಾ ಆ ಹಳೆಮನೆಗೆ ಬೇರೊಂದು ಹೆಸರು ಕೊಡುತ್ತಾರೆ.'' ಎಂದು ಮತ್ತಷ್ಟು ಕಾಫಿಗೆ ಆರ್ಡರ್‌ಮಾಡಿದ್ದರು. ''ಅಧಿಕಾರ ಎನ್ನುವುದನ್ನು ಅರ್ಥಮಾಡಿಕೊಳ್ಳುವುದೇ ಕಷ್ಟ ಅಧಿಕಾರಬೇಕು ಆದರೆ ಅದನ್ನು ಜೀರ್ಣಿಸಿಕೊಳ್ಳುವ ಮನಸ್ಥಿತಿಯನ್ನು ರೂಢಿಸಿಕೊಂಡಿರುವುದಿಲ್ಲ. ಆಗಲೇ ನಾವೆಲ್ಲ ಸಣ್ಣವರಾಗುವುದು. ಜೀರ್ಣಿಸಿಕೊಂಡಾಗ ಜನತೆಯ ಕಣ್ಣಿನಲ್ಲಿ ಯಾವಾಗಲೂ ದೊಡ್ಡವರಾಗಿಯೇ ಇರ್ತಾರೆ. ಹಾಗೆ ನೋಡಿದರೆ ಗಾಂಧೀಜಿ ಮತ್ತು ಜಯಪ್ರಕಾಶ ನಾರಾಯಣ್‌ರಂಥವರು ಪರೋಕ್ಷವಾಗಿ ಅಧಿಕಾರದ ದಂಡವನ್ನು ಹಿಡಿದರು. ಯಾಕೆಂದರೆ ಮಾತು ಮತ್ತು ಕೆಲಸ ಮಂತ್ರದಂಡವಾಗಬೇಕು. ಆಗ ಎಲ್ಲರೂ ತಮ್ಮ ತಮ್ಮ ರೂಪಗಳನ್ನು ನೋಡಿಕೊಳ್ಳಲು ಪ್ರಯತ್ನಿಸುತ್ತಾರೆ. ಪ್ರಜಾಪ್ರಭುತ್ವದಲ್ಲಿ ಬಹುದೊಡ್ಡ ಅಸ್ತ್ರ ನಿರ್ಭೀತಿಯೆನ್ನುವುದು. ಆದರೆ ಆ ನಿರ್ಭೀತಿಯೆನ್ನುವುದನ್ನು ಒಮ್ಮೊಮ್ಮೆ ಭ್ರಷ್ಟ ಪೋಲೀಸರ ಕೈಗೆ ಕೊಟ್ಟು ಬಿಟ್ಟಿರ್ತಾರೆ. ಆಗಲೇ ದುರಂತ

ಸಂಭವಿಸುವುದು'' ಎಂದಾಗ ನಾವು ಲಂಕೇಶರವರ ಮುಖವನ್ನೇ ನೋಡುತ್ತಿದ್ದೆವು. ಸ್ವಲ್ಪ ಸಮಯಕಳೆಯಿತು. ಲಂಕೇಶರವರು ಮೌನಿಯಾಗಿಯೇ ಇದ್ದರು. ರಾಜಕೀಯ ಎಂದರೆ ಯಾವಾಗಲೂ ಚುರುಕುಗೊಳ್ಳುವ ಕೆ.ಎಂ.ಎಸ್‌ರವರೂ ಏನೋ ಯೋಚನೆ ಮಾಡುತ್ತಿದ್ದರು. ''ಸರ್, ಇವತ್ತು ನಾವು ಲವಲವಿಕೆಯ ದಿನಗಳನ್ನು ಆಚರಿಸಲು ಇಲ್ಲಿ ಸೇರಿದ್ದೀವಿ. ಆದರೆ ನೀವೇ ಏನೋ ಒಂದು ರೀತಿಯ ಅಧೀರತೆಯನ್ನು ಅಪ್ಪಿಕೊಂಡವರಂತೆ ಮಾತಾಡುತ್ತಿದ್ದೀರಿ'' ಎಂದಾಗ, ''ಇಲ್ಲ ಸೀತಾರಾಂ ನಾವು ಲೇಖಕರಾದವರು ಅಧೀರತೆಯನ್ನು ದುರ್ಬಲ ಅಸ್ತ್ರ ಎಂದು ಯಾವಾಗಲೂ ತಿಳಿಯಬಾರದು. ಎಲ್ಲವನ್ನು ನಿಗಾ ಇಟ್ಟು ಅರಿಯುವ ಒಳನೋಟ ಬೇಕಾಗುತ್ತದೆ. ಇಲ್ಲದಿದ್ದರೆ ನಾವೇನೂ ಬರೆಯಲಾಗುವುದಿಲ್ಲ ಮಾತಾಡಲಾಗುವುದಿಲ್ಲ'' ಎಂದರು. ಒಂದೊಂದು ಹೊಸ ವ್ಯವಸ್ಥೆಯೂ ಕೆಲವು ಅನಾಹುತಗಳನ್ನು ಅಪ್ಪಿಕೊಂಡೇ ಬರುತ್ತದೆ. ಅದನ್ನು ಕೇವಲ ಸಮಾಜವಿಜ್ಞಾನಿಗಳಲ್ಲ ಲೇಖಕರೂ ತಿಳಿಯಲು ಭಾಗಿಗಳು ಎಂದು ಯೋಚಿಸಿದಾಗ ಹೊಸದು ನಿಯಂತ್ರಣದಲ್ಲಿರುತ್ತದೆ'' ಎಂದು ಕೆ.ಎಂ.ಎಸ್.ರವರು ಹೇಳಿದಾಗ ''ಹೌದು, ಅದು ಸತ್ಯ'' ಎಂದು ಲಂಕೇಶರವರು ದನಿಗೂಡಿಸುತ್ತ, ಶೂದ್ರ ತುಂಬಾ ಮಾತಾಡೋನು ಇಂದು ಯಾಕೆ ಮೌನಿಯಾಗಿದ್ದಾನೆ '' ಎಂದಾಗ ''ಪ್ರಜಾಪ್ರಭುತ್ವದಲ್ಲಿ ಮಾತೇ ಬಂಡವಾಳವಾಗಬಾರದು, ಕೇಳಿಸಿಕೊಳ್ಳುವುದೂ ಬಂಡವಾಳವಾಗಬೇಕಲ್ಲವೇ? ನೀವು ಯಾವಾಗಲೂ ಹನ್ನೆರಡನೆಯ ಶತಮಾನದ ಬಸವಣ್ಣನನ್ನು ಉಲ್ಲೇಖಿಸಿ ಹೇಳುತ್ತೀರಿ : ಬಸವಣ್ಣಗ್ರೇಟ್ ಆಗಿದ್ದು ಬೇರೆಯವರ ಮಾತನ್ನು ಕೇಳಿಸಿಕೊಳ್ಳುವುದರಿಂದ'' ಎಂದು, ಅದಕ್ಕೆ ಮೌನಿಯಾಗಿದ್ದೇನೆ '' ಎಂದೆ ನಗುತ್ತ.''ಶೂದ್ರ, ಎಂದೂ ಆ ರೀತಿ ಹೆಚ್ಚು ಮತಾಡೋಲ್ಲ,'' ಎಂದು ಕೆ.ಎಂ.ಎಸ್. ಸರ್ಟಿಫಿಕೇಟ್‌ಕೊಟ್ಟಾಗ ನನಗೆ ಖುಷಿಯಾಗಿತ್ತು. ''ಇರಲಿ ಬಿಡ್ರಯ್ಯ,ನಾವ್ಯಾರು ಮಾತಾಡದೆ ಸೈಲೆಂಟಾಗಿ ಕಾಲವನ್ನು ಎಂಜಾಯ್‌ಮಾಡಿದರೂ ಸಾಕು. ಎಷ್ಟೋ ಹೊಸ ವಿಚಾರಗಳು ಮನಸ್ಸಿನಲ್ಲಿ ನಾಳೆಗೆ ಚಿಗುರಿರುತ್ತದೆ.''. ಎಂದರು ಹೊಗೆ ಬಿಡುತ್ತ.

ಸಾಕಷ್ಟು ಸಮಯವಾಗಿತ್ತು ಬಿಲ್ ಬಂತು. ''ಯಾರೂ ಕೊಡುವುದು ಬೇಡ ಮೊನ್ನೆ ಕುದುರೆ ಒಂದಷ್ಟು ದುಡ್ಡು ಕೊಟ್ಟಿತ್ತು. ನಿಮ್ಮಂಥ ಪುಣ್ಯಾತ್ಮರಿಗೆ ಸೇವೆ ಮಾಡಿದರೆ ನಾಳೆ ನಮಗೆ ಒಳ್ಳೆಯದಾಗುತ್ತದೆ'' ಎಂದಾಗ ಸೀತಾರಾಂ ''ನಿಜ ಸರ್,'' ಎಂದು ನಗುತ್ತ ದನಿಗೂಡಿಸಿದಾಗ ಎಲ್ಲರೂ ಎದ್ದೆವು. ಹೊರಗೆ ಬಂದೆವು. ಕೆ.ಎಂ.ಎಸ್‌ರವರು ಮನೆಯ ಕಡೆ ಹೊರಟರು. ಸೀತಾರಾಂ ಮತ್ತು ನಾನು ಮೇಷ್ಟ್ರ ಜೊತೆ ಮನೆಯತನಕ ಹೋದೆವು. ಅವರು ಮೇಲಕ್ಕೆ ಹೋದರು. ನಾವು ಮನೆಯ ಕಡೆ ಹೊರಟೆವು. ಹೊರಡುವ ಮುನ್ನ ''ಮೇಷ್ಟ್ರು ಇಂದು ಎಷ್ಟು ಚೆನ್ನಾಗಿ ಮಾತಾಡಿದರು ಅಲ್ಲವೇ ಶೂದ್ರ?'' ಎಂದಾಗ ಸೀತಾರಾಂ, ನಾನು ''ಹೌದು'' ಎಂದು ಬೈ ಬೈ ಹೇಳುತ್ತ ಹೊರಟೆವು.

## ದತ್ತಪೀಠ, ಸೌಹಾರ್ದತೆಯ ನೆನಪುಗಳು ಇತ್ಯಾದಿ

2003 ನವೆಂಬರ್ ಮತ್ತು ಡಿಸೆಂಬರ್ ಈ ಎರಡು ತಿಂಗಳು ಕರ್ನಾಟಕದ ಸಾಂಸ್ಕೃತಿಕ ವಲಯದಲ್ಲಿ ಸ್ಮರಣೆಯ ದಿನಗಳು. ಸಾವಿರಾರು ಪ್ರಗತಿ ಪರ ಚಿಂತಕರು ಬೇರೆ ಬೇರೆ ಸಂಘಟನೆಗಳಲ್ಲಿದ್ದರೂ ಒಂದೆಡೆ ಸೇರಿಸಿದ ದಿನಗಳು. ಬಾಬಾಬುಡನ್‌ಗಿರಿ ಸೌಹಾರ್ದ ಸಮಿತಿ

ನಾನಾ ರೀತಿಯ ಚಿಂತಕರನ್ನು ತನ್ನೆಡೆಗೆ ಸೆಳೆದುಕೊಂಡಿತ್ತು.ಆದರೆ ಈ ಸೌದಾರ್ಹ ಸಮಿತಿಯ ಕಾರ್ಯಸ್ವರೂಪದಲ್ಲಿ ಕೆ.ಎಂ.ಎಸ್‌ರವರ ಪಾತ್ರ ಮಹತ್ವಪೂರ್ಣವಾದದ್ದು. ಈ ಬಾರಿ ಈ ಹೋರಾಟದಲ್ಲಿ ಗಿರೀಶ್‌ಕರ್ನಾಡ್‌ರಂಥವರು ಉತ್ಸಾಹದಿಂದ ಭಾಗವಹಿಸಲು ಕೆ.ಎಂ.ಎಸ್‌ರವರೇ ಕಾರಣ. ನನಗೆ ತುಂಬಾ ಕೆಮ್ಮು ಇತ್ತು ಆದರೂ ಶೂದ್ರ, ನೀವು ಬರಲೇಬೇಕು ಬಾಬಾ ಬುಡನಗಿರಿಗೆ ಹೋಗಿ ಬರೋಣ ಎಂದಿದ್ದರು. ಅದಕ್ಕಿಂತ ಮೊದಲು ಗಿರೀಶರವರ ಮನೆಯಲ್ಲಿ ಎರಡು ಬಾರಿ ಸೇರಿ ಬಜರಂಗದಳ ಮತ್ತು ವಿ.ಎಚ್.ಪಿಯವರಿಗೆ ಪೂಜೆ ಮತ್ತು ಬೃಹತ್ ಸಮೇಳನ ಮಾಡಲು ಸರ್ಕಾರ ಅನುಮತಿ ಕೊಟ್ಟಿದೆ.ಅದನ್ನು ಕೋಮು ಸೌಹಾರ್ದತೆಯ ದೃಷ್ಟಿಯಿಂದ ನಿಲ್ಲಿಸಿ. ಅಥವಾ ಅದೇ ದಿನ ನಮಗೂ ಸಮ್ಮೇಳನ ಮಾಡಲು ಅವಕಾಶ ಕೊಡಿ ಎಂದು ಕೇಳುವುದು ಸೌಹಾರ್ದ ಸಮಿತಿಯ ಉದ್ದೇಶವಾಗಿತ್ತು. ಇದರ ಚರ್ಚೆಗೆ ಕೆ.ಎಂ.ಎಸ್‌ರವರ ಜೊತೆಗೆ ಜಿ.ಕೆ.ಗೋವಿಂದ ರಾವ್, ವಿ.ಎಸ್.ಶ್ರೀಧರ್ ಮತ್ತು ಗೌರಿಲಂಕೇಶ್‌ರವರೂ ಇದ್ದರು. ಈ ಸಂದರ್ಭದಲ್ಲಿ ಬೇರೆ ಬೇರೆ ಸಂಘಟನೆಗಳು ಪ್ರತ್ಯೇಕವಾಗಿ ಪತ್ರಿಕಾಗೋಷ್ಠಿಗಳನ್ನು ಕರೆದು, ಕರಪತ್ರಗಳನ್ನು ಹಂಚಿ ಸಮಾನ ಮನೋಭಾವನೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಇವರೆಲ್ಲರ ಜೊತೆ ಬೆಂಗಳೂರಿನ ಸೌದಾರ್ಹ ವೇದಿಕೆ ಸಂಪರ್ಕವಿಟ್ಟು ಕೊಳ್ಳುವ ರೀತಿಯಲ್ಲಿ ಕೆ.ಎಂ.ಎಸ್‌ರವರು ವ್ಯವಸ್ಥೆ ರೂಪಿಸಿದ್ದರು.

ಪತ್ರಿಕಾಗೋಷ್ಠಿಯ ನಂತರ ಪತ್ರಿಕೆಗಳು ಸಾಕಷ್ಟು ಪ್ರಚಾರವನ್ನು ಕೊಟ್ಟಿದ್ದರು. ನಂತರ ಸೌಹಾರ್ದ ವೇದಿಕೆಯ ಉದ್ದೇಶಗಳಿಗೆ ಪೂರಕವಾಗಿ ಉತ್ತಮ ಪತ್ರಗಳನ್ನು ಪತ್ರಿಕೆಗಳು ಪ್ರಕಟಿಸಿದ್ದುವು. ಈ ಎಲ್ಲ ಪೂರಕ ಸಿದ್ಧತೆಯ ಮೂಲಕ ಚಿಕ್ಕಮಗಳೂರು ಸೌಹಾರ್ದವೇದಿಕೆಯ ಆಹ್ವಾನದ ಮೇರೆಗೆ ಪೂರ್ವಸಿದ್ಧತಾ ಸಭೆಗೆ ಮೇಲೆ ತಿಳಿಸದವರೆಲ್ಲ ಹೋದೆವು. ಹೋಟೆಲ್‌ನಲ್ಲಿ ಉಳಕೊಳ್ಳುವ ಎಲ್ಲ ಅನುಕೂಲ ಮಾಡಿದ್ದರು. ನಾವು ಅಲ್ಲಿಗೆ ತಲುಪಿದಾಗ ಹೋಟೆಲ್‌ನ ಸಮೀಪ ಸಾಕಷ್ಟು ಹುಡುಗರು ಬಂದಿದ್ದರು. ಅವರ ಉತ್ಸಾಹ ನೋಡಿ ಖುಷಿಯಾಯಿತು. ಕಾಫೀ ಟೀ ನಂತರ ಅಲ್ಲಿಯ ಒಟ್ಟು ಸ್ವರೂಪವನ್ನು ಪರಿಚಯ ಮಾಡಿಕೊಟ್ಟರು ಮತ್ತು ಯಾರ್‍ಯಾರು ಭಾಗಿಯಾಗುತ್ತಿದ್ದರೆಂಬ ವಿಷಯವನ್ನು ತಿಳಿಸಿದರು. ಮಾರನೆಯ ದಿನ ಸೇರುವುದು, ಹಾಗೆಯೇ ಬಾಬಾಬುಡನ್ ಗಿರಿಯ ದತ್ತ ಪೀಠಕ್ಕೆ ಹೋಗಿ ಬರುವುದು ಎಂದು ತೀರ್ಮಾನಿಸಿದೆವು.

ಎಲ್ಲರೂ ಹೋದಮೇಲೆ, ಕೆಲವರು ನಮ್ಮ ಜೊತೆ ಉಳಕೊಂಡರು.ಊಟಕ್ಕೆ ಮುನ್ನ ಮಾತಿನ ಸಂಭ್ರಮದಲ್ಲಿ ಭಾಗಿಯಾದೆವು. ಏನೇನೋ ಮಾತುಕತೆ. ಆ ಎಲ್ಲ ಮಾತುಗಳ ನಡುವೆ ಗಿರೀಶ ಕಾರ್ನಾಡ್‌ರವರು ಎಷ್ಟೊಂದು ಲಿಬರಲ್ ಆಗಿ ವರ್ತಿಸುತ್ತಿದ್ದರೆಂದರೆ. ಎಂಥವರಿಗೂ ಮೆಚ್ಚಿಗೆಯಾಗುವ ರೀತಿಯಲ್ಲಿ ವ್ಯವರಿಸುತ್ತಿದ್ದರು. ಎಂಥ ತೀವ್ರ ರೀತಿಯ ಟೀಕೆಗಳಿಗೂ ಸಿಟ್ಟು ಮಾಡಿಕೊಳ್ಳುತ್ತಿರಲಿಲ್ಲ, ''ನೋಡಿ ....'' ಎಂದು ತಮ್ಮ ಮಾಮೂಲಿ ಧಾಟಿಯಿಂದ ಉತ್ತರಿಸುತ್ತಿದ್ದರು.

ಬೆಳಿಗ್ಗೆ ಗಿರಿಯ ಮೇಲೆ ಹೋಗಲು ಸಿದ್ಧರಾದೆವು. ಅಕ್ಕಪಕ್ಕದ ಜಿಲ್ಲೆಯಿಂದ ಬಾನುಮುಷ್ತಾಕ್ ಮುಂತಾದುವರು ಸಾಕಷ್ಟು ಮಂದಿ ಬಂದರು. ಗಿರಿಯ ಮೇಲಕ್ಕೆ ಎಳೆಂಟು ವಾಹನಗಳಲ್ಲಿ ಹೊರಟೆವು. ಬೆಳಿಗ್ಗೆ ಒಂಬತ್ತುವರೆಗೆ ಹೋದರೂ ಭೀಕರ ಚಳಿ ಇತ್ತು. ಮೊದಲೇ ತಿಳಿಸಿದ್ದರಿಂದ

ಚಳಿಯಿಂದ ರಕ್ಷಿಸಿಕೊಳ್ಳಲು ಸಿದ್ಧತೆ ನಡೆಸಿಕೊಂಡು ಹೋಗಿದ್ದೆವು. ದಾರಿ ಉದ್ದಕ್ಕೂ ತಿರುವುಗಳಲ್ಲಿ ಗಾಡಿಗಳನ್ನು ನಿಲ್ಲಿಸಿಕೊಂಡು ಬಾಬಾಬುಡನ್‌ಗಿರಿಯ ಬೃಹತ್ ಬೆಟ್ಟಗಳ ಸಾಲಿನ ವೈಭವವನ್ನು ಆನಂದಿಸುತ್ತ ಹೊರಟಿದ್ದೆವು.

ಗಿರಿಯ ಪೂಜಾಸ್ಥಳಕ್ಕೆ ಹೋದಾಗ ಚಳಿಯ ಗಾಳಿ ನಮ್ಮನ್ನು ಕೆಳಕ್ಕೆ ದಬ್ಬುವಷ್ಟು ವೇಗವಾಗಿ ಬೀಸುತ್ತಿತ್ತು. ಸೂಫಿಸಂತರ ವೈವಿಧ್ಯಮಯವಾದ ಸಾಂಸ್ಕೃತಿಕ ವಾತಾವರಣವನ್ನು ಕಂಡು ಥ್ರಿಲ್ ಆದೆವು. ಅಲ್ಲಿಯ ಪೂಜಾಸ್ಥಳಗಳ ಇತಿಹಾಸವನ್ನು ನೋಡಿ ದಂಗಾಗಿದ್ದೆವು. ಅಲ್ಲಿಯೇ ಫೋಟೋ ತೆಗೆದುಕೊಳ್ಳುವಾಗ ಕೆ.ಎಂ.ಎಸ್‌ರವರು ''ಶೂದ್ರ, ಈ ವಿ.ಎಚ್.ಪಿಯವರು ಮತ್ತು ಬಜರಂಗದಳದವರು ಏನು ತಲೆಕೆಟ್ಟವರು, ಎರಡು ಸಂಸ್ಕೃತಿಗಳನ್ನು ಎಷ್ಟು ಚೆನ್ನಾಗಿ ಇಲ್ಲಿ ಕಾಪಾಡಿಕೊಂಡು ಬರಬಹುದು. ಪ್ರವಾಸೋದ್ಯಮದ ದೃಷ್ಟಿಯಿಂದಲೂ ಇದಕ್ಕಿಂತ ಅದ್ಭುತ ಜಾಗ ಬೇಕಾ? ಸರ್ಕಾರಕ್ಕೇನಾಗಿದೆ?'' ಎಂದು ಸಿಟ್ಟಿನಿಂದ ನುಡಿದಿದ್ದರು. ಸಾಕಷ್ಟು ಪೋಲೀಸ್ ಕಾವಲಿನ ನಡುವೆ ಮತ್ತಷ್ಟು ಮೇಲಕ್ಕೆ ಹೋದಾಗ ''ಮೈಗಾಡ್ ಹೌ ಬ್ಯೂಟಿಫುಲ್ ಪ್ಲೇಸ್' ಎಂಬ ಉದ್ಗಾರಗಳನ್ನು ಎಷ್ಟೋಂದು ಜನ ತೆಗೆದರು. ಯಾರ್‍ಯಾರೋ ಗಿಡಮರ ಪೊದೆಗಳ ನಡುವೆ ಕೂತು ಮೂವಿ ಕ್ಯಾಮರಗಳ ಕಣ್ಣಿನ ಮೂಲಕ ಅಲ್ಲಿಯ ಲಾವಣ್ಯವನ್ನು ಸೆರೆಯಿಡಿಯಲು ಕೂತಿದ್ದರು. ಹಾಗೆಯೇ ಅಲ್ಲಿಯೇ ಸ್ವಾಭಾವಿಕವಾಗಿ ಬುಗ್ಗೆಯಂತೆ ಚಿಮ್ಮುವ ನೀರಿನ ಬುಗ್ಗೆಯನ್ನು ಕಂಡು ನಿಸರ್ಗದ ಒಡಲೊಳಗೆ ಏನೇನೋ ಅವಿತುಕೊಂಡಿದೆಯಲ್ಲವೇ? ಪ್ರಶ್ನಿಸಿಕೊಳ್ಳುತ್ತಲೇ ಮೂಕವಿಸ್ಮಿತರಾಗಿದ್ದೆವು. ಅಲ್ಲಿಯೇ ಪ್ರವಾಸಿಗರಿಗಾಗಿ ಇದ್ದ ಒಂದು ಚಿಕ್ಕ ಟೀ ಸ್ಟಾಲನ್ನು ಬಜರಂಗದಳದ ಕಾರ್ಯಕರ್ತರು ನಾಶಮಾಡಿದ್ದರು. ಅದರ ಭಾವಚಿತ್ರಗಳನ್ನು ತೋರಿಸುವಾಗ ಕೆ.ಎಂ.ಎಸ್.''ಅವರಿಗೆ ತಲೆಕೆಟ್ಟಿದೆ ಬಿಡಿ, ಅವರು ಎಂದೂ ಈ ಸಂಸ್ಕೃತಿಯನ್ನು ಗೌರವಿಸಿದವರಲ್ಲ. ಅವರಿಗೆ ಬೇಕಾಗಿರೋದು ಜಾಗತೀಕರಣದ ಸಂಸ್ಕೃತಿ,'' ಎಂದು ಖಾರವಾಗಿ ನುಡಿದಿದ್ದರು. ಇನ್ನು ಸ್ವಲ್ಪ ದೂರದಲ್ಲಿ ಸ್ವಲ್ಪ ಕೆಳಕ್ಕೆ ಬಂದಾಗ ಸೌಹಾರ್ದ ವೇದಿಕೆಯ ಗೆಳೆಯರು ಕರೆದುಕೊಂಡು ಹೋದರು. ಅದು ಮಹಮದೀಯರ ಪವಿತ್ರ 'ಉರುಸು' ಸಮಯದಲ್ಲಿ ವಿವಿಧ ರೀತಿಯ ನಂಬಿಕೆಯ ಜನ ಸೇರುವುದು ಪದ್ಧತಿ. ಇಂಥ ಸಮಯದಲ್ಲಿ ಅಲ್ಲಿಯೇ ಇದ್ದ ಒಂದು ವೃಕ್ಷದ ಕೊಂಬೆಗೆ ನಾನಾ ರೀತಿಯ ಪೂಜೆಯ ದಾರಗಳನ್ನು ತಾಯಿತಗಳನ್ನು ಕೊಂಬೆಗೆ ಬಿಗಿದಿದ್ದರು. ಅಂಥ ಪವಿತ್ರವಾದ ಕೊಂಬೆಯನ್ನು ಕಡಿದು ಕೆಳಕ್ಕುರುಳಿಸಿದ್ದರು. ಅದು ಸ್ವಲ್ಪದರಲ್ಲಿ ಕೆಳಕ್ಕೆ ಬೀಳದೆ ನೇತಾಡುತ್ತಿತ್ತು. ಅದನ್ನು ನೋಡಿ ಒಂದು ಕ್ಷಣ ಎದೆ ದಸಕ್ಕೆಂದಿತು. ಅಲ್ಲಿ ಬಾನು ಮುಷ್ತಾಕ್, ಗೌರಿಲಂಕೇಶ್, ಕೆ.ಎಂ.ಎಸ್ ಮತ್ತು ನಾನು ನಿಂತು ವೇದನೆಯಿಂದ ಫೋಟೋ ತೆಗೆಸಿಕೊಂಡೆವು. ನಾವು ಅಲ್ಲೇ ನಿಂತಿದ್ದೆವು. ಬಾನುರವರ ಕಣ್ಣಿನಲ್ಲಿ ನೀರು ತುಂಬಿತ್ತು.

ಮತಾಂಧರ ಈ ರೀತಿಯ ಅನಾಹುತಗಳನ್ನು ನೋಡಿ ಕೆಳಗೆ ಬಂದೆವು. ''ಇಂಥದನ್ನೆಲ್ಲ ನೋಡುತ್ತಿದ್ದರೆ ಮನಸ್ಸಿಗೆ ತುಂಬ ಘಾಸಿಯಾಗುತ್ತದೆ. ಕತ್ತೆ ಬಾಲ ಹೋಯ್ತು ಅವರೇನು ಮಡ್ತಾರೆ ಎಂದು ನಾವು ಸುಮ್ಮನೆ ಕೂರಲಾಗುವುದಿಲ್ಲ.'' ಎಂದು ಪ್ರತಿಕ್ರಿಯಿಸುತ್ತಿದ್ದರು ಕೆ.ಎಂ.ಎಸ್‌ರವರು. ಕೆ.ಎಂ.ಎಸ್‌ರವರಿಗೆ 'ಕತ್ತೆಬಾಲ ಹೋಯ್ತು, ತಲೆಕೆಟ್ಟವರು, ಮತ್ತು ರ್‍ಯಾಸ್ಕಲ್ಸ್' ತುಂಬ ಪ್ರಿಯವಾದ ಬೈಗುಳ ಶಬ್ದಗಳು. 'ಇದನ್ನು ಸಾಮಾನ್ಯವಾಗಿ ಅವರ ಜೊತೆ ಮಾತಿಗೆ ಕೂತಾಗ, ಬೇಸರದ ಸಮಯದಲ್ಲಿ ಬಳಸುತ್ತಾರೆ.

ಹೋಟೆಲ್‌ಗೆ ಬಂದೆವು. ಸಿಪಿಐ ಮತ್ತು ಸಿಪಿಎಂನ ಕಾರ್ಯಕರ್ತರು ಗಿರೀಶ್‌ಕಾರ್ನಾಡ್ ಮತ್ತು ಕೆ.ಎಂ.ಎಸ್.ರವರ ಜೊತೆಯಲ್ಲಿ ಚರ್ಚಿಸಲು ಬಂದಿದ್ದರು. ಹಿಂದಿನ ದಿವಸ ಅಲ್ಲಿಯ ಕಾರ್ಯಕರ್ತರು ಈ ಎರಡೂ ಎಡಪಂಥೀಯ ಪಕ್ಷಗಳ ಧೋರಣೆಗಳ ಬಗ್ಗೆ ಹೇಳಿದ್ದನ್ನೇ ಈಗಲೂ ಮಂಡಿಸುತ್ತಿದ್ದರು. ''ಇದೆಲ್ಲವನ್ನು ರಾತ್ರಿ ಕೇಳಿದ್ದೇವೆ. ಈಗ ನೀವು ಇವರ ಜೊತೆ ಕೂಡಿಕೊಂಡು ಏನು ಮಾಡ್ತೀರಿ ಎಂಬುದು ಮುಖ್ಯ. ನಿಮ್ಮ ಭಿನ್ನಾಭಿಪ್ರಾಯಗಳ ಮಧ್ಯೆ ಮತಾಂಧರು ಮಿಂಚುವುದು ಬೇಡ.'' ಎಂದು ಕೆ.ಎಂ.ಎಸ್ ಹಾಗೂ ಗಿರೀಶ್‌ರವರು ಸಲಹೆಮಾಡಿದರು. ''ಹಾಗೆಯೇ ನಾವು ಹೊರಗಿನಿಂದ ನಿಮ್ಮ ಆಹ್ವಾನದ ಮೇರೆಗೆ ಬಂದಿರುವಂಥವರು. ನೀವು ಇಲ್ಲಿ ಗಟ್ಟಿಯಾಗಿ ನಮಗೆ ವೇದಿಕೆಯನ್ನು ಸೃಷ್ಟಿಮಾಡಿ ಕೊಡಬೇಕು, ಮಧ್ಯಾಹ್ನ ಪತ್ರಿಕಾಗೋಷ್ಠಿ ಇದೆ. ನಮ್ಮ ಧೋರಣೆಯನ್ನು ಹಾಗೂ ಕಾರ್ಯಕ್ರಮದ ಸ್ವರೂಪವನ್ನು ವ್ಯಕ್ತಪಡಿಸುತ್ತೇವೆ. ಅನ್ಯಥಾ ಭಾವಿಸಬೇಡಿ ಈಗ ಊಟಮಾಡಿ ನಾವು ಹೊರಡಬೇಕು, ನೀವು ಸ್ನೇಹಿತರು ಮಾತು ಮುಂದುವರೆಸಿ'' ಎಂದು ಎದ್ದರು.

ಊಟಮುಗಿಸಿ ಮೂರುಗಂಟೆಗೆ ಪತ್ರಿಕಾಗೋಷ್ಠಿಗೆ ಹೋದಾಗ ಕೊಠಡಿಯ ತುಂಬ ರಾಜ್ಯ ಪತ್ರಿಕೆಗಳ ವರದಿಗಾರರು ಹಾಗೂ ಸ್ಥಳೀಯ ಪತ್ರಿಕೆಯವರು ತುಂಬಿದ್ದರು. ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಕೆ.ಎಂ.ಎಸ್.ರವರು, ಕಾರ್ನಾಡ್ ಹಾಗೂ ಜಿ.ಕೆ.ಗೋವಿಂದರಾವ್ ಅವರು ಸಾಮರಸ್ಯ ವೇದಿಕೆಯ ಉದ್ದೇಶಗಳನ್ನು ಹಾಗೂ ತೊಗಾಡಿಯಾ ಹಾಗೂ ಪ್ರಮೋದ್ ಮುತಾಲಿಕ್‌ರವರಂಥ ಗೂಂಡಾಗಳನ್ನು ಒಳಗೆ ಬಿಟ್ಟುಕೊಂಡರೆ ಏನೇನು ಅನಾಹುತಗಳಾಗಬಹುದೆಂಬುದನ್ನು ಖಾರವಾದ ಶಬ್ದಗಳಲ್ಲಿಯೇ ಹೇಳಿದರು. ''ನಿಮ್ಮ ಚಿಕ್ಕಮಗಳೂರಿನ ಜನ ನೆಮ್ಮದಿಯಿಂದ ಬದುಕಬೇಕಾದರೆ ನೀವೆಲ್ಲ ಸಹಕರಿಸಬೇಕು, ಶಾಂತಿಕಾರ್ಯಕ್ರಮವನ್ನು ನಡೆಸುತ್ತಿರುವ ಉದ್ದೇಶವೂ ಇದಕ್ಕಾಗಿಯೇ. ಅವರಿಗೆ ಬಹುಮುಖಿ ಸಂಸ್ಕೃತಿಯ ಬಗ್ಗೆ ನಂಬಿಕೆ ಇಲ್ಲ. ಅವರಿಗಿರುವುದು ಮಂತಾಧ ಸಂಸ್ಕೃತಿ. ಅದು ನಿಮಗೂ ಗೊತ್ತು'' ಎಂದು ಹೇಳಿ ಅವರ ಸುತ್ತಿ ಬಳಸಿದ ಪ್ರಶ್ನೆಗಳಿಗೆ ಉತ್ತರಿಸಿ ಜಿಲ್ಲಾಧಿಕಾರಿಗಳನ್ನು ನೋಡಲು ಹೋದೆವು.

ಹೋಟೆಲ್ ಬಳಿ ಕಾರ್ಯಕ್ರಮದ ಮುಂದಿನ ಸ್ವರೂಪವನ್ನು ಚರ್ಚಿಸಿ ಹೊರಟೆವು. ನಮ್ಮನ್ನೆಲ್ಲ ನಿಲ್ಲಿಸಿ ಮೇಲಿನಿಂದ ಕ್ಯಾಮರಾ ಕ್ಲಿಕ್ಕಾಯಿತು. ಬೆಂಗಳೂರಿಗೆ ಬಂದೆವು. ಶಿವಾಜಿನಗರದ ಪ್ರದೇಶದಲ್ಲಿ ಹಿಂದುನಾಗರಿಕ ಸಭೆಯನ್ನು ಏರ್ಪಡಿಸಿದ್ದರು. ಅಂದು ಮುಸ್ಲಿಂರ ನಡುವೆ ಏನಾದರೂ ಅನಾಹುತ ಆಗಬಹುದೆಂದು ಅಲ್ಲಿ ಜಾಗರಣ ಸಭೆ ನಡೆಸಲು ಅನುಮತಿ ಕೊಡಕೂಡದು ಎಂದು ಕೆ.ಎಂ.ಎಸ್. ಮತ್ತು ಕಾರ್ನಾಡರು ಹಾಗೂ ವಿಮಲಾರವರು ಕೂಡಿಕೊಂಡು ಏನೇನೋ ಪ್ರಯತ್ನಪಟ್ಟರು. ಜಾಗರಣ ಸಭೆ ನಿಲ್ಲುವ ಸೂಚನೆ ಕಂಡುಬರಲಿಲ್ಲ. ಸರ್ಕಾರದ ಮನಸ್ಸು ದುರ್ಬಲವಾಗಿತ್ತು. ಇಂಥ ಸಮಯದಲ್ಲಿ ಲಲ್ಲೂ ಪ್ರಸಾದ್ ಯಾದವ್ ರೀತಿಯಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುವುವವರು ಬೇಕಾಗುತ್ತದೆ ಎಂದು ಚರ್ಚಿಸುತ್ತಲೇ ಬೆಂಗಳೂರಿಗೆ ಬಂದೆವು. ದಾರಿಯುದ್ದಕ್ಕೂ ಪ್ರಯಾಣ ಮಾಡಿದ ಆಯಾಸವೇ ಕಾಣಲಿಲ್ಲ. ಚನ್ನರಾಯ ಪಟ್ಟಣದಲ್ಲಿ ರಸ್ತೆಯ ಬಳಿಯ ಅಂಗಡಿಯಲ್ಲಿ ಏನೋ ಕೊಂಡುಕೊಳ್ಳಲು ಗಿರೀಶ್‌ರವರು ಹಾಗೂ ಗೋವಿಂದರಾವ್‌ರವರು ಇಳಿದಾಗ ಹೆಚ್ಚು ಜನ ಮುತ್ತಿಕೊಂಡವರು ಗೋವಿಂದರಾವ್ ಅವರಿಗೆ

"ನೋಡಿದಿರಾ ಕಾರ್ನಾಡ್ ಗೋವಿಂದರಾವ್ ಎಷ್ಟು ಜನಪ್ರಿಯರು?" ಎಂದು ಕೆ.ಎಂ.ಎಸ್ ತಮಾಷೆಮಾಡಿದರು. ಕೆಲವು ವರ್ಷಗಳ ಹಿಂದೆ ಪ್ರಸನ್ನರವರು ಹೆಗ್ಗೋಡಿನಲ್ಲಿ ಕವಿಕಾವ್ಯ, ಟ್ರಸ್ಟನ್ನ ಪ್ರಾರಂಭಿಸಿದಾಗ ಡಿ.ಆರ್, ಕೆ.ಎಂ.ಎಸ್, ಕಾರ್ನಾಡ್ ಅಗ್ರಹಾರ ಕೃಷ್ಣಮೂರ್ತಿ ಹಾಗೂ ನಾನು ಹೋಗಿದ್ದೆವು. ಮೂರುದಿನ ಸ್ಮರಣೆಯ ಅನುಭವ. ಪ್ರಸನ್ನ ತನ್ನ ಮನೆಯ ಮುಂದೆ ಅಗ್ನಿಕುಂಡವನ್ನು ಹಾಕಿ ಆಬೆಂಕಿಯ ಪ್ರಖರ ಬೆಳಕಿನಲ್ಲಿ ಡಿ.ಆರ್.ಪುರೋಹಿತ ಷಾಹಿಗೆ ಸಂಬಂಧಿಸಿದಂತೆ ಅದ್ಭುತವಾದ ವಾದ ಮಂಡನೆಯನ್ನು ಮಂಡಿಸಿದ್ದ. ಅಂದು ಕಂಬಾರರೂ ಇದ್ದರು. ಬ್ರಾಹ್ಮಣ ಮತ್ತು ಅಬ್ರಾಹ್ಮಣ ವಿಷಯಕ್ಕೆ ಸಂಬಂಧಿಸಿದಂತೆ ಆ ರೀತಿಯ ವಿದ್ವತ್ ಪೂರ್ಣ ಮಾತನ್ನು ನಾನಂತೂ ಕೇಳಿರಲಿಲ್ಲ. ಬೆಂಕಿಯೂ ಸಹ ನಾಗರಾಜನ ಮಾತಿಗೆ ಮರುಳಾಗಿ ಕೆಂಪಗಿದ್ದ ಬೆಳಕು ಬೆಳ್ಳಗಾಗಿತ್ತು, ಎಲ್ಲರೂ ತಲೆದೂಗಿದವರೆ. ಗಿರೀಶರವರು ಇಂಥ ಚರ್ಚೆಯನ್ನು ತುಂಬ ಸಂತೋಷವಾಗಿ ಸ್ವೀಕರಿಸುವಂಥವರು. ಇರಲಿ, ಗಿರೀಶ್‌ಕಾರ್ನಾಡರ ಜೊತೆ ಪ್ರವಾಸವೆಂದರೆ ಅದು ಬರೀ ಪ್ರವಾಸಗಿರೋದಿಲ್ಲ, ಅದೊಂದು ಅದ್ಭುತಲೋಕದ ಬಾಗಿಲು ತೆರೆದಂತೆ, ನನಗಂತೂ ಲಂಕೇಶ್‌ರವರ ಜೊತೆ ಪ್ರವಾಸ ಮಾಡುವಾಗಲೂ ಹೀಗೆ ಅನ್ನಿಸುತ್ತಿತ್ತು, ಹಾಗೆ ನೋಡಿದರೆ ಕಾರ್ನಾಡರು ಮೊದಲು ವೈಯುಕ್ತಿಕವಾಗಿ ಪರಿಚಯವಾಗಿದ್ದು ಬೆಂಗಳೂರಿನಲ್ಲಿ . ಪ್ರಸನ್ನ ಹೆಗ್ಗೋಡಿನ ಪಾರ್ಟಿಯ ರೀತಿಯಲ್ಲಿಯೇ ಒಂದು ದೊಡ್ಡ ಪಾರ್ಟಿಯನ್ನು ಹನುಮಂತನಗರದ ಮನೆಯಲ್ಲಿ ಮಾಡಿದ್ದರು. ಆಗ ಪ್ರಸನ್ನ ಮತ್ತು ಮಾಲತಿಯವರು ಬೇರೆಯಾಗಿರಲಿಲ್ಲ, ಬೇರೆಯಾಗುವುದಕ್ಕೆ ಮನಸ್ಸೆಂಬ ಮನೆಯೊಳಗೆ ಹೊಗೆ ತುಬಿಕೊಂಡಿತ್ತು, ಅಂದು ಅವರ ಮನೆಯ ಪಾರ್ಟಿಗೆ ಕೆ.ಎಂ.ಎಸ್‌ಮತ್ತು ನಾನು ಜೊತೆಯಲ್ಲಿಯೇ ಹೋದೆವು.

ಅದೊಂದು ಸಾಂಸ್ಕೃತಿಕವಾಗಿ ಸದಾ ನನ್ನ ಮನಸ್ಸಿನಲ್ಲಿ ಉಳಿದಿರುವ ಪಾರ್ಟಿ. ಸುಮಾರು ನಲವತ್ತು-ಐವತ್ತು ಮಂದಿಯ ಪಾರ್ಟಿ.ಅಂದು ಕೆ.ವಿ.ಸುಬ್ಬಣ್ಣ ಗಿರೀಶ್‌ಕಾರ್ನಾಡ್, ಚಂದ್ರಶೇಖರ ಕಂಬಾರ, ಬಿ.ವಿ.ಕಾರಂತ, ಪ್ರೇಮಕಾರಂತ, ಸತ್ಯಸಂಧ ಇನ್ನು ಅನೇಕ ರಂಗಭೂಮಿಯ ಘಟಾನುಘಟಿಗಳೆಲ್ಲ ಬಂದಿದ್ದರು. ಚರ್ಚೆ, ಹರಟೆ, ಹಾಡು ಎಲ್ಲವೂ ಏಕಕಾಲದಲ್ಲಿ ಮಿಶ್ರವಾಗಿತ್ತು. ಆಗ ಕಾರ್ನಾಡರು ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರು. ಯಾರೋ ನನ್ನ ಪಕ್ಕದಲ್ಲಿ ಕೂತಿದ್ದವರು ತುಂಬ ಚಿಲ್ಲರೆಯಾಗಿ "ನೋಡಿ, ಕಂಬಾರರು ಗಿರೀಶರವರನ್ನು ಎಷ್ಟು ಪೂಸಿ ಹೊಡೆಯುತ್ತಿದ್ದಾರೆ. ಸಂಗೀತ ನೃತ್ಯ ಅಕಾಡೆಮಿಯ ಪ್ರಶಸ್ತಿಗಾಗಿ" ಎಂದು ಹೇಳಿದ್ದಾಗ ಇದನ್ನು ಕೇಳಿಸಿಕೊಂಡ ಕೆ.ಎಂ.ಎಸ್‌ರವರು ತುಂಬ ವೈಲ್ಡ್ ಆದರು. "ಏನ್ರೀ ನಾಚಿಕೆ ಇಲ್ಲದೆ ಮತಾಡ್ತೀರಿ. ಕಂಬಾರರು ಒಬ್ಬ ದೊಡ್ಡ ಕವಿ ಮತ್ತು ನಾಟಕಕಾರರು. ಹಾಗೆಯೇ ಅವರಿಬ್ಬರೂ ಸ್ನೇಹಿತರು.ಅದನ್ನು ಮರೆತು ಹೀಗೆಲ್ಲ ಬಾಯಿಗೆ ಬಂದಂತೆಲ್ಲ ಮಾತಾಡಬೇಡಿ. ಹೋಗಿದೂರ ಕೂತ್ಕೊಳ್ಳಿ" ಎಂದು ಉಗ್ರವಾಗಿ ಹೇಳಿದರು. ಆ ವ್ಯಕ್ತಿಯ ವ್ಯಕ್ತಿತ್ವವೇ ಆ ರೀತಿ ಇದ್ದುದರಿಂದ ಏನೂ ಆಗದವರಂತೆ ಕೂತೇ ಇದ್ದರು. ಕೊನೆಗೆ ನಾನು ಮತ್ತು ಕೆ.ಎಂ.ಎಸ್‌ರವರು ಕೆ.ವಿ.ಸುಬ್ಬಣ್ಣ, ಕಂಬಾರರು ಹಾಗೂ ಗಿರೀಶರು ಇದ್ದಲ್ಲಿಗೆ ಹೋದೆವು. ಇದಾದ ಮೇಲೆ ಗಿರೀಶರು, ಕಂಬಾರರು ಹಾಗೂ ಕೆ.ವಿ.ಸುಬ್ಬಣ್ಣನವರು ಹೊರಟರು. ನಾವೆಲ್ಲ ಉಪ್ಪರಿಗೆಯ ಮೇಲೆ ಹೋಗಿ ಕೂತೆವು. ಬಿ.ವಿ.ಕಾರಂತರು ಒಂದಷ್ಟು ರಂಗ ಗೀತೆಗಳನ್ನು ಹಾಡಲು ಪ್ರಾರಂಭಿಸಿದ್ದರು.; "ಎಲ್ಲಾದರೂ ಹಾರ್ಮೊನಿಯಂ ವ್ಯವಸ್ಥೆ ಮಾಡಿ. ಕಾರಂತರು ಹಾರ್ಮೋನಿಯಂ ನುಡಿಸಿದ್ದನ್ನು ಕೇಳಿ ತುಂಬ

ದಿವಸವಾಯಿತು.'' ಎಂದಾಗ ಪಕ್ಕದಲ್ಲಿಯೇ ಇದ್ದ ಕಪ್ಪಣ್ಣ ಮುಂದಿನ ವಾರ ನಮ್ಮ ಮನೆಯಲ್ಲಿ ವ್ಯವಸ್ಥೆ ಮಾಡ್ತೀನಿ ಬಿಡಿ ಮೇಸ್ಟ್ರೇ'' ಎಂದು ಹೇಳಿದ್ದರು. ಈ ರೀತಿಯ ಪಾರ್ಟಿಗಳನ್ನು ಕಪ್ಪಣ್ಣನವರಷ್ಟು ಕಲಾತ್ಮಕವಾಗಿ ನಾವ್ಯಾರೂ ಮಾಡಲಾಗುವುದಿಲ್ಲ. ಅದೊಂದು 'ಕಲ್ಚರಲ್ ಈವೆಂಟ್' ಆಗಿಯೇ ಇರುತ್ತದೆ. ಪ್ರೀತಿ, ಪ್ರೇಮ, ನೋಟ,ಚಿಂತನೆ, ಹಾಡು, ಕುಣಿತ ಎಲ್ಲವೂ ಜೀವಪಡೆದು ಭಾವನಾತ್ಮಕವಾಗಿ ಮುಗಿದಿರುತ್ತದೆ. ಕಪ್ಪಣ್ಣನವರ ಪಾರ್ಟಿಯಲ್ಲಿ ಡಾ||ಹೆಚ್.ಎನ್.ರಂಥವರೂ ಪುಳಕಿತರಾಗಿ ಬಿಟ್ಟಿರುತ್ತಾರೆ.

ಅಂದು ರಾತ್ರಿ ಇದ್ದಕ್ಕಿದ್ದಂತೆ ಬಿ.ವಿ.ಕಾರಂತರು ''ನಾನು ಭೂಪಾಲ್‌ಗೆ ಹೋಗುತ್ತೇನೆ.'' ಎಂದು ಭಾವುಕರಾಗಿ ಕಣ್ಣೀರು ಸುರಿಸುತ್ತ ಓಡೇ ಬಿಟ್ಟರು. ಭೂಪಾಲ್‌ನಲ್ಲಿ ಕಟ್ಟಿದ ಆ ಭಾರತ್ ಭವನ್ ಕಾರಂತರ ಕೂಸಾಗಿತ್ತು. ಎಲ್ಲರೂ ತಮಾಷೆಗೆ ಎಂದು ತಿಳಿದು ತಮ್ಮ ತಮ್ಮಲ್ಲಿ ತಲ್ಲೀನರಾಗಿದ್ದಾಗ, ಕೊನೆಗೆ ಯಾರೋ ಕಾರಂತರನ್ನು ರಸ್ತೆಯಲ್ಲಿ ಓಡುತ್ತಿದ್ದವರನ್ನು ಗೆಳೆಯರು ಹಿಡಿದು ತಂದಿದ್ದರು. ಆ ದಿನಗಳು ಭೂಪಾಲ್‌ನ ವಿಭಾಪ್ರಕರ್ಣದ ಸಮಸ್ಯೆ ತುತ್ತತುದಿಯಲ್ಲಿದ್ದ ದಿನಗಳು. ನಿಜವಾಗಿಯೂ ಕೆ.ಎಂ.ಎಸ್‌ರವರು ನನ್ನನ್ನು ಮತ್ತು ಡಿ.ಆರ್.ನಾಗರಾಜ್‌ನನ್ನ ಲಂಕೇಶ್‌ರವರ ಆಫೀಸಿಗೆ ಕರೆದರು. ಹೋದೆವು. ಇಡೀ ವಿಭಾಪ್ರಕರಣವನ್ನು ವಿವರಿಸಿ ''ಕಾರಂತರಿಗೆ ನೀವು ರಕ್ಷಣೆ ಕೊಡಬೇಕು. ಈಗ ಮಾನಸಿಕವಾಗಿ ಅವರನ್ನು ಕಾಪಾಡಬೇಕು'' ಎಂದು ತಿಳಿಸಿದೆವು. ಲಂಕೇಶ್‌ರವರು ಪತ್ರಿಕೆಯ ಮೂಲಕ ಕಾರಂತರನ್ನು ಕೋಟೆಯ ರೀತಿಯಲ್ಲಿ ಕಾಪಾಡಿದರು. ಇದೇ ಸಮಯದಲ್ಲಿ ಕೆಲವರು ಸ್ತ್ರೀವಾದಿ ಸಂಘಟನೆಯವರು ನಮ್ಮ ಮೇಲೆ ಕಿಡಿ ಕಾರಿದ್ದರು. ಅದನ್ನೆಲ್ಲ ನಾವು ಆತ್ಮೀಯವಾಗಿಯೇ ತೆಗೆದುಕೊಂಡೆವು. ಇರಲಿ, ಲಂಕೇಶ್‌ರವರು 'ಮುಕ್ತ' ಪತ್ರಿಕೆಯಲ್ಲಿ ಬಿ.ವಿ.ಕಾರಂತರನ್ನು ಕುರಿತು ಬರೆಯುವಾಗ 'ದ.ಕಗಳು ನಂಬಿಕೆಗೆ ಅನರ್ಹರು' ಎಂದು ಬರೆದಿದ್ದರು. ಅದಕ್ಕೆ ಕಾರಂತರು ಲಂಕೇಶ್‌ರವರ ಎದುರು ಬಂದಾಗಲೆಲ್ಲ ಸಿಡಿಮಿಡಿಗೊಳ್ಳುತ್ತಿದ್ದರು. ಒಮ್ಮೆ ಲಂಕೇಶ್‌ರವರ ಜೊತೆ ಕೆ.ಎಂ.ಎಸ್, ಟಿ.ಎನ್.ಸೀತಾರಾಂ ಹಾಗೂ ನಾನು ಬೆಂಗಳೂರಿನ ಗಂಧರ್ವದಲ್ಲಿ ಬಿಯರ್ ಕುಡಿಯುತ್ತಿದ್ದೆವು. ಬಿ.ವಿ.ಕಾರಂತರು, ಸುಮತೀಂದ್ರನಾಡಿಗರ ಜೊತೆಯಲ್ಲಿ ಬಂದರು. ಲಂಕೇಶ್‌ರವರು ''ಬನ್ನಿ ಕಾರಂತರೇ'' ಎಂದರು. ''ಇಲ್ಲ ನಾವು ದ.ಕ.ಗಳು ನಂಬಿಕೆಗೆ ಅರ್ನಹರು, ನಿಮ್ಮ ಜೊತೆ ಕೂತ್ಕೋಬಾರದು'' ಎಂದಾಗ ಲಂಕೇಶರವರು ಮುಸಿ ಮುಸಿ ನಗುತ್ತ ''ವೆರಿ ಫೈನ್‌ಮ್ಯಾನ್, ನೋಡ್ರೀ ಆ ಮನುಷ್ಯ ಕಾವ್ಯದ ಸಾಲುಗಳ ರೀತಿಯಲ್ಲಿ ಇನ್ನು ಅದನ್ನು ನೆನಪಿನಲ್ಲಿಟ್ಟುಕೊಂಡಿದ್ದಾರೆ'' ಎಂದಿದ್ದರು.

ಕೃತಜ್ಞತಾ ಭಾವನೆಯನ್ನು ಬಿ.ವಿ.ಕಾರಂತರು ಬೆಳೆಸಿಕೊಂಡಿದ್ದರು. ರಂಗಭೂಮಿಯಲ್ಲಿ ಕ್ರಿಯಾಶೀಲ ಪ್ರಯೋಗದ ದೂರದೃಷ್ಟಿಯಿದ್ದುದರಿಂದ ಕೆ.ಎಂ.ಎಸ್.ರವರ ರಂಗತಜ್ಞತೆಯನ್ನು ಬಳಸಿಕೊಂಡರು. ಹಾಗೆಯೇ ರಂಗಾಯಣದ ಬೆಳವಣಿಗೆಯಲ್ಲಿ ಎಲ್ಲ ಹಂತಗಳಲ್ಲಿಯೂ ಇವರ ಸಲಹೆ ಸೂಚನೆಗಳನ್ನು ಕಾರಂತರು ಬಳಸಿಕೊಂಡರು, ಒಂದುಹಂತದಲ್ಲಿ ರಂಗಾಯಣ ನಾನಾ ರೀತಿಯ ಆಕ್ಷೇಪಣೆಗಳಿಗೆ ಪಕ್ಕಾದಾಗ ಒಂದು ರೀತಿಯ ಮಾನಸಿಕಧೈರ್ಯವನ್ನು ತುಂಬಿದರು. ಇದಕ್ಕಾಗಿ ನಾವು ಒಂದಷ್ಟು ಮಂದಿ ಕೆ.ಎಂ.ಎಸ್‌ರವರ ಮೂಲಕ ಆಗಿನ ಸರ್ಕಾರದ ಸಚಿವಸಚಿವರಾದ ಎಂಪಿ ಪ್ರಕಾಶ್‌ರವರನ್ನು ಭೇಟಿಯಾಗಿದ್ದೆವು. ಇದಕ್ಕಿಂತ ಮೊದಲು ನಾವೆಲ್ಲ ಕಾರಂತರ ಒಂದು ಪ್ರಯೋಗವನ್ನು ನೋಡುವ ನೆಪದಲ್ಲಿ ರಂಗಾಯಣದ ಒಟ್ಟು ಸಾಧನೆಯನ್ನು

ಅರಿಯಲು ಮೈಸೂರಿಗೆ ಹೋಗಿದ್ದೆವು. ಇದರಲ್ಲಿ ಲೇಖಕರು, ರಂಗತಜ್ಞರು ಹಾಗೂ ಭಾರತದ ರಂಗಭೂಮಿ ಪಡೆದ ಅಪರೂಪದ ಚಿಂತಕ ಮತ್ತು ನಿರ್ದೇಶಕರಿದ್ದರು. ಯಾಕೆಂದರೆ 1981ರಲ್ಲಿ ನಾನು ದೆಹಲಿಯಲ್ಲಿ ವಿವಿಧ ಕಲೆಗಳ ಅಧ್ಯಯನ ತರಬೇತಿ ಶಿಬಿರಕ್ಕೆ ಹೋಗಿದ್ದಾಗ, ಎಷ್ಟೋ ರಾತ್ರಿಗಳು ಕಾರಂತರನ್ನು ತುಂಬ ಹತ್ತಿರದಿಂದ ನೋಡಲು ಸಾಧ್ಯವಾಗಿತ್ತು. ಆಗಲೇ ನನಗೆ ಜಯತೀರ್ಥಜೋಶಿ ಹಾಗೂ ವಿಭಾಮಿಶ್ರರವರಂಥ ಜೀನಿಯಸ್‌ಗಳು ಪರಿಚಯವಾಗಿದ್ದು. ಒಂದು ದಿನ ಸಂಜೆ ಗೋವಿಂದ ನಿಹಲಾನಿ, ಅಮರೀಶಪುರಿ ಹಾಗೂ ಕಾರಂತರೊಡನೆ ಕಳೆಯುವ ಸುಯೋಗವನ್ನು, ಶಾಬಾಲುರಾವ್ ಅವರು ವ್ಯವಸ್ಥೆಮಾಡಿಕೊಟ್ಟಿದ್ದರು. ಅದೊಂದು ಸ್ಮರಣೀಯ ಸಂಜೆ.

ಇರಲಿ, ಅಂದು ಬೆಂಗಳೂರಿನಲ್ಲಿ ಪ್ರಸನ್ನರವರ ಪಾರ್ಟಿ ಏನೇನೋ ಮಗ್ಗುಲುಗಳನ್ನು ಪಡೆದಿತ್ತು. ಕೊನೆಗೆ ನಾವು ಹೊರಡುವಾಗ ಸತ್ಯಸಂಧರವರ ಮೋಟಾರ್ ಬೈಕ್ ಮೇಲೆ ನಾನು ಮತ್ತು ಇನ್ನೊಬ್ಬರು ಕೂತುಕೊಂಡೆವು. ತುಂಬ ಸ್ಪೀಡಾಗಿ ಓಡಿಸಿಕೊಂಡು ಹೋದರು. ನಾವು ಕಾರಂತರ ಮನೆಗೆ ಹೋಗಬೇಕಾಗಿತ್ತು. ತಕ್ಷಣ ಸತ್ಯಸಂಧ "ಶೂದ್ರ" ಎಂದು ಬ್ರೇಕ್ ಹಾಕಿದರು. ಮುಂದೆ ಮನೆಯ ನಿರ್ಮಾಣಕ್ಕೆ ಮಣ್ಣೆತ್ತಿದ್ದರಿಂದ 15 ಅಡಿಗಳ ಹಳ್ಳವಿತ್ತು. ಗಾಡಿ ಹಳ್ಳದ ತುದಿಯಲ್ಲಿ ಹೋಗಿನಿಂತಿತು. ಒಂದು ಕ್ಷಣ ನಾವು ಮೂರೂ ಮಂದಿ ಬೆವತು ನಿಂತಿದ್ದೆವು. ಇದಾದ ಕೆಲವು ತಿಂಗಳಲ್ಲಿ ಸತ್ಯಸಂಧ ಎಂಬ ಆ ಜೀನಿಯಸ್ ಹೃದಯಾಘಾತಕ್ಕೆ ಒಳಗಾಗಿದ್ದರು. ಈ ಸಮಯಕ್ಕೆ ಪ್ರಸನ್ನ ಮತ್ತು ಮಾಲತಿಯವರು ಪ್ರತ್ಯೇಕಗೊಂಡಿದ್ದರು. ಆದರೂ ನಮ್ಮ ಸಾಂಸ್ಕೃತಿಕ ಲೋಕದ ಈ ತಿಕ್ಕಲುಗಳು ನಾವೆಲ್ಲ ಸೇರಿದಾಗ ಇವರೂ ಸೇರುತ್ತಿದ್ದರು. ಆಗ ವಿಷಾದದಿಂದ ಒಬ್ಬರ ಮುಖವನ್ನೊಬ್ಬರು ನೋಡಿಕೊಳ್ಳುತ್ತಿದ್ದರು. ಭೇಟಿಯಾಗಿ ಏನೇನೋ ಮಾತು ಕತೆಯೂ ಆಗಿದೆ. ಎಷ್ಟಾದರೂ .ಮನುಷ್ಯರು ಅಲ್ಲವೇ? ಹೀಗೆ ನಮ್ಮಂಥ ಬಹುಪಾಲು ಮಂದಿಯನ್ನು ಕೆ.ಎಂ.ಎಸ್‌ರವರು ಮನುಷ್ಯರಾಗಿ ಷೇಪ್ ಮಾಡಿದ್ದಾರೆ ಎಂಬುದು ಬಹಳ ಮುಖ್ಯ.

## ಎರಡನೆಯ ಬಾರಿ ದತ್ತಪೀಠಕ್ಕೆ.........

ಬೆಂಗಳೂರಿನ ತುಂಬ ಎಲ್ಲೆಂದರಲ್ಲಿ ವಿಶ್ವಹಿಂದೂಜಾಗರಣ ಸಭೆಯ ಬ್ಯಾನರ್‌ಗಳು ಮಿಂಚುತ್ತಿದ್ದುವು. ಇದರ ಕೆಳಗೆ ನೂರಾರು ಮಂದಿ ಕಾರ್ಯಕರ್ತರು 'ಮತೀಯ ಸಾಮರಸ್ಯ'ದ ಕರಪತ್ರಗಳನ್ನು ಸೇರಿಸಿ ಒಂದು ಬೃಹತ್‌ಸಭೆಯನ್ನು ಕೆ.ಎಸ್.ವಿಮಲಾರವರು ಹಾಗೂ ಅವರ ಗೆಳೆಯರ ಸಂಘಟನೆಗಳು ರೂಪಿಸಿದ್ದರು. ಅದೊಂದು ವೈವಿಧ್ಯಮಯವಾದ ಸಭೆ. ಮೊದಲನೆಯ ಬಾರಿ ಸಾವಿರಕ್ಕೂ ಮೇಲ್ಪಟ್ಟು ಮುಸಲ್ಮಾನ್ ಗೆಳೆಯರು ಬಂದು ಭಾಗವಹಿಸಿದ್ದರು. ಕೆ.ಎಂ.ಎಸ್‌ರವರಂತೂ "ಇದೊಂದು ಆರೋಗ್ಯಪೂರ್ಣ ಬೆಳವಣಿಗೆ" ಎಂದು ಖುಷಿಯಿಂದ ಇದ್ದರು. ಸಭೆಯನ್ನುದ್ದೇಶಿಸಿ ನಾವೆಲ್ಲ ಮಾತಾಡುವಾಗ ಇದನ್ನು ಪ್ರಸ್ತಾಪಿಸಿದ್ದೆವು. ಶಾಂತಿಸಭೆ ಮುಂದುವರೆದಿತ್ತು. ಕೆ.ಎಂ.ಎಸ್, ಗಿರೀಶ್‌ಕಾರ್ನಾಡ್, ಡಾ||ಜಿ.ರಾಮಕೃಷ್ಣ ಜಿ.ಕೆ.ಗೋವಿಂದರಾವ್, ಪಾರ್ಥಸಾರಥಿ, ಡಾ||ವಿಜಯಮ್ಮ ಅರುಂಧತಿನಾಗ್, ಕೆ.ಎಂ.ಎಸ್‌ರವರ ಮಗ ಚೈತನ್ಯ ಮುಂತಾದವರು ಎರಡು ಟಾಟಾ ಸುಮೋಗಳಲ್ಲಿ ಹೊರಟೆವು. ದಾರಿಯುದ್ದಕ್ಕೂ ಗಿರೀಶರವರ ಉತ್ಸಾಹಭರಿತ ಮಾತುಕತೆ ಅದಕ್ಕೆ ಬೇಕಾದ ಪೂರಕ ಸಂಗತಿಗಳು ಸೇರಿಕೊಂಡಿದ್ದುವು.

ಗಿರೀಶ್‌ರವರು ಬೇಲೂರಿನಲ್ಲಿ ಉಳಕೊಳ್ಳಲು ವಸತಿಯ ವ್ಯವಸ್ಥೆಯನ್ನು ಮಾಡಿದ್ದರು. ನಾವು ರಾತ್ರಿ ಹನ್ನೆರಡು ಗಂಟೆ ಸುಮಾರಿಗೆ ಹಳೆಯಬೀಡು ದಾಟಿಮುಂದೆ ಹೋದಾಗ ಅಲ್ಲಿಯೇ ವೃತ್ತದ ಬಳಿ ಪೋಲೀಸರು ರಸ್ತೆಗಳಿಗೆ ತಡೆಹಾಕಿದ್ದರು. ಕೊನೆಗೆ ನಮ್ಮನ್ನು ವಿಚಾರಿಸಿ ಅಲ್ಲಿಯೇ ಮುಂದೆ ಹೋಗಲು ಬಿಡಲಿಲ್ಲ. ಅಲ್ಲಿ ಸುಮಾರು ವಾದವಿವಾದಗಳು ನಡೆದುವು. ಏನು ಮಾಡಿದರೂ ಬೇಲೂರಿನ ವಸತಿಗೃಹಕ್ಕೆ ಬಿಡಲಿಲ್ಲ. ಪೋಲೀಸರು ತಮ್ಮ ಹಳೆಯಬೀಡಿನ ಪೋಲೀಸ್ ವಸತಿಗೃಹದಲ್ಲಿ ವ್ಯವಸ್ಥೆ ಮಾಡುತ್ತೇವೆ. ಅಲ್ಲಿ ಇರಲು ಪ್ರಯತ್ನಿಸಿ, ನಿಮಗೇನು ತೊಂದರೆಯಾಗುವುದಿಲ್ಲ ಎಂದು ಸೂಚಿಸಿದರು. ಆದರೆ ನಮ್ಮಲ್ಲಿ ಬಹುಪಾಲು ಮಂದಿ "ಅದೊಂದು ರೀತಿಯ ಗೃಹಬಂಧನ ನಾವು ಅದಕ್ಕೆ ಸಿದ್ಧರಿಲ್ಲ" ಎಂದರು. ಕೊನೆಗೆ ಹಾಸನದಿಂದ ಎಸ್.ಪಿ. ಪ್ರಭಾಕರರಾಣೆಯವರು ಬಂದರು. ಅದಕ್ಕಿಂತ ಮೊದಲು ಸರಸ್ವತಿಯವರ ಗುಂಪಿನ ಒತ್ತಾಯದ ಮೇರೆಗೆ ಬೆಂಗಳೂರಿಗೆ ಸುಭಾಷ್‌ಭರಣಿಯವರನ್ನು ಸಂಪರ್ಕಿಸಿದರು. ಅವರು ಸ್ಥಳೀಯ ಪೋಲೀಸ್ ಅಧಿಕಾರಿಗಳು ಏನು ಹೇಳುತ್ತಾರೋ ಅದರಂತೆ ನಡಕೊಳ್ಳಿ ಎಂದು ಸೂಚಿಸಿದರು. ವಾಪಸ್ಸು ಬಂದರು. ಕೊನೆಗೆ ಕೆ.ಎಂ.ಎಸ್ ಹಾಗೂ ಗಿರೀಶ್‌ರವರು "ಸುಮ್ಮನೆ ಇಂದೇ ಬಂಧನಕ್ಕೆ ಒಳಗಾಗುವುದರಲ್ಲಿ ಅರ್ಥವಿಲ್ಲ. ಅವರು ಹಾಸನಕ್ಕೆ ಕರೆದೊಯ್ಯುತ್ತಿದ್ದಾರೆ. ನಾಳೆ ಅಲ್ಲಿ ಪ್ರತಿಭಟನೆಯ ಕಾರ್ಯಕ್ರಮ ಮಾಡಿ ; ಮುಂದಿನ ವಿಚಾರ ಅಲ್ಲಿ ತೀರ್ಮಾನಿಸೋಣ ಎಂದು ತಿಳಿಸಿದಾಗ ಅದರಂತೆ ಪೋಲೀಸರು ನಮ್ಮನ್ನು ರಾತ್ರಿ ಮೂರುಗಂಟೆಗೆ ಹಾಸನಕ್ಕೆ ಕರೆತಂದು ಹೋಟೆಲ್‌ನಲ್ಲಿ ತಂದು ಬಿಟ್ಟರು. ಎಲ್ಲಿಂದಲೋ ತಿಂಡಿ ತರಿಸಿಕೊಟ್ಟರು. ಆಗ ನಾಲ್ಕು ಗಂಟೆಯಾಗಿತ್ತು. ಆದರೆ ಡಾ|| ವಿಜಯಮ್ಮ ಮುಂತಾದವರು ಹೋಟೆಲ್‌ನಲ್ಲಿ ಇರಬಯಸಲಿಲ್ಲ. ಹಿಂದೂ ಪತ್ರಿಕೆಯ ವರದಿಗಾರ ಮುರಳೀಧರ ಖಜಾನೆಯ ಮನೆಗೆ ಹೋದ ವಿಷಯ ತಿಳಿಯಿತು. ನನಗೆ ನಂತರ ಗೊತ್ತಾಯಿತು. ಇಲ್ಲದಿದ್ದರೆ ನಾನೂ ಹೋಗಿ ಖಜಾನೆಗೆ ತೊಂದರೆ ಕೊಡುತ್ತಿದ್ದೆ.

ಮಾರನೆಯ ದಿನ ಬೆಳಿಗ್ಗೆ ಪತ್ರಿಕೆಗಳ ತುಂಬ ದತ್ತಪೀಠದ ಸುದ್ದಿ. ಚಿಕ್ಕಮಗಳೂರಿನಲ್ಲಿ ತುಂಬ ಜನರನ್ನು ಬಂಧಿಸಿದ್ದರು. ಎಲ್ಲೆಲ್ಲಿಂದಲೊ ಯಾರ‍್ಯಾರೋ ಬಂದರು. ನೂರಾರು ಜನ ಸೇರಿದರು. ಹಾಸನದ ಹೋರಾಟದ ಹೀರೋಯಿನ್ ಬಾನು ಮುಷ್ತಾಕ್ ಮತ್ತು ಅವರ ಗುಂಪು ಸೇರಿಕೊಂಡಿತು. ಹಿಂದಿನ ದಿವಸ ಅವರೂ ಬಂದನಕ್ಕೊಳಗಾಗಿ ಬಿಡುಗಡೆಯಾಗಿದ್ದರು. ಅಂದು ಹಾಸನದ ಮುಖ್ಯರಸ್ತೆಗಳಲ್ಲಿ ಮೆರವಣಿಗೆ ಇತ್ತು. ಮಾನವ ಸರಪಳಿಯನ್ನು ಏರ್ಪಡಿಸಿದೆವು. ನಂತರ ಸುಮಾರು ಮೂರು ಗಂಟೆ ಉರಿಬಿಸಿಲಿನಲ್ಲಿ ಮತಾಂಧರ ವಿರುದ್ಧ ಪ್ರತಿಭಟನೆಯ ಸಭೆ ಇತ್ತು. ಇದಾದ ನಂತರ ಮತ್ತೆ ಪೋಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಮುಂದೆ ಪ್ರತಿಭಟನೆ ಹಾಗೂ ಧರಣಿ ತುಂಬ ಅರ್ಥಪೂರ್ಣವಾಗಿತ್ತು. ಇಷ್ಟಾದರೂ ಕೆಲವರು ಬಂಧನಕ್ಕೆ ಸಿದ್ಧವಾಗಿದ್ದರು. ಕೊನೆಗೆ ಧರಣಿ ಮುಕ್ತಾಯಗೊಳಿಸಿ ಬೆಂಗಳೂರಿನ ಕಡೆ ಹೊರಡಲು ಸಿದ್ಧವಾಗಿದ್ದೆವು. ಪ್ರಭಾಕರರಾಣೆಯವರು ಹಾಗೂ ಅಲ್ಲಿಯ ಇನ್‌ಸ್ಪೆಕ್ಟರ್ ಭರತ್‌ರೆಡ್ಡಿಯವರು ಅತ್ಯಂತ ಸಭ್ಯತೆಯಿಂದ ನಡಕೊಂಡರು.ಭರತ್‌ರೆಡ್ಡಿ ಹಿರಿಯ ಸಾಹಿತಿ ಗಿರಡ್ಡಿ ಗೋವಿಂದರಾಜ್‌ರವರ ಸಂಬಂಧಿಕರು.

ಎಲ್ಲರೂ ಚೆಲ್ಲಾಪಿಲ್ಲಿಯಾದರು. ಕೆಲವರು ಪೋಲೀಸರಿಗೆ ಗೊತ್ತಾಗದೆ ಚಿಕ್ಕಮಗಳೂರಿಗೆ ಹೋದರು. ನಾವು ವ್ಯಾನಿನಲ್ಲಿ ಬೆಂಗಳೂರಿನ ಕಡೆ ಹೊರಟೆವು. ನಾವು ಮತ್ತೆ ಸುತ್ತಿ ಬಳಸಿ ಚಿಕ್ಕಮಗಳೂರಿಗೆ ಹೋಗಬಹುದೆಂದು ಪೋಲೀಸರ ಗುಮಾನಿಯಿತ್ತು. ಆದ್ದರಿಂದ ಚನ್ನರಾಯ

ಪಟ್ಟಣದವರೆವಿಗೂ ಭರತ್‌ರೆಡ್ಡಿ ಹಾಗೂ ಇನ್ನೊಬ್ಬ ಪೋಲೀಸ್ ಇನ್‌ಸ್ಪೆಕ್ಟರ್ ನಮ್ಮನ್ನು ಹಿಂಬಾಲಿಸಿಯೇ ಬಂದರು. ಕೆ.ಎಂ.ಎಸ್‌ರವರು "ಭರತ್‌ರೆಡ್ಡಿಯವರೇ ದಯವಿಟ್ಟು ವಾಪಸ್ಸು ಹೋಗಿ ನಾವು ಚಿಕ್ಕಮಗಳೂರಿಗೆ ಹೋಗುವುದಿಲ್ಲ" ಎಂದಾಗ "ಇಲ್ಲ ಸರ್, ಯಾರಾದರೂ ಸಮಾಜ ಘಾತುಕರು ನಿಮಗೆ ತೊಂದರೆ ಕೊಡಬಹುದು. ಆದ್ದರಿಂದ ನಮ್ಮ ಜಿಲ್ಲೆಯ ಬಾರ್ಡರ್‌ತನಕ ನಿಮಗೆ ರಕ್ಷಣೆ ಕೊಡಬೇಕಾಗಿದೆ. ರಾಣೆ ಸಾಹೇಬರು ಮತ್ತೆ ಮತ್ತೆ ಹೇಳಿದ್ದಾರೆ ಅವರಿಗೇನು ತೊಂದರೆಯಾಗಕೂಡದು" ಎಂದರು ವಿನಯದಿಂದ. "ನಿಮನ್ನು ನೋಡಿದರೆ ಅಯ್ಯೋ ಅನ್ನಿಸ್ತದ್ರೀ" ಎಂದರು ಗಿರೀಶರವರು. ಅವರು ಮೌನಿಗಳಾಗಿ ತಮ್ಮ ಕರ್ತವ್ಯವನ್ನು ಮುಂದುವರೆಸಿ ಮರೆಯಾದರು.

ಸಾವಿರಾರು ಮಂದಿ ಪೋಲೀಸರ ನಡುವೆ ವಿಎಚ್‌ಪಿಯವರು ಹಾಗೂ ಭಜರಂಗದಳದವರು ತಮ್ಮ ಕಾರ್ಯವನ್ನು ನೆರವೇರಿಸಿಕೊಂಡು ಸಂತೋಷಪಟ್ಟರು. ನೂರಾರು ಮಂದಿ ಸಾಮರಸ್ಯದ ಕಾರ್ಯಕರ್ತರು ತೊಂದರೆಯನ್ನುಭವಿಸಿದರು. ಆದರೂ ಕರ್ನಾಟಕದ ಪ್ರಗತಿಪರ ಚಿಂತಕರು ಹಾಗೂ ಹೋರಾಟಗಾರರು ಒಂದೆಡೆ ಸೇರುವಂತಾಯಿತು ಎನ್ನುವುದೇ ಸಂತೋಷದ ಸಂಗತಿ.

ಇದಾದ ಮೇಲೆ ಮತೀಯವಾದಿಗಳನ್ನು ವಿರೋಧಿಸಲು ಬೆಂಗಳೂರಿನ ಜನಪದ ಹೋರಾಟ ಸಂಸ್ಥೆಯು ಡಿಸೆಂಬರ್ 28ರಂದು ಭಾನುವಾರ ಚಿಕ್ಕಮಗಳೂರಿನಲ್ಲಿ ಬೃಹತ್‌ಕಾರ್ಯಕ್ರಮವನ್ನು ರೂಪಿಸಿತು. ಅದಕ್ಕೆ ಸಂಬಂಧಿಸಿದ ಪತ್ರಿಕಾಗೋಷ್ಠಿಯಲ್ಲಿ ಕೆ.ಎಂ.ಎಸ್‌ಮತ್ತು ನಾನು ಭಾಗವಹಿಸಿದ್ದೆವು. ಆದರೆ ಆ ಕಾರ್ಯಕ್ರಮಕ್ಕೆ ಬರಲಾಗುವುದಿಲ್ಲ ಎಂದು ಸೂಚಿಸಿದೆವು. ಯಾಕೆಂದರೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದವರು ಮೊದಲೇ ಕೆ.ಎಂ.ಎಸ್‌ರವರ 'ಒಡನಾಟ' ಕೃತಿಯ ಬಿಡುಗಡೆಯ ಕಾರ್ಯಕ್ರಮವನ್ನು ವ್ಯವಸ್ಥೆ ಮಾಡಿದ್ದರು. ಆ ಕೃತಿಯನ್ನು ಕುರಿತು ನಾನು ಮಾತಾಡಬೇಕಾಗಿತ್ತು.ನಾನು ಇತ್ತೀಚೆಗೆ ಓದಿದ ಅತ್ಯುತ್ತಮ ಪುಸ್ತಕ. ಕೃತಿಯನ್ನು ಅಗ್ರಹಾರ ಕೃಷ್ಣಮೂರ್ತಿ ಬಿಡುಗಡೆ ಮಾಡಿ ಮಾತಾಡಿದರು. ನಂತರ ಈ ಮಾಸ ನಾಟಕ ಪತ್ರಿಕೆಯ ಸಂಪಾದಕ ಎಲ್.ಕೃಷ್ಣಪ್ಪ ಜೊತೆ ಜೆಪಿನಗರದ ಕ್ಲಬ್‌ಗೆ ಬಂದು ಕಾರ್ಯಕ್ರಮದ ಸಂತೋಷವನ್ನು ಕೆಎಂಎಸ್‌ರವರ ಜೊತೆ ಹಂಚಿಕೊಂಡೆವು. ಆಗಲೂ 'ಒಡನಾಟ' ಕೃತಿಯ ವಿವಿಧ ಮುಖಗಳನ್ನು ಕುರಿತು ನಾವು ಚರ್ಚಿಸಿದ್ದೆವು. ಕೆ.ಎಂ.ಎಸ್‌ರವರು ಹೆಚ್ಚು ಬರೆಯಬೇಕು ಎಂಬ ಶುಭದ ಮಾತಿನ ಮಧ್ಯೆ ನಾವು ಮನೆಗಳಿಗೆ ತೆರಳಿದ್ದೆವು.

## ಕನ್ನಡ ವಿಭಾಗ ಮತ್ತು ಒಕ್ಕೂಟ

### ಎಪ್ಪತ್ತರ ದಶಕದಲ್ಲಿ ರೂಪುಗೊಂಡ "ಸಾಹಿತಿ ಕಲಾವಿದರ ಒಕ್ಕೂಟ"

ಸಾಂಸ್ಕೃತಿಕವಾಗಿ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅತ್ಯಂತ ಮಹತ್ವಪೂರ್ಣವಾದದ್ದು. ನಾನಾ ರೀತಿಯ ಹೊಸ ಹೊಸ ಲೇಖಕರು ಇಲ್ಲಿ ಸೃಷ್ಟಿಯಾದರು. ಇದು ಬದುಕಿದ್ದು ಕೆಲವೇ ವರ್ಷವಾದರೂ ಚೇತೋಹಾರಿ ವಾತಾವರಣವನ್ನು ಕೊಟ್ಟಿತು. ಇದರ ಪ್ರಾರಂಭದ ಕಾರ್ಯದರ್ಶಿ ನಾನಾಗಿದ್ದೆ. ಲಂಕೇಶ್, ತೇಜಸ್ವಿ, ಜಿ.ಎಸ್.ಶಿವರುದ್ರಪ್ಪ ಚಂದ್ರಶೇಖರಪಾಟೀಲ ಸಿದ್ಧಲಿಂಗಶೆಟ್ಟಿ, ಡಾ||ಬೆಸಗರಹಳ್ಳಿ ರಾಮಣ್ಣ ಈ ರೀತಿಯ ನಾನಾ ಲೇಖಕರು ಇಲ್ಲಿ ಭಾಗಿಯಾದರು. ಇದು

ಹುಟ್ಟಿಕೊಂಡ ದಿವಸ ಬೆಂಗಳೂರು ಬಂದ್ ಇತ್ತು. ಲಂಕೇಶ್‌ರವರು ಮತ್ತು ನಾನು ಗಾಂಧಿಬಜಾರಿನ ಅವರ ಮನೆಯಿಂದ ಕುಮಾರ್ ಕೃಪಾದ ಗಾಂಧಿ ಭವನಕ್ಕೆ ನಡಕೊಂಡೇ ಹೋಗಿದ್ದೆವು. ನಮ್ಮ ಪರಿಚಯದವರ ಯಾರ ಹತ್ತಿರವೂ ಕಾರುಗಳು ಇರಲಿಲ್ಲ. ದ್ವಿಚಕ್ರ ವಾಹನಗಳು ಇದ್ದದ್ದೂ ಕಡಿಮೆ.

ಒಕ್ಕೂಟ ಏನೇನೋ ರೂಪ ಪಡೆಯಿತು. ಅದು ಈ ಅಧ್ಯಾಯದಲ್ಲಿ ಮುಖ್ಯವಲ್ಲ. ಆದರೆ ಅದು ಅಬ್ರಾಹ್ಮಣ ಚಳುವಳಿಯಾಗಿ ಅದು ರೂಪಿಸಿದ ಪಾಸಿಟೀವ್ ಮತ್ತು ನೆಗೆಟಿವ್ ಅಂಶಗಳು ಸಾಕಷ್ಟು ಇರಬಹುದು. ಪ್ರಾರಂಭದಲ್ಲಿ ಅದು ಬ್ರಾಹ್ಮಣರಿಗೆ ಸದಸ್ಯತ್ವ ಕೊಡಕೂಡದು ಎಂದು ತೀರ್ಮಾನ ತೆಗೆದುಕೊಂಡಿತು. ಇಲ್ಲಿ ಭಿನ್ನಾಭಿಪ್ರಾಯ ಬಂದು ನಾನು ಹೊರಗೆ ಬಂದೆ. ಅದಿರಲಿ ಆದರೆ ಪ್ರೊ.ಜಿ.ಎಸ್.ಶಿವರುದ್ರಪ್ಪನವರು ಅಧ್ಯಕ್ಷರಾದರು. ಆಗ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗ ಉತ್ತುಂಗದಲ್ಲಿದ್ದ ದಿನಗಳು. ಜಿ.ಎಸ್.ಎಸ್‌ರವರು ಮುಖ್ಯಸ್ಥರಾಗಿದ್ದರು. ಒಕ್ಕೂಟಕ್ಕೆ ಒಂದು ದೃಷ್ಟಿಯಿಂದ ಪ್ರಜಾವಾಣಿಯು ವಿರೋಧ ಪತ್ರಿಕೆ ಅದಕ್ಕೆ ಬರೆಯಕೂಡದು ಎಂದು ನಿರ್ಧರಿಸಿದರು. ಇದಕ್ಕಾಗಿ ಆಂದೋಲನವನ್ನು ಮೈಸೂರಿಗೆ ಬರಮಾಡಿಕೊಂಡರು. ಆಗ ಜೆ.ಪಿ.ಯವರ ನವನಿರ್ಮಾಣಕ್ರಾಂತಿಯ ದಿನಗಳು. ರಾಜಕೀಯ ಮತ್ತು ಸಾಂಸ್ಕೃತಿಕ ಚರ್ಚೆ ಒಟ್ಟೊಟ್ಟಿಗೆ ಇತ್ತು. ಇದೇ ಸಂದರ್ಭದಲ್ಲಿ ಕನ್ನಡವಿಭಾಗಕ್ಕೆ ಕಿ.ರಂ.ನಾಗರಾಜ, ಕೆ.ವಿ.ನಾರಾಯಣ, ಡಿ.ಆರ್.ನಾಗರಾಜ್, ಕವಿಸಿದ್ಧಲಿಂಗಯ್ಯ ಹಾಗೂ ಬಸವರಾಜ ಕಲ್ಗುಡಿಯಂಥವರು ಬರುವುದಕ್ಕೆ ಕೆಎಂಎಸ್‌ರವರ ಪಾತ್ರ ಬಹಳ ಮುಖ್ಯವಾದ್ದುದು. ಈ ಕಾರಣಕ್ಕಾಗಿ ಇಂಥವರನ್ನು ತೆಗೆದುಕೊಳ್ಳಬೇಕಾಗಿದೆ ಎಂದು ನಿರ್ದಿಷ್ಟವಾಗಿ ಪ್ರೊ||ಜಿ.ಎಸ್.ಎಸ್‌ರವರಲ್ಲಿ ಹೇಳುವ ಧೈರ್ಯವನ್ನು ಪಡೆದಿದ್ದರು. ಪ್ರತಿಭೆಯ ಮಾನದಂಡಕ್ಕೂ ಕೇವಲ ಪರೀಕ್ಷೆಯ ಅಂಕಗಳೇ ಕಾರಣವಲ್ಲ, ಬೇರೆ ಬೇರೆ ಮಾನದಂಡಗಳಿಂದಲೂ ನೋಡಬೇಕಾಗಿದೆ ಎಂಬ ಧೋರಣೆಯನ್ನು ಆಗಿನ ಕಾಲಕ್ಕೆ ಕೆ.ಎಂ.ಎಸ್‌ರವರು ನಂಬಿದ್ದರು. ಇಲ್ಲದಿದ್ದರೆ ಕೆಲವರು ಕನ್ನಡವಿಭಾಗಕ್ಕೆ ಬರಲಾಗುತ್ತಿರಲಿಲ್ಲ. ಹೊಸ ವಿಚಾರಗಳ ವೇದಿಕೆ ಕನ್ನಡ ವಿಭಾಗ ಆಗುತ್ತಿರಲಿಲ್ಲ.

ಇದೇ ಸಮಯದಲ್ಲಿ ಲಂಕೇಶ್‌ರವರು ಅತ್ಯಂತ ಚೆನ್ನಾಗಿದ್ದ ಒಕ್ಕೂಟದ ಮೂಲಕ ಒಂದು ದಿನಪತ್ರಿಕೆಯನ್ನು ತರುವ ಸಿದ್ಧತೆಯೂ ನಡೆಯಿತು. ಇದಕ್ಕೆ ಸಂಬಂಧಿಸಿದ ಪೂರ್ವಭಾವಿ ಸಭೆಗಳು ಎರಡು ಮೂರು ಬಾರಿ ಸೆಂಟ್ರಲ್ ಕಾಲೇಜಿನ ಇಂಗ್ಲೀಷ್ ವಿಭಾಗದ ಲಂಕೇಶ್‌ರವರ ಕೊಠಡಿಯಲ್ಲಿ ನಡೆಯಿತು. ಇದರ ಸಂಚಾಲಕರಾಗಿ ಕೊಂಡಜ್ಜಿ ರಾಜಶೇಖರ್ ಕ್ರಿಯಾಶೀಲರಾಗಿದ್ದರು. ಇಂಥ ಎಲ್ಲ ಸಭೆಗಳಲ್ಲೂ ಕೆ.ಎಂ.ಎಸ್‌ರವರು ಇರುತ್ತಿದ್ದರು. ದಿನಪತ್ರಿಕೆ ಸಿದ್ಧತೆ ಸಮಯದಲ್ಲಿಯೇ 'ಪಾಂಚಾಲಿ' ಬಂದದ್ದು. 'ಪಾಂಚಾಲಿ'ಬಂದ ಸಮಯದಲ್ಲಿ ಲಂಕೇಶ್‌ರವರು ಸ್ವಲ್ಪ ಕಿರಿಕಿರಿ ಮಾಡಿಕೊಂಡಿದ್ದರಿಂದ ಪತ್ರಿಕೆ ತರುವುದರ ಬದಲು ತುಂಬ ಸ್ನೇಹಿತರನ್ನು ಕಳಕೊಂಡರು. ಇದು ಲಂಕೇಶ್‌ರವರ ವ್ಯಕ್ತಿತ್ವದಲ್ಲಿಯೇ ಇದ್ದ ಗುಣ. ಇದು ನನಗಿಂತ ಚೆನ್ನಾಗಿ ಕೆ.ಎಂ.ಎಸ್‌ರವರಿಗೂ ಗೊತ್ತು.

ಒಕ್ಕೂಟದ ಬಿಗಿ ಮತ್ತು ಸಿದ್ಧಾಂತದ ನಿರ್ದಿಷ್ಟತೆ ನಿಧಾನವಾಗಿ ಮರೆಯಾಗತೊಡಗಿತು. ಒಕ್ಕೂಟದ ಶಿವಮೊಗ್ಗದ ಸಭೆಯಲ್ಲಿ ಇನ್ನು ಮುಂದೆ ಬ್ರಾಹ್ಮಣರಿಗೆ ಸದಸ್ಯತ್ವ ಕೊಡಬಹುದು ಎಂದು ನಿರ್ಣಯ ತೆಗೆದುಕೊಂಡರು. ಜಿ.ಎಸ್.ಎಸ್‌ರವರು ನಾನು ಅಧ್ಯಕ್ಷನಾಗಿ ಸುಸ್ತಾಗಿದ್ದೇನೆ ಎಂದು

ಹೊರಗೆ ಬಂದರು. ಜಿ.ಎಸ್.ಎಸ್.ರವರಿಗೆ ಸುಸ್ತು ಎನ್ನುವುದು ಯಾವಾಗಲೂ ಬಾಧಿಸದಿದ್ದರೂ ಮಾನಸಿಕವಾಗಿ ಸುಸ್ತಾಗಿದ್ದರು.

ಲಂಕೇಶ್‌ರವರನ್ನು ಕೆ.ಎಂ.ಎಸ್‌ರವರು ನಾನಾ ಸಂದರ್ಭಗಳಲ್ಲಿ ರಕ್ಷಣೆಮಾಡಿದ್ದಾರೆ. ಇಂಥ ಸಮಯದಲ್ಲೆಲ್ಲ ನಮ್ಮನ್ನೆಲ್ಲ ಜೊತೆಯಾಕಿಕೊಂಡು ಯಾರ್‍ಯಾರನ್ನೋ ಕಂಡು ಕೆಲಸಮಾಡಿದ್ದಾರೆ. ಆದರೆ ಲಂಕೇಶರವರು ಪತ್ರಿಕೆ ಬಂದ ಮೇಲೆ ಕೆ.ಎಂ.ಎಸ್‌ರವರನ್ನು ಹಾಗೂ ಜಿ.ಎಸ್.ಎಸ್‌ರವರನ್ನು ಸಾಕಷ್ಟು ನೋವು ಪಡಿಸಿದ್ದಾರೆ. ಕೆಲವು ವಿಷಯಗಳಲ್ಲಿ ಲಂಕೇಶ್‌ರವರು ತುಂಬ ಸ್ಯಾಡಿಸ್ಟ್ ಕ್ಯಾರೆಕ್ಟರ್. ಬೇರೆಯವರಿಗೆ ನೋವು ಕೊಟ್ಟು ಆನಂದಪಡುವುದರಲ್ಲಿ ನಿಸ್ಸೀಮರು. ಹೀಗೆಯೇ ಚರ್ಚೆಯ ಸಮಯದಲ್ಲಿ ಲಂಕೇಶ್‌ರವರು ಆತ್ಮೀಯವಾಗಿ ಮಾತಾಡುವ ಸಮಯದಲ್ಲಿ ''ನೋಡಿ. ಲೇಖಕನಾದವನು ತನ್ನ ವ್ಯಕ್ತಿತ್ವದೊಳಗೆ ನಾಯಕನನ್ನು ಹೇಗೆ ಬೆಳೆಸುತ್ತಾನೋ ಹಾಗೆಯೇ ಖಳನಾಯಕನನ್ನು ಬೆಳೆಸಿಕೊಂಡಿರಬೇಕಾಗುತ್ತದೆ. ಇಲ್ಲದಿದ್ದರೆ ಲೇಖಕನಾದವನ ಭಾಷೆಯೇ ಸತ್ತೋಗಿರುತ್ತದೆ. ಈ ದೃಷ್ಟಿಯಿಂದಲೇ ಜಗತ್ತಿನ ಯಾವ ಶ್ರೇಷ್ಠ ಲೇಖಕನೂ ನೀತಿವಂತನಾಗಿರುವುದಿಲ್ಲ. ಅದು ಸಾಧ್ಯವಿಲ್ಲ ಎನ್ನುವುದು ಒಂದು ಕಡೆಯಾದರೆ ತನ್ನ ವ್ಯಕ್ತಿತ್ವನಾಶವಾಗಬಾರದು ಎಂಬುದು ಇನ್ನೊಂದು ಮಗ್ಗುಲಾಗಿರುತ್ತದೆ.'' ಎಂದಿದ್ದರು. ಇದೇ ಸಮಯದಲ್ಲಿ ಶೂದ್ರದಲ್ಲಿ ಲಂಕೇಶ್‌ರವರಿಗೆ ದೀರ್ಘವಾದ ಬಹಿರಂಗ ಪತ್ರವನ್ನು ಬರೆದಿದ್ದೆ. ಅದರಲ್ಲಿ ಲಂಕೇಶ್‌ರವರನ್ನು ''ಗಾಂಧಿ, ಹಿಟ್ಲರ್ ಮತ್ತು ಸ್ಟ್ಯಾಲಿನ್ ಮೂರು ವ್ಯಕ್ತಿತ್ವಗಳನ್ನು ಏಕಕಾಲದಲ್ಲಿ ಕಾಪಾಡಿಕೊಂಡು ಚಿಂತಿಸುವ ಲೇಖಕರು ನೀವು'' ಎಂದು. ಕೆ.ಎಂ.ಎಸ್‌ರವರು ಸಿಕ್ಕಿದಾಗ ''ಶೂದ್ರ ಕರೆಕ್ಟಾಗಿ ಬರೆದಿದ್ದೀರಿ'' ಎಂದಿದ್ದರು. ಇದಾದ ಕೆಲವು ದಿವಸಗಳ ನಂತರ ಅಂದು ಭಾನುವಾರ ಕಾರ್ಡ್ಸ್‌ನ ಸೆಷನ್ ನಂತರ ಮಾತಾಡಲು ರಾಮಚಂದ್ರಶರ್ಮ, ಬಸವರಾಜ ಅರಸ್, ಮೈಸೂರು ಮಠ್, ಡಾ||ಕೆ.ಎಂ.ಶ್ರೀನಿವಾಸ್‌ಗೌಡ ಹಾಗೂ ಕೆ.ಎಂ.ಎಸ್‌ಕೂತಿದ್ದೆವು. ಕೆಎಂಎಸ್‌ರವರು ಕಾರ್ಡ್ಸ್ ಆಡದಿದ್ದರೂ ಆಗಾಗ ಅತಿಥಿಯಾಗಿ ಬಂದು ಕಾರ್ಡ್ಸ್‌ನ ವೈಭವವನ್ನು ನೋಡುತ್ತ ಕೂರುತ್ತಿದ್ದರು. ಆಟದ ನಂತರ ಕೂತು ಹರಟೆಕೊಚ್ಚುವಾಗ ''ನೋಡಿ,ಈ ಶೂದ್ರ ನನ್ನನ್ನು ಹಿಟ್ಲರ್, ಸ್ಟ್ಯಾಲಿನ್ ಎಂದು ಏನೇನೋ ಕರೆದು ನನ್ನ ಜೊತೆಯಲ್ಲಿಯೇ ಇದ್ದಾನೆ. ಇವನಿಗೇನು ಮಾಡುವುದು'' ಎಂದರು ತುಂಟತನದಿಂದ. ಆಗ ಮೈಸೂರುಮಠ್‌ರವರು ''ಲಂಕೇಶ್, ಏನು ತಪ್ಪು ತಿಳಿಯಬೇಡ ನಾನು ಎಂದೋ ನಿನ್ನನ್ನು ಹಿಟ್ಲರ್ ಎಂದು ಕರೆಯುವ ಮನಸ್ಸಿತ್ತು ಅದು ಈಡೇರಲೇ ಇಲ್ಲ, ಶೂದ್ರ ಬರೆದದ್ದನ್ನು ನೋಡಿ ಸಂತೋಷವಾಯಿತು ಎಂದರು. ಅದಕ್ಕೆ ಲಂಕೇಶ್‌ರವರು ''ಕತ್ತೆಗಳು, ನಿಮಗೆ ಕಾರ್ಡ್ ಆಡೋದಕ್ಕೆ ಜಾಗ ಕೊಡೋದರ ಜೊತೆಗೆ ಬೈಸಿಕೊಳ್ಳೋದು ಬೇರೆ'' ಎಂದು ಮೌನಿಯಾದರು. ಎಲ್ಲರೂ ಮುಸಿ ಮುಸಿ ನಕ್ಕು ಸುಮ್ಮನಾದರು. ಶರ್ಮರಂತೂ ಸ್ವಲ್ಪ ಹೆಚ್ಚು ಪುಳಕಿತರಾಗಿದ್ದರು.

ಕೆ.ಎಂ.ಎಸ್‌ರವರು ಎಷ್ಟೋ ತಿಂಗಳು ಲಂಕೇಶ್‌ರವರ ಆಫೀಸಿನ ಕಡೆ ಸುಳಿಯದ ದಿನಗಳು ಇವೆ. ''ಎಲ್ಲರನ್ನು ಪರಚಿ ಘಾಯಗೊಳಿಸಿ ಸಂತೋಷಪಡುವ ಸ್ವಭಾವ ಲಂಕೇಶ್‌ರವರದ್ದು'' ಎಂದು ಬಹಳಷ್ಟು ಸಾರಿ ಆಕ್ಷೇಪಿಸಿದ್ದಾರೆ. ಇದು ಲಂಕೇಶ್‌ರವರ ವೈರುಧ್ಯಗಳಲ್ಲಿ ಒಂದಾದರೂ ನಮ್ಮ ಕಾಲದ ಗ್ರೇಟ್‌ಜೀನಿಯಸ್ ಲೇಖಕ ಎನ್ನುವುದರಲ್ಲಿ ಎರಡನೆಯ ಮಾತಿಲ್ಲ. ನಮ್ಮ ನಡುವೆ ಲಂಕೇಶ್‌ರವರ ರೀತಿಯ ವೈವಿಧ್ಯಮಯ ಪಾತ್ರವೇ ಇಲ್ಲ. ಹಾಗೆ ನೋಡಿದರೆ ಕನ್ನಡ

ರಂಗಭೂಮಿಗೆ ಹೊಸ ಆಯಾಮವನ್ನು ತಂದುಕೊಟ್ಟ ಬಯಲು ರಂಗಭೂಮಿ ಉತ್ಸವದ ಮಹತ್ತರ ಕೊಡುಗೆ ಕೆ.ಎಂ.ಎಸ್‌ರವರಿಗೆ ಸಲ್ಲಬೇಕು. ಕನ್ನಡ ವಿಭಾಗದ ಪ್ರಮುಖ ವಿಚಾರ ಸಂಕೀರಣದ ಸಮಯದಲ್ಲಿ ನಾಟಕೋತ್ಸವವನ್ನು ಒಟ್ಟಿಗೆ ಸೇರಿಸಿ ಅದಕ್ಕೊಂದು ಹೊಸ ಆಯಾಮವನ್ನು ತಂದುಕೊಟ್ಟರು. ಸಂಕ್ರಾಂತಿ. ಈಡಿಪಸ್ ಮತ್ತು ಜೋಕುಮಾರಸ್ವಾಮಿ ನಾಟಕಗಳು ಅತ್ಯಂತ ಸಂಭ್ರಮದ ಆನಂದದಾಯಕತ್ವವನ್ನು ಕೊಡಲು ಸಾಧ್ಯವಾಯಿತು. ಕನ್ನಡ ವಿಭಾಗದ ಬಹಳಷ್ಟು ವಿದ್ಯಾರ್ಥಿಗಳು ನಟನೆ ಹಾಗೂ ಹಿನ್ನೆಲೆ ಗಾಯನದಲ್ಲಿ ಭಾಗಿಯಾದರು. ಈ ಮೂರು ನಾಟಕಗಳಿಗೆ ಪ್ರೇಕ್ಷಕರು ಟಿಕೆಟ್‌ಕೊಳ್ಳಲು ಕ್ಯೂ ರವೀಂದ್ರಕಲಾಕ್ಷೇತ್ರದ ಅಂಗಳದಿಂದ ಹೊರಗೆ ಬಂದಿತ್ತು. ಇದೊಂದು ಚಾರಿತ್ರಿಕ ದಾಖಲು ಎನ್ನಬಹುದು. ಈ ರೀತಿಯ ದಾಖಲು ಮುಂದಿನ ದಿನಗಳಲ್ಲಿ ರಂಗಭೂಮಿಗೆ ಅನ್ವಯಿಸಿ ಯಾವ ರೀತಿಯಲ್ಲಿ ಆಕಾರ ಪಡೆಯುತ್ತದೋ ಗೊತ್ತಿಲ್ಲ.

ಈಗಲೂ ಅದೊಂದು ನನಗೆ ಸ್ಮರಣೀಯ ಅನುಭವ. ಹಿಂದೆ ಪ್ರಸ್ತಾಪಿಸಿದ ರೀತಿಯ ವಿಚಾರಸಂಕಿರಣವೊಂದಿತ್ತು. ಅದಕ್ಕೆ ಕೆಲವು ಅತಿಥಿಗಳನ್ನು ನೋಡಿಕೊಳ್ಳಲು ಕಾರ್ಯಕರ್ತನಾಗಿದ್ದೆ. ತುಂಬ ಮಂದಿ ಲೇಖಕರು ಮೆಜಸ್ಟಿಕ್‌ನ ನ್ಯೂಮಾಡರ್ನ್ ಕೆಫೆಯಲ್ಲಿ ಉಳಕೊಂಡಿದ್ದರು. ಇದರ ಉಸ್ತುವಾರಿ ಕೆ.ಎಂ.ಎಸ್‌ರವರು ನನಗೆ ವಹಿಸಿದ್ದರು. ಆಗ ಕರ್ನಾಟಕದ ರಾಜಕೀಯದಲ್ಲಿ ನಾನಾ ರೀತಿಯ ಏಳುಬೀಳುಗಳು ಇದ್ದ ಸಮಯ. ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿ ಜನಪ್ರಿಯರಾಗಿದ್ದರು. ಕೇಂದ್ರದಲ್ಲಿ ಇಂದಿರಾಗಾಂಧಿಯವರು ತುಂಬ ಗಟ್ಟಿಯಾಗಿ ಬೇರೂರುತ್ತಿದ್ದ ದಿನಗಳು. ಕಾಂಗ್ರೆಸ್ ಎರಡು ಭಾಗವಾಯಿತು. ವೀರೇಂದ್ರಪಾಟೀಲರು ಅಧಿಕಾರವನ್ನು ಕಳಕೊಳ್ಳುವ ಸಮಯ. ಆಗ ಗೋಪಾಲಕೃಷ್ಣಅಡಿಗರು ತುಂಬ ಉತ್ಸಾಹದಿಂದಿದ್ದರು. ಶಾಂತವೇರಿ ಗೋಪಾಲಗೌಡರು ಕೆಲವು ದಿವಸವಾದರೂ ಮುಖ್ಯಮಂತ್ರಿಗಳಾಗಲಿ ಎಂಬುದು ಅವರ ಆಶಯವಾಗಿತ್ತು. ಇದಕ್ಕೆ ಸಂಬಂಧಿಸಿದ ಎರಡು ಮೂರು ಸಭೆ ಎನ್.ಎಂ.ಸಿ.ಹೋಟೆಲ್‌ನಲ್ಲೇ ನಡೆದಿತ್ತು. ತುಂಬ ಮಂದಿ ಲೇಖಕರನ್ನೆಲ್ಲ ಒಂದೆಡೆ ಸೇರಿಸುವಲ್ಲಿ ಕೆ.ಎಂ.ಎಸ್, ಲಂಕೇಶ್ ಹಾಗೂ ಅನಂತಮೂರ್ತಿಯವರು ಗಡಿಬಿಡಿಯಿಂದ ಓಡಾಡಿಕೊಂಡಿದ್ದರು. ಅಡಿಗರ ಮುಖಂಡತ್ವದಲ್ಲಿ ವಿವಿಧ ರಾಜಕಾರಣಿಗಳನ್ನು ನೋಡಿಬಂದರು. ಅವರ ಬೆಂಬಲವನ್ನು ಕೋರಿಬಂದರು. ಇದೇ ಸಮಯದಲ್ಲಿ ಶಾಂತವೇರಿ ಗೋಪಾಲಗೌಡರು ಸೆನೆಟ್ ಹಾಲ್‌ನಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಕ್ಕೆ ಬಂದರು. ಆಗ ಕವಿಗೋಷ್ಠಿ ನಡೆಯುತ್ತಿತ್ತು. ಅವರು ಬಂದಾಗ ಇಡೀ ಸಭೆ ಎದ್ದು ನಿಂತು ಗೌರವ ಸೂಚಿಸಿತ್ತು. ಅಷ್ಟರಮಟ್ಟಿಗೆ ಶಾಂತವೇರಿಯವರು ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದರು. ರಾಜಕೀಯ ಏರುಪೇರುಗಳಲ್ಲಿ ಇಂದಿರಾಗಾಂಧಿಯವರೇ ಗೆದ್ದರು. ಅವರ ಪ್ರತಿನಿಧಿಯಾಗಿ ದೇವರಾಜ ಅರಸುರವರು ಮುಖ್ಯಮಂತ್ರಿಗಳಾದರು. ಅಡಿಗರ ಆಸೆ ಈಡೇರಲಿಲ್ಲ. ಆದರೆ ಎಲ್ಲರೂ ಹೋಗಿ ಗೋಪಾಲಗೌಡರನ್ನು ನೋಡಿಬಂದರು.

ನಾನಾ ರೀತಿಯ ಚರ್ಚೆಗಳ ನಡುವೆ ವಿಚಾರಸಂಕಿರಣ ಮುಗಿಯಿತು. ಹೊರಗಿನ ರಾಜಕೀಯ ಚರ್ಚೆಗಳು ವಿಶ್ವರೂಪವನ್ನು ಪಡೆದಿತ್ತು. ಲಂಕೇಶ್‌ರವರು ತಮ್ಮ ತರಗತಿಯನ್ನು ಮುಗಿಸಿ ಕನ್ನಡ ವಿಭಾಗಕ್ಕೆ ಬಂದರು. ಕೆ.ಎಂ.ಎಸ್‌ಇದ್ದರು. ಅವರ ಕೊಠಡಿಯಲ್ಲಿ ತುಂಬ ಸಮಯ ಏನೇನೋ ಮಾತಾಡಿಕೊಂಡು ಕೂತಿದ್ದರು. ನಂತರ ನಮ್ಮನ್ನು ಟಿಫಾನೀಸ್‌ಗೆ ಕರಕೊಂಡು

ಹೋದರು. ಗೋಪಾಲಗೌಡರ ಅನಾರೋಗ್ಯದ ಬಗ್ಗೆ ಸಾಕಷ್ಟು ಮಾತುಕತೆಯಾಯಿತು. ಊಟ ಮಾಡಿ ಹೊರಟೆವು. ಮಾರನೆಯ ದಿವಸ ಕೆ.ಎಂ.ಎಸ್‌ರವರು ಮೆಜೆಸ್ಟಿಕ್‌ನ ಅಲಂಕಾರ್ ಥಿಯೇಟರ್‌ನಲ್ಲಿ ಚದುರಂಗರ 'ಉಯ್ಯಾಲೆ'ಚಿತ್ರವನ್ನು ತೋರಿಸಿದರು. ಈ ಚಿತ್ರ ಕುರಿತು ತರಗತಿಯಲ್ಲಿ ಹೇಳಿದರು. ಮತ್ತೊಮ್ಮೆ ನಾವೆಲ್ಲ ಗೆಳೆಯ ಗೆಳತಿಯರು 'ಉಯ್ಯಾಲೆ' ಚಿತ್ರವನ್ನು ನೋಡಿದೆವು. ಸಾಹಿತ್ಯದಷ್ಟೇ ಹೆಚ್ಚು ಚರ್ಚೆಗೆ ಒಳಪಟ್ಟಿತ್ತು. ಇದೇ ರೀತಿಯಲ್ಲಿ 'ಸಂಸ್ಕಾರ' ಚಿತ್ರಬಂದಾಗಲೂ ಕೆ.ಎಂ.ಎಸ್.ರವರು ಆ ಚಿತ್ರವನ್ನು ನೋಡಲು ತರಗತಿಯಲ್ಲಿ ಒತ್ತಾಯ ಮಾಡಿದ್ದರು.

ಸೆಂಟ್ರಲ್ ಕಾಲೇಜಿನ ಸಾಂಸ್ಕೃತಿಕವಾತಾವರಣದಲ್ಲಿ ಕನ್ನಡ ಅಧ್ಯಯನ ಕೇಂದ್ರ, ಸೆಂಟ್ರಲ್ ಕಾಲೇಜ್ ಲೈಬ್ರರಿ ಹಾಗೂ ಅದರ ಮುಂದಿನ ಪಿ.ಪಿ.ಕಟ್ಟೆ ಅಪ್ರತಿಮವಾದ ನೆನಪುಗಳನ್ನು ಕೊಟ್ಟಂತಹವು. ಕೆಎಂಎಸ್‌ರವರು ಇದನ್ನು ಪ್ರೋತ್ಸಾಹಿಸಿದರು. ಇದರ ಸದಸ್ಯರೆಂದರೆ ಕೆ.ವಿ.ನಾರಾಯಣ, ಚಿ.ಶ್ರೀನಿವಾಸ್‌ರಾಜು, ಹೆಚ್.ಎಸ್.ರಾಘವೇಂದ್ರರಾವ್, ಡಿ.ಆರ್.ನಾಗರಾಜ, ಕೆ.ವೆಂಕಟರಾಜ್, ಹೆಚ್.ಎಸ್.ಮಾಧವರಾವ್, ಅಗ್ರಹಾರ ಕೃಷ್ಣಮೂರ್ತಿ, ಕೋದಂಡರಾಮಶೆಟ್ಟಿ ಮತ್ತು ನಾನು. ಇದಕ್ಕೆ ಅತಿಥಿ ಸದಸ್ಯರಾಗಿ ಟಿ.ಎನ್.ಸೀತಾರಾಂ. ಆರ್.ನಾಗೇಶ್, ಪ್ರಸನ್ನ ಮತ್ತು ಮೋಹನರಾಂ ಅಂಥವರು ನೆನಪು ಮಾಡಿಕೊಳ್ಳುವುದಕ್ಕೆ ಸಂತೋಷವಾಗುತ್ತದೆ. ಪಿ.ಪಿ.ಎಂದರೆ 'ಪೋಲಿಪಟಾಲಂ, ಎಂದು ಎಷ್ಟೋ ಜನಕ್ಕೆ ಇದರ ಪೂರ್ಣ ಅರ್ಥ ಗೊತ್ತಿರಲಿಲ್ಲ. ಕೊನೆಗೆ ಇದನ್ನು ಕೆಳಕ್ಕುರುಳಿಸಿದ್ದು ಪ್ರೊ. ವೆಂಕಟಗಿರಿ ಗೌಡರು. ಬಂಡಾಯಸಾಹಿತ್ಯ ಸಂಘಟನೆಯಂಥ ಒಂದು ಸಾಂಸ್ಕೃತಿಕ ಚಳುವಳಿ ಬೇಕಾಗಿದೆ ಎಂದು ಯೋಚಿಸಿದ್ದೇ ಈ ಕಟ್ಟೆಯ ಮೇಲೆ ಕೂತು ಡಿ.ಆರ್.ನಾಗರಾಜ್, ಸಿದ್ಧಲಿಂಗಯ್ಯ ಮತ್ತು ನಾನು ಸುಮಾರು ಅರ್ಧದಿವಸ ಯೋಚನೆ ಚರ್ಚೆಗಳ ನಡುವೆ ರೂಪುಗೊಂಡಿತು. ನಂತರ ಬೇರೆಗೆಳೆಯರು ಆಕಸ್ಮಿಕವಾಗಿ ಬಂದಿದ್ದರಿಂದ ಹಿಂಭಾಗದ ಹುಲ್ಲಿನ ಮೇಲೆ ಕೂತು ಮಾತು ಮುಂದುವರೆಸಿದೆವು. ನಮ್ಮ ನಡುವೆ ಏನೇ ಸಾಂಸ್ಕೃತಿಕ ಚಳುವಳಿ ನಡೆದರೂ ಅದು ಕೆಎಂಎಸ್‌ರವರ ಮುಂದೆ ಚರ್ಚೆಯಾಗಿ ಹೊಸ ರೂಪವನ್ನು ಪಡೆಯುತ್ತಿತ್ತು. ಪಿ.ಪಿ.ಕಟ್ಟೆ ಆ ರೀತಿಯಲ್ಲಿ ತೆರೆದ ಮನಸ್ಸುಗಳನ್ನು ಸೃಷ್ಟಿಮಾಡಿತು. ಒಂದು ದೃಷ್ಟಿಯಿಂದ ಬೇರೆ ಬೇರೆ ಕಾಲಘಟ್ಟದಲ್ಲಿ ಬಂಡಾಯ ಸಾಹಿತ್ಯ ಸಂಘಟನೆಯಿಂದ ಡಿ.ಆರ್.ನಾನು ಹಾಗೂ ಸಿದ್ಧಲಿಂಗಯ್ಯ ಹೊರಗುಳಿದೆವು. ಆದರೆ ಡಿ.ಆರ್.ನಾಗರಾಜ್‌ಗಂತು ಕೊನೆಯವರೆವಿಗೂ ಅಂಥ ಅದ್ಭುತ ಸಂಘಟನೆಯನ್ನು ಅಪಾತ್ರರಿಗೆ ಕೊಟ್ಟು ಬಂದೆವು ಎಂಬ ಕೊರಗು ಇದ್ದೇ ಇತ್ತು. ಸಮಯ ಬಂದಾಗಲೆಲ್ಲ ಅದನ್ನು ಕೆ.ಎಂ.ಎಸ್‌ರವರಲ್ಲಿ ಡಿ.ಆರ್.ಪ್ರಸ್ತಾಪಿಸಿದ್ದಾನೆ. ''ಎಲ್ಲ ಚಳುವಳಿಗಳೂ ಅಷ್ಟೇ ಸೀಮಿತ ಕಾಲದಲ್ಲಿ ಒಂದಷ್ಟು ಉತ್ತಮ ಕೆಲಸವನ್ನು ಮಾಡಿ ಮರೆಯಾಗುತ್ತವೆ'' ಎಂದು ಸಮಾಧಾನದ ಮಾತನ್ನು ಕೆ.ಎಂ.ಎಸ್‌ರವರು ಹೇಳುತ್ತ ಬಂದಿದ್ದಾರೆ. ಮುಂದೆ ಕೆ.ಎಂ.ಎಸ್‌ರವರು ಡಾ||ಸಿದ್ಧಲಿಂಗಯ್ಯನವರನ್ನು ವಿಧಾನಪರಿಷತ್ತು ಸದಸ್ಯರನ್ನಾಗಿ ಮಾಡಲೇಬೇಕು ಎಂದು ಒಂದು ಸಂಜೆ ಪಿ.ಪಿ.ಕಟ್ಟೆಯ ಬಳಿ ಚರ್ಚೆಗೆ ಬಂದಾಗ ಅದಕ್ಕೆ ಮುಂದೆ ಸಾಕಾರ ರೂಪವನ್ನು ಕೊಟ್ಟವರು ಕೆ.ಎಂ.ಎಸ್‌ರವರು. ನಮ್ಮನ್ನು ಜೊತೆ ಹಾಕಿಕೊಂಡು ಎಂ.ಪಿ.ಪ್ರಕಾಶ್‌ರವರನ್ನು ನೋಡಲು ಹೋದರು. ಜೊತೆಯಲ್ಲಿ ಡಿ.ಆರ್. ಹಾಗೂ ಟಿ.ಎನ್.ಸೀತಾರಾಂರವರೂ ಇದ್ದರು. ಪ್ರಕಾಶ್‌ರವರನ್ನು ನೋಡಿ ಚರ್ಚಿಸಿದ್ದು ರಾತ್ರಿ

ಹನ್ನೊಂದುವರೆಯಲ್ಲಿ. ನಂತರ ರಾಮಕೃಷ್ಣಹೆಗಡೆಯವರನ್ನು ಹಾಗೂ ಜೀವರಾಜ ಆಳ್ವರನ್ನು ನೋಡುವಾಗ ರಮೇಶಬಂದಗದ್ದೆ ಸಹಕರಿಸಿದರು. ಎರಡನೆಯ ಬಾರಿಗೆ ಡಾ||ಸಿದ್ಧಲಿಂಗಯ್ಯನವರು ಸದಸ್ಯರಾದಾಗಲೂ ಕೆ.ಎಂ.ಎಸ್‌ರವರ ಪಾತ್ರ ಬಹಳ ಮುಖ್ಯವಾದದ್ದು . ಮೈಸೂರು ರಸ್ತೆಯ ಒಂದು ಪ್ರಸಿದ್ಧ ಕ್ಲಬ್‌ನಲ್ಲಿ ಎಷ್ಟೊಂದು ಮಾತಾಡಿದೆವು. ಅದರಲ್ಲೂ ಸೀತಾರಾಂ ಹಾಗೂ ಡಿ.ಆರ್.ಕೆ., ಎಂ.ಎಸ್‌ರವರ ಜೊತೆ ಕ್ರಿಯಾಶೀಲರಾಗಿದ್ದರು. ಅಂದಿನ ಚರ್ಚೆಗೆ ಮಂಡ್ಯದ ಕೆ.ಎಸ್.ಸಚ್ಚಿದಾನಂದ್‌ರವರೂ ಇದ್ದರು. ಸಚ್ಚಿದಾನಂದ್ ಆಗ ವಿಧಾನಪರಿಷತ್ತು ಸದಸ್ಯರಾಗಿದ್ದರು.

ಇದೆಲ್ಲವನ್ನು ಮಾಡುವಾಗ ನಮಗೆ ಖುಷಿಯಾಗುತ್ತಿತ್ತು. ಯಾರೋ ಅಪಾತ್ರರನ್ನು ಅಥವಾ ಅನರ್ಹರನ್ನು ತರಲು ಮಾಡುತ್ತಿದ್ದೇವೆ ಎಂಬ ಭಾವನೆ ನಮ್ಮಲ್ಲಿ ಎಂದೂ ಬರಲಿಲ್ಲ. ಆದರೆ ದುರಂತವೆಂದರೆ ಕೆ.ಎಂ.ಎಸ್‌ರವರನ್ನು ನಾವ್ಯಾರು ವಿಶ್ವವಿದ್ಯಾಲಯದ ಉಪಕುಲಪತಿಗಳನ್ನಾಗಿ ಮಾಡಲಾಗಲಿಲ್ಲವೆಂಬುದು. ಅವರು ಮೂರುನಾಲ್ಕು ಬಾರಿ ಉಪಕುಲಪತಿಗಳಾಗುವಲ್ಲಿ ಚಲಾವಣೆಯಲ್ಲಿದ್ದರೂ ಸಂಬಂಧಪಟ್ಟವರು ನಮ್ಮ ಮತ್ತು ಕೆ.ಎಂ.ಎಸ್‌ರವರ ಬಗ್ಗೆ ಉದ್ದುದ್ದ ಮಾತಾಡಿದರೂ ಅಂತಿಮ ಹಂತದಲ್ಲಿ ಸೆಕ್ಟೇರಿಯನ್ಸ್ ಆಗಿ ಬಿಡುತ್ತಿದ್ದರು. ಇತ್ತೀಚೆಗೆ ಡಾ.ಚಂದ್ರಶೇಖರಕಂಬಾರರು ವಿಧಾನ ಪರಿಷತ್ತು ಸದಸ್ಯರಾದಾಗ ಅವರು ದೊಡ್ಡ ಲೇಖಕರು. ಅದಕ್ಕೆ ನ್ಯಾಯದೊರಕಿಸಿಕೊಡಲು ಒಂದು ಉತ್ತಮ ಅವಕಾಶ ಎಂದು ಸಂತೋಷಪಟ್ಟವರು. ಕೆಳವರ್ಗದ ಯಾರೇ ಆಗಿರಲಿ ಕ್ರಿಯಾಶೀಲರಾಗಿದ್ದರೆ ಅದನ್ನು ನೋಡಿ ಆನಂದಿಸುತ್ತಿದ್ದವರು, ಡಾ||ಹೆಚ್.ಎನ್.ರವರನ್ನು ನಾವು, ಕೆ.ಎಂ.ಎಸ್ ಮೆಚ್ಚಿಕೊಂಡಿದ್ದು ಈ ಕಾರಣಕ್ಕಾಗಿಯೇ.

ಒಮ್ಮೆ ಡಾ||ಹೆಚ್.ಎನ್.ರವರು ಅವರೂರಿನ ಶಾಲೆಗೆ ಕೆ.ಎಂ.ಎಸ್ ಡಿ.ಆರ್.ನಾಗರಾಜ್, ಸಿದ್ಧಲಿಂಗಯ್ಯ ಮತ್ತು ನನ್ನನ್ನು ಕರೆದುಕೊಂಡು ಹೋಗಿದ್ದರು. ಹೆಚ್‌ನವರ ಆರೋಗ್ಯ ಚೆನ್ನಾಗಿಲ್ಲದಿದ್ದರೂ ದಾರಿಯುದ್ದಕ್ಕೂ ನಮಗೆ ಅದು ಇದು ತಿನ್ನಿಸುತ್ತ ವೈವಿಧ್ಯಮಯ ಜೋಕ್‌ಗಳಿಂದ ನಮ್ಮನ್ನು ರಂಜಿಸಿದ್ದರು.

ನಾವು ಮಧ್ಯಾಹ್ನ ಹೊಸೂರು ತಲುಪಿದೆವು. ಹಸಿವಾಗುತ್ತಿತ್ತು. ಮುದ್ದೆ ಅನ್ನಸಾರು ಮಾಡಿಸಿರುತ್ತಾರೆ ಎಂದು ಯೋಚಿಸಿದ್ದೆವು. ಆದರೆ ಅವರಿಗೆ ಪ್ರಿಯವಾದ ಉಪ್ಪಿಟ್ಟು ಮತ್ತು ಕೇಸರಿಬಾತ್ ಇತ್ತು. ಒಲ್ಲದ ಮನಸ್ಸಿನಿಂದ ತಿಂದೆವು. ಶಾಲೆಯ ಕಾರ್ಯಕ್ರಮಕ್ಕೆ ಹೋದೆವು. ಅದ್ಭುತವಾಗಿ ಬೆಳೆಸಿರುವ ಶಾಲೆ. ಈ ಶಿಸ್ತು ಮತ್ತು ಸಾಂಸ್ಕೃತಿಕ ಚೌಕಟ್ಟು ನಮ್ಮ ಎಲ್ಲ ಶಾಲೆಗಳಿಗೆ ಬರಬೇಕು ಎಂದು ಯೋಚಿಸಿದೆವು. ಮಾತಾಡಿದೆವು. ಹೆಚ್.ಎನ್.ರವರ ಕೊಡುಗೆ ಅಪಾರವಾದದ್ದು ಎಂದು ನಾವು ಚರ್ಚಿಸುತ್ತಲೇ ಬೆಂಗಳೂರು ತಲುಪಿದೆವು. ಆದರೆ ...? ಎಂಬ ಪ್ರಶ್ನೆ ಈಗಲೂ ನನ್ನ ಮುಂದಿದೆ. ಇದು ಎಲ್ಲ ಕಾಲದ ಸಾಮಾಜಿಕ ಸಮಸ್ಯೆಯೂ ಇರಬಹುದು. ಯಾಕೆಂದರೆ ವೈಯುಕ್ತಿಕ ಚೌಕಟ್ಟನ್ನು ಮೀರಿ ನೈತಿಕ ಪ್ರತಿಭಟನೆಯನ್ನು ಬೆಳೆಸಿಕೊಂಡಿರುವುದಿಲ್ಲ. ಈಗಲೂ ಆಗಾಗ ಯೋಚಿಸುವೆ : ಬೂಸಾ ಚಳುವಳಿಯ ಸಂದರ್ಭದಲ್ಲಿ ಕೆಲವು ಜಾತಿವಾದಿ ಹುಡುಗರು ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ಲಂಕೇಶರವರಿಗೆ ಸಾಕಷ್ಟು ಅವಮಾನಮಾಡಿ ಅವರ ಮೈಮೇಲಿನ ಜುಬ್ಬಾವನ್ನೆಲ್ಲ ಚಿಂದಿ ಚಿಂದಿ ಮಾಡಿದ್ದರು. ಮುಖಕ್ಕೆ ಗುದ್ದಿದ್ದರು. ಇದಕ್ಕೆ ಸಂಬಂದಿಸಿದಂತೆ ಆಗ ಉಪಕುಲಪತಿಗಳಾಗಿದ್ದ ಡಾ||ಹೆಚ್.ಎನ್.ರವರು ಈ ರೀತಿಯ

ಗೂಂಡಾಗಿರಿ ಆಗಬಾರದಾಗಿತ್ತು ಎಂಬ ಹೇಳಿಕೆಯನ್ನು ಕೊಡಲಿಲ್ಲ ನಾವು ಕೆ.ಎಂ.ಎಸ್‌ರವರ ಜೊತೆ ಹೋಗಿ ಹೆಚ್.ಎನ್.ರವರನ್ನು ಕಂಡಾಗ ಅವರು ಏನೂ ಮಾತಾಡದೆ ತಟಸ್ಥರಾಗಿದ್ದರು. ಇಂಥ ವೈಪರೀತ್ಯಗಳನ್ನು ಕುರಿತು ಕೆ.ಎಂ.ಎಸ್ ಮತ್ತು ನಾವೆಲ್ಲ ಸೇರಿದಾಗ ಸಾಕಷ್ಟು ಚರ್ಚೆಮಾಡಿದ್ದೇವೆ. ಯಾಕೆಂದರೆ ನನ್ನ ವೈಯುಕ್ತಿಕ ಬದುಕಿನಲ್ಲಿ ಕೊನೆಯ ಪಕ್ಷ ಭಿನ್ನಾಭಿಪ್ರಾಯಗಳಿಗೆ ನಾವು ಸದಾ ತೆರೆದ ಮನಸ್ಸಿನವರು ಆಗಿರಬೇಕು ಎಂಬುದನ್ನು ಪ್ರೊ.ಜಿ.ಎಸ್.ಎಸ್, ಲಂಕೇಶ್, ಕೆ.ಎಂ.ಎಸ್, ಹಾಗೂ ಕಿ.ರಂ.ರವರು ಕಲಿಸಿದ್ದಾರೆ ಎಂಬುದು ನನ್ನಂಥವರು ಖುಷಿಪಡುವ ಸಂಗತಿ.

ಇಷ್ಟಾದರೂ ಲಂಕೇಶ್ ಪತ್ರಿಕೆಯಲ್ಲಿ ಹೆಚ್.ಎನ್.ರವರನ್ನು ಕುರಿತು ಬಹಳಷ್ಟು ಬಾರಿ ಕೆಟ್ಟದಾಗಿ ಬರೆದಾಗ ನಾವು ಕೆ.ಎಂ.ಎಸ್‌ರವರ ಜೊತೆ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದೇವೆ. ನಾನೇ ಹೆಚ್.ಎನ್.ರವರ ಕೃತಿಯನ್ನು ವಿಮರ್ಶೆಮಾಡುತ್ತ ನಮ್ಮ ಕಾಲದ ದೊಡ್ಡವ್ಯಕ್ತಿಎಂದು ಲಂಕೇಶ್‌ಪತ್ರಿಕೆಯಲ್ಲಿಯೇ ಬರೆದಾಗ ಲಂಕೇಶ್‌ರವರು ನಗುತ್ತ ಅದನ್ನು ಎಡಿಟ್ ಮಾಡಲು ಹೋಗಲಿಲ್ಲ ಅಷ್ಟರಮಟ್ಟಿಗೆ ಲಂಕೇಶ್‌ರವರು ಪ್ರಬುದ್ಧರು. ಕೆ.ಎಂ.ಎಸ್ ಮತ್ತು ನಾನು ಬಹಳಷ್ಟು ಬಾರಿ ಮಾತಾಡಿಕೊಂಡಿದ್ದೇವೆ : ಡಾ||ಹೆಚ್.ಎನ್.ಭ್ರಷ್ಟರಲ್ಲದ ಒಳ್ಳೆಯ ಉಪಕುಲಪತಿ. ಆದರೆ ಗಟ್ಟಿಗರಾದ ಆಡಳಿತ ತಜ್ಞರಲ್ಲ ನಿರ್ದಾಕ್ಷಿಣ್ಯತೆಯನ್ನು ಬೆಳಸಿಕೊಂಡವರಲ್ಲ ಅವರ ಕಾಲದಲ್ಲಿ ವಿಶ್ವವಿದ್ಯಾಲಯದ ಬಸ್ಸುಗಳನ್ನು ಹಾಗೂ ಮರಗಿಡಗಳನ್ನು ಮಕ್ಕಳಂತೆ ನೋಡಿಕೊಂಡರು. ಎಲ್ಲ ವಿಭಾಗಗಳು ಬೆಳೆಯುವಂತೆ ನೋಡಿಕೊಂಡರು. ಜಾತೀಯ ಗುಂಪುಗಾರಿಕೆ ಕಲೆಯ ಮುಂದೆ ದುರ್ಬಲರಾಗಿ ನಿಲ್ಲುತ್ತಿದ್ದರು. ಆದರೆ ಶುದ್ಧ ಹಸ್ತರಾಗಿ ಭ್ರಷ್ಟಾಚಾರದ ಮಾತುಗಳನ್ನು ಕೇಳಿಸಿಕೊಳ್ಳದೆ ಹೊರಗೆಬಂದರು. ಅದು ನಿಜವಾಗಿಯೂ ಹೆಚ್ಚುಗಾರಿಕೆ ಎಂದು ಮುಕ್ತವಾಗಿ ಪ್ರಶಂಸಿಸುತ್ತಿದ್ದೆವು.

## ಪ್ರಸಾರಾಂಗದ ನಿರ್ದೇಶಕರಾಗಿ

ಡಾ||ಡಿ.ಎಂ.ನಂಜುಂಡಪ್ಪನವರು ಮಾತ್ರ ನನ್ನ ಅರಿವಿನ ಮಟ್ಟಿಗೆ ಎರಡು ವಿಶ್ವವಿದ್ಯಾಲಯಗಳ ಉಪಕುಲಪತಿಗಳಾಗಿದ್ದವರು. ಕರ್ನಾಟಕ ವಿಶ್ವವಿದ್ಯಾಲಯ ಉಪಕುಲಪತಿಗಳಾಗಿದ್ದು ಉತ್ತಮ ಆಡಳಿತಗಾರರಾಗಿ ಹೊರಗೆ ಬಂದವರು. ನಂತರ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾದವರು. ಇವರು ಕೇವಲ ಅರ್ಥಶಾಸ್ತ್ರಮಾತ್ರವಲ್ಲ ಶಿಕ್ಷಣಕ್ಷೇತ್ರದಲ್ಲೂ ಸಾಕಷ್ಟು ದೂರದೃಷ್ಟಿಯನ್ನು ಹೊಂದಿದ್ದವರು. ಈ ದೂರದೃಷ್ಟಿಗೆ ಬೇಕಾದ ಆದರ್ಶವನ್ನು ರೂಢಿಸಿಕೊಂಡವರು. ಈ ಕಾರಣಕ್ಕಾಗಿ ಯಾವ ಸ್ಥಾನಕ್ಕೆ ಹೋದರೂ ಅದನ್ನು ಪ್ರಾಮಾಣಿಕವಾಗಿ ನಿರ್ವಹಿಸಿ ಹೊರಗೆ ಬರುವಂಥವರು.

ಡಾ||ಡಿ.ಎಂ.ನಂಜುಂಡಪ್ಪನವರು ಉಪಕುಲಪತಿಗಳಾದಾಗ ಡಾ||ಕೆ.ಮರುಳಸಿದ್ದಪ್ಪನವರನ್ನು ಪ್ರಸಾರಾಂಗದ ನಿರ್ದೇಶಕರಾಗಿರಲು ಕೇಳಿಕೊಂಡರು. ನಂಜುಂಡಪ್ಪನವರ ಹಿನ್ನೆಲೆ ಗೊತ್ತಿದ್ದರಿಂದ ಆ ಜವಾಬ್ದಾರಿಯನ್ನು ಒಪ್ಪಿಕೊಂಡರು. 1988-1992 ಪ್ರಸಾರಾಂಗ ಉತ್ತಮ ಪುಸ್ತಕಗಳನ್ನು ತರುವುದು ಮಾತ್ರವಲ್ಲ ಸಮಕಾಲೀನ ದೊಡ್ಡ ಚಿಂತಕರನ್ನು ಕರೆಸಿ ಉಪನ್ಯಾಸ ಏರ್ಪಡಿಸುವುದು ಬಹಳ ಮುಖ್ಯವಾದ ಕೆಲಸ, ಈ ದೃಷ್ಟಿಯಿಂದ ಇವರ ಕಾಲದಲ್ಲಿ ದೊಡ್ಡ ವ್ಯಕ್ತಿಗಳ ಉಪನ್ಯಾಸವನ್ನು

ಕೇಳುವ ಸೌಭಾಗ್ಯ ನಮಗೆ ದೊರಕಿತು. ಉದಾಹರಣೆಗೆ 'ಮೈನ್‌ಸ್ಟ್ರೀಮ್'ನ ಜೀವವಾಗಿದ್ದ ಅದರ ಸಂಪಾದಕ ನಿಖಿಲ್ ಚಕ್ರವರ್ತಿಯವರನ್ನು ಕರೆಸಿದ್ದು. ಭಾರತದ ರಾಜಕೀಯ ಸಾಮಾಜಿಕ ಸಂದರ್ಭದಲ್ಲಿ ಈ ಪತ್ರಿಕೆ ಮಾಡಿದ ಕೆಲಸ ಮಹತ್ವಪೂರ್ಣವಾದದ್ದು ಇದು ಮತ್ತು 'ಸೆಮಿನಾರ್' ಪತ್ರಿಕೆಗಳು ನಮ್ಮ ಬೌದ್ಧಿಕ ಮನಸುಗಳನ್ನು ಚಲನ ಶೀಲಗೊಳಿಸಿದಂತಹವು. ಇಂದಿಗೂ ಸೆಮಿನಾರ್ ಪತ್ರಿಕೆ ನಾವು ಗಮನಿಸುವ ರೀತಿಯಲ್ಲಿ ಬರುತ್ತಿದೆ, ನಮ್ಮ ವಿರೋಧ ಪಕ್ಷಗಳು ಮಾಡದೇ ಇರುವ ಕೆಲಸವನ್ನು ಈ ಪತ್ರಿಕೆಗಳು ಮಾಡಿದವು. ಸದಾ ಮುಕ್ತಚರ್ಚೆಯನ್ನು ಕಾಪಾಡಿಕೊಂಡು ಬಂದ ಪತ್ರಿಕೆಗಳು. ನಿಖಿಲ್ ಚಕ್ರವರ್ತಿಯವರಂತೂ ಎಷ್ಟು ಚೆನ್ನಾಗಿ ಯೋಚನೆ ಮಾಡುತ್ತಿದ್ದರು ಅನ್ನಿಸುತ್ತದೆ. ಇವರ ಬಹಳಷ್ಟು ಲೇಖನಗಳನ್ನು 'ಶೂದ್ರ' ದಲ್ಲಿ ಅನುವಾದ ಮಾಡಿ ಪ್ರಕಟಿಸುವ ಅವಕಾಶ ನನಗೆ ದೊರಕಿತ್ತು. ಕೆ.ಎಂ.ಎಸ್‌ರವರೇ ನಿಖಿಲ್ ಚಕ್ರವರ್ತಿಯವರ ಬಗ್ಗೆ ಒಂದು ವೈಯುಕ್ತಿಕ ಪ್ರತಿಕ್ರಿಯೆಯನ್ನು ಅವರ ನಿಧನದ ಸಂದರ್ಭದಲ್ಲಿ ಬರೆದು ಕೊಟ್ಟಿದ್ದರು. ಆ ಲೇಖನಕ್ಕೆ ಎಂಟಿಆರ್.ದೋಸೆ ಬಯಸಿದ ನಿಖಿಲ್‌ಬಾಬು ಎಂಬ ಶೀರ್ಷಿಕೆಯನ್ನು ಕೊಟ್ಟಿದ್ದರು. ಮೂರು ದಿವಸ ಅವರೊಡನಿದ್ದ ಆತ್ಮೀಯ ಅನುಭವವನ್ನು ಆ ಲೇಖನದಲ್ಲಿ ದಾಖಲಿಸಿದ್ದಾರೆ.

ಭಾರತದ ತತ್ವಶಾಸ್ತ್ರವನ್ನು ತುಂಬ ಸೃಜನಾತ್ಮಕವಾಗಿ ನೋಡಿದ ಮಹಾನ್ ವ್ಯಕ್ತಿ ಕಲಕತ್ತೆಯ ದೇವಿ ಪ್ರಸಾದ್ ಚಟ್ಟೋಪಾಧ್ಯಾಯ ಅವರು. ಭಾರತದ ಪ್ರಜ್ಞಾವಂತರಿಗೆಲ್ಲ ದೇವಿಪ್ರಸಾದರ ಕೊಡುಗೆ ಗೊತ್ತು. ಅವರ 'ಎಥೀಯಿಸಂ' ಮತ್ತು ಲೋಕಾಯತ, ಸಾಕಷ್ಟು ಚರ್ಚೆಯಾದ ವಿದ್ವತ್ಪೂರ್ಣ ಕೃತಿಗಳು. ಈ ಕೃತಿಗಳು ನಾನಾ ರೀತಿಯ ಮನಸುಗಳು ಆರೋಗ್ಯಪೂರ್ಣವಾಗಿ ಬೆಳೆಯಲು ಪ್ರಭಾವ ಬೀರಿವೆ. ಕೆ.ಎಂ.ಎಸ್.ರವರು ಕಲ್ಕತ್ತೆಗೆ ಹೋದಾಗ ಇವರ ಮನೆಯಲ್ಲಿ ಆತಿಥ್ಯವನ್ನು ಸ್ವೀಕರಿಸಿ ಬಂದಿದ್ದಾರೆ. ಅದೇ ರೀತಿಯಲ್ಲಿ ಸೃಜನಶೀಲ ಸಾಹಿತ್ಯ ಮತ್ತು ಪತ್ರಿಕೋದ್ಯಮ ಕ್ಷೇತ್ರದಲ್ಲಿ ಹೊಸ ಆಯಾಮಗಳನ್ನು ತಂದು ಕೊಟ್ಟವರು ಖುಷವಂತ್‌ಸಿಂಗ್‌ರವರು. ತಮ್ಮ ಈ ಇಳಿವಯಸ್ಸಿನಲ್ಲಿಯೂ ತಮ್ಮ ಸೃಜನಶೀಲ ಕ್ರಿಯೆಯನ್ನು ಕಳೆದುಕೊಳ್ಳದಿರುವವರು. ಇತ್ತೀಚಿನ ಅವರ ಹೊಸ ಕಾದಂಬರಿ 'ಸಮುದ್ರದ ಬಳಿಯ ಸಮಾಧಿ' (ಬರಿಯಲ್ ಅಟ್‌ಸೀ) ಕಾದಂಬರಿ ಸಮಕಾಲೀನ ರಾಜಕೀಯ ಹಾಗೂ ಸಾಮಾಜಿಕ ಒಳನೋಟಗಳನ್ನು ಹೊಂದಿರುವ ಕಾದಂಬರಿಯಂತೆ. ಹಿಂದೆ ಪ್ರಸ್ತಾಪಿಸಿರುವಂತೆ ಕೆ.ಎಂ.ಎಸ್‌ರವರು ನನಗೆ 'ಟ್ರೈನ್‌ಟು ಪಾಕಿಸ್ತಾನ್' ಕೃತಿಯನ್ನು ಓದಿಸಿದಾಗ ರೋಮಾಂಚಿತನಾಗಿದ್ದೆ. ಇಂದು ದೇಶದ ನಾನಾ ಪತ್ರಿಕೆಗಳಿಗೆ ಅಂಕಣಕಾರರಾಗಿ ಸಮಕಾಲೀನ ಮನಸ್ಸನ್ನು ಕಾಪಾಡಿಕೊಂಡಿದ್ದಾರೆ ಎಂಬುದು ಸಂತೋಷದ ವಿಷಯ. ಇವರು ಬೆಂಗಳೂರಿಗೆ ಬಂದಾಗ ಕುಮಾರ್‌ಕೃಪಾದಲ್ಲಿ ಭೇಟಿಯಾಗುವ ಮತ್ತು ಅವರ ಜೊತೆ ಊಟಮಾಡುವ ಅವಕಾಶವನ್ನು ಕೆ.ಎಂ.ಎಸ್‌ಕಲ್ಪಿಸಿಕೊಟ್ಟಿದ್ದರು.

ಶಾಂತಿನಾಥ ದೇಸಾಯಿಯವರು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕಾದಂಬರಿ ಪ್ರಕಾರಕ್ಕೆ ಹೊಸ ಚೇತನವನ್ನು ತಂದುಕೊಟ್ಟವರು. ಅವರ ಮುಕ್ತಿ ವಿಕ್ಷೇಪ ಕಾದಂಬರಿಗಳಂತೂ ಸಾವಿರಾರು ಮಂದಿಯನ್ನು ಪ್ರೀತಿ ಪ್ರೇಮಕ್ಕೆ ಸಂಬಂಧಿಸಿದಂತೆ ಉಚ್ಚೆಬ್ಬಿಸಿದ್ದ ಕಾದಂಬರಿಗಳು, ಆಧುನಿಕ ಮನಸ್ಥಿತಿಯನ್ನು ತುಂಬ ಚೆನ್ನಾಗಿ ಹಿಡಿದಿಟ್ಟ ಕಾದಂಬರಿಗಳು. ಅವರು ಉಪಕುಲಪತಿಗಳಾಗಿ ಸಾಹಿತ್ಯದ ವಿಮರ್ಶಕರಾಗಿ ಹಾಗೂ ಕನ್ನಡದ ಸಾಹಿತ್ಯದ ಸೆನ್ಸಿಬಿಲಿಟಿಗಳನ್ನು ಭಾರತದ ಬೇರೆ ಬೇರೆ

ಭಾಷೆಯವರಿಗೆ ಪರಿಚಯ ಮಾಡಿಕೊಟ್ಟವರು. ಅಷ್ಟೇ ಅಲ್ಲ ನಮ್ಮಲ್ಲಿ ಪ್ರಾರಂಭದ ನಾಲ್ಕು ಜ್ಞಾನಪೀಠಪ್ರಶಸ್ತಿಗಳು ಬಂದಾಗ ಸಾಕಷ್ಟು ಮೌಲ್ಯಮಾಪನದ ಕೆಲಸವನ್ನು ಹೊರಗೆ ಮಾಡಿದ್ದಾರೆ. ಅತ್ಯಂತ ಸಭ್ಯ ಮೃದು ಸ್ವಭಾವದ ವ್ಯಕ್ತಿ. ಕೆ.ಎಂ.ಎಸ್, ರಾಮಚಂದ್ರ ಶರ್ಮ, ಲಂಕೇಶ್, ಡಿ.ಆರ್.ಮುಂತಾದವರು ಸಾಕಷ್ಟು ಗಂಟೆಗಳನ್ನು ಹರಟೆಯಲ್ಲಿ ಕಳೆದಿದ್ದೇವೆ. ಆಗ ಎಷ್ಟೊಂದು ಅರಿಯುವ ಕ್ಷಣಗಳು? ಜಾಗೃತ ಸಾಹಿತ್ಯ ಸಮ್ಮೇಳನದ ಸಮಯದಲ್ಲಿ ತುಂಬ ಮಾರ್ಮಿಕವಾಗಿ ಭಾಗವಹಿಸಿದವರು. ಇವರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಚರ್ಚೆಏರ್ಪಡಿಸಿದ್ದಾಗ ಮರಾಠಿಯ ಪ್ರಸಿದ್ಧ ಕಥೆಗಾರ ಮತ್ತು ಕಾದಂಬರಿಕಾರ ಬಾಲಚಂದ್ರನೇಮಾಡೆ ಭಾಗವಹಿಸಿ ಉತ್ತಮ ಉಪನ್ಯಾಸ ನೀಡಿದ್ದರು.

ಭೀಷ್ಮ ಸಹಾನಿ ಹಿಂದಿಸಾಹಿತ್ಯದಲ್ಲಿ ಅರ್ಥಪೂರ್ಣ ಕಾದಂಬರಿಕಾರ ಹಾಗೂ ಕಥೆಗಾರ. ಹಿಂದಿ ಚಲನಚಿತ್ರರಂಗ ಕೊಟ್ಟ ಅದ್ಭುತ ನಟ ಬಲರಾಜಸಹಾನಿಯವರ ತಮ್ಮ. ಭಾರತದಲ್ಲಿ ಪ್ರಗತಿಶೀಲ ಚಳುವಳಿ ಕಂಡ ಮಾರ್ಮಿಕ ಲೇಖಕ ಮತ್ತು ಚಿಂತಕ. ಇವರ 'ತಮಸ್ ' ಕಾದಂಬರಿಯಂತು ಭಾರತ ಮತ್ತು ಪಾಕಿಸ್ತಾನ ವಿಭಜನೆಯ ಏಳುಬೀಳುಗಳನ್ನು ತುಂಬ ಸೂಕ್ಷ್ಮವಾಗಿ ಹಿಡಿದಿಟ್ಟಿರುವ ಕಾದಂಬರಿ. ಕರ್ನಾಟಕಕ್ಕೆ ಸಾಕಷ್ಟು ಬಾರಿ ಬಂದು ಹೋಗಿರುವಂಥವರು. ನಿರಂಜನ ಮತ್ತು ಕಟ್ಟೀಮನಿಯಂಥವರಿಗೆ ತುಂಬ ಆತ್ಮೀಯರಾಗಿದ್ದವರು. ನಮ್ಮ ಜೊತೆ ಪಾಕಿಸ್ತಾನಕ್ಕೆ ಬಂದಿದ್ದರು ಎನ್ನುವುದು ಮತ್ತಷ್ಟು ಸಂತೋಷದ ಸಂಗತಿ.

ಪ್ರಸಾರಾಂಗದ ಎಲ್ಲ ಕಾರ್ಯಕ್ರಮಗಳು ಸೆನೆಟ್‌ಹಾಲ್ ತುಂಬಿದ್ದ ಕಾರ್ಯಕ್ರಮಗಳು. ಇಂಥ ತುಂಬಿದ್ದ ಕಾರ್ಯಕ್ರಮಕ್ಕೆ ಮತ್ತೊಂದು ಕೊಡುಗೆ ಎಂದರೆ ನ್ಯಾಯಮೂರ್ತಿ ಓ.ಚಿನ್ನಪ್ಪರೆಡ್ಡಿಯವರದ್ದು. ಓ ಚಿನ್ನಪ್ಪರೆಡ್ಡಿಯವರು ಭಾರತದ ಸುಪ್ರೀಂಕೋರ್ಟ್ ಕಂಡ ಅಪರೂಪದ ನ್ಯಾಯಾದೀಶರು. ಇಂದಿಗೂ ನಾವು ಚಿನ್ನಪ್ಪರೆಡ್ಡಿಯವರನ್ನು ಮತ್ತು ನ್ಯಾಯಮೂರ್ತಿ ಕೃಷ್ಣಯ್ಯರ್ ಅಂಥವರನ್ನು ನೆನಪು ಮಾಡಿಕೊಳ್ಳುತ್ತೇವೆ. ಮಾನವ ಹಕ್ಕುಗಳ ಉಲ್ಲಂಘನೆ ಕುರಿತಂತೆ ಇವರ ತೀರ್ಪುಗಳು ಚಾರಿತ್ರಿಕಕವಾದ್ದು. ಒಟ್ಟು ಮೊಕದ್ದಮೆಗಳನ್ನು ತುಂಬ ಮಾನವೀಯವಾಗಿ ನೋಡಿ ತೀರ್ಪುಕೊಡುತ್ತಿದ್ದವರು. ಆದರ ಜೊತೆಗೆ ನ್ಯಾಯಾಂಗದ ಶ್ರೇಷ್ಠತೆಯನ್ನು ಕಾಪಾಡಿದವರು.

ಇನ್ನು ನಮ್ಮವರೇ ಆದ ಯು.ಆರ್.ಅನಂತಮೂರ್ತಿಯವರು ಕೇರಳದ ಮಹಾತ್ಮಗಾಂಧಿ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದ ಕಾಲದಲ್ಲಿ ಪ್ರಸಾರಾಂಗದ ಆಹ್ವಾನದ ಮೇರೆಗೆ ಬಂದವರು. ಆ ವಿಶ್ವವಿದ್ಯಾಲಯಕ್ಕೆ ನಿಜವಾದ ಆಕಾರವನ್ನು ಕೊಟ್ಟವರು. ಅಲ್ಲಿಯ ಜನರ ಅಭಿಮಾನಕ್ಕೆ ಪಾತ್ರರಾದವರು. ಯಾಕೆಂದರೆ ಆ ರೀತಿಯ ವ್ಯಕ್ತಿತ್ವವನ್ನು ಆ ವಿಶ್ವವಿದ್ಯಾಲಯದ ಕೆಲಸ ಕಾರ್ಯಗಳ ಮೂಲಕ ಜನಪ್ರಿಯರಾದವರು. ಈ ಪ್ರಸಾರಾಂಗದ ಉನ್ನತ ಕಾರ್ಯಕ್ರಮಗಳಲ್ಲಿ ನಿಸ್ಸಿಮ್ ಎಜಿಕಲ್‌ಯವರದ್ದು. ಕವಿಯಾಗಿ ವಿಮರ್ಶಕರಾಗಿ ಇಂಗ್ಲೀಷ್ ಸಾಹಿತ್ಯದಲ್ಲಿ ಅಮೂಲ್ಯ ಕೆಲಸವನ್ನು ಮಾಡಿರುವಂಥವರು. ತುಂಬ ಗಂಭೀರ ಚಿಂತಕ. ಇವರ ಜೊತೆಗೆ ಡಾ||ರಾಜಾರಾಮಣ್ಣ ಅಣುವಿಜ್ಞಾನಿ ಪ್ರೊ||ಶ್ರೀನಿವಾಸ, ಆಡಳಿತ ತಜ್ಞ ಸತೀಶ್‌ಚಂದ್ರನ್, ನಮ್ಮವರೆ ಆದ ಪಿ.ಲಂಕೇಶ್‌ರವರು. ಲಂಕೇಶ್‌ರವರ ಬಗ್ಗೆ ಈಗಾಗಲೇ ಸಾಕಷ್ಟು ಪ್ರಸ್ತಾಪಿಸಿರುವುದರಿಂದ ಮತ್ತೆ ಇಲ್ಲಿ ಎರಡು ವಾಕ್ಯದಲ್ಲಿ ಮುಗಿಸುವುದು ಬೇಡಅನ್ನಿಸಿದರೂ ಒಂದು

ಮಾತು ಹೇಳಬೇಕಾಗಿದೆ. ಲಂಕೇಶ್‌ರವರು ಪ್ರತಿಯೊಂದು ಕಡೆ ಮಾತಾಡಲು ಹೋದಾಗಲೂ ವಿಚಿತ್ರ ರೀತಿಯ ಟೆನ್‌ಷನ್ನನ್ನ ಬೆಳೆಸಿಕೊಳ್ಳುತ್ತಿದ್ದರು. ನಂತರ ತಾವು ಚೆನ್ನಾಗಿ ಮಾತಾಡಿದರೋ ಇಲ್ಲವೋ ಎಂದು ಕೊರಗುತ್ತ ಕೂರುವುದು. ಅವರು ತುಂಬ ಸರಾಗವಾಗಿ ಮಾತಾಡುವ ಭಾಷಣಕಾರರಲ್ಲದಿದ್ದರೂ ಗಾಢವಾದ ಒಳನೋಟಗಳನ್ನು ಹೊಂದಿದ ಮಹಾನ್‌ಲೇಖಕ. ಆದರೆ ಎಲ್ಲರನ್ನು ಒಂದುರೀತಿಯ ಉದ್ವೇಗದ ಮೂಡ್‌ನಲ್ಲಿ ಕೂರಿಸುತ್ತಿದ್ದರು. ಈ ಕಾರ್ಯಕ್ರಮಕ್ಕೆ ಹೋಗುವ ಹಿಂದಿನ ದಿವಸ ಇದೇ ಉದ್ವೇಗದಲ್ಲಿದ್ದರು. ಆದರೂ ಕೆಲವು ಬಾರಿ ಅವರ ಮಾತು ಸಂತನ ಮಾತಿನ ರೀತಿಯಲ್ಲಿರುತ್ತಿತ್ತು.

ಸಿ.ಡಿ.ನರಸಿಂಹಯ್ಯ ಎಂದು ಕರೆಯುವುದಕ್ಕಿಂತ ಸಿ.ಡಿ.ಎನ್ ಎಂದು ಕರೆದರೆ ನಮಗೆ ಹೆಚ್ಚು ತಲುಪುವ ರೀತಿಯಲ್ಲಿ ಮೈಸೂರು ವಿಶ್ವವಿದ್ಯಾಲಯದ ಇಂಗ್ಲೀಷ್ ವಿಭಾಗಕ್ಕೆ ಘನತೆಯನ್ನು ತಂದುಕೊಟ್ಟವರು. ನಿಜವಾದ ಹಳೆಯಕಾಲದ ಪ್ರಾಧ್ಯಾಪಕ. ಓದುವುದು ಅದನ್ನು ಚಿಂತಿಸಿ ವಿದ್ಯಾರ್ಥಿಗಳಿಗೆ ತಲುಪಿಸುವುದು ತಮ್ಮ ಧರ್ಮ ಎಂದು ತಿಳಿದವರು. ನಿವೃತ್ತಿಯ ನಂತರ 'ಧ್ವನ್ಯಾಲೋಕ ಎಂಬ ಸಂಸ್ಥೆಯ ಮೂಲಕ ಎಲ್ಲ ರೀತಿಯ ಚಿಂತನೆಗಳಿಗೆ ಮುಕ್ತ ರೀತಿಯಲ್ಲಿ ಬಾಗಿಲು ತೆರೆದವರು. ಈ ವಯಸ್ಸಿನಲ್ಲಿಯೂ ಮನಸ್ಸಿನ ಬಾಗಿಲು ತೆರೆದು ಕೂತಿದ್ದಾರೆ.

ಕೆ.ಎಂ.ಎಸ್‌ರವರು ಇನ್ನು ಯಾರ್‍ಯಾರನ್ನೋ ಕರೆಸಿದ್ದಾರೆ. ಬೆಂಗಳೂರಿನ ಹೊರಗೆ ಕಾರ್ಯಕ್ರಮ ರೂಪಿಸಿದ್ದಾರೆ. ಡಾ|.ಡಿ.ಎಂ.ನಂಜುಂಡಪ್ಪನವರನ್ನು ಈಗಲೂ ನೆನಪು ಮಾಡಿಕೊಳ್ಳುವರು, ಎಷ್ಟೊಂದು ಸ್ವಾತಂತ್ರ್ಯವನ್ನು ಕೊಟ್ಟಿದ್ದರು ಎಂದು. ಹಾಗೆಯೇ ಇಂಥದ್ದು ಮಾಡಬೇಕು ಎಂದಾಗ ಮಾಡಿ ಎನ್ನುತ್ತಿದ್ದರೇ ವಿನಹ ಯಾಕೆ ಮಾಡುತ್ತಿದ್ದೀರಿ? ಎಂದು ಕೇಳಿದವರಲ್ಲ. ಅಷ್ಟರಮಟ್ಟಿಗೆ ಆಧುನಿಕ ಪರಿಜ್ಞಾನ ಬೆಳೆಸಿಕೊಂಡಿದ್ದ ದೊಡ್ಡ ವ್ಯಕ್ತಿ ಎಂದು.

ಐನೂರು ರೂಪಾಯಿ ನೋಟನ್ನು ಕಂಡಾಗಲೆಲ್ಲ ಕೆ.ಎಂ.ಎಸ್‌ರವರು ಹಾಗೂ ಬ್ರಿಗೇಡ್ ರಸ್ತೆಯ ಚೀನಿ ಹೋಟೆಲ್ ನೆನಪಿಗೆ ಬರುತ್ತದೆ. ಅನಂತಮೂರ್ತಿಯವರ ಉಪನ್ಯಾಸವಾದ ಮೇಲೆ ಊಟಕ್ಕೆ ಆ ಹೋಟಲ್‌ಗೆ ಹೋದೆವು. ಜೊತೆಯಲ್ಲಿ ಪ್ರೊ.ಜಿ.ಕೆ.ಜಿಯವರೂ ಇದ್ದರು. ಮಳೆ ಬೀಳುತ್ತಿತ್ತು. ಹೋಟೆಲ್‌ಗೆ ಹೋದೆವು. ಹೋಟೆಲ್‌ನ ಮುಂದೆ ಇಳಿದಾಗ ಅವರು ಮುಂದೆ ಹೋದರು. ನಾಲ್ಕೈದು ಅಡಿಗಳ ದೂರದಲ್ಲಿ ನೋಟಿನ ರೀತಿಯ ಕಾಗದ ಕಾಣಿಸಿತು. ತುಂಬ ನೆನೆದು ಹೋಗಿತ್ತು. ಮೆಲ್ಲಗೆ ಕೈಗೆ ತೆಗೆದುಕೊಂಡುಜೇಬಿನಲ್ಲಿಟ್ಟೆ. ಅನಂತಮೂರ್ತಿಯವರ ಜೊತೆ ಊಟಮಾಡುವಾಗಲೂ ಅದು ನಿಜವಾಗಿಯೂ ನೂರು ರೂಪಾಯಿಯ ನೋಟು ಇರಬಹುದೇ? ಎಂಬ ಪುಟ್ಟ ಕುತೂಹಲ ಮನಸ್ಸಿನಲ್ಲಿತ್ತು. ಆದರೆ ಅಲ್ಲಿ ಮಾತಿನ ವೈವಿಧ್ಯತೆಯಲ್ಲಿ ಮರೆತು ಹೋದೆ. ಮನೆಗೆ ಬಂದು ಜೇಬಿನಲ್ಲಿದ್ದನ್ನು ಟೇಬಲ್ಲಿನ ಮೇಲಿಡುವ ಸಮಯಕ್ಕೆ ಆ ನೋಟು ಐನೂರು ರೂಪಾಯಿಗಳದ್ದು. ಒಂದು ರೀತಿಯ ಸಂತೋಷವಾಯಿತು. ಆದರೆ ಅದನ್ನು ಕಳಕೊಂಡವನಿಗೆ ಏನಾಗಿರಬಹುದು? ಎಂಬ ಪ್ರಶ್ನೆ ನಿದ್ದೆ ಬರುವವರೆಗೆ ಕಾಡಿತ್ತು. ಬೆಳಿಗ್ಗೆ ಎದ್ದಾಕ್ಷಣ ತೇವಾಂಶ ಕಳಕೊಂಡು ಚಲಾವಣೆಗೆ ಕಾದಿದ್ದೇನೆ ಎನ್ನುವ ರೀತಿಯಲ್ಲಿ ಕೂತಿತ್ತು. ಇದಾದ ಮೇಲೆ ಎರಡು ಮೂರು ಬಾರಿ ಕೆ.ಎಂ.ಎಸ್.ಮತ್ತು ಪ್ರೊ||ಜಿ.ಕೆ.ಜಿ.ಯವರ ಜೊತೆ ಆ ಹೋಟೆಲ್‌ಗೆ ಹೋಗಿದ್ದೇನೆ. ನೋಟು ನೆಲದ ಮೇಲೆ ತೇವಗೊಂಡು ಬಿದ್ದಿರುವ ಚಿತ್ರ ಗೋಚರಿಸಿದೆ. ಪ್ರಸಾರಾಂಗದ ಕಾರ್ಯ

ಕ್ರಮಗಳ ನೆನಪುಗಳ ಮಧ್ಯೆ ಅದೂ ಗಟ್ಟಿಯಾಗಿ ಉಳಿದಿದೆ. ಐನೂರು ಖರ್ಚಾಗಿ ಎಷ್ಟೋ ವರ್ಷಗಳು ಕಳೆದರೂ ಮನಸ್ಸಿನಲ್ಲಿ ಚಲಾವಣೆಯಾಗುತ್ತಲೇ ಇದೆ. ಕಳಕೊಂಡವನ ನೆನಪು ಅಷ್ಟು ದಟ್ಟವಾಗಿರಲಾರದು. ಯಾಕೆಂದರೆ ಅವನಿಗೆ ಅಥವಾ ಅವಳಿಗೆ ಎಲ್ಲಿ ಕಳಕೊಂಡೆ ಎಂಬ ನಿರ್ದಿಷ್ಟ ಸ್ಥಳ ಗುರ್ತಿಸಲು ಸಾಧ್ಯವಾಗದ ಕಾರಣಕ್ಕೆ.

## ಅಧ್ಯಯನ ಕೇಂದ್ರದ ನಿರ್ದೇಶಕರಾಗಿ

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರಕ್ಕೆ ಒಂದು ಸಾಂಸ್ಕೃತಿಕ ಮಹತ್ವ ಪೂರ್ಣತೆ ಇದೆ. ಎಪ್ಪತ್ತು - ಎಂಬತ್ತರ ದಶಕಗಳಲ್ಲಿ ಪ್ರೊ. ಜಿ.ಎಸ್. ಶಿವರುದ್ರಪ್ಪನವರು ಇದರ ವಿವಿಧ ಆಯಾಮಗಳನ್ನು ನಾನಾರೀತಿಯಲ್ಲಿ ವಿಸ್ತರಿಸಿದರು. ಇದನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ. ಆದರೆ ಜಿ.ಎಸ್.ಎಸ್. ರವರ ನಂತರ ಬಂದ ನಿರ್ದೇಶಕರು ಹಳೆಯ ನೆನಪುಗಳು ಮರುಕಳಿಸುವ ರೀತಿಯಲ್ಲಿ ಚಟುವಟಿಕೆಗಳು ರೂಪುಗೊಳಲಿಲ್ಲ. ಆದರೆ ಕೆ.ಎಂ.ಎಸ್. ರವರು ನಾಲ್ಕು ವರ್ಷ ಪ್ರಸಾರಾಂಗದ ನಿರ್ದೇಶಕರಾಗಿದ್ದಾಗ ಈ ಕೊರತೆಯನ್ನು ಅಲ್ಲಿ ತುಂಬಿ ಕನ್ನಡ ಅಧ್ಯಯನ ಕೇಂದ್ರಕ್ಕೆ ನಿರ್ದೇಶಕರಾಗಿ ಬಂದರು. ಇದೇ ಸಮಯಕ್ಕೆ ಪ್ರಾಧ್ಯಾಪಕರಾಗಿ ಬಡ್ತಿ ಹೊಂದಿದ್ದರು. 1995-97ರ ಅವರಿಗೆ ಎರಡು ವರ್ಷಕ್ಕೆ ನಿರ್ದೇಶಕರಾದರು. ಆರ್ಟ್ ಫ್ಯಾಕಲ್ಟಿಯ ಡೀನ್ ಸಹಾ ಆದರು. ವಿಭಾಗದ ಮುಖ್ಯಸ್ಥರ ಈ ಹುದ್ದೆ ಆವರ್ತನ ಪದ್ಧತಿಯಂತೆ ಒಬ್ಬೊಬ್ಬರಿಗೆ ಎರಡು ವರ್ಷ ಎಂಬುದು ನಿಯಮಾವಳಿಯಾಗಿರುವುದರಿಂದ ತಮ್ಮ ಕ್ರಿಯಾಶೀಲತೆಯ ಚಿಂತನೆಗಳು ಕಾರ್ಯರೂಪಕ್ಕೆ ತರಬೇಕೆನ್ನುವ ಸಮಯಕ್ಕೆ ನಿರ್ದೇಶಕರ ಹುದ್ದೆ ಮುಗಿದಿತ್ತು. ಆದರೂ ಬೇಂದ್ರೆಯವರ ಶತಮಾನೋತ್ಸವದ ಕಾರ್ಯಕ್ರಮದ ಎರಡು ದಿನಗಳ ವಿಚಾರ ಸಂಕೀರಣ ಜಿ.ಎಸ್.ಎಸ್. ರವರ ಕಾಲಘಟ್ಟವನ್ನು ನೆನಪಿಗೆ ತರುವ ರೀತಿಯಲ್ಲಿ ನಮ್ಮ ಸಾಂಸ್ಕೃತಿಕ ಲೋಕದ ಅರ್ಥಪೂರ್ಣ ವ್ಯಕ್ತಿಗಳೆಲ್ಲ ಭಾಗವಹಿಸುವ ರೀತಿಯಲ್ಲಿ ನಡೆಸಿ ಕೊಟ್ಟಿದ್ದರು. ಕೆ.ಎಂ.ಎಸ್. ರವರು ಇದೇ ಸಮಯದಲ್ಲಿ ಪದವಿ ತರಗತಿಗಳಿಗೆ ಶ್ರೇಷ್ಠ ಕೃತಿಗಳನ್ನೇ ಪಠ್ಯ ಪುಸ್ತಕಗಳಾಗಲು ಹಠಹಿಡಿದು ಜಾರಿಗೊಳಿಸಿದರು. ಪಠ್ಯಪುಸ್ತಕಗಳನ್ನು ಆಯ್ಕೆ ಮಾಡುವಲ್ಲಿ ಹಿಂದಿನ ನಿರ್ದೇಶಕರು ಸಾಕಷ್ಟು ರಾಡಿಯೆಬ್ಬಿಸಿದ್ದರು. ಅವರು ನಡೆಸಿದ ಅವ್ಯವಹಾರದಿಂದಾಗಿ ಇಡೀ ವಾತಾವರಣವೇ ಕಲುಷಿತಗೊಂಡಿತ್ತು. ಅದನ್ನೆಲ್ಲ ರಿಪೇರಿ ಮಾಡಿ ನಿರ್ದೇಶಕರ ಕುರ್ಚಿಯ ಮೇಲೆ ಕೂರ ಬೇಕಾಗಿ ಬಂದಿತ್ತು. ಈ ಅವಧಿಯಲ್ಲಿ ಶ್ರೇಷ್ಠ ಕೃತಿಗಳನ್ನು ಪಠ್ಯ ಪುಸ್ತಕಗಳನ್ನಾಗಿ ಮಾಡುವುದರ ಮೂಲಕ ಪದವಿ ತರಗತಿಗಳಿಗೆ ಪಾಠಮಾಡುವ ಅಧ್ಯಾಪಕರ ಸಂತೋಷಕ್ಕೆ ಪಾತ್ರರಾಗಿದ್ದರು. ಯಾಕೆಂದರೆ ಉತ್ತಮ ಕೃತಿಗಳಿಲ್ಲದಿದ್ದರೆ ಯಾವ ಗಂಭೀರ ಅಧ್ಯಾಪಕನು ವಿದ್ಯಾರ್ಥಿಗಳ ನಡುವೆ ಅಭಿರುಚಿಯನ್ನು ಬೆಳೆಸಲಾರ ಎಂಬುದನ್ನು ಕೆ.ಎಂ.ಎಸ್. ರವರು ಗಾಢವಾಗಿ ನಂಬಿದ್ದವರು. ಇಲ್ಲಿಂದ ನಿವೃತ್ತಿಯಾದ ಮೇಲೆ ಇವರ ಅಧ್ಯಕ್ಷತೆಯಲ್ಲಿ ಎಂಟನೆ ತರಗತಿಗೆ ಪಠ್ಯಪುಸ್ತಕ ಸಮಿತಿಯನ್ನು ಸರ್ಕಾರ ನೇಮಿಸಿತು.

ಇದೊಂದು ಆದರ್ಶದ ಮಾದರಿ ಪಠ್ಯಪುಸ್ತಕವೆಂಬುದನ್ನು ಯಾರೇ ಅವಲೋಕಿಸಿದರೂ ಹೇಳಬಹುದು. ಇಲ್ಲೆಲ್ಲ ಕೆ.ಎಂ.ಎಸ್. ರವರ ಹೆಚ್ಚು ಗಾರಿಕೆ ಇರುವುದು. ತಮ್ಮ ನಿರ್ದಾಕ್ಷಿಣ್ಯ ನಂಬಿಕೆಗಳನ್ನು ಮಾರಾಟಕ್ಕಿಡಲಿಲ್ಲ. ಇಂಥ ಕಡೆಯೇ ಒಬ್ಬ ಮನುಷ್ಯನ ಸಾಕ್ಷಿ ಪ್ರಜ್ಞೆ ದಟ್ಟವಾಗಿ

ನಮ್ಮ ಮುಂದೆ ನಿಲ್ಲುವುದು. ಕೆ.ಎಂ.ಎಸ್. ರವರಿಗೆ ಪ್ರೊ. ಜಿ.ಎಸ್.ಎಸ್. ರವರಿಗೆ ದೊರಕಿದ ರೀತಿಯಲ್ಲಿ ಒಂದು ದೀರ್ಘ ಅವಧಿಯ ನಿರ್ದೇಶಕರ ಹುದ್ದೆ ದೊರಕಿದ್ದರೆ ಅವರ ಮನಸ್ಸಿನಲ್ಲಿ ಹರಡಿಕೊಂಡಿದ್ದ ಹಾಗೂ ಪ್ರಸಾರಾಂಗದಲ್ಲಿ ಮತ್ತಷ್ಟು ಮಾಡಬಹುದಾಗಿತ್ತು ಎಂಬ ಆಶಯಗಳನ್ನು ಇಲ್ಲಿ ವಿಸ್ತರಿಸಬಹುದಾಗಿತ್ತು. ಇಷ್ಟಾದರೂ ಇವರು ಅಧ್ಯಯನ ಕೇಂದ್ರದಲ್ಲಿದ್ದ ಸುಮಾರು ಮುವತ್ತೈದು ವರ್ಷಗಳ ದೀರ್ಘಕಾಲದ ಉದ್ದಕ್ಕೂ ಎಚ್ಚರಿಕೆಯ ವ್ಯಕ್ತಿತ್ವವನ್ನು ನಿರ್ಮಾಣಮಾಡಿದ್ದರು.

## ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾಗಿ

ಹಿಂದೆ ಪ್ರಸ್ತಾಪಿಸಿರುವಂತೆ ಡಾ|| ಕೆ.ಎಂ.ಎಸ್. ರವರಿಗೆ ರಂಗಭೂಮಿಯನ್ನುವುದು ಅದ್ಭುತರೀತಿಯ ಅನನ್ಯತೆಯನ್ನು ಅವರಿಗೆ ತಂದು ಕೊಟ್ಟಿರು ವಂಥದ್ದು. ಈ ಕಾರಣಕ್ಕಾಗಿಯೇ ಕರ್ನಾಟಕ ಸರ್ಕಾರವು 1996ರಲ್ಲಿ ನಾಟಕ ಅಕಾಡೆಮಿ ಅಧ್ಯಕ್ಷರನ್ನಾಗಿ ನೇಮಿಸಿತು. ಈ ಮೂರು ವರ್ಷಗಳ ಅವಧಿಯ ಅವರ ಕಾರ್ಯ ಬಾಹುಳ್ಯ ಅಪೂರ್ವವೆನ್ನುವ ರೀತಿಯಲ್ಲಿ ಅಕಾಡೆಮಿಗೆ ಒಂದು ಚೌಕಟ್ಟನ್ನು ರೂಪಿಸಿದರು. ಯಾಕೆಂದರೆ ಕುರ್ಚಿಯ ಮೇಲೆ ಕೂತು ಸುಮ್ಮನೆ ಕೆಲಸಮಾಡುವುದು ಬೇರೆ. ಎಲ್ಲ ಜಿಲ್ಲೆಗಳ ಪ್ರಾತಿನಿಧ್ಯವಲ್ಲಿ ಪಡೆದಿದ್ದ 24 ಜನ ಸದಸ್ಯರ ನಡುವೆ ಹೆಚ್ಚು ಪ್ರಜಾಪ್ರಭುತ್ವವಾದಿಯಾಗಿ ಕಾರ್ಯ ನಿರ್ವಹಿಸಿದರು. ಹೀಗೆ ಕೆಲಸಮಾಡುವಾಗ ತಾವು ನಂಬಿದ ಶ್ರೇಷ್ಠತೆಯನ್ನು ಕೈ ಬಿಟ್ಟವರಲ್ಲ. ಯಾಕೆಂದರೆ ಬಹಳಷ್ಟು ಬಾರಿ ದುರ್ಬಲ ವ್ಯಕ್ತಿತ್ವಗಳು ನಾನಾ ಕಾರಣಗಳಿಗಾಗಿ ಬಲಿಯಾಗಿ ಪ್ರಶಸ್ತಿಗಳನ್ನು ಹಿಗ್ಗಿಸುತ್ತ ಹೋಗಿದ್ದರು. ಅದನ್ನು ನಿಯಂತ್ರಿಸಿ ಅರ್ಹರಾದರವರಿಗೆ ಮಾತ್ರ ಇದು ಸಲ್ಲಬೇಕು ಎಂಬುದನ್ನು ಸದಸ್ಯರ ವಿಶ್ವಾಸವನ್ನು ಪಡೆದು ಕೊಂಡು ಕಾರ್ಯ ನಿರ್ವಹಿಸಿದರು. ಇಂದಿಗೂ ಅವರ ಅವಧಿಯಲ್ಲಿ ಸದಸ್ಯರಾಗಿದ್ದ ಬಹಳಷ್ಟು ರಂಗಭೂಮಿ ಗೆಳೆಯರು ಸಿಕ್ಕಿದಾಗ ಮುಕ್ತ ಮನಸ್ಸಿನಿಂದ ಕೊಂಡಾಡುತ್ತಾರೆ.

ಕೆ.ಎಂ.ಎಸ್. ರವರು ಈ ಮೂರು ವರ್ಷಗಳಲ್ಲಿ ನೂರಾರು ವಿಚಾರ ಸಂಕಿರಣಗಳನ್ನು ಹಾಗೂ ನಾಟಕೋತ್ಸವಗಳನ್ನು ನಡೆಸಿಕೊಟ್ಟರು. ರಾಜ್ಯದ ಉದ್ದಗಲಕ್ಕೂ ಅಲ್ಲಲ್ಲಿಯ ಪ್ರತಿಭೆಗಳು ಕ್ರಿಯಾಶೀಲವಾಗಿ ಕೆಲಸಮಾಡಲು ವಾತಾವರಣವನ್ನು ನಿರ್ಮಿಸಿದರು. ಬೆಂಗಳೂರು, ಮೈಸೂರು ಮತ್ತು ಧಾರವಾಡಗಳಿಗೆ ಮಾತ್ರ ಯಾವುದೇ ಅಕಾಡೆಮಿ ಚಟುವಟಿಕೆ ಸೀಮಿತವಾಗಬಾರದೆಂದು ಯೋಜನೆಗಳನ್ನು ಸಿದ್ಧಪಡಿಸಿದರು. ರಾಜ್ಯದ ಉದ್ದಗಲಕ್ಕೂ ರಂಗಾಸಕ್ತರು ನಮ್ಮ ಅಭಿರುಚಿಗೆ ಅನುಗುಣವಾದ ಒಂದು ಸಂಸ್ಥೆ ಇದೆ ಎಂದು ಚಿಂತಿಸುವ ರೀತಿಯಲ್ಲಿ ಅಕಾಡೆಮಿಗೆ ಆಪ್ತತೆಯನ್ನು ತಂದುಕೊಟ್ಟರು. ಹಾಗೆ ನೋಡಿದರೆ ತಮ್ಮ ಕಾಲಾವಧಿಯ ಎಲ್ಲ ಪ್ರಶಸ್ತಿ ಸಮಾರಂಭಗಳು ಬೆಂಗಳೂರಿನನಿಂದ ಹೊರಗೇ ನಡೆಯುವಂತೆ ನೋಡಿಕೊಂಡರು. ಹೀಗೆ ಮಾಡುತ್ತಲೇ ಅಕಾಡೆಮಿಯ ಘನತೆಗೆ ಚ್ಯುತಿ ಬರದಂತೆ ಎಚ್ಚರವಹಿಸಿದರು. ಅಕಾಡೆಮಿಯ ಶ್ರೀಮಂತಿಕೆಯ ಅರ್ಥಪೂರ್ಣ ಚಟುವಟಿಕೆಗಳನ್ನು ಕಂಡು ಅಂದಿನ ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಬಿ. ಟಿ. ಲಲಿತನಾಯಕ್‌ರವರು ಒಮ್ಮೆ ಸಿಕ್ಕಿದ್ದಾಗ ಕೆ. ಮರುಳಸಿದ್ದಪ್ಪನವರು ನಾಟಕ ಅಕಾಡೆಮಿಗೆ ಎಂಥ ಆರೋಗ್ಯಪೂರ್ಣ ಸಾಂಸ್ಕೃತಿಕ ಚಾಲನೆಯನ್ನು ಕೊಟ್ಟಿದ್ದಾರೆ ಎಂದು ಮುಕ್ತ ಮನಸ್ಸಿನಿಂದ ಪ್ರಶಂಸಿದ್ದರು. ಯಾಕೆಂದರೆ ಲಲಿತಾನಾಯಕ್‌ರಂಥವರು ಸಾಂಸ್ಕೃತಿಕ ಚಳುವಳಿಯಿಂದ ಬಂದಿದ್ದರಿಂದ

ಕೆ.ಎಂ.ಎಸ್: ರವರಂಥ ವ್ಯಕ್ತಿತ್ವಗಳು ತಕ್ಷಣ ಮಾರ್ಮಿಕವಾಗಿ ಮುಂದೆ ಬಂದು ನಿಲ್ಲಲು ಸಾಧ್ಯವಿರುತ್ತದೆ. ಕೇವಲ ಲಲಿತಾನಾಯಕ್ ರವರು ಮಾತ್ರವಲ್ಲ ಯಾರೇ ಸಚಿವರು ಬಂದರೂ ಕೆ.ಎಂ.ಎಸ್. ರವರ ವ್ಯಕ್ತಿತ್ವ ಗೊತ್ತಿರುತ್ತದೆ. ಅಷ್ಟರಮಟ್ಟಿಗೆ ಅವರ ವ್ಯಕ್ತಿತ್ವ ಸಾಂಸ್ಕೃತಿಕವಾಗಿ ಸಾಮಾಜಿಕವಾಗಿ ಹರಡಿಕೊಂಡಿದೆಯೆಂಬುದು ನಾವು ಗಮನಿಸಬೇಕಾದ ಅಂಶ. ಯಾವುದೇ ಕ್ಷೇತ್ರಕ್ಕೆ ಹೋದರು ತಂಬ ನೆನಪಿನಲ್ಲಿ ಉಳಿಯುವ ಕೆಲಸಮಾಡಿ ಮೌನವಾಗಿ ನಿಂತು ಬಿಡುತ್ತಾರೆ. ಸಣ್ಣ ಪುಟ್ಟದ್ದಕ್ಕೆಲ್ಲ ಪತ್ರಿಕಾ ಗೋಷ್ಠಿಗಳನ್ನು ಕರೆದು ಪ್ರಚಾರ ಪ್ರಿಯತೆಯನ್ನು ಬಯಸಿದರವಲ್ಲ ಯಾಕೆಂದರೆ ನಮ್ಮ ಸಾಂಸ್ಕೃತಿಕ ವಾತಾವರಣ ಎಷ್ಟು ಕುಲಗೆಟ್ಟದೆಯೆಂದರೆ, ಕರಪತ್ರಗಳ ರೀತಿಯ ಕೃತಿಗಳನ್ನೆಲ್ಲ ಬಿಡುಗಡೆಯೆಂಬ ಅದ್ದೂರಿಕಾರ್ಯ ಕ್ರಮಮಾಡಿ ಕೇವಲ ಪೇಪರ್ ಟೈಗರ್ಸ್ ಆಗಿ ಉಳಿಯಲು ಪ್ರಯತ್ನಿಸುವವರು. ಇದನ್ನು ಎಂದೂ ಕೆ.ಎಂ.ಎಸ್: ರವರು ಬಯಸಿದವರಲ್ಲ. ಹೀಗೆ ಮಾಡುವುದರಿಂದ ಅದರ ಕಾರ್ಯವಾಪ್ತಿ ಕುಗ್ಗುತ್ತದೆ ಎಂದು ತಿಳಿದವರು.

## ಕುವೆಂಪು 90 ಸುತ್ತ ನಾವೆಲ್ಲ; ಮತ್ತೊಂದು ನೆನಪು

"ತೊಂಬತ್ತು ವರ್ಷಕಾಲ ನಮ್ಮೊಂದಿಗೆ ಬದುಕಿರುವ ಕುವೆಂಪು ಓದುತ್ತಾ, ಬರೆಯುತ್ತಾ ನಿದ್ರಿಸುತ್ತಾ, ಕನಸುತ್ತಾ, ಚರ್ಚಿಸುತ್ತಾ, ಪಾಠ ಹೇಳುತ್ತಾ, ಕಾವ್ಯ ಮತ್ತು ಕಾದಂಬರಿಗಳನ್ನು ರಚಿಸಿದ್ದಾರೆ. ಮೂಢನಂಬಿಕೆ, ಪುರೋಹಿತಶಾಹಿ, ಪಾಳೇಗಾರಿಕೆ, ಮೌಢ್ಯ, ಜಾತೀಯತೆ ಮುಂತಾದ್ದರ ವಿರುದ್ಧ ಸಮರಸಾರಿ ಹಲವು ತಲೆಮಾರಿನ ಯುವಕ ಯುವತಿಯರಿಗೆ ಹೊಸ ಧ್ಯೇಯವಾಗಿ, ಕ್ರಾಂತಿಯ ಸ್ಫೂರ್ತಿಯಾಗಿ ಬದುಕಿದ್ದಾರೆ .............. ಪುಸ್ತಕಗಳಲ್ಲಿ ರಮ್ಯವೂ ಮನೋಹರವೂ ಆಗಿ ಕಾಣುವ ಅರಣ್ಯ ಮತ್ತು ಪ್ರಕೃತಿ ವಾಸ್ತವದಲ್ಲಿ ಅಷ್ಟು ಜನಪ್ರಿಯವಲ್ಲ.ಯಾವುದೇ ಒಂದು ಆರೋಗ್ಯವಂತ ಸಮಾಜ ಕುವೆಂಪು ಪ್ರಕೃತಿಗೆ ಕೊಟ್ಟ ಚೈತನ್ಯವನ್ನು ಬಳಸಿಕೊಂಡದ್ದಲ್ಲಿ ಮಲೆನಾಡನ್ನು ಸ್ವರ್ಗಸಮಾನವಾಗಿ ಮಾಡುತ್ತಿತ್ತು. ಗಾಂಧೀಜಿ ತಮ್ಮ 'ಹಿಂದ್‌ಸ್ವರಾಜ್' ದಲ್ಲಿ ಭಾರತದಹಳ್ಳಿಗಳು ಹೇಗೆ ಸಂಶೋಧನೆಯ ಪ್ರಕೃತಿಯ ಆರಾಧನೆಯ ಸಂಕೀರ್ಣ, ಅರ್ಥಪೂರ್ಣ ಘಟಕಗಳಾಗಬೇಕೆಂದು ಬರೆದಿದ್ದಾರೆ. ಅದು ಮಿಕ್ಕ ಹೇಳಿಕೆಗಳಂತೆಯೇ ಗಾಂಧೀವಾದದಲ್ಲಿ ಸೇರಿಕೊಂಡು ಅಪ್ಪಟ ಗಾಂಧೀವಾದಿಗಳಿಂದ ಮತ್ತು ಸಮಾಜದ್ರೋಹಿಗಳಿಂದ ನಾಶವಾಗಿದೆ. ಇದಕ್ಕೆ ಕಾರಣಗಳೂ ನಿಗೂಢವಲ್ಲವಾದ್ದರಿಂದ ಈ ಬಗ್ಗೆ ನಿಮ್ಮನ್ನು ಕೊರೆಯುವುದಿಲ್ಲ, ಆದರೆ ಒಂದು ಪ್ರಕೃತಿಯ ಪ್ರಾಣ ನಾಶವಾದರೆ ಒಂದು ನಾಗರೀಕತೆಯ, ಜೀವನವಿಧಾನ, ಕನಸು, ಕಲ್ಪನೆ ನಾಶವಾದಂತೆ ಎಂಬುದನ್ನು ಮಾತ್ರ ನಿಮ್ಮ ಅವಗಾಹನೆಗೆ ತರಲು ಬಯಸುತ್ತೇನೆ."

ಲಂಕೇಶ್

'ಕುವೆಂಪು 90' - ಒಂದು ಸಾಂಸ್ಕೃತಿಕ ನೆನಪು' ಈ ವಿಷಯದ ಮೇಲಿನ ಕಾರ್ಯಕ್ರಮಕ್ಕೆ ಕುವೆಂಪುರವರ ಕುಪ್ಪಳಿ ಮನೆಯಲ್ಲಿ ಸೇರಿದ್ದೆವು. ಇದು 1993 ಮಾರ್ಚ್‌ತಿಂಗಳಲ್ಲಿ ಎರಡುದಿನ ನಡೆದ ಕಾರ್ಯಕ್ರಮ. 'ಶೂದ್ರ' ವೇದಿಕೆಯಲ್ಲಿ ನಡೆದದ್ದು. ಪ್ರೊ.ಜಿ.ಎಸ್.ಶಿವರುದ್ರಪ್ಪ ಮತ್ತು ನ್ಯಾಯಮೂರ್ತಿ ಎನ್.ಡಿ.ವೆಂಕಟೇಶರವರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಕ್ರಮ. ಕೆ.ಎಂ.ಎಸ್‌ರವರನ್ನು ಕುರಿತು ಬರೆಯುವ ಸಮಯಕ್ಕೆ ಲಂಕೇಶ್‌ರವರ ಲೇಖನ ನೆನಪಿಗೆ ಬಂತು.

ಇಡೀ ಕಾರ್ಯಕ್ರಮಕ್ಕೆ ಪೀಠಿಕಾ ಲೇಖನವನ್ನಾಗಿ ಅವರು ಬರೆದಿದ್ದರು. ಅವರ ಅನಾರೋಗ್ಯದ ಕಾರಣ ಬರಲಾಗಿರಲಿಲ್ಲ. ಇಂದು ಆ ಲೇಖನವನ್ನು 'ಶೂದ್ರ' ದ ವಿಶೇಷಾಂಕವನ್ನು ತೆಗೆದು ಓದುತ್ತಿರುವಾಗ ಒಂದು ಕ್ಷಣ ವಿಷಾದದಿಂದ ನರಳಿದೆ. ಅಷ್ಟು ಗಾಢವಾಗಿ ನನ್ನ ಮನಸ್ಸನ್ನು ಮತ್ತೊಮ್ಮೆ ಆಕ್ರಮಿಸಿಕೊಂಡಿತು. ಈ ಲೇಖನವನ್ನು ಕೊಡುವಾಗ ಲಂಕೇಶ್‌ರವರು ನಮ್ಮನ್ನು ಬರಮಾಡಿಕೊಂಡಿದ್ದರು. ಆಂದು ಸಂಜೆ ಕೆ.ಎಂ.ಎಸ್, ಟಿ.ಎನ್.ಸೀತಾರಾಂ ಮತ್ತು ಅಗ್ರಹಾರ ಕೃಷ್ಣಮೂರ್ತಿ ಇದ್ದರು. ನಾವು ಮಾತುಕತೆಯಲ್ಲಿ ಇರುವಾಗ ನಡುವೆ ಲಂಕೇಶ್‌ರವರು ಲೇಖನಕೊಟ್ಟರು. ''ಅಗ್ರಹಾರ ನೀನು ಅಲ್ಲಿ ಓದು'' ಎಂದರು. ಆದಕ್ಕಿಂತ ಮೊದಲು ಅಗ್ರಹಾರನ ಕೈಯಲ್ಲಿ ಲೇಖನವನ್ನು ಓದಿಸಿದರು. ಟಿ.ಎನ್.ಸೀತಾರಾಂ ಬ್ಯೂಟಿಫುಲ್'' ಎಂಬ ಉದ್ಗಾರ ತೆಗೆದು ಕೆ.ಎಂ.ಎಸ್. ''ಚೆನ್ನಾಗಿದೆ'' ಎಂದರು. ಅಗ್ರಹಾರ ''ನೈಸ್'' ಎಂದ. ನಾನು ''ಥ್ಯಾಂಕ್ಸ್'' ಎಂದೆ. ಯಾಕೆಂದರೆ ಮೂರು ದಿನದಿಂದ ಈ ಲೇಖನಕ್ಕೆ ದುಂಬಾಲು ಬಿದ್ದಿದ್ದೆ. ಅವರು ಬರಲೇ ಬೇಕು ಎಂಬುದು ನಮ್ಮ ಆಶಯವಾಗಿದ್ದರೂ ; ಅವರ ಅನಾರೋಗ್ಯದಿಂದ ಒತ್ತಾಯ ಮಾಡಿರಲಿಲ್ಲ. ಆದರೆ ಅವರ ಪ್ರತಿನಿಧಿಯಾಗಿ ಲೇಖನ ಬೇಕಾಗಿತ್ತು. ಅವರೇ ಮೂರು ನಾಲ್ಕು ಪ್ರತಿಗಳನ್ನು ಡಿಟಿಪಿಯಲ್ಲಿ ಪ್ರಿಂಟ್ ತೆಗೆಸಿಕೊಟ್ಟರು.

ಬೆಂಗಳೂರಿನಿಂದ ಎರಡು ಬಸ್ಸುಗಳನ್ನು ಮಾಡಿಕೊಂಡು ಕುಪ್ಪಳಿಗೆ ಹೊರಟಿದ್ದೆವು. ಅಲ್ಲಿಯ ಗೆಳೆಯರು ಸಂಭ್ರಮದಿಂದ ನಮ್ಮ ಜೊತೆ ಭಾಗವಹಿಸಿದ್ದರು. ನಾನು ಎರಡು ಬಾರಿ ನ್ಯಾಯಮೂರ್ತಿಎನ್.ಡಿ. ವೆಂಕಟೇಶ್‌ರವರ ಜೊತೆ ಪೂರ್ವಸಿದ್ಧತೆಗಾಗಿ ಹೋಗಿಬಂದಿದ್ದೆ. ಪೂರ್ವಸಿದ್ಧತೆ ಸಭೆಯಲ್ಲಿ ನ್ಯಾಯಮೂರ್ತಿಗಳು ''ನೋಡಿ, ಬೆಂಗಳೂರಿನ ಲೇಖಕರಿಗೆ ಕಾಡು ಹಂದಿ ಬಾಡು ಬೇಕಂತೆ. ಏನಾದರೂ ಮಾಡಿ ಅಂದು ವ್ಯವಸ್ಥೆ ಮಾಡಬೇಕು'' ಎಂದು ಬೇರೆ ಸೂಚಿಸಿದ್ದರು. ಈ ವಿಷಯವನ್ನು ಕೆ.ಎಂ.ಎಸ್.ರವರನ್ನು ಭೇಟಿಯಾದಾಗ ತಿಳಿಸಿದಾಗ ''ಹೌದೇನ್ರೀ'' ಎಂದು ಉತ್ಸಾಹ ತೋರಿಸಿದ್ದರು.

ಎರಡು ದಿನಗಳ ಈ ಕಾರ್ಯಕ್ರಮ ಒಂದು ಸಾಂಸ್ಕೃತಿಕ ಸ್ಮರಣೆಯಾಗಿಯೇ ಉಳಿಯಿತು. ಚರ್ಚೆ ಹರಟೆಯ ಜೊತೆಗೆ ಸುತ್ತಲಿನ ಕುವೆಂಪು ಕಂಡ ಪರಿಸರವನ್ನು ನೋಡುವುದರಲ್ಲಿಯೇ ಎಲ್ಲರೂ ಆನಂದಿಸುತ್ತಿದ್ದರು. ಈ ಕಾರ್ಯಕ್ರಮದಲ್ಲಿ ಪ್ರೊ. ಜಿ.ಎಸ್.ರವರು ಮತ್ತು ನ್ಯಾಯಮೂರ್ತಿ ಎನ್.ಡಿ. ವೆಂಕಟೇಶ್‌ರವರು ಎಷ್ಟು ಕ್ರಿಯಾಶೀಲರಾಗಿದ್ದರೆಂದರೆ ಎಲ್ಲರಲ್ಲೂ ಉತ್ಸಾಹ ತುಂಬುವ ರೀತಿಯಲ್ಲಿದ್ದರು. ಇತ್ತೀಚೆಗೆ ಮೇಲುಕೋಟೆಯಲ್ಲಿ ಪುತಿನ ಶತಮಾನೋತ್ಸವ ಕಾರ್ಯಕ್ರಮದ ಸಮಯದಲ್ಲಿ ಜಿ.ಎಸ್.ಎಸ್.ರವರು ಆರೋಗ್ಯ ಚೆನ್ನಾಗಿಲ್ಲದಿದ್ದರೂ ಅದನ್ನು ಗಣನೆಗೆ ತೆಗೆದುಕೊಳ್ಳದೆ ನಾವು ಮಧ್ಯಾಹ್ನ ಬಿಸಿಲಿನಲ್ಲಿ ಹೋದರೆ ನಮ್ಮನ್ನು ಸ್ವಾಗತಿಸುವುದಕ್ಕೆ ಬಸ್ಸಿನ ಹತ್ತಿರ ಬಂದು ಊಟಕ್ಕೆ ಬೇರೆ ಕಡೆ ಕರೆದುಕೊಂಡು ಹೋದರು. ಆಗ ಕುಪ್ಪಳ್ಳಿಯ ಜಿ.ಎಸ್.ಎಸ್. ಓಡಾಟ ನೆನಪಿಗೆ ಬರುತಿತ್ತು.

ನ್ಯಾಯಮೂರ್ತಿ ಎನ್.ಡಿ. ವೆಂಕಟೇಶರವರು ಹೇಳಿದಂತೆ ಕುವೆಂಪುರವರ ಮಾವನ ಮನೆಯಲ್ಲಿ ನೂರಾರು ಮಂದಿಗೆ ಕಾಡುಹಂದಿ ಬಾಡಿನ ವ್ಯವಸ್ಥೆ ಮಾಡಿದ್ದರು. ಆ ಮನೆ ಎಷ್ಟು ವಿಶಾಲವಾದ ಮನೆ, ''ದೇವಂಗಿ ಮನೆ' ಎಂದೇ ಪ್ರಸಿದ್ಧವಾಗಿರುವಂಥದ್ದು. ಸುಮಾರು ಒಂದು

ಎಕರೆ ವಿಸ್ತೀರ್ಣದಲ್ಲಿ ನಮ್ಮ ಮನ ಸೆಳೆಯುವ ಮನೆ. ಮಲೆನಾಡಿನ ಅದ್ಭುತ ಮನೆಗಳಲ್ಲಿ ಒಂದು. ಇಲ್ಲಿಯ ಕಾರ್ಯಕ್ರಮಗಳಲ್ಲಿ ಪತ್ರಿಕೆಗಳು ತುಂಬ ಗಂಭೀರವಾಗಿ ವರದಿ ಮಾಡುವುದರ ಜೊತೆಗೆ ಪ್ರಜಾವಾಣಿಯಲ್ಲಿ ವರದಿಯ ಜೊತೆಗೆ ನಮ್ಮ ಎಲ್ಲ ದೊಡ್ಡ ಲೇಖಕರ ಕುರಿತು ಈ ರೀತಿ ಗಂಭೀರ ಚರ್ಚೆಯಾಗಬೇಕು ಎಂದು ಬರೆದರು. ಇದರ ಬಗ್ಗೆ ಕೆ.ಎಂ.ಎಸ್.ರವರು ಸಿಕ್ಕಿದಾಗ ಇದು ಗ್ರೇಟ್ ಕಾಂಪ್ಲಿಮೆಂಟ್ ಶೂದ್ರ ಎಂದಾಗ ನನಗೆ ಖುಷಿಯಾಗಿತ್ತು. ತೇಜಸ್ವಿಯವರು ಎರಡೂ ದಿನ ಭಾಗವಹಿಸಿದ್ದರು. ಕೊನೆಗೆ ಪುಟ್ಟಣ್ಣಗೌಡರು ಮತ್ತು ಎನ್.ಡಿ. ವೆಂಕಟೇಶ್‌ರವರು ಸುತ್ತಲಿನ ಪ್ರಮುಖ ಪ್ರದೇಶವನ್ನು ನೋಡಲು ವ್ಯವಸ್ಥೆ ಮಾಡಿದ್ದರು. ಅದರಲ್ಲಿ ಚೆನ್ನವೀರ ಕಣವಿ, ಪ್ರೊ. ಜಿ.ಎಸ್. ಶಿವರುದ್ರಪ್ಪ ಕಾಪ್ಸೆ ಕೆ. ರಾಮದಾಸ್, ಕೆ. ಮರುಳಸಿದ್ದಪ್ಪ ಹಾಗೂ ರಾಮಚಂದ್ರ ಶರ್ಮ ಮುಂತಾದವರೆಲ್ಲ ಮಲೆನಾಡಿನ ಕೆಲವು ರಮಣೀಯ ಸ್ಥಳಗಳನ್ನು ನೋಡಿ ಬಂದೆವು.

ಬೆಂಗಳೂರಿಗೆ ಬಂದಮೇಲೆ ಕಾರ್ಯಕ್ರಮದ ವರದಿ ಒಪ್ಪಿಸಲು ಹೋದರೆ ಲಂಕೇಶ್‌ರವರು ''ಏನು ಜಯಭೇರಿ ಬಾರಿಸಿ ಬಂದರಂತೆ ?'' ಎಂದು ತಮಾಷೆ ಮಾಡಿದ್ದರು. ''ಅಗ್ರಹಾರ, ನಿಮ್ಮ ಲೇಖನವನ್ನು ತುಂಬಾ ಚೆನ್ನಾಗಿ ಓದಿದ'' ಎಂದು ಹೇಳಿದಾಗ ಅವನು ಮದ್ರಾಸಿಗೆ ಓಡಿಹೋಗಿದ್ದ ಆದರೆ ಕೆ.ಎಂ.ಎಸ್.ರವರು ಮತ್ತು ಟಿ.ಎನ್. ಸೀತಾರಾಂ ಬಂದಿದ್ದರು ಅನ್ನಿಸುತ್ತದೆ. ಇದನ್ನು ನಾನು ಡೈರಿಯಲ್ಲಿ ನೋಟ್ ಮಾಡಿಕೊಂಡಿರಲಿಲ್ಲ. ಅವರ ಅರವತ್ತನೆಯ ಹುಟ್ಟುಹಬ್ಬವನ್ನು ತುಂಬ ಚೆನ್ನಾಗಿ ಆಚರಿಸಬೇಕು ಎಂದು ಯೋಚಿಸಿದ್ದೇ ಈ ಸಂದರ್ಭದಲ್ಲಿ. ಕೊನೆಗೆ ಅದು ಏನೇನೋ ರೂಪಪಡೆದು ಮೈಸೂರಿನಲ್ಲಿ ನಡೆಯುವಂತಾಯಿತು. ಈ ಎಲ್ಲದರ ಚರ್ಚೆಯ ಹಿಂದೆ ಕೆ.ಎಂ.ಎಸ್.ರವರು ಇದ್ದರು ಎನ್ನುವುದು ಬಹಳ ಮುಖ್ಯ.

ರಾಮಚಂದ್ರ ಶರ್ಮರವರ '70'ನೆಯ ಹುಟ್ಟುಹಬ್ಬವನ್ನು ಚೆನ್ನಾಗಿ ಆಚರಿಸಬೇಕು ಎಂದು ಸಲಹೆ ಕೊಟ್ಟವರೇ ಲಂಕೇಶ್‌ರವರು. ಸೆನೆಟ್ ಹಾಲ್‌ನಲ್ಲಿ ಆ ಕಾರ್ಯಕ್ರಮದ ಖರ್ಚು ವೆಚ್ಚವನ್ನು ಲಂಕೇಶ್‌ರವರೇ ವಹಿಸಿಕೊಂಡಿದ್ದರು. ಇದರ ರೂವಾರಿಗಳು ಕೆ.ಎಂ.ಎಸ್. ಮತ್ತು ಡಿ.ಆರ್. ನಾಗರಾಜ್. ಲಂಕೇಶ್‌ರವರು ಅದಕ್ಕಾಗಿ ಹೊಸದಾಗಿ ಸೂಟ್ ಬೇರೆ ಹೊಲಿಸಿದ್ದರು. ನಾವು ಮೂವತ್ತು ನಲವತ್ತು ಮಂದಿ ಸೆಂಟ್ರಲ್ ಕಾಲೇಜಿನ ಮೆಟ್ಟಿಲ ಮೇಲೆ ನಿಂತು ಫೋಟೋ ತೆಗೆಸಿಕೊಂಡಿದ್ದೆವು. ನನ್ನಲ್ಲಿ ಅದು ಇತ್ತು. ಕೆ.ಎಂ.ಎಸ್.ರವರ ಈ ಪುಸ್ತಕಕ್ಕೆ ಬಳಸಿಕೊಳ್ಳೋಣ ಎಂದರೆ ಸಿಗಲಿಲ್ಲ.

ಇದೇ ರೀತಿಯಲ್ಲಿ ಯು. ಆರ್. ಅನಂತಮೂರ್ತಿಯವರ ಹುಟ್ಟುಹಬ್ಬವನ್ನು ಆಚರಿಸಬೇಕೆಂದು, ಆದರಲ್ಲೂ ಅದು ಭಿನ್ನ ರೀತಿಯಲ್ಲಿರಬೇಕೆಂದು ಲಂಕೇಶ್‌ರವರು ತಿಳಿಸಿದ್ದರು. ಬೆಂಗಳೂರಿನ ರೇಸ್‌ಕೋರ್ಸ್‌ನ ಕ್ಲಬ್‌ನಲ್ಲಿ ಅನಂತಮೂರ್ತಿಯವರ ಜೊತೆ ಒಂದು ಮುಕ್ತ ಸಂವಾದ ಎಂದು ತಿಳಿಸಿದರು. ಇಪ್ಪತ್ತೈದು ಮೂವತ್ತು ಮಂದಿ ಸೇರಿದೆವು. ಅದಕ್ಕೆ ಅನಂತಮೂರ್ತಿಯವರ ಮಗಳು ಬಂದಿದ್ದರು. ಮಾತುಕತೆ ತುಂಬ ಚೆನ್ನಾಗಿ ಸಾಗಿತ್ತು. ಕೊನೆಗೆ ಇದ್ದಕ್ಕಿದ್ದಂತೆ ಲಂಕೇಶ್‌ರವರು ವೈಯಕ್ತಿಕ ನಿಂದನೆಗೆ ಪ್ರಾರಂಭಿಸಿದರು. ಯಾರೂ ಅವರನ್ನು ನಿಯಂತ್ರಿಸುವ ಮಟ್ಟದಲ್ಲಿರಲಿಲ್ಲ. ಪರೋಕ್ಷವಾಗಿ ಲಂಕೇಶ್‌ರವರಿಗೆ ನಾವು ಸೂಚಿಸಿದರೂ ಅವರು ಕೇಳಲಿಲ್ಲ. ಕೊನೆಗೆ ಅನಂತಮೂರ್ತಿಯವರು ''ನನ್ನನ್ನು ಅವಮಾನ ಮಾಡುವುದಕ್ಕೆ ಈ ರೀತಿ ಮಾಡಿದ್ದೀರಿ ನೀವೆಲ್ಲ ಸೇರಿಕೊಂಡು'' ಎಂದು

ಉಗ್ರವಾಗಿ ಮಾತಾಡತೊಡಗಿದರು. ಅವರು ಹೋಗುವಾಗ ಕಿ. ರಂ. ಮತ್ತು ನಾನು ಹೋದರೆ ಬೈದೇಬಿಟ್ಟರು. "ಅವನು ಆ ರೀತಿ ಮಾತನಾಡುತ್ತಿದ್ದರೆ ನೀವ್ಯಾರು ಪ್ರತಿಭಟಿಸಲೇ ಇಲ್ಲ" ಎಂದು. ಕೆ.ಎಂ.ಎಸ್.ರವರೂ ಸಹ "ಈ ಲಂಕೇಶ್ ಏನು ಕ್ರೂಡ್‌ರೀ ಎಂಥ ದ್ರೋಹಿಗೂ ಈ ರೀತಿ ಮಾಡಬಾರದು" ಎಂದು ವಿಷಾದದಿಂದ ಮನೆಗೆ ಹೊರಟರು. ಹಾಗೆ ನೋಡಿದರೆ ನಾನು ನೋಡಿದ ಟ್ರ್ಯಾಜಿಕ್ ಸಂಜೆ ಅದು. ಮಾರನೆಯ ದಿನ ನಾವೆಲ್ಲ ಹೋಗಿ ಲಂಕೇಶ್‌ರವರಿಗೆ ಪ್ರತಿಭಟಿಸಿದೆವು. ಅನಂತಮೂರ್ತಿಯವರಿಗೆ ಫೋನ್ ಮಾಡಿ ಸಮಾಧಾನ ಪಡಿಸಲು ಕೇಳಿಕೊಂಡೆವು. ಲಂಕೇಶ್‌ರವರು ಅದನ್ನು ಮಾಡಿದರು. ಇದಕ್ಕಿಂತ ಮೊದಲು ಅನಂತಮೂರ್ತಿಯವರಿಗೆ ಒಂದು ಅಭಿನಂದನಾ ಕಾರ್ಯಕ್ರಮ ಮಾಡಬೇಕೆಂದು ಲಂಕೇಶ್‌ರವರು ಸೂಚಿಸಿದ್ದರು. ಅದು ದೊಡ್ಡ ಯೋಜನೆ. ಇದಕ್ಕೆ ದುಡ್ಡು ಹೊಂದಿಸಲು ಜೆ.ಎಚ್. ಪಟೇಲ್‌ರವರ ಮನೆಗೆ ಹೋದೆವು. ಪಟೇಲರು ಬರಲು ಹೇಳಿದ್ದರು. ಹೋದಾಗ ಮನೆಯಲ್ಲಿರಲಿಲ್ಲ, ಆಗ ಅವರು ಮಂತ್ರಿಗಳಾಗಿದ್ದರು. ಅವರನ್ನು ಹುಡುಕುತ್ತ ಎಲ್.ಎಚ್.ಗೆ ಹೋದೆವು. ಒಂದು ಕೊಠಡಿಯಲ್ಲಿ ಕಾರ್ಡ್ಸ್ ಆಡುತ್ತಿದ್ದರು. ಜೊತೆಯಲ್ಲಿ ಚಂದ್ರೇಗೌಡರೂ ಇದ್ದರು. ಅವರಿಗೆ ನಮ್ಮನ್ನು ಮಾತಾಡಿಸಲು ಸಮಯವೂ ಇರಲಿಲ್ಲ. ಕೊನೆಗೆ ಈ ಪಾಪಿಗಳ ಸಹವಾಸ ಬೇಡವೆಂದು ಪ್ರೆಸ್‌ಕ್ಲಬ್‌ಗೆ ಮೈಸೂರು ಮಠ್ ಕರೆದರು. ಅವರಿಗೆ ಹಿಂದೂಸ್ತಾನ್ ಟೈಮ್ಸ್‌ನಿಂದ ಒಂದೂವರೆ ಸಾವಿರ ಬಂದಿತ್ತು. ಅದನ್ನು ಉತ್ತಮ ಕೆಲಸಕ್ಕೆ ವಿನಿಯೋಗಿಸೋಣ ಎಂದಿದ್ದರು. ಕೆ.ಎಂ.ಎಸ್., ಡಿ.ಆರ್., ಕಿ.ರಂ., ಅಗ್ರಹಾರ, ಭರತಾದ್ರಿ ಪ್ರೆಸ್‌ಕ್ಲಬ್‌ನಲ್ಲಿ ಮುಂದಿನ ಯೋಜನೆಗಳನ್ನು ರೂಪಿಸುತ್ತ ಸೆಲಿಬ್ರೇಟ್ ಮಾಡಿದೆವು.

ಆದರೆ ಒಂದು ಚಾರಿತ್ರಿಕ ನೆನಪೆಂದರೆ ಕೆ.ಎಂ.ಎಸ್., ನಾನು, ಅಗ್ರಹಾರ ಮತ್ತು ಡಿ.ಆರ್. ನಾಗರಾಜ್ ಈ ಕನ್ನಡ ಸಾಹಿತ್ಯದ ಸವತಿಗಳಿಂದ (ಲಂಕೇಶ್ ಮತ್ತು ಅನಂತಮೂರ್ತಿ, ದೇವನೂರು ಮಹಾದೇವ ಚಲಾವಣೆಗೆ ತಂದದ್ದು) ಸಾಕಷ್ಟು ಅನುಭವಿಸಿದ್ದೇವೆ. ಇರಲಿ, ಅದನ್ನು ನಾವು ನಮ್ಮ ಬದುಕಿನ ಅನುಭವದ ಬಂಡವಾಳ ಎಂದು ತಿಳಿಯಬೇಕು ಅಷ್ಟೇ.

ಇಂಥದ್ದೇ ಕ್ಷುಲ್ಲಕ ಘಟನೆ ಎಂದರೆ ಗೆಳೆಯ ಡಿ.ಆರ್. ನಾಗರಾಜನದ್ದು. ಅದೂ ಕೆ.ಎಂ.ಎಸ್.ರವರ ಮನೆಯಲ್ಲಿ. ಹಿಂದೆ ಪ್ರಸ್ತಾಪಿಸಿದಂತೆ ಎಸ್.ಎನ್. ಶ್ರೀಧರ್ ಪ್ರಸಿದ್ಧ ಭಾಷಾ ಶಾಸ್ತ್ರಜ್ಞ. ಅದರ ಜೊತೆಗೆ ಸಾಹಿತ್ಯದ ಸೂಕ್ಷ್ಮತೆಗಳನ್ನು ಅರಿತವರು. ಅವರು ಒಂದು ಮಹತ್ವಪೂರ್ಣ ಪುಸ್ತಕವನ್ನು ಸಂಪಾದಿಸಿದ್ದರು. ಅದು 'ಅನನ್ಯ', ಇಂಗ್ಲೀಷಿನ ಕೃತಿ. ತುಂಬ ಚೆನ್ನಾಗಿ ಬಂದಿದೆ. ಅದನ್ನು ನಾವೆಲ್ಲ ನೋಡುತ್ತಿದ್ದೆವು. ಅಂದು ಕೆ.ಎಂ.ಎಸ್.ರವರ ಮನೆಗೆ ಗಿರೀಶ್ ಕಾರ್ನಾಡ್, ಕಿ.ರಂ. ನಾಗರಾಜ್, ಪ್ರಸನ್ನ, ಅಗ್ರಹಾರ ಕೃಷ್ಣಮೂರ್ತಿ, ಮುಂತಾದವರೆಲ್ಲ ಬಂದಿದ್ದರು. ಮಳೆ ಪ್ರಾರಂಭವಾಯಿತು. ತುಂಬಾ ಜೋರಾದ ಮಳೆ. ಇದ್ದಕ್ಕಿದ್ದಂತೆ ಡಿ.ಆರ್. ನಾಗರಾಜ್, ಶ್ರೀಧರ್ ಮೇಲೆ ಜಗಳಕ್ಕಿಳಿದ. "ನೀನು ಎಂಥಾ ಸ್ಕಾಲರ್ ಅನ್ನೋದು ಗೊತ್ತು. ನಿನ್ನಂಥವನನ್ನ ಸಾವಿರ ಜನಾನ ನೋಡಿದ್ದೀನಿ. ಮನಸ್ಸು ಮಾಡಿದರೆ ನಿನ್ನನ್ನು ಫಿನಿಷ್ ಮಾಡಬಲ್ಲೆ" ಎಂದು ಮಾತಾಡತೊಡಗಿದ್ದ. ನಮಗೆಲ್ಲ ಗಾಬರಿಯಾಗತೊಡಗಿತು. ಅವರ ಜಗಳದಲ್ಲಿ ವಿಷಯ ಗೊತ್ತಾಗಲೇ ಇಲ್ಲ. ಶ್ರೀಧರ್‌ರವರಂತೂ ಅತ್ಯಂತ ಸೌಮ್ಯತೆಯಿಂದಲೇ ಉತ್ತರಿಸುತ್ತಿದ್ದರು. ಬಹಳ ಸಮಯವಾದ ಮೇಲೆ ಗೊತ್ತಾಯಿತು : ಡಿ.ಆರ್.ನ ಕೈಯಲ್ಲಿ ಒಂದು ಲೇಖನ ಬರೆಸಿ ಅದನ್ನು ಶ್ರೀಧರ್ ಪ್ರಕಟಿಸಲಿಲ್ಲ ಎಂದು. ಡಿ.ಆರ್. ನಾಗರಾಜ್‌ನಂಥ ಮಹಾನ್ ಪ್ರತಿಭಾವಂತ ಜುಜಿಬಿ

ಒಂದು ಲೇಖನ ಪ್ರಕಟಿಸದಿದ್ದುದಕ್ಕೆ ಈ ರೀತಿ ಕಾಲು ಕೆರೆದು ನಿಂತು ಕೇಳುವುದಾ ಅನ್ನಿಸಿತು. ಅಂದು ಅವನು ಇಲ್ಲಿ ಬರೆಯಬಾರದ ಕೆಲವು ಶಬ್ದಗಳನ್ನೆಲ್ಲಾ ಬಳಸಿದ್ದ. ಬ್ರಾಹ್ಮಣ ಶಬ್ದವನ್ನಂತೂ ಸಾಕಷ್ಟು ಸಾರಿ ಬಳಸಿದ್ದ. ಗಿರೀಶ್,ಕಿ.ರಂ ಮತ್ತು ಪ್ರಸನ್ನರವರಂತೂ ತುಂಬಾ ಮುಜುಗರದಿಂದ ಕೂತಿದ್ದರು. ಕೆಲವರು ಮಳೆಯಲ್ಲಿಯೇ ಊಟಮಾಡದೆ ಎದ್ದು ಹೋದರು.

ಸಂತೋಷ ಕೂಟ ವ್ಯಥೆಯ ಕೂಟವಾಗಿ ಮುಗಿಯಿತು. ಶ್ರೀಧರ್‌ರವರಿಗೆ ಸಮಾಧಾನ ಹೇಳಿ ಮನೆಗಳಿಗೆ ಹೋದೆವು. ಮಾರನೆಯ ದಿನ ಬೆಳಿಗ್ಗೆ ಡಿ.ಆರ್. ಕೆ.ಎಂ.ಎಸ್.ರವರಿಗೆ ಕ್ಷಮಾಪಣೆಯ ಪತ್ರವನ್ನು ಬರೆದು ತಂದುಕೊಟ್ಟನಂತೆ. ಕೆ.ಎಂ.ಎಸ್.ರವರು ಇಂಥವನ್ನು ಸಾಕಷ್ಟು ನೋಡಿದ್ದರಿಂದ ತನ್ನ ವಿದ್ಯಾರ್ಥಿಯ ಪತ್ರವನ್ನು ಯಾರಿಗೂ ತಿಳಿಸದೆ ಮೂಲೆಗೆ ಬಿಸಾಕಿದರು. ಆದರೆ ಡಿ.ಆರ್. ಈ ಘಟನೆಗಾಗಿ ಬಹಳ ದಿವಸ ನಾಚಿಕೆಯಿಂದ ಕೂರುತ್ತಿದ್ದ. ಇಂಥ ಘಟನೆಗಳನ್ನು ಕುರಿತು ಕೆ.ಎಂ.ಎಸ್.ರವರಾಗಲಿ, ನಾನಾಗಲಿ ಪಟ್ಟಿ ಮಾಡುತ್ತ ಹೋದರೆ ಎಷ್ಟೊಂದು ಬರೆಯಬಹುದು ಅನ್ನಿಸುತ್ತದೆ. ಹಾಗೆ ಬರೆಯುವಾಗ ನನ್ನ ದೋಷಗಳನ್ನು ಕೂಡ ಅಂಡರ್‌ಲೈನ್ ಮಾಡಬೇಕಾಗುತ್ತದೆ. ಆದರೆ ಅದೇ ದೊಡ್ಡ ದೋಷಗಳಾಗಿ ಉಳಿದಿರುವುದಿಲ್ಲ. ಅಲ್ಲಿಯ ಮಾತು, ಚರ್ಚೆ, ಯಾವ ರೂಪ ಪಡೆಯುತ್ತದೆ ಎಂಬುದು ಮುಖ್ಯ.

## ಆ ಮನೆ ಒಂದು ಸ್ವಾರಸ್ಯ

ಇದನ್ನು ಕುರಿತು ಬರೆಯದಿದ್ದರೆ ಅಥವಾ ದಾಖಲು ಮಾಡದಿದ್ದರೆ ಕೆ.ಎಂ.ಎಸ್.ರವರ ಬಗೆಗೆ ಬರೆಯುತ್ತಿರುವ ಈ ಅವಲೋಕನ ಅಪೂರ್ಣವಾಗಬಹುದು. ಅಧ್ಯಾಪಕರೊಬ್ಬರು ತರಗತಿಯಿಂದ ಸಿಟ್ಟುಮಾಡಿಕೊಂಡು ಹೋಗಿದ್ದು ; ಕೆ.ಎಂ.ಎಸ್.ರವರು ಆಗ ನನ್ನ ರಕ್ಷಣೆಗೆ ಹೇಗೆ ನಿಂತರು ಎಂಬುದನ್ನು ವಿವರಿಸಿದ್ದೇನೆ. ಇದೇ ಸಮಯದಲ್ಲಿ ನನ್ನ ಗೆಳೆಯ ಗೆಳತಿಯರೆಲ್ಲ ಮಾತಾಡಿಕೊಳ್ಳುವ ರೀತಿಯಲ್ಲಿ ಒಂದು ಘಟನೆ ನಡೆಯಿತು. ಕೆಲವರು ನನ್ನ ಸಹಪಾಠಿಗಳು ನನಗೆ ಎಷ್ಟು ಭೀತಿಯನ್ನುಟ್ಟಿಸಿದ್ದರೆಂದರೆ ಅಂತಿಮ ಆನರ್ಸ್‌ನಲ್ಲಿ ನನ್ನನ್ನು ಫೇಲ್ ಮಾಡುವರೆಂದು. ಇದನ್ನು ಸಾಕಷ್ಟು ನೆನಪು ಮಾಡಿ ಹಿಂಸೆ ಕೊಟ್ಟಿದ್ದರು. ಒಂದು ವೇಳೆ ಅದಕ್ಕೆ ಹೆಚ್ಚು ಒತ್ತುಕೊಟ್ಟಿದ್ದರೆ ಸಮಸ್ಯೆಗಳ ಮೊತ್ತವನ್ನು ದ್ವಿಗುಣ ಮಾಡಿಕೊಳ್ಳುತ್ತಿದ್ದೆ.

ಒಂದು ವಾರ ಜಿ.ಎಸ್.ಎಸ್ ಕುಟುಂಬ ಮತ್ತು ಕೆ.ಎಂ.ಎಸ್.ರವರು ಎಲ್ಲೋ ಪ್ರವಾಸ ಹೊರಟಿದ್ದರು. ಆಗ ಜಿ.ಎಸ್.ಎಸ್. ಇದ್ದದ್ದು ಹನುಮಂತನಗರದ ಬಾಡಿಗೆ ಮನೆಯಲ್ಲಿ. ಕೆ.ಎಂ.ಎಸ್.ರವರಿಗೆ ಇನ್ನು ಮದುವೆಯಾಗಿರಲಿಲ್ಲ. ಪ್ರವಾಸ ಹೋಗುವ ಮುನ್ನ ಕೆ.ಎಂ.ಎಸ್.ರವರು ಮನೆಗೆ ಕರೆದುಕೊಂಡು ಹೋದರು. ''ನೋಡಿ ಒಂದು ವಾರ ಹೀಗೆ ಹೊರಗೆ ಹೋಗುತ್ತಿದ್ದೇವೆ. ನೀವು ಮನೆಯಲ್ಲಿರಬೇಕು'' ಎಂದರು. ''ಆಗಲಿ, ಅದಕ್ಕೇನಂತೆ'' ಎಂದೆ. ಅಂದು ಸಂಜೆಯೇ ಅವರು ಹೊರಡಬೇಕಿತ್ತು. ಶ್ರೀಮತಿ ಜಿ.ಎಸ್.ಎಸ್.ರವರು ಅಡಿಗೆ ಮನೆಯಲ್ಲಿ ಏನೇನು ಇದೆ ಎಲ್ಲವನ್ನೂ ತೋರಿಸಿದರು. ತುಪ್ಪ, ಜೇನುತುಪ್ಪ ಮತ್ತು ಬೋರ್ನ್‌ವೀಟಾದ ಬಾಟಲ್‌ಗಳನ್ನು ತೋರಿಸಿದರು. ಬೆಳಿಗ್ಗೆ ಹಾಲು ತಂದುಕೊಡುವ ವಿಷಯ ಹೇಳಿದರು. ಜಿ.ಎಸ್.ಎಸ್. ಮತ್ತು ಕೆ.ಎಂ.ಎಸ್. ಮೇಲಕ್ಕೆ ಕರೆದುಕೊಂಡು ಹೋಗಿ ಪುಸ್ತಕಗಳ ಕೊಠಡಿ ತೋರಿಸಿದರು. ನಾನು ನಗುತ್ತ ಎಲ್ಲದಕ್ಕೂ ಆಗಲಿ ಎನ್ನುತ್ತಿದ್ದೆ.

ಅವರು ಹೋದರು. ರಾತ್ರಿ ಆರಾಮವಾಗಿ ನಿದ್ದೆ ಹೋದೆ. ಬೆಳಿಗ್ಗೆ ಗಂಟೆ ಬಾರಿಸಿತು. ಹೋಗಿ ಬಾಗಿಲು ತೆಗೆದೆ. ಹಾಲುಕೊಡುವ ಹುಡುಗಿ. ಹಾಲು ಕೊಟ್ಟಳು. ಒಂದು ಲೀಟರ್ ಹಾಲನ್ನು ಏನು ಮಾಡುವುದೆಂದು ಯೋಚಿಸಿದೆ. ಮಾರನೆಯದಿವಸ ಆ ಹುಡುಗಿ ಬಂದಾಗ ಅರ್ಧಲೀಟರ್ ಸಾಕೆಂದು ಹೇಳಿದೆ. ಅಷ್ಟರಲ್ಲಿಯೇ ಮೊಸರು, ಮತ್ತು ಕಾಫಿಗೆ ಆಗುತ್ತಿತ್ತು. ಅನ್ನ ಮಾಡಿಕೊಂಡು, ಉಪ್ಪಿನಕಾಯಿ ಮತ್ತು ತುಪ್ಪ ಸುರಿದು ಪಗದಸ್ತಾಗಿ ತಿನ್ನುತ್ತಿದ್ದೆ. ಹಾಗೆ ನೋಡಿದರೆ ಅವರು ವಾಪಸ್ಸು ಬರುವ ಸುಮಾರಿಗೆ ಉಪ್ಪಿನಕಾಯಿ ಬಾಟಲ್ ಮುಗಿಸಿದ್ದೆ. ಹೀಗೆ ಮೂರನೆಯ ದಿವಸ ಬಾಗಿಲಿನ ಕರೆಗಂಟೆ ಬಾರಿಸಿದಾಗ ಹೋಗಿ ಬಾಗಿಲು ತೆಗೆದೆ. ಹುಡುಗಿಯ ತಾಯಿ ಇರಬಹುದು. ಹಾಲು ಕೊಡುತ್ತ "ನನ್ನ ಮಗಳು ಭಯಪಟ್ಟುಬಿಟ್ಟಳಪ್ಪ ನೀವಿರೋದಕ್ಕೆ" ಅಂದಳು. ಯಾಕಂತೆ ಎಂದು ಕೇಳಲು ಹೊರಟರೂ ಕೇಳಲಿಲ್ಲ.

ಒಂದು ವಾರ ಆ ಮನೆ ತುಂಬ ನನ್ನದೇ ರಾಜ್ಯ. ತಿನ್ನೋದು, ಮಲಗೋದು, ಓದೋದು. ವಾಸುದೇವನ್ ನಾಯರ್‌ರವರ 'ಕಾಲ' ಕಾದಂಬರಿಯನ್ನು ಓದಿದ್ದು ಅಲ್ಲಿಯೇ ಅನ್ನಿಸುತ್ತದೆ. ಆ ಮನೆಯಲ್ಲಿಯ ನೆನಪಿಗೆ ಜಿ.ಎಸ್.ಎಸ್.ರವರು ನನಗೆ ರಾಹುಲ ಸಾಂಕೃತ್ಯಾಯನನ 'ಓಲ್ಗಾ ಗಂಗಾ' ಎಂಬ ಅಮೂಲ್ಯ ಕೃತಿಯನ್ನು ಕೊಟ್ಟರು. ಅದನ್ನು ಕೆಲವು ವರ್ಷಗಳ ಹಿಂದೆ ಯಾರೋ ತೆಗೆದುಕೊಂಡು ಹೋದವರು ಕೊಡಲಿಲ್ಲ.

ಪ್ರವಾಸದಿಂದ ಮೊದಲು ಕೆ.ಎಂ.ಎಸ್. ಬಂದರು. ನಂತರ ಮಾರನೆಯ ದಿವಸ ಅಥವಾ ಎರಡನೆಯ ದಿವಸ ಜಿ.ಎಸ್.ಎಸ್. ಕುಟುಂಬ ಬಂತು. ಕೆ.ಎಂ.ಎಸ್.ರವರು ಬಂದಾಗ ಸ್ನಾನ ಮಾಡಲು ಬಯಸಿದರು. ಇಬ್ಬರೂ ನೀರೊಲೆಗೆ ಬೆಂಕಿ ಹಾಕಿ ಕಾಯಿಸಿದೆವು. ಆಗ ಹಾಲಿನ ಹುಡುಗಿಯ ಕಥೆಯನ್ನು ಹೇಳಿದೆ. ಅವರು ನಗುತ್ತ "ಮತ್ತೇನು ಗಲಾಟೆ ಆಗಿಲ್ಲ ತಾನೇ" ಎಂದರು. "ಇಲ್ಲ ಸಾರ್" ಎಂದೆ. ಅವರು ಮುಂದೆ ಮಾತು ಬೆಳೆಸಲಿಲ್ಲ.

ನಾಲ್ಕೈದು ತಿಂಗಳ ಹಿಂದೆ ಕೆ.ಎಂ.ಎಸ್.ರವರನ್ನು ಬಹಳ ದಿನ ನೋಡಿರಲಿಲ್ಲ. ಅವರನ್ನು ಕುರಿತು ಈ ಪುಸ್ತಕ ಮುಗಿಸುವ ತನಕ ನೋಡಬಾರದೆಂದು ಯೋಚಿಸಿದ್ದೆ. ಆದರೆ ನನ್ನ ಬಲಗೈಯ ಮಧ್ಯದ ಬೆರಳು ಗೇಟಿಗೆ ಸಿಕ್ಕಿ ತುಂಬ ಹಿಂಸೆಯನ್ನು ಅನುಭವಿಸಿದೆ. ಬಹಳ ದಿವಸ ಒಂದೇ ಸಮನೆ ಕೂತು ಬರೆಯಲಾಗದಷ್ಟು ನೋವು ಕೊಡುತ್ತಿತ್ತು. ಕೊನೆಗೆ ಸ್ವಲ್ಪ ಬೆಚ್ಚನೆಯ ನೀರಿನಲ್ಲಿ ಕೈಯಿಟ್ಟು ಬೆರಳನ್ನಾಡಿಸುತ್ತ ಬಂದೆ. ನಿಧಾನವಾಗಿ ರಿಪೇರಿಯಾಯಿತು. ಈ ನೋಡದಿದ್ದ ದಿನಗಳಲ್ಲಿ ಒಂದು ದಿನ ಕೆ.ಎಂ.ಎಸ್.ರವರನ್ನು ಮನೆಗೆ ಕರೆದೆ. ನನ್ನ ಹೆಂಡತಿ ನ್ಯೂಜಿಲೆಂಡ್ ಬಳಿಯ ಆಕ್‌ಲ್ಯಾಂಡ್‌ಗೆ ಹೋಗಿ ಬಂದಾಗ ರೆಡ್‌ಲೇಬಲ್ ವಿಸ್ಕಿ ತಂದಿದ್ದಳು. ಅದನ್ನು ಒಂದಷ್ಟು ಸವಿಯೋಣ ಎಂದು ಕರೆದಿದ್ದೆ. ಆಗ ಮಾತಿನ ನಡುವೆ ಕೆ.ಎಂ.ಎಸ್. ಸಿಟ್ಟಿನಿಂದ "ನಿಮಗೇನಾಗಿದೆ ಶೂದ್ರ, ವಾರಕ್ಕೊಂದು ದಿನವಾದರೂ ಸಿಗಲು ಏನು ಸಮಸ್ಯೆ" ಎಂದರು. "ಸಾರಿ ಸರ್, ನಾನು ನಿಮ್ಮ ಪುಸ್ತಕ ಮುಗಿಸುವ ತನಕ ನೋಡಬಾರದು ಎಂದು ತೀರ್ಮಾನಿಸಿದ್ದೆ" ಎಂದೆ. "ನೀವು ಬರೀದಿದ್ರೆ ಕತ್ತೆ ಬಾಲ ಹೋಯ್ತು. ಸಿಗಲು ಪ್ರಯತ್ನಿಸಿ. ಲಂಕೇಶ್, ಡಿ.ಆರ್. ಹೋದಮೇಲೆ ನಾವು ಒಂದೆಡೆ ಸೇರಲು ಆಗ್ತಾನೆ ಇಲ್ಲ. ಸೇರಿದಾಗ ಏನಾದರೂ ಮಾತಾಡಬಹುದು. ಇಲ್ಲದಿದ್ದರೆ ಜೀವನ ಮನಾಟನಿ ಆಗಿಬಿಡ್ತದೆ" ಎಂದರು. ನಾನು ನಾಚಿಕೆಯಿಂದ ಮತ್ತೊಮ್ಮೆ ಸಾರಿ ಹೇಳಿ ವಿಸ್ಕಿ

ಚಪ್ಪರಿಸತೊಡಗಿದೆ. ನನ್ನ ಮಗಳು ಸ್ನೇಹ ಆಮ್ಲೆಟ್, ಸೌತೇಕಾಯಿ ಮತ್ತು ಈರುಳ್ಳಿ ತಂದುಕೊಟ್ಟಳು. ತಿನ್ನುತ್ತ ಬಿ.ಜೆ.ಪಿ, ಕಾಂಗ್ರೆಸ್, ಸದ್ದಾಂಹುಸೇನ್, ಜಾರ್ಜ್‌ಬುಷ್, ಎಡ್ವರ್ಡ್ ಸೈದ್ ಹೀಗೆ ಯಾರ್‍ಯಾರನ್ನೋ ಕುರಿತು ಮಾತಾಡುತ್ತಿದ್ದೆವು. "ಶೂದ್ರ ಒಂದು ರಾಜಕೀಯ ಕಾದಂಬರಿಯನ್ನು ಬರೆಯಿರಿ. ಕಳೆದ ಮೂವತ್ತು ವರ್ಷಗಳಿಗೂ ಮೇಲ್ಪಟ್ಟು ಕರ್ನಾಟಕ ರಾಜಕಾರಣದ ಕೆಲವು ವ್ಯಕ್ತಿಗಳು ಮತ್ತು ಘಟನೆಗಳನ್ನು ತುಂಬ ಹತ್ತಿರದಿಂದ ಕಂಡವರು. ನಿಜವಾಗಿಯೂ ನಮ್ಮಲ್ಲಿ ರಾಜಕೀಯ ಕಾದಂಬರಿಗಳೇ ಬರುತ್ತಿಲ್ಲ" ಎಂದರು. ಆಗ ನಾನು ನಿಜವಾಗಿಯೂ ಬರೆಯಬೇಕು ಅನ್ನಿಸುತ್ತಿದೆ. ನಮ್ಮಲ್ಲಿ ಬೇಕಾದಷ್ಟು ಮೆಟೀರಿಯಲ್ ಇದ್ದರೂ ನಮ್ಮ ಹಳೆ ತಲೆಮಾರಿನವರ ರೀತಿಯಲ್ಲಿ ಬರವಣಿಗೆಯನ್ನು ನಾವು ತಪಸ್ಸಾಗಿ ತೆಗೆದುಕೊಂಡವರಲ್ಲ. ಒಂದು ದೃಷ್ಟಿಯಿಂದ ನಿಜವಾಗಿಯೂ ಇದು ದುರಂತ. ನೀವು ಎಷ್ಟೊಂದು ಬರೆಯಬಹುದಾಗಿತ್ತು. ಹಾಗೆ ನೋಡಿದರೆ ತುಂಬ ಉತ್ತಮವಾದ ಕೃತಿಗಳು ಬರುವ 'ಸಾಮಾಜಿಕ ಕ್ರೈಸೀಸ್'ನ್ನ ನಾವು ಇಂದು ಎದುರಿಸುತ್ತಿದ್ದೇವೆ. ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಲಂಕೇಶ್‌ರವರು ಒಂದು ಮಾತು ಹೇಳಿದ್ದರು : ಮ್ಯಾಕ್ಸಿಂ ಗಾರ್ಕಿಯ ತಾಯಿ ನಾಟಕವನ್ನು ನೋಡಿ ವಾಪಸ್ಸು ಬರುತ್ತಿರುವಾಗ "ನಮ್ಮ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿ ತುಂಬ ಬಿಗಡಾಯಿಸಿದೆ. 'ತಾಯಿ'ಗಿಂತ ಉತ್ತಮ ಕಾದಂಬರಿ ಬರುವ ವಾತಾವರಣದಲ್ಲಿದ್ದೇವೆ. ಆದರೆ ಅದಕ್ಕೆ ಅಗಾಧವಾದ ತಾಳ್ಮೆ ಮತ್ತು ಶ್ರಮ ಲೇಖಕನಿಗೆ ಬೇಕಾಗಿದೆ" ಎಂದಿದ್ದರು. ಇದು ಸದಾ ನೆನಪಿಗೆ ಬರುತ್ತಿರುತ್ತದೆ" ಎಂದೆ. "ಹೌದು, ಶೂದ್ರ, ಈಗ ಅನ್ನಿಸ್ತಾ ಇದೆ. ನಾನು ಹೆಚ್ಚು ಬರೆಯ ಬೇಕಾಗಿತ್ತು" ಎಂದು ಹೇಳಿದರು. ಹೀಗೆಯೇ ಏನೇನೋ ಮಾತಾಡಿದೆವು. ಕೊನೆಗೆ ಅವರನ್ನು ಮನೆಯ ಬಳಿ ಬಿಟ್ಟು ಬರುವಾಗ ಮನೆಯ ಮುಂದೆ ಪುಟ್ಟ ಬೋರ್ಡ್ ಕಾಣಿಸಿತು. ಅದು ಜಯಂತಿ ಮೇಡಂ ಅವರ ಕಲಾತ್ಮಕ ಗಾರ್ಮೆಂಟ್ಸ್ ತಯಾರಿಕೆಯ ಘಟಕ ಕುರಿತು.

ಜಯಂತಿಯವರು ತಂದೆ ಜಿ.ಎಸ್.ಎಸ್. ರವರ ರೀತಿಯಲ್ಲಿ ತುಂಬ ಕ್ರಿಯಾಶಾಲಿ ಮಹಿಳೆ. ತಲೆ ತುಂಬ ಸಾವಿರ ಅಭಿರುಚಿಗಳನ್ನು ತುಂಬಿಕೊಂಡು ಒಂದಷ್ಟು ಕೆಲಸಗಾರರನ್ನಿಟ್ಟುಕೊಂಡು ವೈವಿಧ್ಯಮಯವಾದ ಉಡುಪು ತಯಾರು ಮಾಡುತ್ತಾರೆ. ಸದಾ ಸದ್ದುಗದ್ದಲವಿಲ್ಲದೆ ಕೆಲಸ ನಡೆಯುತ್ತಿರುತ್ತದೆ. ಕೆ.ಎಂ.ಎಸ್.ರವರ ಮಗ ಚೈತನ್ಯ ಅತ್ಯಂತ ಪ್ರತಿಭಾವಂತ ಹುಡುಗ, ಗಿರೀಶ್ ಕಾರ್ನಾಡರ ಜೊತೆ ಶ್ರದ್ಧೆಯಿಂದ ಕೆಲಸಮಾಡಿ ಬೆಳೆದ ಹುಡುಗ. ಅದಕ್ಕೆ ಪೂರಕವಾಗಿ ಹೈದರಾಬಾದಿನ ಸೆಂಟ್ರಲ್ ವಿಶ್ವವಿದ್ಯಾಲಯದಲ್ಲಿ ಓದಿಬಂದು ಇಂದು ಬಿ.ಬಿ.ಸಿ. ಮತ್ತು ಬೇರೆ ಬೇರೆ ಪ್ರತಿಷ್ಠಿತ ಸಂಸ್ಥೆಗಳಿಗೆ ಡಾಕ್ಯುಮೆಂಟರಿಗಳನ್ನು ಪ್ರೊಡ್ಯೂಸ್ ಮಾಡಿಕೊಡುತ್ತಿರುವಂಥವರು. ಸೊಸೆ ರಾಧಿಕರವರು ಕಂಪ್ಯೂಟರ್ ಇಂಜನಿಯರ್ ಆದರೂ ನೃತ್ಯ ಕಲಿತು ಅದರ ಕನಸ್ಸಿನಲ್ಲಿಯೇ ಮನೆತುಂಬ ಓಡಾಡಿಕೊಂಡಿರುವ ಸೊಸೆ. ಹೀಗೆ 'ವೀಲ್ ಆಫ್ ಹಿಸ್ಟರಿ' ರೀತಿಯಲ್ಲಿ ಕುಟುಂಬದ ಚರಿತ್ರೆ ತಿರುಗುತ್ತಲೋ, ಬೆಳೆಯುತ್ತಲೋ ಇರುತ್ತದೆ. ನಾವು ನೋಡುತ್ತಲೇ ಭೂತ ವರ್ತಮಾನಗಳ ನಡುವೆ ಸಂಬಂಧಗಳ ಕೊಂಡಿಗಳನ್ನು ಹುಡುಕುತ್ತಿರುತ್ತೇವೆ ಅನ್ನಿಸುತ್ತದೆ.

# ಮೂರು ಮಹತ್ವಪೂರ್ಣ ಕೃತಿಗಳ ಪರಿಚಯ

## ಒಂದು : ಆಧುನಿಕ ಕನ್ನಡ ನಾಟಕ

ಕನ್ನಡ ಸಾಹಿತ್ಯ ಸಂಸ್ಕೃತಿ ಮತ್ತು ರಂಗಭೂಮಿಯ ದೃಷ್ಟಿಯಿಂದ ಕೆ.ಎಂ.ಎಸ್.ರವರ ಚಿಂತನೆಗಳು ಪ್ರಾತಿನಿಧಿಕವಾದದ್ದು. ಈಗಾಗಲೇ ಇದನ್ನು ಹಿಂದಿನ ಪುಟಗಳಲ್ಲಿ ಪ್ರಸ್ತಾಪಿಸಲಾಗಿದೆ. 'ಆಧುನಿಕ ಕನ್ನಡ ನಾಟಕ' ಕೆ.ಎಂ.ಎಸ್.ರವರ ಪಿಎಚ್‌ಡಿ ಪ್ರಬಂಧ. ನಮ್ಮ ಒಟ್ಟು ನಾಟಕಗಳನ್ನು ಹಾಗೂ ಅದರ ಪರಂಪರೆಯನ್ನು ತುಂಬ ಗಂಭೀರವಾಗಿ ಹಾಗೂ ಅಧ್ಯಯನ ಶೀಲತೆಯಿಂದ ನೋಡಿರುವ ಕೃತಿ. ಕೆ.ಎಂ.ಎಸ್.ರವರು ಒಬ್ಬ ಸಾಹಿತ್ಯದ ಅಧ್ಯಾಪಕರಾಗಿ ನಾಟಕಗಳನ್ನು ಕೇವಲ ಓದಿನ ದೃಷ್ಟಿಯಿಂದ ನೋಡುತ್ತ ಬಂದವರಲ್ಲ. ರಂಗಭೂಮಿಯ ಜೊತೆಗೆ ಅನನ್ಯ ಸಂಬಂಧವನ್ನು ಬೆಳೆಸಿಕೊಂಡವರು. ಈ ಮುವತ್ತೈದು - ನಲವತ್ತು ವರ್ಷಗಳ ಕಾಲಾವಧಿಯಲ್ಲಿ ನೂರಾರು ಮಹತ್ವಪೂರ್ಣ ನಾಟಕಗಳ ಪ್ರಯೋಗವನ್ನು ನೋಡಿದವರು. ಅವುಗಳ ಸಾಧಕ-ಬಾಧಕಗಳನ್ನು ಕುರಿತು ಚರ್ಚೆಗಳಲ್ಲಿ ಭಾಗಿಯಾದವರು. ಆದ್ದರಿಂದ ಅವರ ವಿಮರ್ಶೆಗೆ ಹಾಗೂ ವಿಶ್ಲೇಷಣೆಗೆ ಒಂದು ರೀತಿಯ ತಾದಾತ್ಮ್ಯತೆಯಿದೆಯೆಂದು ತಿಳಿಯಬಹುದು.

ಇಂಥ ಕೃತಿಯೊಂದು ಮೂರು ಮುದ್ರಣಗಳನ್ನು ಕಂಡಿರುವುದು ಇದರ ಮೌಲ್ಯವನ್ನು ತೋರಿಸುತ್ತದೆ. ಜನಪದ ರಂಗಭೂಮಿ, ವೃತ್ತಿ ರಂಗಭೂಮಿ ಹಾಗೂ ಹವ್ಯಾಸಿ ರಂಗಭೂಮಿ, ಈ ಮೂರನ್ನು ಕುರಿತು ಚರ್ಚಿಸುವಾಗ ಅವುಗಳ ಪೂರಕವಾದ ಸಂಬಂಧಗಳನ್ನು ಚರ್ಚಿಸುತ್ತಾರೆ. ಇಂದು ಹವ್ಯಾಸಿರಂಗಭೂಮಿ ಬೆಳೆದಿದ್ದರೆ ಅದಕ್ಕೆ ಜಾನಪದ ರಂಗಭೂಮಿ ಮತ್ತು ವೃತ್ತಿರಂಗಭೂಮಿ ಹೇಗೆ ಹಂತಹಂತವಾಗಿ ಒಂದು ಸಂಪ್ರದಾಯಕ್ಕೆ ಚಲನಶೀಲತೆಯನ್ನು ಕೊಟ್ಟಿತು ಎಂಬುದನ್ನು ವ್ಯಾಪಕವಾಗಿ ಪ್ರಸ್ತುತ ಪಡಿಸುತ್ತಾರೆ. ಕೆ.ಎಂ.ಎಸ್.ರವರು ಒಬ್ಬ ಗುಡಿಗುಡಿ ಚಿಂತಕರಲ್ಲವಾದ್ದರಿಂದ ; ಒಂದು ವಸ್ತುವನ್ನು ಅಥವಾ ಚಳುವಳಿಯನ್ನು ನೋಡುವಾಗ ವಿಚಾರಶೀಲತೆ ಮುಖ್ಯ ಎಂಬುದನ್ನು ಅವರ ಒಟ್ಟು ಬರವಣಿಗೆಯಲ್ಲಿ ಎದ್ದು ಕಾಣುತ್ತಿರುತ್ತದೆ.

ಈ ಕೃತಿಗೆ ಡಾ|| ಎಂ. ಚಿನಾನಂದಮೂರ್ತಿಯವರ ಮುನ್ನುಡಿ ಇದೆ. ಡಾ|| ಚಿದಾನಂದಮೂರ್ತಿಯವರು ಒಬ್ಬ ದೊಡ್ಡ ವಿದ್ವಾಂಸರಾಗಿದ್ದರಿಂದ ಆ ನಿಟ್ಟಿನಲ್ಲಿಯೇ ನೋಡಬೇಕಾಗುತ್ತದೆ. ಅವರು ಇವತ್ತಿನ ರೀತಿಯಲ್ಲಿ ಮತಾಂಧತೆಯ ಮೊರೆ ಹೋಗಿರಲಿಲ್ಲ. "ಆಧುನಿಕ ಪೂರ್ವ ಕನ್ನಡ ಅನುವಾದ, ರೂಪಾಂತರಗಳನ್ನು ಕುರಿತಂತೆ, ನವೋದಯ ಕಾಲದ ಸಾಮಾಜಿಕ ರಾಜಕೀಯ ಶೈಕ್ಷಣಿಕ ಹಿನ್ನೆಲೆಯಲ್ಲಿ ಹೊಸಕನ್ನಡ ನಾಟಕ ಮೂಡಿ ಬಂದ ಬಗ್ಗೆ ಮಾಡಿರುವ ವಿವೇಚನೆ ಪ್ರೌಢವೂ ಸಮಗ್ರವೂ ಆಗಿದೆ. ಸಂಸ, ಶ್ರೀರಂಗ, ಕೈಲಾಸಂ ಅವರನ್ನು ಕುರಿತಂತೆ ಹೆಚ್ಚಿನ ಪುಟಗಳು ಮೀಸಲಾಗಿರುವುದು ಸ್ವಾಭಾವಿಕವಾಗಿಯೇ ಆಗಿದೆ. ಲಂಕೇಶ್ ಅವರ 'ಸಂಕ್ರಾಂತಿ' ನಾಟಕವನ್ನು ಕುರಿತಂತೆ ಬರೆದಿರುವ ವಿಮರ್ಶೆ ಡಾ|| ಮರುಳಸಿದ್ದಪ್ಪ ವಿಶ್ಲೇಷಣಾ ಸಾಮರ್ಥ್ಯಕ್ಕೆ ಒಂದು ಅತ್ಯುತ್ತಮ ನಿದರ್ಶನ" ಎಂದು ಡಾ|| ಚಿದಾನಂದಮೂರ್ತಿಯವರು ಹೇಳಿರುವುದರಲ್ಲಿ ಅರ್ಥವಿದೆ.

ನಮ್ಮ ರಂಗಭೂಮಿಯ ಏಳುಬೀಳುಗಳನ್ನು ಅಧ್ಯಯನ ಮಾಡುವಂಥವರಿಗೆ ಇದು ಎಲ್ಲ ಹಂತಗಳಲ್ಲಿ ಒಂದು ಆಕರ ಗ್ರಂಥವಾಗಿರಲು ಸಾಧ್ಯ. ಅಕ್ಷರಮಟ್ಟಿಗೆ ವಸ್ತುವಿನ ವಿನ್ಯಾಸ ನಮಗೆ ದೊರಕುತ್ತದೆ. ಒಂದು ದೊಡ್ಡ ಇತಿಹಾಸವಿರುವ ಸಮಾಜದಲ್ಲಿ ಯಾವುದೇ ಆಗಲಿ ರಾತ್ರೋರಾತ್ರಿ ಹುಟ್ಟಲು ಸಾಧ್ಯವಿಲ್ಲ, ಅದಕ್ಕೆ ಅದರದೇ ಆದ ಏಳುಬೀಳುಗಳಿರುತ್ತವೆ. ಆದಕ್ಕಾಗಿ ಅಧ್ಯಯನದ ಮನಸ್ಸು ವಿಸ್ತಾರವಾಗಿರಬೇಕಾಗಿರುತ್ತದೆ. ಇಲ್ಲಿ ಕೆ. ಮರುಳಸಿದ್ದಪ್ಪನವರು "ಕನ್ನಡ ನಾಟಕ ಪರಂಪರೆಯ, ವಿಸ್ತಾರ ವೈವಿಧ್ಯಗಳನ್ನು ಗಮನಿಸಿದಾಗ, ಅದರ ಒಂದು ಸಂಕ್ಷಿಪ್ತ ಸಮೀಕ್ಷೆಯೂ ಸುಲಭವೆನ್ನಿಸುವುದಿಲ್ಲ" ಎಂಬುದು ನಿಜ. ಈ ಮಾತನ್ನು ಸಾಕಾರಗೊಳಿಸುವ ರೀತಿಯಲ್ಲಿ ಈ ಕೃತಿಯ ಗಾಢತೆ ವಿಸ್ತೃತಗೊಂಡಿದೆಯೆಂದರೆ ತಪ್ಪಾಗಲಾರದು. "ನಾಟಕಗಳು ಪ್ರಾಚೀನ ಸಾಹಿತ್ಯ ವೃಕ್ಷದ ಕೊನೆಯ ಫಲಗಳು. ಈಗಾಗಲೇ ಸ್ಪಷ್ಟರೂಪ ತಾಳಿ ಸದೃಢವಾಗಿದ್ದ ನೃತ್ಯ, ಸಂಗೀತ, ಪುರಾಣ, ಮಹಾಕಾವ್ಯ ಎಲ್ಲವನ್ನೂ ಬಳಸಿಕೊಂಡು ನಾಟಕ ಸಂಕೀರ್ಣವಾದ ಕಲೆಯಾಗಿ ಬೆಳೆಯಿತು. ಒಟ್ಟಾರೆ ಹೇಳುವುದಾದರೆ ಯಾವುದೇ ದೇಶದ ರಂಗಭೂಮಿ ಅಲ್ಲಿನ ಧಾರ್ಮಿಕ ಪರಂಪರೆಯ ಅಂಗವಾಗಿ ಹುಟ್ಟಿ ಸಾಮಾಜಿಕವಾಗಿ ಬೆಳೆದಿದೆಯೆಂಬುದು ಸ್ಪಷ್ಟ ವಿಚಾರ. ನೃತ್ಯ, ಸಂಗೀತ, ಶಿಲ್ಪ ಮುಂತಾದ ಸಾಹಿತ್ಯೇತರ ಕಲೆಗಳೂ ನಾಟಕದ ಪ್ರಮುಖವಾದ ಅಂಗಗಳು" ಎಂದು ಹೇಳುವುದರ ಮೂಲಕ ಅವುಗಳ ಆಂತರಿಕ ಅವಿನಾಸಂಬಂಧವನ್ನು ನಮ್ಮ ಮುಂದಿಡುತ್ತಾರೆ. ಹಾಗೆಯೇ ಯಾವುದೇ ಕಲೆಯು ಏಕಾಂಗಿಯಾಗಿಯೇ ಬೆಳೆದಿರುವುದಿಲ್ಲವೆಂಬುದು ಮುಖ್ಯ.

ಕೆ. ಮರುಳಸಿದ್ದಪ್ಪನವರು ಇಲ್ಲಿಯವರೆವಿಗೆ ಬಂದಿರುವ ನಾಟಕಗಳ ಅಧ್ಯಯನವನ್ನು ಮುಂದಿಟ್ಟುಕೊಂಡು ನಮ್ಮ ಒಟ್ಟು ನಾಟಕ ಪರಂಪರೆಯನ್ನು ಕುರಿತು ಚರ್ಚಿಸುತ್ತಾರೆ. ಹೀಗೆ ಚರ್ಚಿಸುವಾಗ ಅದು ಗ್ರೀಕ್ ರಂಗಭೂಮಿ ಇರಬಹುದು ಅಥವಾ ಸಂಸ್ಕೃತ ರಂಗಭೂಮಿ ಇರಬಹುದು ಅವುಗಳಿಗೆ ಧಾರ್ಮಿಕ ಪ್ರಕ್ರಿಯೆಗಳು ಹೇಗೆ ಹಿನ್ನೆಲೆಯಾಗಿ ಕೆಲಸಮಾಡಿದುವು ಎಂಬುದನ್ನು ಆತ್ಮೀಯವಾಗಿ ಮಂಡಿಸುತ್ತಾರೆ. ಯಾಕೆಂದರೆ ಇವುಗಳಿಗೆ ನೂರಾರು ವರ್ಷಗಳ ಇತಿಹಾಸವಿದೆ. ಇಲ್ಲಿ ರಂಗಭೂಮಿ ತನ್ನ ಪಾಡಿಗೆ ತಾನು ಬೆಳೆಯುವುದಿಲ್ಲ, ಅದಕ್ಕೆ ನಾನಾ ರೀತಿಯ ಧಾರ್ಮಿಕ ಮತ್ತು ಸಾಮಾಜಿಕ ಒತ್ತಡಗಳಿವೆ. ಯಾಕೆಂದರೆ ಒಂದು ನಾಟಕವಾಗಲಿ, ಕಲೆಯಾಗಲಿ, ಸಾಹಿತ್ಯವಾಗಲಿ ವ್ಯಕ್ತಿಯ ಮತ್ತು ಸಮುದಾಯದ ವ್ಯಕ್ತಿಗತ ನೆಲೆಯಾಗಿದ್ದರೂ, ಕೊನೆಗೂ ತನ್ನನ್ನು ವಿಸ್ತರಿಸಿನೋಡಿಕೊಳ್ಳುವುದು ಸಾರ್ವತ್ರಿಕತೆಯಿಂದ. ಸಮುದಾಯಕ್ಕೆ ಮತ್ತು ಸಾರ್ವತ್ರಿಕತೆಗೆ ಸೃಷ್ಟಿಯಾಗಿಲ್ಲ ಎಂದು ಯಾರೇ ಯೋಚಿಸಿದರೂ ; ಆ ಕಲೆಯ ಒಟ್ಟು ಮೊತ್ತ ಅನುಭವ ರೂಪದಲ್ಲಿ ಸಮುದಾಯಕ್ಕೆ ಸೃಷ್ಟಿಯಾಗಬೇಕು ಎಂಬುದು ಕ್ಲೀಷೆಯ ಮಾತಾದರೂ ವ್ಯಕ್ತಿಗತ ಹಂತದಲ್ಲಿ ಸಮುದಾಯದ ಕಾಂಪೊನೆಂಟ್ ಆಗಿಯೇ ಇರುತ್ತಾರೆ. ಎಲ್ಲ ಕಲಾತ್ಮಕ ಮಾದರಿಗಳು ದಟ್ಟವಾಗಿ ಅಲ್ಲಿಯೇ ಹರಡಿಕೊಂಡಿರುತ್ತವೆ. ಇದನ್ನು ಕೃತಿಕಾರರು ತುಂಬ ಅನನ್ಯತೆಯಿಂದ ಚರ್ಚೆಗೆ ತೆಗೆದುಕೊಳ್ಳುತ್ತಾರೆ. ಧಾರ್ಮಿಕ ಸಂಸ್ಥೆಗಳಿರಬಹುದು ಅಥವಾ ಆಡಳಿತಶಾಹಿ ಇರಬಹುದು ; ಯಾಕೆ ಇವುಗಳನ್ನು ಬೆಳೆಸಬೇಕಾಗಿದೆ ಎಂಬುದರಲ್ಲಿ ಘನ ಉದ್ದೇಶವನ್ನೇ ಇಟ್ಟುಕೊಂಡಿರುತ್ತದೆ. ಅವುಗಳ ಸಂವಹನದ ಚಲನಶೀಲತೆಗಾಗಿಯೂ ಕೆಲಸಮಾಡುತ್ತಿರುತ್ತವೆ. ನಾಗರೀಕತೆಯೂ ರೂಪುಗೊಂಡಿದ್ದೇ ಹೀಗೆ. ಇದರ ಮೊತ್ತ ಕೆಳವರ್ಗ, ಮಧ್ಯಮವರ್ಗ ಮತ್ತು ಮೇಲ್ವರ್ಗ ಸ್ವಾಭಾವಿಕವಾಗಿಯೇ ಧಾರಣೆಗೊಂಡವು. ಹೀಗೆ ಧಾರಣೆಗೊಂಡಾಗ ಕಲೆಯ ಸಂಘರ್ಷ ಮತ್ತು

ಉತ್ಕರ್ಷ ವಿಕಾಸ ರೂಪವನ್ನು ತಳೆದವು. ಆಗ ಆಯಾಕಾಲಕ್ಕೆ ಸಮಾಜಗಳು ರಾಜಕೀಯವಾಗಿ ಹಾಗೂ ಸಾಮಾಜಿಕವಾಗಿ ಒಂದುಗೂಡುವುದೋ, ಛಿದ್ರವಾಗುವುದೋ ನಡೆಯುತ್ತ ಬಂತು.

ಕೆ. ಮರುಳಸಿದ್ದಪ್ಪನವರು ಬೇರೆ ಬೇರೆ ಪರಂಪರೆಗಳನ್ನು ಹಾಗೂ ನಾಗರೀಕತೆಗಳನ್ನು ನೋಡುವುದು ; ಅವುಗಳು ಸೃಷ್ಟಿಸಿದ ರಂಗಪರಂಪರೆಯನ್ನು ಕಲಾಪ್ರಕಾರಗಳನ್ನು ಚರ್ಚಿಸುವುದು ಬಹಳ ಮುಖ್ಯವಾಗಿದೆ. ಇವರು ಒಬ್ಬ ಸಮಾಜ ವಿಜ್ಞಾನಿಯಾಗಿಯೂ ಒಟ್ಟು ಬೆಳವಣಿಗೆಯನ್ನು ನೋಡುತ್ತಾರೆ. ಹಾಗೆಯೇ ಅವುಗಳು ಕಾಲಕಾಲಕ್ಕೆ ಪಡೆಯುವ ಆಕಾರವನ್ನು ಕುರಿತು ಚರ್ಚಿಸುತ್ತಾರೆ. ಜಗತ್ತಿನ ಎಲ್ಲ ಪರಂಪರೆಗಳು ಸೃಷ್ಟಿಯಾದದ್ದೇ ಹೀಗೆಯೇ ಎಂದು ಹೇಳುವಲ್ಲಿ ಗಾಢತೆ ಇದೆ. ಈ ದೃಷ್ಟಿಯಿಂದ ''ಸಮಗ್ರ ಭಾರತವು ರಾಜಕೀಯವಾಗಿ ಒಂದುಗೂಡಲು ಬ್ರಿಟಿಷರೇ ಕಾರಣವಾಗಿ ಆಧುನಿಕ ಭಾರತೀಯ ಕಲ್ಪನೆಗಳು ತ್ವರಿತವಾಗಿ ರೂಪುಗೊಳ್ಳಲು ಸಾಧ್ಯವಾಯಿತು. ಸಾಂಸ್ಕೃತಿಕವಾಗಿ ಒಂದಾಗಿದ್ದ ಭಾರತ, ರಾಜಕೀಯವಾಗಿಯೂ ಒಂದಾಯಿತು. ಭಾರತದ ರಾಷ್ಟ್ರೀಯತೆಗೆ ಚಾಲನೆ ಕೊಟ್ಟವರು ಪರೋಕ್ಷವಾಗಿ ಇಂಗ್ಲೀಷರು. ಈ ರಾಷ್ಟ್ರೀಯತೆಯೇ ಮುಂದೆ ವಸಾಹತುಶಾಹಿಯ ವಿರುದ್ಧ ಪ್ರಬಲ ಅಸ್ತ್ರವಾಗಿ ಪರಿಣಮಿಸಿದ್ದು ಮಾತ್ರ ಬ್ರಿಟೀಷರ ಪಾಲಿಗೆ ಕಠೋರ ವ್ಯಂಗ್ಯವಾಗಿದ್ದಿರಬಹುದು'' ಎಂಬ ಮಾತು ನಿಜವಾದರೂ, ವ್ಯಂಗ್ಯವಾಗಿದ್ದಿರಬಹುದು'' ಎಂಬ ಹೇಳಿಕೆ ಅಷ್ಟು ಸೂಕ್ತವಲ್ಲವೇನೋ ಅನ್ನಿಸುತ್ತದೆ. ಬ್ರಿಟೀಷರು ಭಾರತವನ್ನು ಒಟ್ಟು ಘಟಕವನ್ನಾಗಿ ರೂಪಿಸಿದ್ದು ಆಡಳಿತದ ಸುಲಭತೆಗಾಗಿ. ಇಂಗ್ಲೀಷನ್ನು ಬೆಳೆಸಿದ್ದು ಅವರ ಅನಿವಾರ್ಯತೆಗಾಗಿ. ಪ್ರತಿಯೊಂದು ವಸಾಹತುಶಾಹಿಯೂ ಆದರ ಕಪಿ ಮುಷ್ಟಿಯ ಹಂತದಲ್ಲಿಯೂ, ಸಡಿಲತೆಯೂ ತಪ್ಪಿದ್ದಲ್ಲ ಎಂಬುದನ್ನು ತಿಳಿದಿರುತ್ತದೆ.

ಲೇಖಕರು ಇದನ್ನು ತಿಳಿದೇ ಒಟ್ಟು ರಂಗಭೂಮಿಯ ರೂಪಾಂತರಗಳನ್ನು ಚರ್ಚಿಸುವುದು. ಜನಪದ ರಂಗಭೂಮಿ, ವೃತ್ತಿರಂಗಭೂಮಿ ಹಾಗೂ ಹವ್ಯಾಸಿರಂಗಭೂಮಿ ಧಾರಣೆಗೊಂಡ ಕ್ರಮವೇ ಅದ್ಭುತವಾದದ್ದು. ಹಾಗೆಯೇ ಇವುಗಳ ಏಳುಬೀಳುಗಳು ಅವುಗಳ ಗರ್ಭದಲ್ಲಿಯೇ ಇದೆ ಮತ್ತು ಸವಕಲು ರೂಪದಲ್ಲಿ ಈ ಮೂರು ಅಸ್ತಿತ್ವದಲ್ಲಿವೆ. ಯಾವು ಸತ್ತಿಲ್ಲ. ನಮ್ಮ ಹವ್ಯಾಸಿ ರಂಗಭೂಮಿಯಲ್ಲಿಯೇ ಮೂವತ್ತು-ನಲವತ್ತು ವರ್ಷಗಳ ಹಿಂದೆ ಕೈಲಾಸಂ, ಸಂಸ ಮುಂತಾದವರ ನಾಟಕಗಳನ್ನು ಇಂದು ಪ್ರಯೋಗಿಸುವಾಗ ತೀರಾ ಇತ್ತೀಚಿನ ದಿನಗಳಿಗೆ ಬಂದು ಒಬ್ಬ ನಿರ್ದೇಶಕ ಪ್ರಯೋಗಿಸಿಲ್ಲ, ಹಾಗೆ ನೋಡಿದರೆ ಪುರಾತನ ನಾಟಕಗಳು ಇಂದಿನ ಪ್ರಯೋಗಗಳಾಗಿರುತ್ತವೆ. ಈ ಒಟ್ಟಾರೆ ಚರ್ಚೆಯ ಮುಂದುವರೆದ ಭಾಗಗಳಾಗಿ ಭವಭೂತಿ ಇರಬಹುದು, ಕಾಳಿದಾಸ ಇರಬಹುದು, ಸಂಸ, ಕೈಲಾಸಂ ಇರಬಹುದು. ಬೆಳವಣಿಗೆಯ ರೂಪದಲ್ಲಿ ವರ್ತಮಾನದ ಪ್ರಯೋಗಕ್ಕೆ ಅನಿವಾರ್ಯವಾಗಿರುತ್ತಾರೆ. ಇದೇ ಅಭಿಪ್ರಾಯದಲ್ಲಿ ಶ್ರೀರಂಗರನ್ನು, ಗಿರೀಶ್ ಕಾರ್ನಾಡರನ್ನು, ಲಂಕೇಶ್ ಮತ್ತು ಚಂದ್ರಶೇಖರ ಕಂಬಾರರನ್ನು ಹಾಗೂ ಇಂದಿನ ಟಿ.ಎನ್. ಸೀತಾರಾಂ ಮತ್ತು ಹೂಲಿಶೇಖರ್ ಅಂಥವರನ್ನು ಒಬ್ಬ ನಿರ್ದೇಶಕ ಪ್ರಯೋಗಕ್ಕೆ ತನ್ನ ಮನಸ್ಸನ್ನು ಮುಡುಪಾಗಿಡುತ್ತಾನೆ. ಹಾಗೆಯೇ ನಮ್ಮ ಏಕಾಂಕಗಳು ಮತ್ತು ಪೂರ್ಣಾವದಿ ನಾಟಕಗಳು ಕಂಡುಕೊಂಡ ಅಸ್ತಿತ್ವವೂ ಕೂಡ ವಿಚಿತ್ರ.

ಸಮಕಾಲೀನ ಚಿಂತನೆಯ ಒಳನೋಟಗಳಲ್ಲಿಯೇ ಟ್ರೆಂಡ್‌ಗಳು ಅಥವಾ ಸ್ಕೂಲ್ ಆಫ್

ಥಾಟ್ಸ್‌ಗಳು ಹುಟ್ಟಿಕೊಳ್ಳುವುದು. ನಾವು ಯಾವುದನ್ನು ನವೋದಯ, ನವ್ಯ ಎಂಬುದನ್ನು ಕರೆದೆವೋ ಅಥವಾ ಹುಟ್ಟಿಕೊಂಡವೋ ಆಯಾ ಸಂದರ್ಭದ ಅನಿವಾರ್ಯವೂ ಕೂಡ. ಆದರೆ ಹೀಗೆ ಹುಟ್ಟಿಕೊಂಡಾಗ ಅವು ಎಷ್ಟು ದಿವಸ ಬದುಕುಳಿದವು ಎಂಬುದು ಯಾವಾಗಲೂ ಮುಖ್ಯವಲ್ಲ. ಆಯಾಕಾಲಕ್ಕೆ ಅವು ಏನು ಮಾಡಿ ಹೋದವು ಎಂಬುದು ಪ್ರಮುಖವಾಗಿರುತ್ತದೆ. ನಮ್ಮಲ್ಲಿ ಏಕಾಂಕಗಳು ಸಾಕಷ್ಟು ಹುಟ್ಟಿಕೊಂಡವು. ಒಂದು ಟ್ರೆಂಡಾಗಿ ಬೆಳೆಯಿತು. ರಂಗಭೂಮಿಯ ಅಭಿರುಚಿಯನ್ನು ಬೆಳೆಸಲು ಪೂರಕವಾಗಿ ನಿಂತವು. ಅವು ಇಂದು ಇಲ್ಲ, ನಾಳೆಯ ದಿನಗಳಿಗೆ ಬೇರೊಂದು ರೀತಿಯಲ್ಲಿ ಬಂದುಬಿಡಬಹುದು. ಅದೇ ರೀತಿಯಲ್ಲಿ ಅಸಂಗತ ನಾಟಕಗಳು ಹಾಗೂ ನವ್ಯ ಸಾಹಿತ್ಯ ಪರಂಪರೆ. ''ಪಾಶ್ಚಾತ್ಯ ಅಸಂಗತ ರಂಗಭೂಮಿಯ ಪ್ರೇರಣೆಯಿಂದ ರಚಿಸಲಾದ ಕನ್ನಡದ ಉತ್ತಮ ನವ್ಯನಾಟಕಗಳು ರಂಗಭೂಮಿಗೆ ಹೊಸ ಹುರುಪನ್ನು ನೀಡಿದುವೆಂಬುದನ್ನು ಒಪ್ಪಿಕೊಂಡರೂ ಈ ಮಾದರಿಯಲ್ಲಿ ಶ್ರೇಷ್ಠವೆಂಬಂತಹ ಕಡಿಮೆ ಪ್ರಮಾಣದಲ್ಲಿವೆಯೆಂಬುದನ್ನು ಒಪ್ಪಿಕೊಳ್ಳಬೇಕು'' ಎಂಬುದು ಅಷ್ಟು ಸೂಕ್ತವಲ್ಲವೇನೋ. ಕೆ.ಎಂ.ಎಸ್.ರವರೇ ಬಳಸುವ 'ಹುರುಪು' ಮತ್ತು 'ಕೆಲವು ಉತ್ತಮ ನಾಟಕಗಳು ಕಡಿಮೆ ಪ್ರಮಾಣ' ಇಷ್ಟೇ ಸಾಕು, ಎಷ್ಟೋ ಸೃಷ್ಟಿಯಾಗಬೇಕೆಂದು ಯಾಕೆ ಬಯಸಬೇಕು ಎಂಬ ಪ್ರಶ್ನೆ ನನ್ನ ಮುಂದಿದೆ. ಯಾವುದೂ ನಮ್ಮನ್ನು ಕೇಳಿಕೊಂಡು ಬರುವುದಿಲ್ಲ. ಆಯಾ ಕಾಲಘಟ್ಟದ ಸ್ಥಿತ್ಯಂತರಗಳಿಗೆ ಅನುಗುಣವಾಗಿ ಕೆಲವು ನಡೆಯುತ್ತಿರುತ್ತವೆ. ಇತಿಹಾಸಚಕ್ರದಲ್ಲಿ ರೂಪವೈವಿಧ್ಯಗಳು ಏನೇನೋ ಆಗಬಹುದು. ಅದೇ ರೀತಿಯಲ್ಲಿ ಕೆ.ಎಂ.ಎಸ್.ರವರು ತಮ್ಮ 'ಆಧುನಿಕ ಕನ್ನಡ ನಾಟಕ' ಕೃತಿಯಲ್ಲಿ ಪ್ರಾತಿನಿಧಿಕವಾಗಿ ಕೆಲವು ಅದ್ಭುತ ನಾಟಕಗಳನ್ನು ನಾಟಕಕಾರರನ್ನು ಕುರಿತು ಚರ್ಚಿಸುತ್ತಾರೆ. ಅವರೆಲ್ಲರಿಗೂ ಒಂದೇ ಮಾನದಂಡವನ್ನು ಆರೋಪಿಸುವುದಿಲ್ಲ. ವಸ್ತು ವೈವಿಧ್ಯತೆ ಮತ್ತು ಟ್ರೀಟ್‌ಮೆಂಟ್ ದೃಷ್ಟಿಯಿಂದಲೇ ನೋಡಿ ಮೌಲ್ಯಕಟ್ಟುತ್ತಾರೆ. ಅಸಂಗತ ನಾಟಕಗಳ ಬಗ್ಗೆ ತಾಳುವ ಧೋರಣೆಯನ್ನೇ ನವ್ಯತೆ ಬಗ್ಗೆ ತಾಳುತ್ತಾರೆ. ಸಾಹಿತ್ಯ ಮತ್ತು ಸಂಸ್ಕೃತಿ ವಲಯದಲ್ಲಿ ಒಟ್ಟು ವಾತಾವರಣವನ್ನು 'ರೀಜ್ಯುನೇಟ್' ಮಾಡಿತು ಎಂಬುದೇ ಬಹಳ ಮುಖ್ಯ. ಅಂಥ ಸಮಯದಲ್ಲಿ ಉತ್ತಮ ಮಾದರಿಗಳು ಹುಟ್ಟಿಕೊಳ್ಳಲು ಪ್ರೇರಕ ಶಕ್ತಿಯಾಯಿತು. ಬಂಡಾಯದಲ್ಲಿ ಈ ಕೆಲಸ ಆಗಬೇಕಾಗಿತ್ತು ; ಆಗಲಿಲ್ಲ. ಯಾಕೆಂದರೆ ಅಲ್ಲಿ ದೊಡ್ಡ ಕಲಾಮನಸುಗಳು ಹುಟ್ಟಿಕೊಳ್ಳಲಿಲ್ಲ. ನಮ್ಮ ದೊಡ್ಡ ಲೇಖಕರೇ ಕಲಾವಿದರೇ ನಿಜವಾದ ಬಂಡಾಯಗಾರರು ಅಲ್ಲವೇ? ಈ 'ಆಧುನಿಕ ಕನ್ನಡ ನಾಟಕ' ಓದುವ ಮನಸ್ಥಿತಿಗಳನ್ನು ಕಲಿಸಿಕೊಡುತ್ತದೆ. ಗಿರೀಶ್‌ರವನ್ನು, ಕಂಬಾರರನ್ನು ಹಾಗೂ ಲಂಕೇಶ್‌ರವರನ್ನು ಓದುವ ಖುಷಿ ಕೈಲಾಸಂ ಮತ್ತು ಟಿ.ಎನ್. ಸೀತಾರಾಂರವರನ್ನು ಓದಲು ಆಗುವುದಿಲ್ಲ. ಎಲ್ಲೋ ಲೌಡ್ ಅನ್ನಿಸುತ್ತಿರುತ್ತಾರೆ. ಪ್ರಯೋಗದ ಹಂತದಲ್ಲೂ ಕೂಡ. ಸ್ವಲ್ಪಮಟ್ಟಿಗೆ ಶ್ರೀರಂಗರೂ ಸಹ ಲೌಡೇ. ಟಿ.ಎನ್. ಸೀತಾರಾಂರವರಂಥ ಮನಸ್ಥಿತಿಗೆ ಏಕಾಂಕಗಳ ಸೃಷ್ಟಿ ತುಂಬ ಹತ್ತಿರವಾಗಬಹುದು. ಇರಲಿ, ಅವರು ರಂಗಭೂಮಿಗೆ ವಾಪಸ್ಸು ಬರಲು ಆಗದಷ್ಟು ಕಿರುತೆರೆಯ ಅದರ ಜನಪ್ರಿಯತೆಗೆ ಅಂಟಿಕೊಂಡು ಭಾಷೆಯನ್ನು ಸಾಯಿಸಿಬಿಟ್ಟಿದ್ದಾರೆ. ಅವರ ಮೂಲ ಬಂಡವಾಳವಾದ 'ಆಂಗ್ರಿಯಂಗ್ ಮ್ಯಾನ್' ಕೂಡ ಸವಕಲಾಗಿದ್ದಾರೆ. ಈ ದೃಷ್ಟಿಯಿಂದ ''ಹವ್ಯಾಸಿ ರಂಗ ಭೂಮಿಯ ಅಭ್ಯುದಯಕ್ಕೆ ಏಕಾಂಕಗಳ ಕಾಣಿಕೆ ಅದ್ವಿತೀಯವಾದುದು'' ಎಂಬ ಮಾತು ಮುಂದುವರೆಯುವ ಮಾತಾಗಲಿ ಎಂಬುದು ನನ್ನ ಆಶಯ. ಎಲ್ಲವೂ ಸೃಷ್ಟಿಯಾಗುತ್ತಿರಬೇಕು, ಚಲಾವಣೆಯ ಮೂಲಕ ಜೀವ

ಪಡೆಯುತ್ತಿರಬೇಕು. ಇತ್ತೀಚೆಗೆ ಕಿ.ರಂ.ರವರು ಬೆಂಗಳೂರಿನಲ್ಲಿ ಶಿವರಾತ್ರಿಯ ದಿವಸ 'ಮಂಟೇಸ್ವಾಮಿ ಕಾವ್ಯ ಪ್ರಸಂಗವನ್ನು ಎರಡು ವಿಭಿನ್ನ ತಂಡಗಳಿಂದ ಸಾದರ ಪಡಿಸಿದಾಗ ಪುಳಕಿತನಾದೆ. ನನ್ನ ಪಕ್ಕದಲ್ಲಿ ಕೆ.ಎಂ.ಎಸ್.ರವರೂ ಕೂತಿದ್ದರು. ಅಂದು ಪ್ರೇಕ್ಷಕರು ದೀರ್ಘಕಾಲ ಶಿವರಾತ್ರಿಯ ಜಾಗರಣೆಗಾಗಿ ಕೂತಿರಲಿಲ್ಲ, ಅವರು ಕೂರುವಂತೆ ಆ ಎರಡೂ ತಂಡಗಳು ಹಾಡು ಮತ್ತು ನಟನಾ ವೈವಿಧ್ಯತೆಯನ್ನು ಪಡೆದಿದ್ದವು ಎಂಬುದು ಅತ್ಯಂತ ಮಾರ್ಮಿಕವಾದದ್ದು.

ಒಟ್ಟು ರಂಗಭೂಮಿಯನ್ನು ಅದರ ಪರಂಪರೆಯನ್ನು ಮತ್ತು ಮಾದರಿಗಳನ್ನು ಕುರಿತು ತಿಳಿಯಲು ಇದಕ್ಕಿಂತ ಉತ್ತಮ ಕೃತಿ ನಮಗೆ ಸಿಗುವುದಿಲ್ಲ. 'ಆಧುನಿಕ ಕನ್ನಡ ರಂಗಭೂಮಿ'ಯಂಥ ಜೀವಂತ ಕೃತಿ ಮತ್ತೊಂದು ಬರಬೇಕಾದರೆ ಈ ಪ್ರಮಾಣದಲ್ಲಿ ಎಷ್ಟೋ ವರ್ಷಗಳು ತೆಗೆದುಕೊಳ್ಳಬಹುದು.

## ಎರಡು : ಒಡನಾಟ

ಈ 'ಒಡನಾಟ' ಕೃತಿಯನ್ನು 'ಆಧುನಿಕ ಕನ್ನಡ ರಂಗಭೂಮಿ'ಯ ಮುಂದುವರೆದ ಭಾಗವಾಗಿ ಕಾಣಲು ಸಾಧ್ಯ. ಆದರೆ ಅದಕ್ಕಿಂತ ದೀರ್ಘವಾಗಿ, ಭಿನ್ನನೆಲೆಗಳಿಂದ ಇಲ್ಲಿಯ ವಿಷಯಗಳನ್ನು ಕೆ.ಎಂ.ಎಸ್.ರವರು ನೋಡಿದ್ದಾರೆ. ಹಾಗೆ ನೋಡಿದರೆ ನಾನು ಇತ್ತೀಚಿನ ವರ್ಷಗಳಲ್ಲಿ ಓದಿದ ಅತ್ಯುತ್ತಮ ಕೃತಿ. ಕಳೆದ ಡಿಸೆಂಬರ್ 8ರಂದು ಇದರ ಬಿಡುಗಡೆಯ ಸಂದರ್ಭದಲ್ಲಿ ನಾನು ಮತ್ತು ಅಗ್ರಹಾರ ಕೃಷ್ಣಮೂರ್ತಿ ಸಾಕಷ್ಟು ಮಾತಾಡಿದೆವು. ಈಗ ಬರೆಯುವಾಗ ಮತ್ತೆ ಮಾತಾಡುತ್ತಿದ್ದೇನೆ ಎಂಬ ಕ್ಲೀಷೆಯ ಭಯವೂ ನನ್ನ ಅರಿವಿನಲ್ಲಿದೆ. ಹಾಗೆಯೇ ಈ 'ಒಡನಾಟ'ವನ್ನು ಓದುವಾಗ ನನ್ನ ಮುಂದೆ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಕುರಿತು ಚಿಂತಿಸುವ ಪ್ರಬುದ್ಧ ಮನಸ್ಸೊಂದು ವ್ಯಾಪಕವಾಗಿ ವಿಸ್ತಾರಗೊಂಡಿದೆ ಎಂಬುದು ನನ್ನ ಓದಿನ ಸಾರಾಂಶ.

ಇದರಲ್ಲಿ ಮೂರು ಭಾಗಗಳಿವೆ. ಮೊದಲನೆಯ ಭಾಗ 'ಸಾಹಿತ್ಯ'ದಲ್ಲಿ ಇಪ್ಪತ್ತೇಳು ಲೇಖನಗಳಿವೆ. ಎರಡನೆಯ ಭಾಗ 'ಸಂಸ್ಕೃತಿ'ಯಲ್ಲಿ ಹತ್ತು ಲೇಖನಗಳಿವೆ. ಮೂರನೆಯ ಭಾಗ 'ರಂಗಭೂಮಿ'ಯಲ್ಲಿ ಹತ್ತು ಲೇಖನಗಳಿವೆ. ಇಲ್ಲಿಯ ಲೇಖನಗಳು ವಿವಿಧ ಸಂದರ್ಭಗಳಲ್ಲಿ ವಿಚಾರಸಂಕಿರಣಗಳಿಗಾಗಿ ಬರೆದ ಲೇಖನಗಳು. ಆದ್ದರಿಂದ ಅಲ್ಲಿ ಚರ್ಚೆಗೊಂಡು ಮತ್ತಷ್ಟು ಉತ್ತಮ ಆಕಾರವನ್ನು ಕೆಂ.ಎಂ.ಎಸ್.ರವರು ಕೊಟ್ಟಿರಲು ಸಾಧ್ಯ. ಹಾಗೆಯೇ ತಾವು ಬರೆಯುತ್ತಲೇ ಹುಟ್ಟಿಕೊಂಡ ಪ್ರಶ್ನೆಗಳಿಗೆ ಉತ್ತರಿಸುತ್ತಲೂ ಹೋಗಿರಬಹುದು. ಈ ಎರಡೂ ಕ್ರಿಯೆಗಳೂ ಪ್ರತಿಯೊಂದು ದೊಡ್ಡ ಮನಸ್ಸಿನಲ್ಲಿಯೂ ಘಟಿಸಿರಬಹುದಾದ ಕ್ಷಣಗಳಿರುತ್ತವೆ. ಅದೇನೆ ಆಗಿರಲಿ ; ಮೊದಲನೆಯ ಲೇಖನ "ಮಿತ್ರವಿಂದಾಗೋವಿಂದ" ಸಂಸ್ಕೃತ ಪರಂಪರೆಯ ಮೊದಲ ಕನ್ನಡ ನಾಟಕ'ವಂತೂ ನಾನಾ ಕಾರಣಗಳಿಗಾಗಿ ನನ್ನನ್ನು ಸೆಳೆದುಕೊಂಡಿತು. ಕೆ.ಎಂ.ಎಸ್.ರವರು ಒಂದು ಉತ್ತಮ ಕೆಲಸವನ್ನು ಮಾಡುತ್ತಾರೆ. ಕಥಾ ಸಾರಾಂಶವನ್ನು ಹೇಳಿ ಅದರ ವಿವಿಧ ಆಯಾಮಗಳನ್ನು ಚರ್ಚಿಸುವರು. ಇದರಿಂದ ಮೂಲಕೃತಿಯನ್ನು ಓದದಿದ್ದರೂ ಅವರ ವ್ಯಾಖ್ಯಾನದ ಜೊತೆ ಕರೆದೊಯ್ಯುತ್ತಾರೆ. "ನಾಟಕವೆಂಬುದೇ ಕಲ್ಪನೆ ವಾಸ್ತವಗಳೆರಡರ ಸಮ್ಮಿಲನ. ಆದರಲ್ಲಿಯೂ ಸಂಸ್ಕೃತ ನಾಟಕ ಪರಂಪರೆಯ ಬಹುಪಾಲು ನಾಟಕಗಳು ಭಾವನೆಯನ್ನು ಹೆಚ್ಚು ಮುಟ್ಟುತ್ತವೆಯೇ ಹೊರತು ಬುದ್ಧಿಯನ್ನಲ್ಲ. 'ಮಿತ್ರವಿಂದಾಗೋವಿಂದ'ದ ಸಂವಿಧಾನದಲ್ಲಿ ಕಂಡುಬರುವ ಅಪೂರ್ವ

ಬಗೆಯ ಕಲ್ಪನಾ ವಿಲಾಸಗಳನ್ನು ನಾಟಕದ ರಚನಾ ವಿನ್ಯಾಸವನ್ನು ಗಮನಿಸಿದರೆ ಉತ್ತಮನಾಟಕಕಾರನ ಕೈವಾಡ ಅಲ್ಲಿಗೋಚರಿಸುತ್ತದೆ'' ಎನ್ನುವಲ್ಲಿ ಅದನ್ನು ಓದುವ ಹಂತಕ್ಕೆ ಕರೆದೊಯ್ಯುತ್ತಾರೆ. ಮುಂದುವರೆದು ''ದೃಶ್ಯರಂಜನೆಯೂ ನಾಟಕದ ಪ್ರಮುಖ ಆಕರ್ಷಣೆ. ಸರಪಳಿ ಕಿತ್ತು ಓಡುವ ಕಪಿಯಿಂದಾಗುವ ರಾದ್ಧಾಂತ, ಮಾತನಾಡುವ ಗಿಳಿ, ಇಂದ್ರಜಾಲ, ಅರಮನೆಯ ವೈಭವ, ಉದ್ಯಾನವನ, ವಸಂತೋತ್ಸವ, ಮನ್ಮಥ ಪೂಜೆ, ಸುಂದರವಾದ ಹೆಣ್ಣುಗಳು ಮುಂತಾಗಿ ದೃಶ್ಯಗಳ ಸೊಗಸನ್ನು ಪಟ್ಟಿಮಾಡುತ್ತ ಹೋಗಬೇಕಾಗುತ್ತದೆ'' ಎಂದು ಚರ್ಚಿಸುತ್ತಲೇ ನಮ್ಮ ಸಾಂಸ್ಕೃತಿಕ ಲೋಕದ ಪ್ರತಿಭಾವಂತ ನಟ ವರದಾಚಾರ್ಯರು ''ನನ್ನ ಹೆಸರನ್ನುಳಿಸಿದುದು ಈ ರತ್ನಾವಳಿ. ಆದುದರಿಂದ ರತ್ನಾವಳಿಯ ಹೆಸರನ್ನೇ ನನ್ನ ಸಭೆಗೆ ಇಡುತ್ತೇವೆ'' ಎಂದು ಹೇಳಿದ್ದರಂತೆ. ಕೆ.ಎಂ.ಎಸ್.ರವರು ಈ ರೀತಿ ಹೇಳುವುದರ ಮೂಲಕ ಅದ್ಭುತ ಪ್ರತಿಬಿಂಬವನ್ನು ನಮ್ಮ ಮುಂದಿಡುತ್ತಾರೆ.

'ನಮ್ಮ ನಾಟಕ ಹೊಸರಂಗಭೂಮಿಯೊಂದರ ಅನ್ವೇಷಣೆ' ಈ ಅಧ್ಯಾಯದ ವಿಷಯವನ್ನು 'ಆಧುನಿಕ ರಂಗಭೂಮಿ'ಯಲ್ಲಿ ಚರ್ಚಿಸಿದ್ದರೂ, ಇಲ್ಲಿಯ ಅನ್ವೇಷಣೆ ಅದರ ಮುಂದುವರೆದ ಚಿಂತನೆಯಾಗಿದೆ. ಇಲ್ಲಿ ಮುಖ್ಯವಾಗಿ ಗಿರೀಶ್‌ಕಾರ್ನಾಡರ 'ತುಘಲಕ್'ನ್ನು ಕುರಿತು ಚರ್ಚಿಸುವಾಗ ಅದು ಹೇಗೆ ನಮ್ಮ ಸಾರ್ವಕಾಲಿಕ ಶ್ರೇಷ್ಠ ನಾಟಕ ಎಂಬುದನ್ನು ಪ್ರಯೋಗ ಮತ್ತು ವಸ್ತುವಿನ ದೃಷ್ಟಿಯಿಂದ ವಿಶ್ಲೇಷಿಸುತ್ತಾರೆ. ಅದೇ ರೀತಿಯಲ್ಲಿ 'ಹಯವದನ' ನಾಟಕವನ್ನೂ ಕುರಿತು ಚಂದ್ರಶೇಖರ ಕಂಬಾರರ ಬಗ್ಗೆ ಹೇಳುತ್ತ ''ಕಂಬಾರರು ಕನ್ನಡ ಸಂದರ್ಭದಲ್ಲಿ ಹೊಸರಂಗ ಭೂಮಿಯೊಂದರ ಅನ್ವೇಷಣೆಗೆ ಕಾರಣವಾದ ಮಹತ್ವದ ನಾಟಕಕಾರ. ಆಧುನಿಕ ಸಂವೇದನೆಗಳನ್ನು ಜಾನಪದ ಶೈಲಿಯಲ್ಲಿ ಮಂಡಿಸುವ ಕಂಬಾರರ ಗ್ರಾಮೀಣ ಪ್ರಜ್ಞೆ ಹುಟ್ಟಿನಿಂದಲೇ ಕರಗತವಾಗಿದೆ. ಭಾಷೆಯ ಬಳಕೆಯ ದೃಷ್ಟಿಯಿಂದ ಕನ್ನಡ ನಾಟಕಕ್ಕೆ ಕಾವ್ಯದ ಗೇಯತೆಯನ್ನು ಕಥನದ ಉಲ್ಲಾಸ ಮತ್ತು ವಿನೋದಗಳನ್ನು ಕಂಬಾರರ ನಾಟಕಗಳು ದೊರಕಿಸಿಕೊಟ್ಟವು'' ಎನ್ನುವಲ್ಲಿ 'ಉಲ್ಲಾಸ ಮತ್ತು ವಿನೋದ'ದ ಪರಿಕಲ್ಪನೆ ಕಂಬಾರರಿಗೆ ಆರೋಪಿಸಿರುವುದು ಸೂಕ್ತವಾಗಿದೆ. ಈ ಪರಿಧಿಯಲ್ಲಿ ಅವರ ಋಷ್ಯಶೃಂಗ, ಜೋಕುಮಾರಸ್ವಾಮಿ ಮತ್ತು ಜೈಸಿದ್ಧನಾಯಕ' ನಾಟಕಗಳನ್ನು ತೆಗೆದುಕೊಳ್ಳುವರು.

ಇನ್ನು ಮತ್ತೊಮ್ಮೆ ಮಹತ್ವಪೂರ್ಣನಾಟಕಕಾರರಾದ ಲಂಕೇಶರವರನ್ನು ಕುರಿತು ಬರೆಯುವಾಗ ''ಕನ್ನಡ ರಂಗಭೂಮಿಗೆ ಆಧುನಿಕ ಪ್ರಜ್ಞೆಯನ್ನು ತಂದುಕೊಟ್ಟ ಮೊದಲಿಗರಲ್ಲಿ ಮುಖ್ಯರಾದವರು'' ಎಂದು ಹೇಳುತ್ತ 'ಅವರ ತೆರೆಗಳು, ಸಿದ್ಧತೆ, ಪೋಲೀಸರಿದ್ದಾರೆ ಎಚ್ಚರಿಕೆ'ಯಂಥ ನಾಟಕಗಳನ್ನು ಹಾಗೂ ಲಂಕೇಶರವರ ಶ್ರೇಷ್ಠನಾಟಕವಾದ 'ಸಂಕ್ರಾಂತಿ'ಯನ್ನು ಕುರಿತು ಮಾರ್ಮಿಕವಾಗಿ ಬರೆಯುವರು. ''ಐತಿಹಾಸಿಕ ಸಂಗತಿ ಸತ್ಯಗಳನ್ನು ಸಾಂಕೇತಿಕವಾಗಿ ಬಳಸಿಕೊಂಡಿರುವುದರಿಂದ ನಾಟಕದ ವಸ್ತು ಸಮಕಾಲೀನವಾಗಿಯೇ ಪ್ರಸ್ತುತವಾಗಿದೆ. ಧರ್ಮ,ರಾಜಕಾರಣದ ಸಂಬಂಧವನ್ನು ಕುರಿತ ಈ ನಾಟಕದ ಶೋಧನೆ ಭಾರತದ ಮಟ್ಟಿಗಂತೂ ನಿತ್ಯ ನಿರಂತರವಾಗಿದೆ'' ಎಂದು ಹೇಳಿರುವುದು ಅರ್ಥಗರ್ಭಿತವಾಗಿದೆ.

ಭಾಷೆ ಪ್ರಯೋಗದ ದೃಷ್ಟಿಯಿಂದ ಚಂದ್ರಶೇಖರ ಪಾಟೀಲರ, 'ಅಪ್ಪ, ಟಿಂಗರ ಬುಡ್ಡಣ್ಣ ಕುರಿತು ಚರ್ಚಿಸುವುದು. 'ಅಪ್ಪ' ಹೇಗೆ ಭಾವನಾತ್ಮಕ ಏಕಾಂಕ ಎಂಬುದನ್ನು ವಿಶ್ಲೇಷಿಸುವರು.

ಹಾಗೆಯೇ ಎಪ್ಪತ್ತರ ದಶಕದಲ್ಲಿ ಜಿ. ಬಿ. ಜೋಶಿಯವರ 'ಮೂಕಬಲಿ ಮತ್ತು ಕದಡಿದ ನೀರು' ಹೇಗೆ ಕನ್ನಡದ ರಂಗಭೂಮಿಯ ಪ್ರಜ್ಞೆಯನ್ನು ಶ್ರೀಮಂತಗೊಳಿಸಿದವು ಎಂಬುದರ ಬಗ್ಗೆ ಕೆ.ಎಂ.ಎಸ್.ರವರ ಮಾತು ಮಾರ್ಮಿಕವಾದದ್ದು. ಹಾಗೆಯೇ ಮುಂದೆ ಬಿ.ವಿ. ಕಾರಂತರ ಕೈಯಿಂದ ಜನಪ್ರಿಯಗೊಂಡ 'ಸತ್ತವರ ನೆರಳು' ನಾಟಕ. ಹೀಗೆ ಹೇಳುತ್ತಲೇ ''ಎಪ್ಪತ್ತರ ದಶಕ ಕನ್ನಡ ರಂಗಭೂಮಿಯನ್ನು ಹೊಸ ರಂಗಭೂಮಿಯೊಂದರ ಅನ್ವೇಷಣೆಯ ಕಾಲವೆನ್ನಬಹುದು'' ಎನ್ನುವಲ್ಲಿ ಅರ್ಥವಿದೆ.

'ಅಗೆಮೆಮ್ನಾನ್', ಜಗತ್ತಿನ ಪ್ರಥಮ ಯುದ್ಧ ವಿರೋಧಿ ನಾಟಕ ಲೇಖನವನ್ನಂತೂ ನಾನು ಬಹಳಷ್ಟು ಬಾರಿ ಓದಿಕೊಂಡೆ. ವಸ್ತುವಿನ ದೃಷ್ಟಿಯಿಂದಲೂ ಇದು ನನಗೆ ಪ್ರಿಯವಾಗಿರಬಹುದು. ಗ್ರೀಕ್ ರಂಗಭೂಮಿಯ ಮೊದಲ ಮಹಾನ್ ನಾಟಕಕಾರ ಈಸ್ಕಿಲಸ್‌ನ ನಾಟಕವಿದು. ಅವನ ಪ್ರಮುಖ ಮೂರುನಾಟಕಗಳಲ್ಲಿ ಇದೂ ಒಂದು. ಮನುಷ್ಯ ಸಂಬಂಧಗಳು ಎಷ್ಟು ಭೀಕರವಾಗಿರುತ್ತದೆ ಎಂಬುದಕ್ಕೆ ಈ ನಾಟಕ ಸಾಕ್ಷಿ. ವಾಸ್ತವವಾಗಿ ಈ ಸೇಡು ಪ್ರತಿಸೇಡು ಹಾಗೂ ದ್ರೋಹದ ಕಥೆ ಆರಂಭವಾಗುವುದು ಅಗೆಮೆಮ್ನಾನ್ ತಂದೆ ಅತ್ರಿಯಾಸ್ ಮತ್ತು ಚಿಕ್ಕಪ್ಪ ತೆಯಿಸ್ತಸ್ ನಡುವಿನ ವೈರದಿಂದ ತೆಯಿಸ್ತಸ್ ಅತ್ತಿಗೆಯೊಡನೆ ಅನೈತಿಕ ಸಂಬಂಧ ಬೆಳೆಸುವನು. ಅಣ್ಣನ ಅಧಿ ಕಾರವನ್ನು ಕಸಿದು ಕೊಳ್ಳಲು ಬಯಸುವನು. ಕೊನೆಗೆ ಸೋತು ಪಲಾಯನ ಹೋಗುವನು. ಕೆಲವು ಕಾಲಾನಂತರ ಹಿಂದಿರುಗಿ ಅಣ್ಣನ ಆಶ್ರಯ ಬೇಡಿದ. ಕ್ಷಮಿಸಿದವನಂತೆ ಅತಿಯಾಸ್ ನಟಿಸುವನು. ಭೋಜನ ಕೂಟವನ್ನು ಏರ್ಪಡಿಸುವನು. ಅವನ ಮಕ್ಕಳನ್ನೇ ಕೊಂದು ಆ ಮಾಂಸದ ಭಕ್ಷ್ಯವನ್ನು ಬಡಿಸುವನು. ಇದರ ಅರಿವಾಗಿ ಕೋಪಾವಿಷ್ಟನಾಗಿ ಉಳಿದಿದ್ದ ಒಬ್ಬ ಮಗನೊಡನೆ ಪಲಾಯನ ಮಾಡುವನು. ಟ್ರಾಯ್ ಕಾಳಗಕ್ಕೆ ಅಗೆಮೆಮ್ನಾನ್ ಊರುಬಿಟ್ಟ ಸಮಯಕ್ಕೆ ತೆಯಿಸ್ತಸ್ ಮಗ ಎಯ್ಗಿಸ್ತಸ್ ಅಗೆಮೆಯ್ನಾನ್ ಹೆಂಡತಿಯೊಡನೆ ಸಂಬಂಧ ಬೆಳೆಸಿದ. ಹಳೆಯ ಪ್ರತಿಕಾರಕ್ಕೆ ಕಾದುಕುಳಿತ. ಹೀಗೆ ಪ್ರತೀಕಾರದ ನೆರಳು ವಿಸ್ತರಿಸುತ್ತ ಹೋಗುತ್ತದೆ. ಹಾಗೆ ನೋಡಿದರೆ ಈ ನಾಟಕ ಪ್ರಾರಂಭವಾಗುವುದು ಅಗೆಮೆನ್ನೂನ್ ವಿಜಯ ವಾರ್ತೆಯಿಂದ. ಮುಗಿಯುವುದು ಅವನ ಕೊಲೆಯಿಂದ. ತಮ್ಮ ವೈಯಕ್ತಿಕ ಸೇಡಿಗಾಗಿ ಸಾವಿರಾರು ಮುಗ್ಧರನ್ನು ಬಲಿತೆಗೆದುಕೊಳ್ಳುವರು. ಆದರೆ ಮುಂದೆ ಜನ ರಾಜಕೀಯ ನೆಲೆಯ ದೃಷ್ಟಿಯಿಂದ ಅಗೆಮೆಮ್ನಾನ್‌ನ ರಕ್ಷಣೆಗೆ ಬರುವುದಿಲ್ಲ. ಪ್ರಜೆಗಳ ಪ್ರೀತಿ ಕಳೆದುಕೊಂಡ ರಾಜ ನೆಲೆಯನ್ನು ಕಂಡುಕೊಳ್ಳಲು ಸಾಧ್ಯವಿಲ್ಲ.

ಆದರೆ ಈ ನಾಟಕದುದ್ದಕ್ಕೂ ಕೌರ್ಯವ್ಯಾಪಿಸುವ ಕ್ರಮ ಭೀಕರವಾದದ್ದು. ಇತಿಹಾಸ ಎಂತೆಂಥ ಘಟ್ಟಗಳನ್ನು ದಾಟಿ ಬಂದಿದೆ ಎಂಬುದು ಒಂದು ಕ್ಷಣ ಮನವರಿಕೆಯಾಗದಿರದು. ಲೇಖನದುದ್ದಕ್ಕೂ ಕೆ.ಎಂ.ಎಸ್.ರವರ ಪರಿಶೀಲನೆ ತುಂಬ ಆಪ್ತವಾದದ್ದು.

'ಒಡನಾಟ'ದಲ್ಲಿ 'ಗಾಂಧಿ ವಿರುದ್ಧ ಗಾಂಧಿ' ; ಒಂದು ಚಾಗ್ವಾದ ಲೇಖನವಿದೆ. ಮರಾಠಿಯಲ್ಲಿ ತುಂಬ ಗದ್ದಲವೆಬ್ಬಿಸಿದ ನಾಟಕ. ಕನ್ನಡಕ್ಕೆ ಡಿ.ಎಸ್. ಚೌಗಲೆಯವರು ತಂದಿರುವ ನಾಟಕ. ರಂಗಾಯಣದವರು ತಿರುಗಾಟಕ್ಕೆ ಪ್ರಯೋಗಿಸಿದ ನಾಟಕ. ಆದರೆ ಕೆ.ಎಂ.ಎಸ್.ರವರಂಥ ಗಾಂಧಿ ೯ ಚಿಂತಕರೊಬ್ಬರು ಒಂದು ನಾಟಕವನ್ನು ನಿರ್ಲಿಪ್ತತೆಯಿಂದ ನೋಡಿ ವ್ಯಾಖ್ಯಾನಿಸುವುದು ಬಹಳ ಮುಖ್ಯ. ಇಲ್ಲಿ ಗಾಂಧಿ ಮತ್ತು ಗಾಂಧೀಜಿಯವರ ಮಗ ಹರಿಲಾಲ್ ಮುಖಾಮುಖಿಯಾಗುವ

ಕ್ರಮದ ಹಿನ್ನೆಲೆ ಕುರಿತು ಚರ್ಚಿಸುತ್ತಾರೆ. ಕುಟುಂಬ ಕೇಂದ್ರಿತ ಗಾಂಧೀಜಿ ವ್ಯಕ್ತಿತ್ವದ ಸಂಕೀರ್ಣಸ್ವರೂಪವನ್ನು ಆರೋಗ್ಯಪೂರ್ಣವಾಗಿ ನೋಡುವುದರ ಜೊತೆಗೆ 'ಗಾಂಧಿ ವಿರುದ್ಧ ಗಾಂಧಿ'ಯಂತಹ ಕೃತಿಗಳು ಹುಟ್ಟಲು ಸಾಧ್ಯ. ಇಲ್ಲಿ ಸೃಜನಶೀಲ ಲೇಖಕನಾದವನು ವಿವಿಧ ಘಟ್ಟಗಳಿಂದ ನೋಡಲು ಸಾಧ್ಯವಿರುತ್ತದೆ. ನಾವು ಯಾವುದನ್ನೇ ಆಗಲಿ ಅತಿಮಾನುಷ ಮಾಡುವ ಹಂತಕ್ಕೆ ತಲುಪಬಹುದು ಎಂಬುದು ಕೆ.ಎಂ.ಎಸ್.ರವರ ಪರಿಶೀಲನೆ. ಈ ದೃಷ್ಟಿಯಿಂದ ಕೆ.ಎಂ.ಎಸ್.ರವರ ವಾದಸರಿ, ಯಾಕೆಂದರೆ ಯಾವುದೇ ಪ್ರಬುದ್ಧ ಸಮಾಜದಲ್ಲಿ ಚರ್ಚೆಮಡಿವಂತಿಕೆಯಾಗಬಾರದು.

ಹಾಗೆಯೇ ಲಂಕೇಶರವರ 'ಸಂಕ್ರಾಂತಿ' ನಾಟಕವನ್ನು ತುಂಬ ದೀರ್ಘವಾಗಿ ಚರ್ಚಿಸಿರುವಂಥವರು. ಉಷಾರುದ್ರರ ಪ್ರೇಮ ಮತ್ತು ಅದರ ಪರಿಣಾಮಗಳನ್ನು ಶೋಧಿಸುವುದು ನಾಟಕದ ಉದ್ದೇಶವಾದ ರಾಜಕಾರಣದ ದುರಂತ ಚರ್ಚೆಯನ್ನು ಇಲ್ಲಿ ಗುರ್ತಿಸಬಹುದು. "ಸಂಕ್ರಾಂತಿಯಲ್ಲಿ ಲಂಕೇಶರು ಬಸವಣ್ಣ - ಗಾಂಧಿವಾದಗಳೆರಡನ್ನೂ ಮೂಲಭೂತವಾಗಿ ಒಂದೇ ಸ್ವರೂಪದ್ದೆಂದು ಗ್ರಹಿಸಿ ವಿವೇಚಿಸಿದ್ದಾರೆ" ಎನ್ನುವ ಮಾತಿನಲ್ಲಿ ಸತ್ಯವಿದೆ. ಹಾಗೆಯೇ ಮುಂದೆ "ಇತಿಹಾಸದ ಸ್ವರೂಪ ಸಂಕೀರ್ಣ ಹಾಗೂ ಜಟಿಲವಾದದ್ದು. ಅದರ ಒಂದು ಮುಖವನ್ನೂ ಲಂಕೇಶರು ಸಂಕ್ರಾಂತಿಯಲ್ಲಿ ಪ್ರಕಟಿಸಿದ್ದಾರೆ. ಅವರ ವ್ಯಾಖ್ಯಾನ ಸುಳ್ಳಲ್ಲವಾದರೂ ಸಂಪೂರ್ಣ ಸತ್ಯವಲ್ಲ" ಎಂದು ಹೇಳುವರು. ಈ ಕಾರಣಕ್ಕಾಗಿ 'ಸಂಕ್ರಾಂತಿ'ಯ ಬಗ್ಗೆ ಸಾಕಷ್ಟು ಒಳನೋಟಗಳನ್ನು ಬೀರುವ ಕೆ.ಎಂ.ಎಸ್.ರವರ ಮಾತು ಇಲ್ಲಿ ದಾಖಲಾಗುತ್ತದೆ.

ಈ ಕೃತಿಯಲ್ಲಿ ನಮ್ಮಲ್ಲಿಯ ಪ್ರತಿಭಾವಂತ ನಿರ್ದೇಶಕರಾದ ಪ್ರಸನ್ನರ 'ಉಲಿ' ಪ್ರಯೋಗದ ಚರ್ಚೆ ಇದೆ. ಹಾಗೆಯೇ ಟಿ.ಎನ್. ಸೀತಾರಾಂ, ಉತ್ಪಲ್‌ದತ್‌ರವರ 'ಸೂರ್ಯಶಿಕಾರಿ', ಗಿರೀಶ್‌ರವರ 'ಹಯವದನ', ಕಂಬಾರರ 'ಹುಲಿಯ ನೆರಳು' ಮತ್ತು ಋಷ್ಯಶೃಂಗ'ದ ಬಗ್ಗೆ ದೀರ್ಘವಾದ ಚರ್ಚೆ ಇದೆ. ದಲಿತ ಸಂವೇದನೆಯ 'ಏಕಲವ್ಯ' ನಾಟಕ ಕುರಿತು ನಮ್ಮಲ್ಲಿಯ ಪ್ರಮುಖ ಕಥೆಗಾರ ವೀರಭದ್ರಪ್ಪನವರ ಶಾಮಣ್ಣ ಕಾದಂಬರಿಕುರಿತು ವಿಮರ್ಶೆ ಇದೆ. 'ಸಂಸ್ಕೃತಿ' ವಿಭಾಗದ ಲೇಖನಗಳು ಹಾಗೆಯೇ 'ರಂಗಭೂಮಿ'ಯ ವಿಭಾಗದ ಲೇಖನಗಳನ್ನು ನಾವು ಗಮನಿಸಿ ಓದಲೇಬೇಕಾದಂಥವು. ಬಿ.ವಿ. ಕಾರಂತರು ಕಟ್ಟಿದ ರಂಗ ಪರಂಪರೆ ಈ ವಿಭಾಗದ ಮಹತ್ವಪೂರ್ಣ ಲೇಖನ. "ಕನ್ನಡ ರಂಗಭೂಮಿಯಲ್ಲಿ ಕಾರಂತರು ಮೊದಲ ದೊಡ್ಡ ಸಾಧನೆ 1972ರಲ್ಲಿ ಫೆಬ್ರವರಿಯಲ್ಲಿ ಅವರು ನಿರ್ದೇಶಿಸಿದ ಮೂರು ಮಹತ್ವದ ನಾಟಕಗಳು ಮತ್ತು ಬಯಲು ರಂಗಭೂಮಿಯ ಪರಿಕಲ್ಪನೆ. ಪ್ರತಿಮಾ ನಾಟಕರಂಗದ ಮೂಲಕ ಪ್ರಯೋಗಗೊಂಡ ಈ ಸಂಕ್ರಾಂತಿ, ಜೋಕುಮಾರಸ್ವಾಮಿ ಮತ್ತು ಗಿರೀಶ್ ಕಾರ್ನಾಡರು ನಟಿಸಿದ ಈಡಿಪಸ್ ನಾಟಕಗಳು ಕನ್ನಡ ಹವ್ಯಾಸಿ ರಂಗಭೂಮಿಗೆ ಶ್ರೇಷ್ಠ ವೃತ್ತಿ ಪರತೆಯನ್ನು ತಂದುಕೊಟ್ಟ ಕಾರಂತರ ಸಾಧನೆಯ ಮೊದಲ ಘಟ್ಟವೆಂದು ಇದನ್ನು ಗುರ್ತಿಸಬಹುದು" ಎಂದು ತಮ್ಮ ವ್ಯಾಖ್ಯಾನ ಮಂಡಿಸುವರು. ಈಗಾಗಲೇ ಕೆ.ಎಂ.ಎಸ್. ಮತ್ತು ಬಿ.ವಿ. ಕಾರಂತರ ಅನನ್ಯ ಸಂಬಂಧವನ್ನು ಹಿಂದಿನ ಪುಟಗಳಲ್ಲಿ ಪ್ರಸ್ತಾಪಿಸಲಾಗಿದೆ.

ಈ ವಿಭಾಗದಲ್ಲಿ ಶಿಕ್ಷಣದ ಪ್ರಸ್ತುತತೆ ಕುರಿತು ಇದೆ. ಹಾಗೆಯೇ ನಮ್ಮ ನಡುವಿನ ಗಂಭೀರ

ರಂಗತಜ್ಞರಾದ ಲಿಂಗದೇವರು ಹಳೆಮನೆಯವರು ಸಂದರ್ಶಿಸಿದ 'ಸಾಮಾಜಿಕ ನ್ಯಾಯ ಮತ್ತು ಕನ್ನಡ ರಂಗಭೂಮಿ' ಲೇಖನವಿದೆ. "ಇಲ್ಲಿ ಕರ್ನಾಟಕದಲ್ಲಿ ಈಗ ಅನೇಕ ರೆಪರ್ಟರಿಗಳು ಕೆಲಸ ಮಾಡ್ತಾ ಇವೆ. ಈ ರೆಪರ್ಟರಿಗಳು ತಮ್ಮ ಅನೇಕ ಪ್ರಯೋಗಗಳಲ್ಲಿ ದೇಸಿ ಪ್ರದರ್ಶಕ ಕಲೆಗಳನ್ನು ಅಳವಡಿಸಿಕೊಳ್ತಾ ಇವೆ. ರಂಗಾಯಣ ಈ ಕೆಲಸಮಾಡಿದೆ. ರಂಗಾಯಣ ಹುಟ್ಟಿದ್ದೇ ರಂಗ ಭೂಮಿಯನ್ನು ಹೆಚ್ಚು ಪ್ರಯೋಗಶೀಲ ನೆಲೆಯಲ್ಲಿ ಸಂಪದ್ಭರಿತಗೊಳಿಸುವುದಕ್ಕಾಗಿ" ಎಂಬ ಮಾತು ಹೇಳುವುದಕ್ಕೆ ಕೆ.ಎಂ.ಎಸ್.ರವರಿಗೆ ನೆಲೆ ಇದೆ. ಯಾಕೆಂದರೆ ಅದರ ಪ್ರಾರಂಭದಿಂದ ಅನನ್ಯ ಸಂಬಂಧವನ್ನುಳಿಸಿಕೊಂಡು ಬಂದವರು.

ಒಟ್ಟಿನಲ್ಲಿ 'ಒಡನಾಟ' ಕೃತಿಯು ಒಂದು ದೀರ್ಘವಾದ ಚರ್ಚೆಯನ್ನು ವಿಮರ್ಶೆಯನ್ನು ಬಯಸುವ ಕೃತಿ ಎಂಬುದು ನನ್ನ ನಂಬಿಕೆ. ಯಾಕೆಂದರೆ ಅದರ ಹಂದರದೊಳಗೆ ಅಷ್ಟೊಂದು ವ್ಯಾಪಕ ವಸ್ತುಗಳನ್ನೊಳಗೊಂಡ ಲೇಖನಗಳಿವೆ.

## ಮೂರು : ನೋಟ ನಿಲುವು

ಕೆ.ಎಂ.ಎಸ್. 2001ರಲ್ಲಿ ಮೂರುತಿಂಗಳ ಕಾಲ ಇಂಗ್ಲೆಂಡ್ ಮತ್ತು ಯೂರೋಪ್ ಪ್ರವಾಸಕ್ಕೆ ಹೋದಾಗ ಅದರ ಅನುಭವದ ಕಥನವೇ ಇದು. "ಶಿವರಾಮಕಾರಂತರಂತಹ ಲೇಖಕರಿಗೆ ಪ್ರವಾಸವೆಂದರೆ ಅತಿ ಉತ್ಸಾಹ. ಜಿ.ಎಸ್. ಶಿವರುದ್ರಪ್ಪನವರೂ ಕಾರಂತರಂತೆ ಪ್ರವಾಸಪ್ರಿಯರು. ಇಬ್ಬರೂ ಉತ್ತಮ ಪ್ರವಾಸ ಕಥನಗಳನ್ನು ಬರೆದಿದ್ದಾರೆ. ಕುವೆಂಪು ಹೆಚ್ಚಾಗಿ ಪ್ರವಾಸ ಮಾಡಿದವರಲ್ಲ, ವಿದೇಶವಿರಲಿ, ಭಾರತದೊಳಗೆ ಅವರು ಸುತ್ತಾಡಿದವರಲ್ಲವೆಂದು ಕೇಳಿದ್ದೇನೆ, ನನಗೆ ಆತ್ಮೀಯರಾಗಿದ್ದ ಲಂಕೇಶ್ ಸಹ ಅಕಾರಣ ಪ್ರವಾಸದ ಬಗೆಗೆ ನಿರುತ್ಸಾಹ ತಾಳುತ್ತಿದ್ದರು. ಹೀಗೆ ಕೆಲವರು ಪ್ರವಾಸದ ಬಗೆಗೆ ಒಂದು ಬಗೆಯ ಅಂಜಿಕೆಯನ್ನೇ ಇಟ್ಟುಕೊಂಡಿರುವುದಕ್ಕೆ ಮತ್ತೆ ಕೆಲವರು ಸುತ್ತಾಡೋಣವೆಂದರೆ ಹಾತೊರೆಯುವುದಕ್ಕೆ ಅವರವರ ಬಾಲ್ಯದ ವಾತಾವರಣವೂ, ಸಾಮಾಜಿಕ ಹಿನ್ನೆಲೆ - ಇವೆಲ್ಲ ಕಾರಣವಿರಬಹುದೇ? ಎಂಬ ಸಂದೇಹವೂ ನನಗಿದೆ" ಎಂದು ಪೀಠಿಕೆಯಲ್ಲಿ ಪ್ರಸ್ತಾಪಿಸುವರು.

ಇನ್ನೂರು ಹದಿಮೂರು ಪುಟಗಳ ಈ ಪುಸ್ತಕ ಕೆಲವು ಸ್ವಾರಸ್ಯಗಳನ್ನು ನಮ್ಮ ಮುಂದೆ ತೆರೆದಿಡುವಂಥದ್ದು. ಇಲ್ಲಿಯೂ ಒಬ್ಬ ಸಮಾಜ ವಿಜ್ಞಾನಿ ಹಾಗೂ ಸಾಂಸ್ಕೃತಿಕ ಚಿಂತಕ ತಾನು ಸ್ಥಳಗಳನ್ನು ಹೇಗೆ ಗ್ರಹಿಸುತ್ತಾರೆ ಎಂಬುದು ಮುಖ್ಯ. ಈ ಮೂರು ತಿಂಗಳಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನೂ ನೋಡಿ ತಮ್ಮ ತಲೆತುಂಬ ಏನೇನೋ ತುಂಬಿಕೊಂಡು ಬಂದವರು.

ಬರ್ಮಿಂಗ್ ಹ್ಯಾಮ್‌ನಗರ ಲಂಡನ್‌ನಗರ ಬಿಟ್ಟರೆ ಅತಿದೊಡ್ಡ ನಗರ. ಅಲ್ಲಿ ಅದು ಇದು ನೋಡುತ್ತ ನೂರಾರು ವರ್ಷಗಳ ನೀರಿನ ಕಾರಂಜಿಗಳನ್ನು ಚಿಮ್ಮುವ ನೀರು ನಿರ್ಮಿಸಿದ ಕೊಳ, ಅದರ ನಡುವೆ ಸುಂದರ ಬೆತ್ತಲೆ ಹೆಣ್ಣು ಗಂಡುಗಳ ಪ್ರತಿಮೆಗಳು. ಕೆ.ಎಂ.ಎಸ್.ರವರನ್ನು ಹಿಡಿದಿಟ್ಟುಕೊಂಡಿವೆ. ಅಲ್ಲಿ ಬಿಡಿಸಿಕೊಂಡು ಬೃಹತ್ ಮ್ಯೂಸಿಯಂ ಪ್ರವೇಶಿಸಿದ್ದಾರೆ. "ಬಿಡುವಾಗಿ ಈ ಮ್ಯೂಸಿಯಂ ನೋಡಲು ಎರಡು ಮೂರು ದಿನಗಳೇ ಬೇಕಾದೀತು... ಭಾರತ, ಈಜಿಪ್ಟ್ ಇರಾನ್, ಗ್ರೀಕ್ ಮುಂತಾದ ಪ್ರಾಚೀನ ಪರಂಪರೆಯಿರುವ ದೇಶಗಳ ಕ್ರಿಸ್ತಪೂರ್ವ. ಯುಗಕ್ಕೆ

ಸೇರಿದ ವಿಗ್ರಹಗಳು, ಮಡಕೆಗಳು, ಈಜಿಪ್ಟಿನ ಪ್ರಾಚೀನ ಯುಗದ ಶವಗಳಿರುವ ಹಾಗೂ ಮಮ್ಮಿಗಳಾಗಿ ಶವಗಳನ್ನು ಘನೀಭವಿಸಿಟ್ಟುಕೊಂಡಿರುವ ಪೆಟ್ಟಿಗೆಗಳು ಇಲ್ಲಿದ್ದವು. ಭಾರತೀಯ ರೆಸ್ಟೋರೆಂಟ್‌ಗಳೆಂದರೆ ಪಾಶ್ಚಾತ್ಯರಿಗೆ ಪಂಚಪ್ರಾಣ. ಮಸಾಲೆ ಸಹಿತವಾದ ರುಚಿಕರವಾದ ಭಾರತೀಯ ಆಹಾರ, ವಿಶೇಷವೆಂದೇ ಅವರು ಭಾವಿಸುತ್ತಾರೆ. ಪ್ರಸಿದ್ಧ ರೆಪರ್ಟರಿಯೊಂದರ ರಂಗಮಂದಿರದ ಒಳಹೊಕ್ಕೂ ಅಂದು ಪ್ರದರ್ಶನಗೊಳ್ಳಲಿದ್ದ ನಾಟಕದ ವಿವರಗಳನ್ನು ಕೇಳಿ ತಿಳಿದುಕೊಂಡೆವು'' ಮುಂದೆ ಬ್ರೆಕ್ಟ್ ನಾಟಕದ ಮಕ್ಕಳು ವಿವರ ಪಡೆಯವರು. ಬ್ರಿಡ್ಜ್‌ನಾರ್ತ್ ಊರುಸುತ್ತುವ ಕಾರ್ಯಮುಗಿದ ಮೇಲೆ ನದಿಯನ್ನು ಸೇತುವೆಯ ಮೂಲಕ ದಾಟಿ ಕ್ಯಾಸಲ್ ಇದ್ದ ಗುಡ್ಡವನ್ನು ಮೇಲಕ್ಕೇರುವ ಚಿಕ್ಕ ರೈಲಿನಲ್ಲಿ ಕುಳಿತು ಏರಿದೆವು. ಗುಡ್ಡ ಸುತ್ತ ಕೋಟೆ ಇದೆ. ಅರಮನೆಯ ಅವಶೇಷಗಳು ಮಾತ್ರ ಉಳಿದಿವೆ. ಗುಡ್ಡದ ಬುಡದಿಂದ ತುದಿಯವರೆವಿಗೆ ಹಲವು ಚಿಕ್ಕ ವಾಸಗೃಹಗಳಿದ್ದು ಜನ ಇಂದಿಗೂ ಅವುಗಳಲ್ಲಿ ವಾಸವಾಗಿದ್ದಾರೆ. ಗುಡ್ಡದ ಮೇಲೆ ಕ್ಯಾಸಲ್ ಸುತ್ತ ಹಾಕಿರುವ ಹುಲ್ಲು ಹಾಸಿನ ನಡುವೆ ಮೊದಲ ಮತ್ತು ಎರಡನೆಯ ಮಹಾಯುದ್ಧದಲ್ಲಿ ಮಡಿದ ವೀರರ ಸಲುವಾಗಿ ಸ್ಮಾರಕವಿದೆ. ಅಜ್ಞಾತವೀರನೊಬ್ಬನ ಬೃಹತ್‌ವಿಗ್ರಹದ ಅಸ್ತಿವಾರದ ಸುತ್ತ ಈ ಎರಡೂ ಮಹಾಯುದ್ಧದಲ್ಲಿ ಪಾದಾರ್ಪಣೆ ಮಾಡಿ ದೇಶದ ಘನತೆ ಹೆಚ್ಚಿಸುವ ಈ ಊರಿನ ವೀರಯೋಧರ ಹೆಸರು ಕೆತ್ತಲಾಗಿದೆ'' ಇಂಥದನ್ನು ಕೆ.ಎಂ.ಎಸ್. ಸ್ವಾರಸ್ಯವಾಗಿ ದಾಖಲುಗೊಳಿಸುತ್ತಾರೆ. ಹಾಗೆಯೇ ಮುಂದೆ ಟೆಲ್‌ಫೋರ್ಡ್‌ನಲ್ಲಿ ವಿಕ್ಟೋರಿಯನ್ ಕಾಲದ ಮಾದರಿಯಲ್ಲಿ ಒಂದು ಹಳ್ಳಿಯನ್ನೇ ಪುನರ್ ನಿರ್ಮಿಸಿ ಅದನ್ನು ಪ್ರವಾಸಿ ತಾಣವಾಗಿ ನಿರ್ಮಿಸಿದ್ದಾರೆ. ಹೀಗೆ ಹೇಳುತ್ತಲೇ ಟೆಲ್‌ಫೋರ್ಡ್‌ನ್ನು ಯಾವ ಯಾವರೀತಿಯಲ್ಲಿ ನಿರ್ಮಿಸಿದ್ದಾರೆ ಎಂಬುದರ ನೋಟದಲ್ಲಿ ಇಡೀದಿನ ಕಳೆಯುತ್ತಾರೆ.

'ಯುರೋಪ್ ಪ್ರವಾಸಕ್ಕೆ ಮುನ್ನ ಲಂಡನ್ನಿನಲ್ಲಿ' ಎಂಬ ಅಧ್ಯಾಯದಲ್ಲಿ ಇಲ್ಲಿನ ಮ್ಯೂಸಿಯಂಗಳು, ಚರ್ಚ್‌ಗಳು, ಕಲಾ ಗ್ಯಾಲರಿಗಳು, ರಂಗಮಂದಿರಗಳು, ಅರಮನೆಗಳು, ಉದ್ಯಾನವನಗಳನ್ನು ದಾಖಲಿಸುತ್ತಾರೆ. ಲಂಡನ್ನಿಗೆ ಹೋಗಲು ವರ್ಜಿನ್ ರೈಲುಗಾಡಿಯಲ್ಲಿ ಮುಂಚೆಯೇ ಟಿಕೆಟ್ ಕಾಯ್ದಿರುಸುವಿಕೆ. ಬರ್ಮಿಂಗ್ ಹ್ಯಾಂ ಮೂಲಕ ಲಂಡನ್ ತಲುಪುವುದು, ಳಂಡನ್ನಿನ ಹ್ಯೂಸ್ಟನ್ ರೈಲು ನಿಲ್ದಾಣ ಪ್ರದೇಶಿಸುವ ಮುನ್ನ ಸಿಗ್ನಲ್ ಸಿಗಲು ತಡವಾಗಿ ಹತ್ತು ನಿಮಿಷ ಅಡಚಣೆಯಾಗುವುದು, ಸಿಗ್ನಲ್ ಮನೆಗಳ ಸ್ಟ್ರೀಟ್ ಇತ್ಯಾದಿಯನ್ನು ಸ್ವಾರಸ್ಯವಾಗಿ ಹೇಳುತ್ತ ವೈ.ಎಂ.ಸಿ.ಎ.ಯಲ್ಲಿ ಕಾರ್ಸಾರ್ಸ್ ಕಛೇರಿಯನ್ನು ಹುಡುಕಿಕೊಂಡು ಹೋಗುವಾಗ ಸುರಂಗಮಾರ್ಗದ ಅನುಭವ. ಕಲಕತ್ತೆಯ ಸುರಂಗಮಾರ್ಗದ ನೆನಪು. ಲಂಡನ್ ಸುರಂಗ ರೈಲು ಜಾಲದ ಕತೆ ಕೇಳಿದ್ದ ವಿಷಯ ಈಗ ಅದೇ ಎದುರಾದಾಗ ? ಜಗತ್ತಿನ ಅತ್ಯಂತ ಹಳೆಯ ಸುರಂಗಮಾರ್ಗ. ದಿನವೊಂದಕ್ಕೆ ನಿಗದಿಯಾದ ಮೊತ್ತ ನೀಡಬೇಕೆಂದುಕೊಂಡು ಎಲ್ಲಿಗೆ ಬೇಕಾದರೂ ಓಡಾಡಬಹುದಂತೆ. ಲಂಡನ್ ನಗರವನ್ನು ಆರು ವರ್ತುಲಾಕಾರದ ಕ್ಷೇತ್ರಗಳನ್ನಾಗಿ ವಿಂಗಡಿಸಿ ಈ ಸುರಂಗ ರೈಲು ಜಾಲವನ್ನು ನಿರ್ಮಿಸಿದ್ದಾರೆ. 408 ಕಿ.ಮೀಟರ್ ಉದ್ದದ ಈ ಸುರಂಗ ಮಾರ್ಗದಲ್ಲಿ ನೂರಾರು ನಿಲ್ದಾಣಗಳಿವೆಯಂತೆ.

ಕಾರ್ಸಾರ್ಸ್ ಪ್ರವಾಸಿ ಸಂಸ್ಥೆಯಲ್ಲಿ ಯೂರೋಪ್ ಪ್ರವಾಸದ ಬಗ್ಗೆ ಮಾತಾಡಿ ಅಲ್ಲಿಯೇ ಸಮೀಪವಿದ್ದ ಲಂಡನ್ ವಿಶ್ವವಿದ್ಯಾಲಯ ನೋಡುವುದು. ಅಲ್ಲಿಯೇ ಸಮೀಪವಿದ್ದ ಮನಶಾಸ್ತ್ರ

ವಿಭಾಗ ಕಂಡು ರಾಮಚಂದ್ರ ಶರ್ಮರನ್ನು ನೆನಪುಮಾಡಿಕೊಳ್ಳುವುದು. ಅವರು ಇಲ್ಲಿಯೇ ಶಿಕ್ಷಣ ಮತ್ತು ಮನಶಾಸ್ತ್ರದ ಬಗ್ಗೆ ಡಾಕ್ಟರೇಟ್ ಪಡೆದದ್ದು. ಹಾಗೆಯೇ ಆಪ್ರೋ ಏಷ್ಯದ ಹತ್ತಿರ ಅಧ್ಯಯನ ಕೇಂದ್ರದ ಬಳಿ, ಋಷಿಸದೃಶ ಪ್ರತಿಮೆ ನೋಡಿ ನಿಲ್ಲುವರು. ಅದು ತಿರುವಳ್ಳುವರ್ ಪ್ರತಿಮೆ. ಅದನ್ನು ನೋಡಿ ಸಂತೋಷವಾದರೆ, ಬೆಂಗಳೂರಿನ ಅಲಸೂರಿನ ಬಳಿಯ ಪ್ರತಿಮೆ ಅನಾಥವಾಗಿದೆ. ಇದನ್ನು ನೆನಪು ಮಾಡಿಕೊಂಡು ವ್ಯಥೆ ಪಡುತ್ತಾರೆ. (ಡಾ|| ಚಿದಾನಂದಮೂರ್ತಿಯವರಿಗೆ ತೋರಿಸಬೇಕು)

ಮುಂದೆ ಪಾರ್ಲಿಮೆಂಟ್‌ಭವನ, ವೆಸ್ಟ್‌ಮಿನಿಸ್ಟರ್ ಪ್ರದೇಶದ ಸುತ್ತಾಟ. ಲಂಡನ್ನಿನ ಗೋಪುರ, ಲಂಡನ್ನಿನ ಬ್ರಿಡ್ಜ್ 'London Bridge is falling down' ಎಂಬ ನರ್ಸರಿ ಶಿಶುಪ್ರಾಸ, ಟಿ.ಎಸ್. ಎಲಿಯಟ್‌ನ ಕವಿತೆ ನೆನಪು ಮಾಡಿಕೊಳ್ಳುವರು. ಷೇಕ್ಸ್‌ಪಿಯರಿಗ್ಲೋಬ್ ಥಿಯೇಟರ್‌ನಂತರ ಬ್ರಿಟಿಷ್ ಚರಿತ್ರೆಯಲ್ಲಿ ಸುಮಾರು ಒಂಬತ್ತು ಶತಮಾನಗಳ ಇತಿಹಾಸ ಪಡೆದಿರುವ 'ಟವರ್ ಆಫ್ ಲಂಡನ್'ನ ನೋಟ.

ಕಡಲ್ಗಾಲುವೆ ದಾಟಿ ಫ್ರಾನ್ಸ್ ಮೂಲಕ ಬೆಲ್ಜಿಯಂಗೆ, ಅಲ್ಲಿಂದ ಬ್ರೆಸೆಲ್ಸ್ ಮತ್ತು ಲಕ್ಸೆಂಬರ್ಗ್, ಸ್ವಿಡ್ಜರ್‌ಲ್ಯಾಂಡ್‌ನ ಹೃದಯ, ಲುಸಿರೆನ್ ಲೇಕ್ ಡಿಸ್ಕಿಕ್ಟ್ ; ವರ್ಡ್ಸ್‌ವರ್ತ್ ಮತ್ತು ರಸ್ಕಿನ್ ಈ ಅಧ್ಯಾಯಗಳನ್ನೆಲ್ಲ ಓದಲೇಬೇಕು. ಹಾಗೆಯೇ ಎಡಿನ್‌ಬರೋದಲ್ಲಿ ನಾಲ್ಕು ದಿನ ಕಳೆದದ್ದು ಕೇಂಬ್ರಿಜ್‌ನಲ್ಲಿ ಎರಡು ದಿನ, ಷೇಕ್ಸ್‌ಪಿಯರಿನ ಹುಟ್ಟೂರಿನಲ್ಲಿ ಸುತ್ತಾಟ. ''ಧಾರ್ಮಿಕ ನಿಷ್ಠೆಯುಳ್ಳವರಿಗೆ ಮೆಕ್ಕಾ, ಕಾಶಿ, ವ್ಯಾಟಿಕನ್‌ಗಳಿದ್ದಂತೆ ರಂಗಪ್ರೇಮಿಗಳು ಷೇಕ್ಸ್‌ಪಿಯರಿನ ಹುಟ್ಟೂರು ಸ್ಟಾರ್ ಫರ್ಡ್ ಪ್ರತಿವರ್ಷ ಏಪ್ರಿಲ್ 23ರಂದು ಜಗತ್ತಿನ ಹಲವು ಭಾಗಗಳಿಂದ ಬರುವ ನಾಟಕ ಪ್ರೇಮಿಗಳು ಅಲ್ಲಿ ಸೇರಿ ಅವರ ಹುಟ್ಟು ಹಬ್ಬವನ್ನಾಚರಿಸುವ ಸಂಭ್ರಮ ಕುರಿತು ಬರೆಯುವರು. ಮಾಯಾನಗರಿ ಪ್ಯಾರೀಸ್ ಕುರಿತು ದೀರ್ಘವಾದ ಲೇಖನವಿದೆ. ಹೀಗೆ ಎಲ್ಲದರ ನೋಟದ ನಡುವೆ ಅಲ್ಲಿಯ 'ಸಾಮಾಜಿಕ ವ್ಯವಸ್ಥೆ ಮತ್ತು ಅಲ್ಲಿನ ವೈಚಿತ್ರಗಳು' ಇದನ್ನು ಕುರಿತು ಒಂದು ಅಧ್ಯಾಯ ಮೀಸಲಿಡುತ್ತಾರೆ. ಹಾಗೆಯೇ ಇಲ್ಲಿಯ ಮಾದಕ ವಸ್ತುಗಳ ಸೇವನೆಯ ವಿರುದ್ಧ ಬ್ರಿಟನ್ನಿನಲ್ಲಿ ಸಾರ್ವಜನಿಕ ಚಳುವಳಿಯೇ ನಡೆಯುತ್ತಿದೆಯಾದರೂ ಯಶಸ್ವಿಯಾಗಿ ತಡೆಗಟ್ಟಲು ಸಾಧ್ಯವಾಗಿಲ್ಲವಂತೆ. ಇಲ್ಲಿ ಮತ್ತೊಂದು ಮಾರ್ಮಿಕ ಅಧ್ಯಾಯವಿದೆ ಅದು 'ಬ್ರಿಟನ್ನಿನಲ್ಲಿ ಜನಾಂಗವಾದ'. ಕೆ.ಎಂ.ಎಸ್.ರವರು ಒಬ್ಬ ವಿಚಾರಶೀಲ ಸಮಾಜವಾದಿ ಚಿಂತಕರಾಗಿರುವುದರಿಂದ ಇಂಥ ವಿಷಯ ಕುರಿತು ಗಾಢವಾದ ಒಳನೋಟಗಳನ್ನು ಬೀರಬಲ್ಲರು. ಯಾಕೆಂದರೆ 'ಜನಾಂಗವಾದ'ವೆನ್ನುವುದು ಜಗತ್ತಿನಾದ್ಯಂತ ಒಂದು ರೀತಿಯ ಸಾಂಕ್ರಮಿಕ ರೋಗವಿರಬಹುದು. ಆದರೆ ಆಯಾ ಪ್ರದೇಶದಲ್ಲಿ ಅದಕ್ಕೆ ಯಾವ ರೀತಿಯ ಪ್ರತಿರೋಧವಿರುತ್ತದೆಂಬುದು ಮುಖ್ಯ. ಬ್ರಿಟನ್ನು ಕೂಡ ನಾಗರೀಕತೆಯ ಏಳುಬೀಳುಗಳನ್ನು ಕಂಡಿರುವಂಥದ್ದು, ತನ್ನ ಹಿಂದಿನ ವಸಾಹತುಶಾಹಿ ಧೋರಣೆಯಿಂದ ಈಗಲೂ ಕೆಲವರ ಕೆಂಗಣ್ಣಿಗೆ ಪಾತ್ರವಾಗಿರಬಹುದು. ಆದರೆ ಸಂಕುಚಿತತೆಯ ವಿರುದ್ಧ ಹೋರಾಡುವ ಚಿಂತನಶೀಲ ಬಳಗ ದೊಡ್ಡ ಪ್ರಮಾಣದಲ್ಲಿ ಅಲ್ಲಿರುವುದರಿಂದ ಒಂದು ಆರೋಗ್ಯಪೂರ್ಣವಾತಾವರಣ ಮುಂದುರೆದಿದೆ. ಆದರೂ ಇಲ್ಲಿ ಅಲ್ಪ ಸಂಖ್ಯಾತರು ಆತಂಕಗೊಂಡಿದ್ದಾರೆ. ನೂರಾರು ವರ್ಷಗಳಿಂದ ಬೇರೆ ಬೇರೆ

ದೇಶಗಳಿಂದ ಬಂದಂಥವರು ಇಲ್ಲಿಯ ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಸಾಕಷ್ಟು ಕೊಡುಗೆಯನ್ನು ಕೊಟ್ಟಿದ್ದಾರೆ. ಆದರೆ ಇಂದು 'ಬ್ರಿಟಿಷ್ ನ್ಯಾಷನಲಿಸ್ಟ್ ಪಕ್ಷ (ಬಿ.ಎನ್.ಪಿ) ನಮ್ಮ ರಾಷ್ಟ್ರದ ಶಿವಸೇನೆ ಇದ್ದಂಗೆ. ಆದರ ನಾಯಕ ನಿಕ್‌ಗ್ರಿಫಿನ್ ಬಾಳಾಠಾಕ್ರೆಯವರನ್ನೇ ಹೋಲುತ್ತಾನೆ. ಬ್ರಿಟೀಷರನ್ನು ಪ್ರಚೋದಿಸುವುದರಲ್ಲಿ ನಿಸ್ಸೀಮನಂತೆ. "ಶಿವಸೇನೆ, ವಿಶ್ವಹಿಂದೂ ಪರಿಷತ್, ಭಜರಂಗದಳದ ಬ್ರಿಟಿಷ್ ಮಾದರಿಯೇ ಬಿ.ಎನ್.ಪಿ" ಎಂದು ಮಾರ್ಮಿಕವಾಗಿ ಪ್ರಸ್ತಾಪಿಸುತ್ತಾರೆ. ಮುಂದುವರೆದು ವಲಸೆಗಾರರಲ್ಲಿ ಸಾಕಷ್ಟು ಮಂದಿ ಅಸಾಧಾರಣ ಪ್ರತಿಭೆ ಮತ್ತು ಸಾಧನೆಗೆ ಹೆಸರಾದವರಿದ್ದಾರೆ. ಬ್ರಿಟನ್ನಿನಲ್ಲಿ ನೆಲೆಸಿರುವ ಭಾರತೀಯರಲ್ಲಿ ಭಾರಿ ಶ್ರೀಮಂತ ಉದ್ಯಮಿಗಳು, ಶ್ರೇಷ್ಠ ಲೇಖಕರು, ಪ್ರಾಧ್ಯಾಪಕರು, ವಿಜ್ಞಾನಿಗಳೂ ಸೇರುತ್ತಾರೆ. ಅಮರ್ತ್ಯಸೇನ್, ವಿ.ಎಸ್. ನಯಪಾಲ್, ನೀರಧ್ ಚೌದರಿ, ಸ್ವರಾಜ್ ಪಾಲ್ ಮುಂತಾಗಿ ಹಲವರನ್ನು ಹೆಸರಿಸಬಹುದು. ಬ್ರಿಟಿಷ್ ಸರ್ಕಾರವೂ ಇವರಿಗೆಲ್ಲ ಸಾಕಷ್ಟು ಪ್ರೋತ್ಸಾಹನೀಡಿದೆ. ದೇಶದ ಅತ್ಯುನ್ನತ ಗೌರವಗಳು ಅವರಿಗೆ ದೊರತಿವೆ" ಎಂಬುದನ್ನು ಎಲ್ಲ ದೇಶದ ಜನಾಂಗವಾದಿಗಳು ಗಮನಿಸಬೇಕಾದ ವಿಚಾರ. ಈ ರೀತಿಯ ಸೂಕ್ಷ್ಮ ವಿಚಾರಗಳು ಈ ಅಧ್ಯಾಯದಲ್ಲಿ ಹೇರಳವಾಗಿವೆ.

ಕೆ.ಎಂ.ಎಸ್.ರವರು ಬ್ರಿಟನ್ನಿನಿಂದ ಅಮೇರಿಕಾಗೆ ಹೋಗಬೇಕಾದವರು ಹೋಗಲಿಲ್ಲ. ಯಾಕೆಂದರೆ ಸೆಪ್ಟಂಬರ್ ಹನ್ನೊಂದು ನ್ಯೂಯಾರ್ಕ್ ನಗರದ ಮೇಲೆ ಬಾಂಬ್, ವಿಶ್ವ ವಾಣಿಜ್ಯ ಕೇಂದ್ರದ ಮೇಲೆಯೂ ಬಾಂಬ್‌ದಾಳಿ, ಈ ವೈಪರೀತ್ಯಗಳಿಂದ ಅಮೇರಿಕಾ ಪ್ರವಾಸರದ್ದು ಮಾಡಿ ಭಾರತಕ್ಕೆ ಹಿಂದಿರುಗಿದರು.

ಈ ಕೃತಿಯ ವಿವರಗಳನ್ನು ಕುರಿತು ಸಾಕಷ್ಟು ಬರೆಯಬಹುದು. ಅದಕ್ಕಿಂತ ಆತ್ಮೀಯವಾಗಿ ಐದಾರು ತಾಸುಗಳಲ್ಲಿ ಓದಿ ಆನಂದ ಪಡಬಹುದು. ಹಾಗೆ ಓದುವಾಗ ನಾವೂ ಅಲ್ಲಿಯ ಘಟನೆ ಮತ್ತು ಸ್ಥಳಗಳ ಸುತ್ತ ಓಡಾಡುತ್ತಿರುತ್ತೇವೆ. ತುಂಬ ಸರಳವಾಗಿ ಉದ್ಗಾರಗಳಿಲ್ಲದೆ ಬರೆದಿರುವ ಕೃತಿ. ಈ ಮೂರು ಕೃತಿಗಳು ಚೆನ್ನಾಗಿ ಪ್ರಕಟಗೊಂಡಿವೆ. ದಯವಿಟ್ಟು ಕ್ಷಮಿಸಿ, ಸಮಯದ ಅಭಾವದಿಂದ ಅವರ ಬೇರೆ ಕೃತಿಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿಲ್ಲ ಮತ್ತು ಈ ಕೃತಿಗಳೇ ದೀರ್ಘ ಚರ್ಚೆಯನ್ನು ಬಯಸುವಂಥವು. ಆದರೆ ನನ್ನ ಕಾಲದ ಮಿತಿ ದೃಷ್ಟಿಯಿಂದ ಅವಲೋಕಿಸದೇ ಬಿಟ್ಟಿದ್ದೇನೆ.

## ಕೆ.ಎಂ.ಎಸ್.ರವರು ಅನುವಾದಿಸಿದ ನಾಟಕಗಳು

ಕನ್ನಡ ಸಾಹಿತ್ಯ ಮತ್ತು ರಂಗಭೂಮಿಗೆ ಗ್ರೀಕ್‌ರಂಗಭೂಮಿ ಹೆಚ್ಚು ಪರಿಚಯಾತ್ಮಕ ವಾಗಿಯೇ ಬಂದಿದೆ. ಕೆ.ಎಂ.ಎಸ್. ರವರೇ ಪ್ರಸಿದ್ಧ ಗ್ರೀಕ್ ನಾಟಕಕಾರ ಈಸ್ಕಿಲಸ್‌ವ 'ಅಗೆಮೆಮ್ನಾನ್' ಎಂಬ ಅದ್ಭುತ ನಾಟಕದ ಬಗ್ಗೆ ತುಂಬ ಮಾರ್ಮಿಕವಾದ ಲೇಖನಗಳನ್ನು ಬರೆದಿದ್ದಾರೆ. ಇದು ಅವರ ಸಾಹಿತ್ಯಾಸಕ್ತರು ಗಮನಿಸಲೇಬೇಕಾದ 'ಒಡನಾಟ' ಕೃತಿಯಲ್ಲಿ ಪ್ರಕಟವಾಗಿದೆ. ಕ್ರಿ.ಪೂ. ಆರನೆಯ ಶತಮಾನಕ್ಕೆ ಇಕ್ಕಿಲಸ್ ಇಂಥ ನಾಟಕ ಬರೆದನ್ನಲ್ಲ ಎಂಬುದು ನೆನಪಿನಲ್ಲಿ ಉಳಿಯುವ ವಿಷಯ. ಕೆ.ಎಂ.ಎಸ್. ರವರು ಈ 'ಅಗೆಮೆಮ್ನಾನ್' ನಾಟಕಕ್ಕೆ ಪ್ರಥಮ ಯುದ್ಧ ವಿರೋಧಿ ನಾಟಕ ಎಂದು ಶೀರ್ಷಿಕೆ ಕೊಟ್ಟಿರುವುದು ಔಚಿತ್ಯಪೂರ್ಣವಾಗಿದೆ. ಇದರ ಹಿನ್ನೆಲೆಯಲ್ಲಿಯೇ ಗ್ರೀಕನ ಬಹುಪ್ರಮುಖ ನಾಟಕ ಕಾರರಾದ ಯುರಿಪಿಡೀಸ್‌ನ 'ಮೀಡಿಯಾ' ಮತ್ತು ಸಾಫೋಕ್ಲೀಸನ 'ಎಲೆಕ್ಟ್ರಾ' ನಾಟಕಗಳನ್ನು ಇಲ್ಲಿಯ ಸಾಹಿತ್ಯ ಮತ್ತು ರಂಗಭೂಮಿ ಪ್ರಿಯರಿಗೆ ಅನುವಾದ ರೂಪದಲ್ಲಿ ತಂದಿರುವುದು

ಮುಖ್ಯವಾಗಿದೆ. ಹಾಗೆಯೇ ರವೀಂದ್ರನಾಥ ಠಾಕೂರರ 'ರಕ್ತಕಣಗಿಲೆ'.

ಕೆ.ಎಂ.ಎಸ್. ರವರು ರಂಗಭೂಮಿಯ ವಿವಿಧ ಮುಖಗಳಲ್ಲಿ ನುರಿತವರಾದ್ದರಿಂದ ಅನುವಾದಗಳಿಗೆ ಹೆಚ್ಚುಗಾರಿಕೆ ಇದೆ. ಬಿ. ವಿ. ಕಾರಂತರು ಅತ್ಯಂತ ಇಷ್ಟಪಟ್ಟು 'ಮಿಡಿಯಾ' ನಾಟಕವನ್ನು ತೆಗೆದುಕೊಂಡು ಹೆಗ್ಗೋಡಿನ ನೀನಾಸಂ ತಿರುಗಾಟಕ್ಕೆ ನಿರ್ದೇಶಿಸಿದರು. ಇದು ತಿರುಗಾಟದ ಮೂಲಕ ಅತ್ಯಂತ ಜನಪ್ರಿಯವಾದ ನಾಟಕ. ಕರ್ನಾಟಕದ ವಿದ್ಯಾರ್ಥಿನಿಯರು ತುಂಬ ಮೆಚ್ಚಿ ಪ್ರದರ್ಶನಕ್ಕಾಗಿ ಆಯ್ಕೆ ಮಾಡಿ ಕೊಳ್ಳುತ್ತಿರುವ ನಾಟಕವಿದು. 'ರಕ್ತಕಣಗಿಲೆ' ನಾಟಕವನ್ನು ನಮ್ಮ ರಂಗಭೂಮಿಯ ಗಂಭೀರ ನಿರ್ದೇಶಕಿ ಬಿ. ಜಯಶ್ರೀಯವರು ದೆಹಲಿಯಲ್ಲಿ ರವೀಂದ್ರನಾಥ ಠಾಕೂರರ 125ನೇ ವಾರ್ಷಿಕೋತ್ಸವದ ವಿಶೇಷ ಸಂದರ್ಭಕ್ಕೆ ನಿರ್ದೇಶಿಸಿದರು.

ಮೇಲಿನ ಮೂರು ನಾಟಗಳು ವಿಶ್ವವಿದ್ಯಾಲಯಗಳಲ್ಲಿ ಪಠ್ಯಪುಸ್ತಕಗಳಾಗಿ ನೇಮಕಗೊಂಡು ಅಧ್ಯಾಪಕರು, ವಿದ್ಯಾರ್ಥಿಗಳು ಮೆಚ್ಚಿರುವ ಕೃತಿಗಳು. ಈ ಮೂರು ನಾಟಕಗಳ ಕೇಂದ್ರ ಪಾತ್ರ ಹೆಣ್ಣು ಎಂಬುದು ಆಕಸ್ಮಿಕವಿರಲಾರದು. ಈ ದೃಷ್ಟಿಯಿಂದ ಮಹಿಳೆಯರು, ಅಲ್ಪಸಂಖ್ಯಾತರು ಮತ್ತು ದಲಿತರ ಬಗೆಗೆ ಕೆ.ಎಂ.ಎಸ್. ರವರು ಭಾವಾತಿರೇಕತ್ತದಿಂದ ಕೊಡಿರುವವರು ಎನ್ನುವವರೆವಿಗೂ ಪಕ್ಷಪಾತಿಗಳಾಗುವುದುಂಟು. ಇತ್ತೀಚೆಗೆ ಕೆ.ಎಂ.ಎಸ್. ರವರು ಸೋನಿಯಾಗಾಂಧಿಯವರನ್ನು ಸಮರ್ಥಿಸಿಕೊಂಡು ಬರೆದ ವಾಚಕರವಾಣಿ ಪತ್ರಗಳು ಸಹ ಅವರ ಈ ಮೂಲ ಸ್ವಭಾವಕ್ಕೆ ಅನುಗುಣವಾಗಿಯೇ ಇದೆ ಎಂಬುದು ನಮಗೆ ಮನವರಿಗೆಯಾಗುತ್ತಿರುತ್ತದೆ.

## ಎರಡು ಸಂಪಾದಿತ ಸಂಕಲನಗಳು

ಇತ್ತೀಚಿನ ದಿನಗಳಲ್ಲಿ ಕೆ.ಎಂ.ಎಸ್. ರವರು ಸಂಪಾದಿಸಿರುವ 'ಕನ್ನಡ ನಾಟಕ ವಿಮರ್ಶೆ ಮತ್ತು 'ಶತಮಾನದ ನಾಟಕ' ಹೆಚ್ಚು ಚರ್ಚೆಗೊಳಗಾದ ಕೃತಿಗಳು. ಎಲ್ಲಿಯೂ ಎಡಬಿಡಂಗಿ ತನಕ್ಕೆ ಆಸ್ಪದ ಕೊಡದಂತೆ ಸಂಪಾದಿಸಿರುವಂಥವು. ಬೆಂಗಳೂರು ವಿಶ್ವವಿದ್ಯಾಲಯದವರಿಗಾಗಿ 'ಕನ್ನಡ ನಾಟಕ ವಿಮರ್ಶೆಯನ್ನು ಸಂಪಾದಿಸಿಕೊಟ್ಟಿದ್ದಾರೆ. ಕನ್ನಡ ನಾಟಕ ಸಂದರ್ಭದ ಹದಿಮೂರು ಶ್ರೇಷ್ಠ ಏಕಾಂಕಗಳನ್ನು ಮತ್ತು ಒಂದೊಂದು ಕೃತಿಯನ್ನು ಕುರಿತು ಪ್ರತ್ಯೇಕವಾಗಿ ಹದಿಮೂರು ಲೇಖನಗಳನ್ನು ಇಲ್ಲಿ ಕಾಣಬಹುದು. ಕನ್ನಡದ ಪ್ರಸಿದ್ಧ ವಿಮರ್ಶಕರಾದ ಜಿ.ಎಸ್.ಆಮೂರ್, ಕೆ. ವಿ. ನಾರಾಯಣ, ಕ.ವೆಂ. ರಾಜಗೋಪಾಲ, ಪ್ರಸನ್ನ ಮುಂತಾದವರು ಲೇಖನಗಳನ್ನು ಬರೆದಿದ್ದಾರೆ. ಈ ಕೃತಿಗೆ ಕೆ.ಎಂ.ಎಸ್. ರವರು ಬರೆದಿರುವ ಪೀಠಿಕೆ ರೂಪದ ಲೇಖನ ಒಟ್ಟು ಕೃತಿಗೆ ಅಂದರೆ ನಾಟಕಗಳಿಗೆ ಒಂದು ಅದ್ಭುತ ತಾತ್ವಿಕ ನೆಲೆಗಟ್ಟನ್ನು ಒದಗಿಸಿದೆಯನ್ನಬಹುದು. ಹಾಗೆಯೇ ಏಕಾಂಕಗಳ ಆಯ್ಕೆಯಲ್ಲಿಯೂ ಕೂಡ ಇವರ ಒಳನೋಟಗಳನ್ನು ಗುರ್ತಿಸಬಹುದು. ಇಲ್ಲಿ ಕೆ.ಎಂ.ಎಸ್. ರವರ ವಿಶಿಷ್ಟತೆಯನ್ನು ನೋಡಬಹುದು.

ಇತ್ತೀಚೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ 'ಶತಮಾನದ ನಾಟಕ'ವನ್ನು ಕೆ.ಎಂ.ಎಸ್. ರವರು ಸಂಪಾದಿಸಿಕೊಟ್ಟರು. ಈ ಕೃತಿಯಲ್ಲಿ ವಿದ್ವತ್ ಪೂರ್ಣವಾದ ಪೀಠಿಕೆ ಮತ್ತು ಒಂದೊಂದು ನಾಟಕದ ಬಗೆಗೂ ಪ್ರತ್ಯೇಕ ಟಿಪ್ಪಣಿಯನ್ನು ಬರೆದಿದ್ದಾರೆ. ಹೆಚ್ಚು ಚರ್ಚಿಸಬಹುದಾದ ಟಿಪ್ಪಣಿ. ಇಪ್ಪತ್ತನೇ ಶತಮಾನದ ಹದಿನೇಳು ಶ್ರೇಷ್ಠ ನಾಟಕಗಳು ಈ ಕೃತಿಯಲ್ಲಿ ಸ್ಥಾನ ಪಡೆದಿದೆ. ಇದರಿಂದ ಆಯಾ

ನಾಟಕಕಾರರ ಘನತೆಯೂ ಇಲ್ಲಿ ಸೇರ್ಪಡೆಯಾದಂತೆ, ಇದೊಂದು ಬೃಹತ್ ಕೃತಿ. ಒಟ್ಟು 1300 ಪುಟಗಳಷ್ಟಿದೆ. ಇಂಥ ಆಂಥಾಲಜಿಯೊಂದನ್ನು ಸಿದ್ಧಪಡಿಸುವಾಗ ಯಾವುದೇ ಮುಲಾಜಿಗೆ ಒಳಗಾಗದೆ ತಮ್ಮ ದೀರ್ಘಕಾಲದ ರಂಗಭೂಮಿಯ ಸಂಬಂಧ, ಓದು ಮತ್ತು ಚಿಂತನೆಗೆ ಒಂದು ರೂಪಕೊಟ್ಟಿದ್ದಾರೆನ್ನಬಹುದು. ಯಾಕೆಂದರೆ ಇಂಥ ಕೃತಿಯನ್ನು ನೋಡುವಾಗ ಕೇವಲ ರಂಗಭೂಮಿಯ ದೃಷ್ಟಿಯಿಂದ ನೋಡಬಹುದಾಗಿದೆ. ಈ ಕೃತಿ ಬಿಡುಗಡೆಯಾದ ಮೇಲೆ ನಾನಾರೀತಿಯ ವಿಮರ್ಶೆ ಹಾಗೂ ವಾಗ್ವಾದಗಳಿಗೆ ಕಾರಣವಾದರೂ ಕೆ.ಎಂ.ಎಸ್. ರವರು ಒಟ್ಟು ತಮ್ಮ ತಾತ್ವಿಕ ಹಾಗೂ ನಿರ್ದಾಕ್ಷಿಣ್ಯ ದೃಷ್ಟಿಯಿಂದಲೇ ಸ್ವೀಕರಿಸಿದರು. ಈ ಕೃತಿಗೆ ಇರುವ ವಸ್ತು ನಿಷ್ಠತೆ ಬಹಳ ಮುಖ್ಯವಾದದ್ದು. ಎಲ್ಲ ತಲೆಮಾರಿನ ಸಾಮಾಜಿಕ, ಸಾಹಿತ್ಯಕ ಹಾಗೂ ರಂಗಭೂಮಿ ಚಟುವಟಿಕೆಗಳ ಅನನ್ಯತೆ ಇಲ್ಲಿ ಎದ್ದು ಕಾಣುತ್ತದೆ ಎಂಬುದು ಸದಾ ನಾವು ಗಮನಿಸ ಬೇಕಾದ ಅಂಶ.

## ಕೆಲವರ ನೋಟದಲ್ಲಿ ಕೆ.ಎಂ.ಎಸ್.

ಡಾ|| ಕೆ. ಮರುಳಸಿದ್ದಪ್ಪರವರನ್ನು ಕುರಿತು ಬರೆಯುವ ಸಮಯಕ್ಕೆ ಒಂದು ಅಧ್ಯಾಯ ಬೇರೆಯವರ ಅಭಿಪ್ರಾಯಗಳನ್ನು ಸಂಗ್ರಹಿಸುವ ಯೋಚನೆ ಮಾಡಿದೆ. ಅದಕ್ಕಾಗಿ ಕೆಲವು ಹೆಸರುಗಳನ್ನು ಪಟ್ಟಿಮಾಡಿದೆ. ಆ ಪಟ್ಟಿ ಎಡಿಟ್ ಮಾಡಲು ಆಗದಷ್ಟು ದೊಡ್ಡದಾಯಿತು. ಕೊನೆಗೆ ಇದೊಂದು ಅಭಿನಂದನಾ ಗ್ರಂಥ ಆಗಿಬಿಡಬಹುದು ಎಂಬ ಭಯದಿಂದ ಆ ಪಟ್ಟಿಯನ್ನು ನನ್ನ ಕಣ್ಣಿಗೆ ಕಾಣದಂತೆ ಮೂಲೆಯಲ್ಲಿಟ್ಟೆ. ಡಾ|| ಕೆ.ಎಂ.ಎಸ್‌ರವರಿಗೆ ಅರವತ್ತು ವರ್ಷ ತುಂಬಿದ ಸಮಯದಲ್ಲಿ ಕಿ.ರಂ. ನಾಗರಾಜ್, ಟಿ.ಎನ್. ಸೀತಾರಾಂ, ಪ್ರಸನ್ನ ಮತ್ತು ಎಲ್. ಕೃಷ್ಣಪ್ಪ ಹಾಗೂ ನಾನು ಒಂದು ಪುಸ್ತಕ ತರುವ ಯೋಚನೆ ಮಾಡಿದೆವು. ಆದರೆ ನಮ್ಮ ಅಸಂಘಟಿತ ಮನಸ್ಸಿನಿಂದ ಅದು ಈಡೇರಲಿಲ್ಲ. ಅದಕ್ಕಾಗಿ ಅವರನ್ನು ನೋಡಿದಾಗಲೆಲ್ಲ ನೆನಪಿಗೆ ಬಂದು ವಿಷಾದದಿಂದ ಸುಮ್ಮನಾಗುವೆ. 2005 ಜನವರಿ 12ಕ್ಕೆ ಅರವತ್ತೈದು ತುಂಬುವ ಸಮಯಕ್ಕೆ ತರಲು ನಾವು ಗಟ್ಟಿ ಮನಸ್ಸು ಮಾಡಬೇಕಾಗಿದೆ. ಯಾಕೆಂದರೆ ನಮ್ಮ ಸುತ್ತಲೂ ಎಷ್ಟೊಂದು ಕಳಪೆ ಅಭಿನಂದನಾ ಗ್ರಂಥಗಳಿವೆ. ಆಗ ಐದಾರು ಮಂದಿಗೆ ಪತ್ರ ಬರೆದು ಹತ್ತು ಸಾಲಿನಷ್ಟು ಅಭಿಪ್ರಾಯ ಬರೆದು ಕಳಿಸಲು ಕೇಳಿಕೊಂಡೆ. ಅವರಲ್ಲಿ ಡಾ|| ಜಿ.ಆರ್.ರವರು ದೀರ್ಘವಾಗಿಯೇ ಬರೆದು ಕಳಿಸಿದ್ದಾರೆ. ಅವರ ಅಭಿಪ್ರಾಯಗಳಿಗೆ ತೊಂದರೆ ಪಡಿಸದೆ ಪ್ರಕಟಿಸುತ್ತಿರುವೆ.

ಡಾ|| ವಿಜಯಮ್ಮ, ಎಲ್. ಕೃಷ್ಣಪ್ಪ ಮತ್ತು ಹಾ.ಸಾ.ಕೃ.ರವರ ಅಭಿಪ್ರಾಯಗಳನ್ನು ದಾಖಲಿಸುತ್ತಿರುವೆ. ಇದರ ಜೊತೆಗೆ ಕನ್ನಡ ರಂಗಭೂಮಿಯ ಮಹತ್ವಪೂರ್ಣ ಕೃತಿಯಾದ 'ಆಧುನಿಕ ಕನ್ನಡ ರಂಗಭೂಮಿ'ಗೆ ಬಿ.ವಿ. ಕಾರಂತರು ಹಾಗೂ ಪ್ರಸನ್ನರವರು ಬರೆದ ಬ್ಲರ್ಬನ್ನು ಈ ಅಧ್ಯಾಯಕ್ಕೆ ತೆಗೆದುಕೊಂಡಿದ್ದೇನೆ. ಇದಕ್ಕೆ ಮುಖ್ಯಕಾರಣ ಕಳೆದ ಎರಡು ಮೂರು ದಶಕಗಳಿಂದ ಇವರು ಕೆ.ಎಂ.ಎಸ್. ರವರನ್ನು ತುಂಬ ಹತ್ತಿರದಿಂದ ಬಲ್ಲವರು. ಅವರ ವ್ಯಕ್ತಿತ್ವ ಎಂಥದ್ದು ಮತ್ತು ಕನ್ನಡ ರಂಗಭೂಮಿಯ ಸಂದರ್ಭದಲ್ಲಿ ಅವರ ನಿರ್ಣಾಯಕ ಪಾತ್ರ ಏನು ಎಂಬುದನ್ನು ಚೆನ್ನಾಗಿ ಅರಿತವರು. ಇಲ್ಲಿ ರಂಗಭೂಮಿ ಮಾತ್ರವಲ್ಲ ಬೇರೆ ಬೇರೆ ಸಂದರ್ಭಗಳಲ್ಲಿ ಕಾರ್ಯಕ್ರಮಗಳನ್ನು ರೂಪಿಸುವ ಸಮಯದಲ್ಲಿಯೂ ಕೆ.ಎಂ.ಎಸ್.ರವರ ಅಭಿಪ್ರಾಯ ಮಂಡನೆಯನ್ನು ತಿಳಿದವರು. ಅವರ ವ್ಯಕ್ತಿತ್ವದ ವಿವಿಧ ಮುಖಗಳನ್ನು ನೋಡಿರುವುದರಿಂದ ಇದೊಂದು ಭಿನ್ನ ರೀತಿಯ ದಾಖಲಾಗಲಿ ಎಂಬುದೇ ನನ್ನ ಆಶಯ.

### ಕೆ.ಎಂ.ಎಸ್.

ಕೆ.ಎಂ.ಎಸ್. ಅವರನ್ನು ಸುಮಾರು ಮೂವತ್ತು ವರ್ಷಗಳಿಂದ ನೋಡುತ್ತಿದ್ದೇನೆ. ಅವರು ದೂರ... ಹಾಗೇ ಬಹು ಹತ್ತಿರಾ. ಯಾವುದನ್ನೂ 'ಅತಿ' ಮಾಡದ ಸ್ವಭಾವದಿಂದಾಗಿ ಅತಿ ಸಾಮೀಪ್ಯ ಎಲ್ಲರಿಗೂ ಸಾಧ್ಯವಾಗುವುದಿಲ್ಲ.

ಅಗತ್ಯವಿದ್ದ ಕಡೆ ಅವರು ಇರುತ್ತಾರೆ. ಎಷ್ಟು ಬೇಕೋ ಅಷ್ಟು ಕೆಲಸ ಮಾಡುತ್ತಾರೆ. ಆಗ ಮಾತ್ರ ಅವರು ಮಾತನಾಡುತ್ತಾರೆ. ಕರಾರುವಾಕ್. ಹೆಚ್ಚು-ಕಡಿಮೆ ಆಗುವುದೇ ಇಲ್ಲ. ಚಿನಿವಾರ ಚಿನ್ನ ತೂಗಿದ ಹಾಗೆ ಅವರ ಮಾತು, ಕೆಲಸ, ಸ್ನೇಹ ಎಲ್ಲ. ಇವೆಲ್ಲದರ ಹಿಂದೆ ಜನರಿಗೆ

ಪ್ರಿಯವಾಗುವಂಥ ನಡವಳಿಕೆ ಇರುತ್ತದೆ. ಅದರಿಂದಲೇ ಅವರ ಹತ್ತಿರ ಒಳ್ಳೆಯದು, ಅರ್ಥಪೂರ್ಣವಾದ್ದು ಚರ್ಚೆ ಆಗುತ್ತೆ ; ಕಾಡು ಹರಟೆ, ಗಾಸಿಪ್ ಗಾವುದ ದೂರ ಓಡಿ ಹೋಗುತ್ತೆ.

ರಂಗ ನಾಟಕಕ್ಕೆ ಭರಾಟೆ ನಡೆದ ಹೊತ್ತಿನಲ್ಲಿ ಅದಕ್ಕೊಂದು ಸಿದ್ಧಾಂತ-ಗುರುತು ಕೊಡುತ್ತಿದ್ದ ಕಾಲದಲ್ಲಿ ಪುಟ್ಟಪ್ರಮಾಣದಲ್ಲಿ ಕಂಡರೂ ಆಂತರ್ಯದಲ್ಲಿ ಗಟ್ಟಿಯಾದ್ದು, ನಮ್ಮ ಬದುಕು ಅನ್ನಿಸುವಂಥ ನಾಟಕ ಬರೆಯುತ್ತಿದ್ದ ಟಿ.ಎನ್. ಸೀತಾರಾಂ ನೇಪಥ್ಯಕ್ಕೆ ಸರಿಯುವ ಅಪಾಯದಿಂದ ತಪ್ಪಿಸಿ ಅದೊಂದು ಮುಖ್ಯ ವಿಧಾನವೆಂದು ಪ್ರತಿಪಾದಿಸುತ್ತ ಬಂದರು. ಬೀದಿಯ ನಾಟಕವೆಂದರೆ ರಸ್ತೆಯ ಕುಣಿತ, ವೈಯುಕ್ತಿಕ ತೆವಲು ಎಂದವರೆದರು ಅದೊಂದು ಪರಿಗಣಿಸಬೇಕಾದ ಗಂಭೀರ ಮಾಧ್ಯಮ. ಆದರಿಸುವ ತುರ್ತು ಇದೆ. ಎಂದು ಎತ್ತಿ ಹಿಡಿದರು.

ಸ್ತ್ರೀ ಪರ ನಿಲವುಗಳನ್ನು ಲೇವಡಿ ಮಾಡುತ್ತಿದ್ದವರ ಬಾಯಿ ಮುಚ್ಚಿಸಿ ಪ್ರಗತಿಪರರ ಒಳಗೂ ಇರಬಹುದಾದ ಪುರುಷಪ್ರಧಾನ ಮನಸ್ಸನ್ನು - ಅದು ಹೊತ್ತು ತರುವ ಅಪಾಯವನ್ನು ಕುರಿತು ಮುಕ್ತವಾಗಿ ಚರ್ಚಿಸಿದರು. ಇಂಥ ಸಂಗತಿಗಳಿಗೆ ತಮ್ಮ ಆಂತರ್ಯವನ್ನೇ ನಿಕಷಕ್ಕಿಡಲು ತೆರೆದುಕೊಂಡರು.

ವಿರೋಧಿಸುವವರೆದುರು ಮೌನಿಯಾದರು. ವ್ಯಕ್ತಿಗಳ ವಿರುದ್ಧ ಅವರು ತಮ್ಮನ್ನೇ ಉಗ್ರರಾಗುವುದು ಅಂಥ ವ್ಯಕ್ತಿತ್ವವನ್ನು ಕಟ್ಟುತ್ತಿರುವುದರ ವ್ಯವಸ್ಥೆಗಳ ವಿರುದ್ಧ. ಯಾವುದೇ ವ್ಯವಸ್ಥೆಯಾದರೂ ಹುಳುಕುಗಳು ಕಂಡಾಗ ಮುಲಾಜಿಲ್ಲದೆ ಟೀಕಿಸಿದರು. ಜನ ವಿರೋಧಿ ನೀತಿ, ಜಾತಿ ರಾಜಕೀಯ, ಕೋಮುಗಲಭೆಯಂಥ ಸಂಗತಿಗಳಿಗೆ ಅವರು ಸ್ಪಂದಿಸುವ ರೀತಿಯೇ ವಿಶೇಷ. ಅದಕ್ಕಾಗಿ ಸಂಘಟಿಸುತ್ತಾರೆ ಮುಂಚೂಣಿಗೆ ಬರುತ್ತಾರೆ ; ಎಂಥ ರಿಸ್ಕ್‌ಗೂ ಎದೆಯೊಡ್ಡುತ್ತಾರೆ. ಇಲ್ಲಿ ಪಕ್ಷ ಋಣ ಇರುವುದಿಲ್ಲ, ಕೆ.ಎಂ.ಎಸ್. ಹೇಳಿದ್ದಾರೆ. ಅದು ಅಂತಿಮ ನಿರ್ಧಾರ. ಸರ್ವರಿಗೂ ಒಪ್ಪಿತ ಎಂಬುದೊಂದು ನಮ್ಮ ವಲಯಗಳ ಅಘೋಷಿತ ನಿಲುವು.

***- ಡಾ|| ವಿಜಯಾ***

## ಅವರೊಬ್ಬ ರಂಗಗೆಳೆಯ

ಸಾಹಿತ್ಯ ತಿಳಿದವರ ನಂಟಿಲ್ಲದೆ ರಂಗಭೂಮಿ ಬೆಳೆಯುವುದಿಲ್ಲ. ಒಂದು ವೇಳೆ ಬೆಳೆದರೂ ಅದು ಸಂವೇದನಾಶೀಲ ರಂಗಭೂಮಿ ಎನಿಸಿಕೊಳ್ಳುವುದು ಕಷ್ಟ. ರಂಗಭೂಮಿ ತನ್ನ ಹರಹು ಆಳಗಳನ್ನು ದೊರಕಿಸಿಕೊಳ್ಳಲು ಈ ನಂಟು ಅಗತ್ಯ.

ರಂಗಭೂಮಿ 70ರ ದಶಕದಲ್ಲಿ ಅನಾಯಾಸವಾಗಿ ಪಡೆದುಕೊಂಡ ಈ ನಂಟು ಅಗಾಧವಾದ್ದು. ಅದರಲ್ಲಿ ಡಾ||ಮರುಳಸಿದ್ದಪ್ಪನವರೂ ಒಬ್ಬರು. ಅಂದಿನಿಂದ ಇಂದಿನವರೆಗೂ ಮರುಳಸಿದ್ದಪ್ಪನವರು ತಮ್ಮ ನಂಟನ್ನು ವೃದ್ಧಿಗೊಳಿಸುತ್ತ, ಬಲಗೊಳಿಸುತ್ತ ಬಂದಿರುತ್ತಾರೆ. ಬಿಕ್ಕಟ್ಟಿನ ಸಂದರ್ಭಗಳಲ್ಲಿ ನೆರವಾಗಿದ್ದಾರೆ. ಕೆಲವು ಸಲವಾದರೂ ಓರೆ ಕೋರೆಗಳನ್ನು ಸರಿಪಡಿಸಿರುತ್ತಾರೆ. ಇದಲ್ಲದೆ ಹಲವು ದಶಕಗಳ ಚಟುವಟಿಕೆಯನ್ನು ಪ್ರಯೋಗಗಳನ್ನು ಸತತವಾಗಿ ತಮ್ಮ ಸೂಕ್ಷ್ಮಕಣ್ಣಿನಿಂದ ವೀಕ್ಷಿಸಿ, ನಾಟಕ ಸಾಹಿತ್ಯ, ಪ್ರಯೋಗಸೂಕ್ಷ್ಮತೆಗಳ ಬಗ್ಗೆ ಬರೆದು ಅಧ್ಯಯನಕ್ಕೆ

ರಂಗಭೂಮಿಯ ಆರೋಗ್ಯಕರ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿದ್ದಾರೆ. ಅನುವಾದಕ್ಕೆ ಅರ್ಹವಾದ ಕೆಲವು ನಾಟಕಗಳ ಅನುವಾದವನ್ನು ಮಾಡಿ ಕನ್ನಡ ರಂಗಭೂಮಿಯ ಸಂಪನ್ಮೂಲವನ್ನು ಹೆಚ್ಚಿಸಿದ್ದಾರೆ.

ಮರುಳಸಿದ್ದಪ್ಪನವರು ನಟರಲ್ಲದಿರಬಹುದು. ನಿರ್ದೇಶಕರಲ್ಲದಿರಬಹುದು. ನಿಜವಾದ ಅರ್ಥದಲ್ಲಿ ಅವರೊಬ್ಬ ರಂಗ ಗೆಳೆಯ. ಹಾಗೇ ರಂಗಗೆಳೆಯರಿಗೂ ಗೆಳೆಯ.

- ಹಾಸಾಕೃ

## ಪ್ರಬುದ್ಧ ವ್ಯಕ್ತಿತ್ವವುಳ್ಳ ಡಾ|| ಕೆ.ಎಂ.ಎಸ್.

ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗದ ನಿರ್ದೇಶಕರಾಗಿ ಡಾ||ಕೆ.ಮರುಳಸಿದ್ದಪ್ಪನವರು ಆ ವಿಭಾಗಕ್ಕೆ ನವಚೈತನ್ಯವನ್ನು ತಂದುಕೊಟ್ಟರು. ಅದಕ್ಕೆ ಮುಂಚಿನಿಂದಲೂ ನನಗೆ ಅವರ ಪರಿಚಯವಿತ್ತಾದರೂ ಅವರು ಪ್ರಸಾರಾಂಗದ ಚಟುವಟಿಕೆಗಳನ್ನು ಅರ್ಥಪೂರ್ಣವಾಗಿ ವಿಸ್ತರಿಸುವ ಯೋಜನೆಗಳನ್ನು ರೂಪಿಸುತ್ತಿದ್ದಾಗ ಅವರನ್ನು ಹತ್ತಿರದಿಂದ ನೋಡುವ ಅವಕಾಶ ದೊರೆಯಿತು. ಯಾಂತ್ರಿಕವಾಗಿ ಕೆಲವು ನಿಗದಿತ ಕಾರ್ಯಕ್ರಮಗಳನ್ನು ಮಾತ್ರವೇ ಹಮ್ಮಿಕೊಳ್ಳುತ್ತಿದ್ದ ಪ್ರಸಾರಾಂಗ ಡಾ||ಕೆ.ಎಂ.ಎಸ್.ಅವರ ನೇತೃತ್ವದಲ್ಲಿ ಬಹುಮುಖವಾಗಿ ಕ್ರಿಯಾಶೀಲವಾಯಿತು. ನಿಖಿಲ್ ಚಕ್ರವರ್ತಿ, ದೇವಿಪ್ರಸಾದ ಚಟ್ಟೋಪಾಧ್ಯಾಯ, ಮುಂತಾದ ಪ್ರಮುಖ ಚಿಂತನಕಾರರನ್ನು ಕರೆಯಿಸಿ ಬೆಂಗಳೂರಿನ ಸಾರ್ವಜನಿಕರಿಗೆ ಅವರ ವಿದ್ವತ್ತಿನ ಪರಿಚಯವಾಗುವಂತೆ ಕಾರ್ಯಕ್ರಮಗಳನ್ನು ಸಂಯೋಜಿಸಿದ ಕೀರ್ತಿ ಮರುಳಸಿದ್ದಪ್ಪನವರಿಗೆ ಸಲ್ಲುತ್ತದೆ.

ಮೃದುಭಾಷಿಗಳಾದ ಡಾ||ಕೆ.ಎಂ.ಎಸ್. ಅಗತ್ಯಬಿದ್ದಾಗ ಮೊನಚಿನ ಮಾತುಗಳನ್ನಾಡುವುದನ್ನು ಅನೇಕ ವಿದ್ವದ್ಗೋಷ್ಠಿಗಳಲ್ಲಿ ನಾನು ನೋಡಿದ್ದೇನೆ. ನಿಖರವಾದ ಪ್ರತಿಪಾದನೆ ಮಾಡದಿದ್ದವರಿಗೆ ಅವರ ವಿಮರ್ಶೆ ಕಟುವಾಗಿ ತೋರಬಹುದು. ಆದರೆ ಡಾ||ಕೆ.ಎಂ.ಎಸ್.ಅವರ ಉದ್ದೇಶ ಯಾರನ್ನಾದರೂ ಟೀಕಿಸುವುದಾಗಿರುವುದಿಲ್ಲ. ಅವರಿಗೆ ವಿಷಯದ ಬಗೆಗಿನ ಖಚಿತತೆ ಮತ್ತು ಆಮೂಲಾಗ್ರ ತಿಳುವಳಿಕೆ ಮುಖ್ಯವಾಗಿರುತ್ತದೆ. ಅವರ ಆಸಕ್ತಿಗಳು ಹಲವು. ಅವುಗಳಲ್ಲಿ ಕೆಲವು ನನಗೂ ಆಸಕ್ತಿಯ ಕ್ಷೇತ್ರಗಳಾಗಿರುವದರಿಂದ ಅನೇಕ ವೇಳೆ ನಾವು ಜೊತೆಯಾಗಿ ಕೆಲಸ ಮಾಡಿದ್ದೇವೆ. ಮತೀಯ ದ್ವೇಷವನ್ನು ಬಂಡವಾಳವನ್ನಾಗಿ ಮಾಡಿಕೊಂಡು ಕುತ್ಸಿತ ಮಟ್ಟದ ರಾಜಕೀಯ ಮಾಡುವವರ ಬಗ್ಗೆ ನಮಗಿಬ್ಬರಿಗೂ ಸಮಾನವಾದ ಜುಗುಪ್ಸೆ ಇರುವುದರಿಂದ ಸಹಜವಾಗಿಯೇ ಸಭೆ, ಪ್ರತಿಭಟನೆ, ಮೆರವಣಿಗೆ, ಮುಂತಾದುವುಗಳ ಮುಖಾಂತರ ನಾವು ಜೊತೆಯಲ್ಲಿ ಪ್ರತಿರೋಧ ವ್ಯಕ್ತಪಡಿಸಿದ್ದೇವೆ. ಸಂಸ್ಕೃತಿಯ ಹೆಸರಿನಲ್ಲಿ ಅದಕ್ಕೆ ಅಪಚಾರ ಬಗೆಯುವವರನ್ನು ತೀವ್ರವಾಗಿ ವಿರೋಧಿಸುವುದು, ಅಂತಹ ಪ್ರಕ್ರಿಯೆಯನ್ನು ತಡೆಗಟ್ಟುವುದು, ಜನಪರ ಕ್ರಿಯಾಶೀಲತೆಯೆಂದು ಡಾ||ಕೆ.ಎಂ.ಎಸ್.ಅಚಲವಾಗಿ ನಂಬಿ ಕಾರ್ಯಪ್ರವೃತ್ತರಾಗಿರುವುದು ಅವರ ವ್ಯಕ್ತಿತ್ವದ ಘನತೆಗೆ ಇಂದು ಜೀವಂತ ಸಾಕ್ಷಿ. ವಿದ್ವತ್ತನ್ನು ಗಳಿಸುವುದಷ್ಟೇ ಪ್ರಾಧ್ಯಾಪಕರೊಬ್ಬರ ಕರ್ತವ್ಯ, ಅಧ್ಯಾಪನವಷ್ಟೇ. ನಮ್ಮಲ್ಲಿ ಬೇಕಾದಷ್ಟು ಮಂದಿ

ಇದ್ದಾರೆ. ವಿದ್ವತ್ತು, ಸಂಶೋಧನಾಪಟುತ್ವ ಮತ್ತು ಶ್ರೇಷ್ಠಮಟ್ಟದ ಅಧ್ಯಾಪನ ಕ್ರಮ, ಇವು ಮೂರೂ ಡಾ||ಮರುಳಸಿದ್ದಪ್ಪನವರಲ್ಲಿ ಚೆನ್ನಾಗಿ ಸಂಮಿಳಿತವಾಗಿವೆ, ನಿಜ, ಆದರೆ ಅದರಾಚೆಗೂ ಅವರ ಚಿಂತನೆ ಮತ್ತು ಕ್ರಿಯೆಯ ವ್ಯಾಪ್ತಿ ಹರಡಿದೆ. ಅವರ ವ್ಯಕ್ತಿತ್ವದ ಮೆರುಗನ್ನು ಇದು ದ್ವಿಗುಣಗೊಳಿಸಿದೆ. ಯಾವುದೇ ಸಾರ್ವಜನಿಕ ವೇದಿಕೆಯಲ್ಲಿ ನ್ಯಾಯಯುತ ಹೋರಾಟಗಳಲ್ಲಿ ಭಾಗವಹಿಸಲು ಹಿಂಜರಿಯದಿರುವುದು ಅವರ ವಿಶಿಷ್ಟ ಗುಣ. ವಯಸ್ಸಿನಲ್ಲಿ ಅವರಿಗಿಂತ ಕಿರಿಯರನೇಕರು ವಿಶ್ವವಿದ್ಯಾಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ ಬೋಧಕರಾಗಿದ್ದಾರೆ. ಅವರೆಲ್ಲಾ ಡಾ||ಕೆ.ಎಂ.ಎಸ್.ಅವರಿಂದ ಕಲಿಯಬೇಕಾದ ಪಾಠವೆಂದರೆ ವಿದ್ವತ್ತನ್ನು ಮೈಗೂಡಿಸಿಕೊಳ್ಳುವುದರ ಜೊತೆಗೆ ಸಾರ್ವಜನಿಕವಾಗಿ ನಿಲುವುಗಳನ್ನು ತೆಗೆದುಕೊಳ್ಳುವುದು ಮತ್ತು ಅವಕ್ಕೆ ಬದ್ಧರಾಗಿ ಚಳುವಳಿಗಳಲ್ಲಿ ನೇರವಾಗಿ ಭಾಗವಹಿಸುವುದು. ಪ್ರತಿಭಟನೆಗಳನ್ನು ರೂಪಿಸುವುದರಲ್ಲಿ ಸಹ ಡಾ|| ಕೆ.ಎಂ.ಎಸ್.ಅವರ ಕೊಡುಗೆ ಅನನ್ಯವಾದ್ದು ಮಾದರಿ ಸ್ವರೂಪದ್ದು.

ವಿಶ್ವವಿದ್ಯಾನಿಲಯಗಳ ಎಷ್ಟೋ ಪ್ರಾಧ್ಯಾಪಕರು ತರಗತಿಗಳಿಗೆ ಹೋಗಿ ಪಾಠ ಹೇಳುವುದರಲ್ಲಿ ಅಪಾರ ನಿಷ್ಠೆಯನ್ನೇನೂ ತೋರುವುದಿಲ್ಲ. ಆದರೆ ಡಾ||ಕೆ.ಎಂ.ಎಸ್. ಇದಕ್ಕೆ ಹೊರತಾದವರೆಂಬುದನ್ನು ಅವರ ನೂರಾರು ವಿದ್ಯಾರ್ಥಿಗಳು ಹೇಳುವುದನ್ನು ಕೇಳಿದ್ದೇನೆ. ಇದೊಂದು ಹೆಮ್ಮೆಯ ವಿಚಾರ. ಬೇರೆಲ್ಲಾ ಕೆಲಸಗಳಲ್ಲಿ ತೊಡಗುವಾಗ ತಮ್ಮ ಆದ್ಯ ಕರ್ತವ್ಯವನ್ನು ಕಡೆಗಣಿಸದಿರುವುದು ಅಧ್ಯಾಪಕರಿಗೆ ಶ್ರೇಯಸ್ಕರವಾದ್ದು. ಆ ಸಂಪ್ರದಾಯವನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದಿರುವ ಡಾ||ಕೆ.ಎಂ.ಎಸ್. ಅಭಿನಂದನೀಯರು, ಬೇರೆಯವರಿಗೆ ಮಾರ್ಗದರ್ಶಿಯಂತಿರುವವರು.

''ಹೊಸತು'' ಪತ್ರಿಕೆಯ ಸಮಲೋಚಕ ಮಂಡಲಿಯ ಸದಸ್ಯರಾಗಿ ಡಾ||ಮರುಳಸಿದ್ದಪ್ಪನವರು ಪತ್ರಿಕೆ ಆರಂಭವಾದಾಗಿನಿಂದ ಸಕ್ರಿಯ ಸಹಕಾರ ನೀಡುತ್ತಾ ಬಂದಿರುವುದನ್ನು ನಾನು ಕೃತಜ್ಞತೆಯಿಂದ ನೆನೆಯಬೇಕು. ನಮ್ಮ ಎಲ್ಲ ಸಂಚಿಕೆಗಳ ಅವಲೋಕನ ಮಾಡಿ ಆಗಿಂದಾಗ್ಗೆ ವಸ್ತುನಿಷ್ಠ ವಿಮರ್ಶೆ ನೀಡುವುದು, ಸಮಯೋಚಿತ ಸಲಹೆ ನೀಡುವುದು, ಸ್ವತಃ ಲೇಖನಗಳನ್ನು ಬರೆದು ಪತ್ರಿಕೆಗೆ ಮೌಲಿಕವಾಗಿ ಮಹತ್ವವನ್ನು ಹೆಚ್ಚಿಸುವುದು, ಇತರರಿಂದ ಲೇಖನಗಳನ್ನು ಪಡೆಯಲು ಸಹಕರಿಸುವುದು, ಇವೆಲ್ಲಾ ಪತ್ರಿಕೆಯ ಮುನ್ನಡೆಗೆ ಅವರ ಕಾಣಿಕೆಯಾಗಿದೆ. ''ಸಮುದಾಯ'' ಎಂಬ ಸಾಂಸ್ಕೃತಿಕ ಸಂಘಟನೆಯ ಅಧ್ಯಕ್ಷರಾಗಿ ಅವರು ಬಹುವಿಧಗಳಲ್ಲಿ ಆ ಸಂಸ್ಥೆಯ ಏಳಿಗೆಗಾಗಿ ಶ್ರಮಿಸಿದ್ದಾರೆ, ತನ್ಮೂಲಕ ಅವರ ಸಾಂಸ್ಕೃತಿಕ ತುಡಿತಗಳನ್ನು ಅಭಿವ್ಯಕ್ತಿಸಿದ್ದಾರೆ. ಅವರ ಪ್ರವಾಸ ಕಥನಗಳಲ್ಲಿ ಕೂಡ ಇಂತಹ ಒಲವುಗಳನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ನಮ್ಮ ರಾಜ್ಯದ ಬೌದ್ಧಿಕ ವಲಯಗಳಲ್ಲಿ ಸುವಿಖ್ಯಾತರಾದ ಡಾ||ಕೆ.ಎಂ.ಎಸ್. ವಿಶ್ವವಿದ್ಯಾನಿಲಯಗಳಲ್ಲಿ ಇನ್ನೂ ಹೆಚ್ಚಿನ ಜವಾಬ್ದಾರಿಗಳನ್ನು ನಿರ್ವಹಿಸಲು ಸಮರ್ಥರಿರುತ್ತಿದ್ದರು ; ಆದರೆ ಸರ್ಕಾರದ ದೃಷ್ಟಿ ಇವರತ್ತ ಬೀಳಲಿಲ್ಲ. ಆದರಿಂದ ಡಾ||ಮರುಳಸಿದ್ದಪ್ಪನವರು ಬೇಸರಪಟ್ಟುಕೊಳ್ಳುವ ಸ್ವಭಾವದವರಲ್ಲ. ಏನಾದರೂ ಮಾಡಿ ಎಲ್ಲವನ್ನು ದಕ್ಕಿಸಿಕೊಂಡು ಬಿಡಬೇಕೆಂದು ಪೈಪೋಟಿ ನಡೆಸುವವರು ಹೇರಳವಾಗಿರುವಾಗ ಡಾ||ಕೆ.ಎಂ.ಎಸ್.ರವರಂತೆ ಸ್ಥಿತ ಪ್ರಜ್ಞರಾಗಿರುವವರು ವಿರಳ. ಅದೇ ಅವರ ವೈಶಿಷ್ಟ್ಯ. ಆದರಿಂದಲೇ ಅವರು ಎಲ್ಲರಿಗೂ ಆತ್ಮೀಯರು, ಗೌರವಾನ್ವಿತರು.

– ***ಡಾ|| ಜಿ.ರಾಮಕೃಷ್ಣ***

## ಅತ್ಯಂತ ಲಿಬರಲ್ ವ್ಯಕ್ತಿತ್ವ

ಕೆ.ಎಂ.ಎಸ್.ರವರು ನನ್ನಂಥ ಬಹುಪಾಲು ಮಂದಿಗೆ ನಾಟಕದ ಒಳನೋಟಗಳನ್ನು ವಿಸ್ತರಿಸಿದವರು. ಯಾಕೆಂದರೆ ನಾನು ಸಾಹಿತ್ಯ, ಸಂಸ್ಕೃತಿ ಮತ್ತು ರಂಗಭೂಮಿಯ ಯಾವುದೇ ರೀತಿಯ ಹಿನ್ನೆಲೆಯಿಲ್ಲದ ವಾತಾವರಣದಿಂದ ಬಂದವನು. ಅದರಲ್ಲೂ ಅರವತ್ತು ಮತ್ತು ಎಪ್ಪತ್ತರ ದಶಕದ ದಿನಗಳು ಅಸಂಗತ ನಾಟಕಗಳ ಹೊಸ ಹೊಸ ಸಾಧ್ಯತೆಗಳ ಕಾಲಘಟ್ಟ ಲಂಕೇಶ್, ಗಿರೀಶ್ ಕಾರ್ನಾಡ್, ಬಿ.ವಿ.ಕಾರಂತರು ಇವರನ್ನೆಲ್ಲ ಅರ್ಥೈಸುವ ರೀತಿಯಲ್ಲಿ ಕೆ.ಎಂ.ಎಸ್.ರವರು ಕೆಲಸಮಾಡಿದ್ದಾರೆ. ನನ್ನಂಥವನು ಪರ್ವತವಾಣಿ ಮತ್ತು ಗುಂಡಣ್ಣ ಅಂಥವರೇ ದೊಡ್ಡ ನಾಟಕಕಾರರು ಎಂದು ತಿಳಿದಿದ್ದ ಸಮಯದಲ್ಲಿ ಅವರಿಂಗಿಂತ ಮೀರಿದ ನಾಟಕಕಾರರಿದ್ದಾರೆ ಎಂದು ತಿಳಿಯಲು ತೊಡಗಿದ್ದು ರಂಗಭೂಮಿಯ ಜೊತೆ ಬಿ.ವಿ.ಕಾರಂತರ ಮೂಲಕ ಹೆಚ್ಚು ಸಂಪರ್ಕವಿಟ್ಟು ಕೊಂಡಾಗ. ಅಂದಿನಿಂದ ಇಂದಿನವರೆವಿಗೂ ನನ್ನ ತಿಳಿವಿನ ಮಟ್ಟಿಗೆ ಕನ್ನಡ ರಂಗಭೂಮಿ ಪಡೆದ ದೊಡ್ಡ ಚಿಂತಕ ಕೆ.ಎಂ.ಎಸ್.

ಇವರು ಹವ್ಯಾಸಿ ರಂಗಭೂಮಿಯಲ್ಲಿ ಅದ್ಭುತ ಕೆಲಸವನ್ನು ಮಾಡಿದ ಪ್ರತಿಮಾನಾಟಕರಂಗದಂಥ ಸಂಸ್ಥೆಯನ್ನು ನನ್ನ ಕೈಗೆ ಕೊಟ್ಟರು. ಅವರು ಅಧ್ಯಕ್ಷರಾಗಿದ್ದಾಗ ನಾಟಕ ಅಕಾಡೆಮಿಯ ಒಂದೊಂದು ರೀತಿಯ ಕಾರ್ಯಕ್ರಮದ ಸ್ವರೂಪವನ್ನು ವಿಸ್ತರಿಸಿದರು. ಕರ್ನಾಟಕ ನಾಟಕ ಅಕಾಡೆಮಿ ಕಂಡ ಅತ್ಯಂತ ಡೆಮಾಕ್ರಟಿಕ್ ಆದ ಅಧ್ಯಕ್ಷರು. ನಾವು ಇಂಥವರ ಜೊತೆಯಲ್ಲಿ ಕೆಲಸ ಮಾಡಿದೆವು ಎಂಬುದೇ ಒಂದು ಸಂತೋಷದ ಸಂಗತಿ. ಎಂಥ ಸಮಯದಲ್ಲಿಯೂ ತಾಳ್ಮೆಯನ್ನು ಕಳೆದುಕೊಳ್ಳದೆ ಕೆಲಸಮಾಡಿಸುವಂಥವರು. ಹಾಗೆಯೇ ಏನೇ ಕೆಲಸಮಾಡಿಸಿದರೂ ಅದಕ್ಕೊಂದು ಸಮತೂಕವನ್ನು ತಂದುಕೊಡುತ್ತಿದ್ದವರು. ರಂಗಭೂಮಿಯಲ್ಲಿ ಏನೇ ಕೆಲಸಗಳಾಗಬೇಕಾದರೂ ಅದರ ಮುಂದಾಳತ್ವವನ್ನು ವಹಿಸುತ್ತಿದ್ದರು. ನಮ್ಮ ನಡುವೆ ಇಂಥವರು ಇದ್ದಾರೆಯೆನ್ನುವುದೇ ಸಂಭ್ರಮಪಡಬೇಕಾದ ವಿಷಯ.

- ಎಲ್.ಕೃಷ್ಣಪ್ಪ

ಆಧುನಿಕ ಕನ್ನಡ ನಾಟಕಗಳ ಬಗ್ಗೆ ಡಾ||ಮರುಳಸಿದ್ದಪ್ಪನವರ ಅಭಿಪ್ರಾಯಗಳಿಗೆ ಬೆಲೆ ಬರುವುದು ವಿದ್ವತ್ತಿನೊಟ್ಟಿಗೆ ಮಿಳಿತವಾಗಿರುವ ರಂಗಭೂಮಿಯ ಹತ್ತಿರದ ಒಡನಾಟದಿಂದಾಗಿ. ಮೂರು ದಶಕಗಳಲ್ಲಿ ನಾಟಕರಂಗದಲ್ಲಾದ ಪ್ರಮುಖ ಬೆಳವಣಿಗೆಗೆ ಸಾಕ್ಷಿ ಅವರು. ಅನೇಕವುಗಳಿಗೆ ಪೂರಕವೂ ಹೌದು. ಎಸ್ಲಿನ್, ಬೆಂಟ್ಲಿ ಮೊದಲಾದ ಬ್ರಿಟಿಷ್ ವಿಮರ್ಶಕರಲ್ಲಿ ಗುರುತಿಸಲಾಗುವ ಈ ಗುಣ ಕನ್ನಡ ವಿಮರ್ಶಕರಲ್ಲಿ ಅಪರೂಪ : ಎಂದೇ ಈ ಪುಸ್ತಕಕ್ಕೆ ಮಹತ್ವ ಬಂದಿದೆ.

- ಪ್ರಸನ್ನ

ಡಾ||ಕೆ.ಮರುಳಸಿದ್ದಪ್ಪನವರ 'ಆಧುನಿಕ ಕನ್ನಡ ನಾಟಕ'ದಂತಹ ವಿಮರ್ಶಾತ್ಮಕ ಐತಿಹಾಸಿಕ ವಿಶ್ಲೇಷಣೆಗಳನ್ನೊಳಗೊಂಡ ಬೃಹತ್ ಗ್ರಂಥ ಮೂರು ಮುದ್ರಣಗಳನ್ನು ಕಾಣುತ್ತಿದೆಯೆಂದರೆ ಅಶ್ಚರ್ಯದ ಜೊತೆಗ ತುಂಬಾ ಸಂತೋಷವಾಗುತ್ತದೆ.

ನಾಟಕ ಹಾಗು ರಂಗಭೂಮಿ ತುಂಡರಿಸಲಾಗದಂತಹ ಅಭಿನ್ನ ಮಾಧ್ಯಮಗಳು. ಆದರೆ ಇವತ್ತು ಈ 'ಅಭಿನ್ನ'ದಲ್ಲೂ ಕಂದರ ಕಾಣುತ್ತಿದೆ. ಈ ಕಂದರದ ಅಪಾಯವನ್ನು ಇವರು ಚೆನ್ನಾಗಿ ಮನಗಂಡಿದ್ದಾರೆ. ಇಲ್ಲಿರುವ ಇತಿಹಾಸ ಓದಿದಾಗ ಇಂದಿನ ಒಬ್ಬ ನಿರ್ದೇಶಕನಿಗೆ, ನಾಟಕಕಾರನಿಗೆ, ರಂಗಸಾಹಿತ್ಯದ ಸಂಪೂರ್ಣ ಪರಿಪ್ರೇಕ್ಷ್ಯ ಲಭಿಸುತ್ತದೆ. ಕನ್ನಡ ರಂಗಭೂಮಿಯ ಓರೆಕೋರೆಗಳನ್ನು ಏರುತಗ್ಗುಗಳನ್ನು ಸ್ವಾನುಭವದಿಂದ ಮನಗಂಡಿರುವ ಡಾ||ಮರುಳಸಿದ್ದಪ್ಪನವರ ಈ ಕೃತಿ ರಂಗಭೂಮಿಯ ಸಾಧ್ಯತೆಗಳನ್ನು ಹುಡುಕುವವರಿಗೆ ಒಂದು ಸಿದ್ಧ ಕೈಪಿಡಿಯಾಗಿ ಪರಿಣಮಿಸಿದೆ.

- ಬಿ.ವಿ.ಕಾರಂತ

# ಪಕ್ಷಾಂತರದ ಅವಾಂತರ

ಮಾನ್ಯರೆ,

ಸಮಕಾಲೀನ ಭಾರತದಲ್ಲಿ ತತ್ವರಹಿತ ರಾಜಕಾರಣವು ಎಂತಹ ಪರಾಕಾಷ್ಠೆ ಮುಟ್ಟಿದೆ ಎಂಬುದಕ್ಕೆ ಕಳೆದ ಒಂದೆರಡು ತಿಂಗಳಿನಿಂದ ನಡೆಯುತ್ತಿರುವ ಪಕ್ಷಾಂತರಗಳು ಕನ್ನಡಿ ಹಿಡಿಯುವಂತಿವೆ.

ಓದುಗ ಶ್ರೀನಿವಾಸರು ಹೇಳಿರುವಂತೆ (ಪ್ರವಾ. ಮಾ.11) ಕೇವಲ ರಾಜಕೀಯ ಪಕ್ಷಗಳ ಕಾರ್ಯಕರ್ತರು ಮಾತ್ರ ಈಗ ಗೊಂದಲದಲ್ಲಿ ಇಲ್ಲ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ಬಗ್ಗೆ ಭರವಸೆ ಇಟ್ಟುಕೊಂಡಿದ್ದ ಎಲ್ಲರೂ ತಬ್ಬಿಬ್ಬಾಗಿದ್ದಾರೆ. ಕೊಂಬೆಯಿಂದ ಕೊಂಬೆಗೆ ಹಾರುವ ಕೋತಿಗಳಂತೆ ರಾಜಕಾರಣಿಗಳು ಪಕ್ಷದಿಂದ ಪಕ್ಷಕ್ಕೆ ಜಿಗಿಯುತ್ತಿದ್ದಾರೆ. ಕಮ್ಯುನಿಸ್ಟರನ್ನು ಹೊರತುಪಡಿಸಿ ಎಲ್ಲ ರಾಜಕೀಯ ಪಕ್ಷಗಳೂ ಈ ಮಂಗಕೋತಿ ಆಟಕ್ಕೆ ಪ್ರಚೋದನೆ ನೀಡುತ್ತಿವೆ.

ಕಲಾವಿದರು, ಸಾಹಿತಿಗಳೂ ಪಕ್ಷ ರಾಜಕಾರಣಕ್ಕೆ ಬೆರೆತು ಚುನಾವಣೆಗೆ ನಿಲ್ಲಲು ಹಾತೊರೆಯುತ್ತಿರುವ ದುರಂತವನ್ನು ಕಾಣುತ್ತಿದ್ದೇವೆ. ಭೂಪೇನ್ ಹಜಾರಿಕಾರಂತಹ ಮಹಾನ್ ಕಲಾವಿದನಿಗೂ ಈ ಕಟು ಚಟ್ಟ ಆಕರ್ಷಣೆ ಆಗಿರುವಾಗ ದೇಶಕ್ಕೆ ಉಳಿಗಾಲ ಇಲ್ಲ ಎನ್ನಿಸುತ್ತದೆ. ಇದಕ್ಕೆ ಕಾರಣವಾಗಿ ಕೇವಲ ರಾಜಕೀಯ ಪಕ್ಷಗಳತ್ತ ಬೆರಳು ತೋರಿಸುವುದಕ್ಕಿಂತ ಪರಿಹಾರವನ್ನು ಕಂಡುಹಿಡಿಯಬೇಕಾಗಿದೆ. ಅಗತ್ಯಬಿದ್ದರೆ ಸಂವಿಧಾನಕ್ಕೆ ತಿದ್ದುಪಡಿ ತರುವ ಮೂಲಕ ಈ ಪ್ರವೃತ್ತಿಯನ್ನು ತಡೆಗಟ್ಟದಿದ್ದರೆ ದೇಶದ ರಾಜಕೀಯ ಸಂಪೂರ್ಣ ಅಧೋಗತಿ ತಲುಪುತ್ತದೆ.

ಪ್ರಜಾಪ್ರಭುತ್ವದ ತಳಹದಿಯಾದ ಚುನಾವಣೆಗಳನ್ನು ನಿಯತವಾಗಿ ಕೇವಲ ಲೋಕಸಭೆ, ವಿಧಾನಸಭೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ನಡೆಸಿದರೆ ಸಾಕು ಎಂಬ ನಮ್ಮ ನಂಬಿಕೆಯಲ್ಲೇ ದೋಷ ಇರುವಂತಿದೆ. ಒಂದು ಗಿಡದ ಎಲೆ, ರೆಂಬೆ, ಕೊಂಬೆಗಳ ಮೇಲೆ ಮಾತ್ರ ನೀರು ಸಿಂಪಡಿಸಿದರೆ ಸಾಲದು; ಬೇರುಗಳಿಗೇ ನೀರನ್ನು ಉಣಿಸಬೇಕಾಗುತ್ತದೆ. ಪ್ರಜಾಪ್ರಭುತ್ವದ ಮೂಲ ಬೇರುಗಳೇ ಪಕ್ಷ ರಾಜಕಾರಣ ಆಗಿರುವಾಗ ಅದನ್ನು ಕಟ್ಟುನಿಟ್ಟಾಗಿ ನಿಯಂತ್ರಿಸುವ ಕಾನೂನುಗಳನ್ನು ಮಾಡದಿದ್ದರೆ ಚುನಾವಣೆಗಳು ಅನಪೇಕ್ಷಿತವಾಗಿ ಅರಾಜಕ ಸ್ಥಿತಿ ನಿರ್ಮಾಣವಾಗುತ್ತದೆ.

ಪಕ್ಷಾಂತರವನ್ನು ನಿಷೇಧಿಸುವುದರಿಂದ ತತ್ಕಾಲಕ್ಕೆ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳಬಹುದೇ ಹೊರತು ತತ್ವರಹಿತ ರಾಜಕಾರಣವನ್ನು ತಡೆಯಲಾಗುವುದಿಲ್ಲ. ಈ ನಿಟ್ಟಿನಲ್ಲಿ ಈಗಾಗಲೇ ಕೆಲವು ಪ್ರಾಜ್ಞರು ಸೂಚಿಸಿರುವ ಸಲಹೆಗಳನ್ನು ಗಮನಿಸಬಹುದಾಗಿದೆ.

ಎಲ್ಲ ಪಕ್ಷಗಳೂ ನಿಯತವಾಗಿ ಪ್ರಾಥಮಿಕ ಹಂತದಿಂದ ಮೇಲು ಹಂತದವರೆಗೆ ಚುನಾವಣೆ ನಡೆಸಿ, ಪದಾಧಿಕಾರಿಗಳನ್ನು ಆಯ್ಕೆ ಮಾಡಬೇಕಾದುದನ್ನು ಕಾನೂನು ಬದ್ಧಗೊಳಿಸುವ ಅಗತ್ಯವಿದೆ. ಈ ಚುನಾವಣೆಯ ಮೇಲ್ವಿಚಾರಣೆಯನ್ನು ಚುನಾವಣಾ ಆಯೋಗವೇ ವಹಿಸಿಕೊಳ್ಳಬೇಕು. ಪಕ್ಷಗಳ ಆಂತರಿಕ ವ್ಯವಸ್ಥೆಯಲ್ಲಿ ಕಡ್ಡಾಯವಾಗಿ ಚುನಾವಣೆಗಳು ನಡೆಯುವಂತಾದರೆ ತನ್ನಿಂದ ತಾನೆ ಪಕ್ಷ ರಾಜಕೀಯದಲ್ಲಿ ಪಾರದರ್ಶಕತೆ ಹಾಗೂ ನಂಬಿಕಾರ್ಹತೆ ಹಂತ ಹಂತವಾಗಿ ಸಾಧಿತವಾಗುತ್ತದೆ.

ಒಂದು ಪಕ್ಷದ ಅಭ್ಯರ್ಥಿಯಾಗಲು ಆಯಾ ಪಕ್ಷದಲ್ಲಿ ಸತತವಾಗಿ ಕನಿಷ್ಠ ಪಕ್ಷ ಐದು ವರ್ಷಗಳು ಪ್ರಾಥಮಿಕ ಸದಸ್ಯರಾಗಿರಬೇಕು ಎಂಬ ನಿಯಮವನ್ನು ಕಡ್ಡಾಯಗೊಳಿಸಬೇಕಾಗಿದೆ. ಇಂದು ಪಕ್ಷ ಸೇರಿ ನಾಳೆಯೇ ಆ ಪಕ್ಷದ ಅಭ್ಯರ್ಥಿ ಆಗುವ ಪ್ರಜಾಪ್ರಭುತ್ವ ವಿರೋಧಿ ಪ್ರವೃತ್ತಿಯನ್ನು ಆಗ ಸುಲಭವಾಗಿ ತಡೆಗಟ್ಟಬಹುದು.

ಹಾಗೂ ನಟರು, ಕಲಾವಿದರು ಐದು ವರ್ಷಗಳ ಕಾಲ ಒಂದು ಪಕ್ಷದ ಸದಸ್ಯರಾಗಿ ಉಳಿಯಬಲ್ಲ ತಾಳ್ಮೆ ಇಲ್ಲದಿದ್ದರೆ ತನ್ನಿಂದ ತಾನೆ ಟಿಕೆಟ್ ತಪ್ಪಿ ಹೋಗುತ್ತದೆ. ಯಾವುದೇ ಒಂದು ಹೊಸ ಪಕ್ಷ ಹುಟ್ಟಿಕೊಂಡಾಗ, ಅದು ಚುನಾವಣಾ ಆಯೋಗದಲ್ಲಿ ನೋಂದಾಯಿಸಿಕೊಂಡ ಮೇಲೆ ಐದು ವರ್ಷಗಳವರೆಗೆ, ಆ ಪಕ್ಷಕ್ಕೆ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶ ಇಲ್ಲವೆಂದು ಕಾನೂನು ಮಾಡಬಹುದು. ಇದರಿಂದ ಹಲವು ರಾಜಕಾರಣಿಗಳೆಲ್ಲ ಸ್ವತಂತ್ರವಾಗಿ ಒಂದೊಂದು ಪಕ್ಷ ಕಟ್ಟುವ ಹವ್ಯಾಸಕ್ಕೆ ಕಡಿವಾಣ ಹಾಕಬಹುದು.

ರಾಷ್ಟ್ರೀಯ ಪಕ್ಷಗಳು ತಮ್ಮ ಅಸ್ತಿತ್ವಕ್ಕಾಗಿ ಮತ್ತು ಅಧಿಕಾರ ಹಿಡಿಯುವುದಕ್ಕಾಗಿ ಹಲವಾರು ಪ್ರಾದೇಶಿಕ ಪಕ್ಷಗಳ ಮೇಲೆ ಅವಲಂಬಿಸುವ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿರುವಾಗ, ಪಕ್ಷ ರಾಜಕಾರಣವನ್ನು ನಿಯಂತ್ರಿಸದಿದ್ದರೆ, ಈ ಗೊಂದಲದ ಲಾಭವನ್ನು ವಿದೇಶಿ ಸಾಮ್ರಾಜ್ಯವಾದಿಗಳು ಚೆನ್ನಾಗಿ ಪಡೆಯುತ್ತಾರೆ ಎಂಬುದನ್ನು ನಾವು ಮರೆಯಬಾರದು. ಪ್ರಜಾಪ್ರಭುತ್ವವಾದಿಗಳೆಲ್ಲ ಪಕ್ಷಭೇದ ಮರೆತು ಒಂದಾಗಿ ಈ ಗೊಂದಲವನ್ನು ಪರಿಹರಿಸುವತ್ತ ಗಂಭೀರವಾಗಿ ಯೋಚಿಸಬೇಕಾದ ತುರ್ತು ಅಗತ್ಯ ನಮ್ಮ ಮುಂದಿದೆ.

– ಕೆ. [illegible], ಬೆಂಗಳೂರು

ಪ್ರಜಾವಾಣಿ : ವಾಚಕರ ವಾಣಿ 2004 ಮಾರ್ಚ್ 13

# ಬಹುದೂರ ಬಂದಮೇಲೆ - ಒಡನಾಟದ ಚಿತ್ರಗಳು



ವಧೂ ವರರು



ಕವಿಯೊಂದಿಗೆ




ವಿಚಾರ ಸಂಕಿರಣದಲ್ಲಿ ಕಂಬಾರ್, ಮುಗಳಿ, ಸುಜನಾ ಜೊತೆಯಲ್ಲಿ



ವಿಚಾರ ಸಂಕಿರಣ ಶಿವರಾಮಕಾರಂತ, ಎಂ.ವಿ.ಸೀ. ಜೊತೆ



ಕನ್ನಡ ಅಧ್ಯಯನ ಕೇಂದ್ರದ ವಿದ್ಯಾರ್ಥಿಗಳೊಂದಿಗೆ




ವಿಚಾರ ಗೋಷ್ಠಿಯಲ್ಲಿ ಎಚ್.ಎಸ್. ರಾಘವೇಂದ್ರರಾವ್ ಮತ್ತು ಕೆ. ವಿ. ನಾರಾಯಣರೊಂದಿಗೆ




ಪ್ರಸಾರಾಂಗದ ನಿರ್ದೇಶಕ




ಮುಂಬಯಿ ವಿಶ್ವವಿದ್ಯಾಲಯದಲ್ಲಿ ವಿಶೇಷ ಉಪನ್ಯಾಸ ಪ್ರೊ. ತಾಳ್ತಜೆ ವಸಂತಕುಮಾರ್ ಜೊತೆ.



ಪ್ರೊ. ಜಿ. ಕೆ. ಜಿ. ಜೊತೆ ಪ್ರವಾಸದಲ್ಲಿ



ಗಿರೀಶ್ ಕಾರ್ನಾಡರೊಂದಿಗೆ ಸಂವಾದವೊಂದರಲ್ಲಿ



ತಾಯಿ ಕಾಳಮ್ಮ




ದಂಪತಿಗಳು



ಕವಿ ರಾಮಚಂದ್ರಶರ್ಮರಿಗೆ ಸನ್ಮಾನ




ಕನ್ನಡ ಅಧ್ಯಯನ ಕೇಂದ್ರದ ಸಮಾರಂಭವೊಂದರಲ್ಲಿ ನಿರ್ದೇಶಕರಾಗಿದ್ದ ಕಾಲ



ಸಚಿವ ವಿಶ್ವನಾಥರಿಂದ ಅಕಾಡೆಮಿ ಪ್ರಶಸ್ತಿ ಸ್ವೀಕಾರ



ಕುಟುಂಬದವರೊಂದಿಗೆ




ಚರ್ಚೆಯೊಂದರಲ್ಲಿ ಪಾಲ್ಗೊಂಡು ಮಾತನಾಡಿದಾಗ




ರಂಗಭೂಮಿ ಗೆಳೆಯರೊಡನೆ ಚಳುವಳಿಯಲ್ಲಿ




ನವೆಂಬರ್ 2004ರಂದು ಕೋಮು ಸೌಹಾರ್ದತೆಗೆ ಸಂಬಂಧಿಸಿದಂತೆ 'ದತ್ತಪೀಠ'ಕ್ಕೆ ಚಿಕ್ಕಮಂಗಳೂರಿಗೆ ಹೋಗಿದ್ದಾಗ, ಗಿರೀಶ್ ಕಾರ್ನಾಡ್, ಜಿ.ಕೆ. ಗೋವಿಂದರಾವ್, ವಿ.ಎಸ್. ಶ್ರೀಧರ್, ಗೌರಿ ಲಂಕೇಶ್, ಕೆ. ಮರುಳಸಿದ್ದಪ್ಪ, ಶೂದ್ರ ಶ್ರೀನಿವಾಸ್



ದತ್ತ ಪೀಠದ ಪೂಜಾಸ್ಥಳದ ಬಳಿ
ಕೆ. ಮರುಳಸಿದ್ದಪ್ಪ ಮತ್ತು ಶೂದ್ರ ಶ್ರೀನಿವಾಸ್




ಕೆ.ಎಂ.ಎಸ್.ರವರು, ಕಾರಂತರು, ಕಂಬಾರರು ಹಾಗೂ ಸಿದ್ಧಲಿಂಗ ಪಟ್ಟಣ ಶೆಟ್ಟರ ಜೊತೆ




ಅಧ್ಯಕ್ಷರು ಪ್ರಶಸ್ತಿ ಸಮಾರಂಭದಲ್ಲಿ ಶ್ರೀಮತಿ ಭಾರ್ಗವಿ ನಾರಾಯಣ
ಸಚಿವೆ ಶ್ರೀಮತಿ ಲೀಲಾವತಿ ಆರ್. ಪ್ರಸಾದ್‌ರವರು



ನಾಟಕ ಅಕಾಡೆಮಿ ಕಾರ್ಯಕ್ರಮದಲ್ಲಿ ಕೆ.ಎಂ.ಎಸ್., ಡಾ|| ಎಚ್. ಕೆ. ರಂಗನಾಥ್ ಹಾಗೂ
ಸಚಿವೆ ಶ್ರೀಮತಿ ಲೀಲಾವತಿ ಆರ್. ಪ್ರಸಾದ್



ಸುಬ್ಬಯ್ಯ ನಾಯುಡು ಶತಮಾನೋತ್ಸವ ಕಾರ್ಯಕ್ರಮದಲ್ಲಿ ಡಾ|| ರಾಜ್‌ಕುಮಾರ್,
ಪಾರ್ವತಮ್ಮ ರಾಜ್‌ಕುಮಾರ್, ಕೆ.ಎಂ.ಎಸ್., ಏಣಗಿ ಬಾಳಪ್ಪ, ದೇವೇಗೌಡ, ಲೋಕೇಶ್

## ಡಾ|| ಕೆ.ಮರುಳಸಿದ್ದಪ್ಪ: ಒಂದು ಜೀವನ ಚಿತ್ರಣ

| | | |
|---|---|---|
| ಹುಟ್ಟಿದ್ದು | : | ಜನವರಿ 12ರಂದು 1940 |
| ಸ್ಥಳ | : | ಕಾರೇಹಳ್ಳಿ, ತರೀಕೆರೆ ತಾಲ್ಲೂಕು<br>ಚಿಕ್ಕಮಗಳೂರು ಜಿಲ್ಲೆ |
| ವಿದ್ಯಾಭ್ಯಾಸ | : | ಮೈಸೂರು, ಪದವಿ ಮತ್ತು ಸ್ನಾತಕೋತ್ತರ ಪದವಿ<br>1965 ರಿಂದ 1975 ಉಪನ್ಯಾಸಕ<br>1975 ರಿಂದ 93 ರೀಡರ್<br>1988 ರಿಂದ 92 ಪ್ರಸಾರಾಂಗದ ನಿರ್ದೇಶಕರು |
| ಪ್ರಾಧ್ಯಾಪಕರು | : | 1993 ರಿಂದ 2000, |
| ನಿರ್ದೇಶಕರು | : | 95 ರಿಂದ 97, |
| ನಾಟಕ ಅಕಾಡೆಮಿ ಅಧ್ಯಕ್ಷರು | : | 1996 ರಿಂದ 1999 |
| ನಿವೃತ್ತಿ | : | 2000 |
| ರಂಗಭೂಮಿಯೊಂದಿಗೆ ಒಡನಾಟ | : | ಮೂರುವರೆ ದಶಕಗಳು ಬೆಂಗಳೂರಿನ ಹವ್ಯಾಸಿ ರಂಗಭೂಮಿಯೊಂದಿಗೆ ನಿಕಟ ಸಂಪರ್ಕ.<br>ಸಮುದಾಯ, ಪ್ರತಿಮಾನಾಟಕರಂಗ, ನಾಟ್ಯಸಂಘ, ಥಿಯೇಟರ್‌ಸೆಂಟರ್, ಸಂಘಟನೆಗಳಿಗೆ ಅಧ್ಯಕ್ಷರಾಗಿ ಸೇವೆ. |
| | | 1994 ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ |
| | | 2004 ರಾಜ್ಯೋತ್ಸವ ಪ್ರಶಸ್ತಿ |
| | | 1998ರಲ್ಲಿ ಭೂಪಾಲ್‌ನಲ್ಲಿ ನಡೆದ ಕನ್ನಡ ಸಾಂಸ್ಕೃತಿಕ ಸಮಾವೇಶದ ಅಧ್ಯಕ್ಷ |

## ಪ್ರಕಟಿಸಿರುವ ಪುಸ್ತಕಗಳು :

1) ಆಧುನಿಕ ಕನ್ನಡ ನಾಟಕ (ಮೂರು ಮುದ್ರಣ ಕಂಡ ಪುಸ್ತಕ)

2) ಕನ್ನಡ ನಾಟಕ ಸಮೀಕ್ಷೆ (ಬಿಡಿ ಲೇಖನಗಳು)

3) ಷಟ್ಪದಿ ಸಾಹಿತ್ಯ

4) ನೋಟ ನಿಲುವು (ಪ್ರವಾಸ ಸಾಹಿತ್ಯ)

5) ಒಡನಾಟ (ಲೇಖನಗಳು)

6) ಲಾವಣಿಗಳು ಸಂಪಾದಿತ

7) ಕನ್ನಡ ನಾಟಕ ವಿಮರ್ಶೆ

8) ವಚನ ಕಮ್ಮಟ (ಕಿರಂ. ನಾಗರಾಜ ಜೊತೆಗೂಡಿ)

9) ಶತಮಾನದ ನಾಟಕ

10) ಸಂಗತಿ (ಜಿ. ರಾಮಕೃಷ್ಣ ಅಭಿನಂದನಾ ಗ್ರಂಥ)

## ಅನುವಾದಗಳು

11) ಮೀಡಿಯಾ : ಮೂಲ- ಯೂರಿಪಿಡೀಸ್

12) ಎಲೆಕ್ಟ್ರಾ : ಮೂಲ : ಸಾಫೋಕ್ಲೀಸ್

13) ರಕ್ತಕಣಗಿಲೆ : ಮೂಲ - ರವೀಂದ್ರನಾಥ ಠಾಗೂರ್

14) ಭಾರತೀಯ ಜಾನಪದ ಸಮೀಕ್ಷೆ : ಮೂಲ - ದುರ್ಗಾ ಭಾಗವತ್

15) ಚಿಲಕಮರ್ತಿ ಲಕ್ಷ್ಮೀನರಸಿಂಹನ್